421

ಶ್ರೀ ಶಾಂಕರಭಾಷ್ಯ ಸಮೇತ

# ಕಾಠಕೋಪನಿಷತ್ತು



ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ-573211

2002

## ಶ್ರೀ ಶಂಕರಾಚಾರ್ಯರ ದಶೋಪನಿಷದ್ಭಾಷ್ಯಗಳು

ಇವುಗಳಲ್ಲಿ ಮೂಲ, ಭಾಷ್ಯ, ಟಿಪ್ಪಣಿ, ಸಾರ, ಶಬ್ದಾನುಕ್ರಮಣಿಕೆ – ಇವೆಲ್ಲವೂ ಇವೆ. ಭಾಷ್ಯದ ಸಂಸ್ಕೃತಮೂಲವನ್ನು ಕನ್ನಡದ ಅಕ್ಷರದಲ್ಲಿ ಕೊಟ್ಟಿರುತ್ತದೆ. ಅನುವಾದವನ್ನು ಪರಿಷ್ಕರಿಸಿ ಪೀಠಿಕೆ, ಟಿಪ್ಪಣಿ– ಮುಂತಾದವುಗಳನ್ನು ಹೊಸದಾಗಿಯೇ ಸೇರಿಸಿ ಸಂಸ್ಕೃತ ಮೂಲಕ್ಕೆ ಬಿಂಬ ಪ್ರತಿಬಿಂಬದಂತೆ ಅನುವಾದವನ್ನು ಕೊಟ್ಟಿರುವದರಿಂದ ಮೂಲಸಂಸ್ಕೃತದ ಭಾಷ್ಯವನ್ನು ಓದುವದಕ್ಕೆ ಪ್ರಯತ್ನಿಸುವವರಿಗೂ, ಶಾಂಕರಭಾಷ್ಯವನ್ನು ಪ್ರಸ್ಥಾನತ್ರಯಭಾಷ್ಯಗಳ ಮತ್ತು ಪ್ರಕರಣಗಳ ಪರಸ್ಪರ ಹೋಲಿಕೆಯಿಂದ ಅರ್ಥಮಾಡಿಕೊಳ್ಳಬೇಕೆನ್ನುವವರಿಗೂ ಈ ಗ್ರಂಥಗಳು ಅತ್ಯಮೂಲ್ಯವಾಗಿವೆ. ಶಂಕರಾಚಾರ್ಯರ ಸಂಪೂರ್ಣಗ್ರಂಥಗಳನ್ನು ಪುಸ್ತಕ ಭಂಡಾರದಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕೆನ್ನುವವರಿಗೆ ಇದೊಂದು ಸುಸಂಧಿ. ಸ್ಕೂಲುಗಳೂ ಕಾಲೇಜುಗಳೂ ತಮ್ಮ ಪುಸ್ತಕಭಂಡಾರದಲ್ಲಿ ಅವಶ್ಯವಾಗಿ ಈ ಪುಸ್ತಕಗಳನ್ನು ಸಂಗ್ರಹಿಸಬೇಕು.

1. **ಈಶಾವಾಸ್ಯೋಪನಿಷತ್ತು** : ಇದು ಶುಕ್ಲಯಜುರ್ವೇದಕ್ಕೆ ಸೇರಿದ್ದು. ಇದರಲ್ಲಿ ಕರ್ಮ, ಉಪಾಸನೆ, ಜ್ಞಾನ – ಇವುಗಳ ಸಂಬಂಧವನ್ನು ಸ್ಪಷ್ಟಪಡಿಸಿರುತ್ತದೆ. ಆಚಾರ್ಯರು ಇದಕ್ಕೆ ರಚಿಸಿರುವ ಭಾಷ್ಯದಲ್ಲಿ ಪ್ರವೃತ್ತಿ– ನಿವೃತ್ತಿ ಎಂಬ ಎರಡು ಬಗೆಯಾಗಿರುವ ವೇದೋಕ್ತಧರ್ಮಗಳನ್ನು ವಿವರಿಸಿ ಪರಮಾತ್ಮನ ಸ್ವರೂಪವನ್ನು ಮುಖ್ಯವಾಗಿ ತಿಳಿಸುವದೇ ಈ ಉಪನಿಷತ್ತಿನ ಉದ್ದೇಶವೆಂದು ಸ್ಫುಟಗೊಳಿಸಿದ್ದಾರೆ. ಮಾಧ್ಯಂದಿನಪಾಠವನ್ನೂ ಕೊಡಲಾಗಿದೆ.

*(ಐದನೆಯ ಮುದ್ರಣ : ೨೦೦೦ – ಪುಟಗಳು ಡೆಮ್ಮಿ ೬+೬೨)*

2. **ಕೇನೋಪನಿಷತ್ತು**: ಬ್ರಹ್ಮವು ಎಲ್ಲವನ್ನೂ ಬೆಳಗುವ ಚೈತನ್ಯಸ್ವರೂಪವಾದ ನಮ್ಮೆಲ್ಲರ ಆತ್ಮನು: ಅದರ ಶಕ್ತಿಯಿಂದಲೇ ಎಲ್ಲವೂ ತನ್ನ ಕೆಲಸಮಾಡುತ್ತಿರುವದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಉಪನಿಷತ್ತಿಗೆ ಪದಭಾಷ್ಯ, ವಾಕ್ಯಭಾಷ್ಯ – ಎಂಬ ಎರಡು ಭಾಷ್ಯಗಳಿವೆ.

*(ಐದನೆಯ ಮುದ್ರಣ : ೧೯೯೪ – ಪುಟಗಳು ಡೆಮ್ಮಿ ೬ + ೧೧೧)*

3. **ಕಾಠಕೋಪನಿಷತ್ತು**: ಧರ್ಮಾಧರ್ಮಗಳಿಗೂ ಕಾಲತ್ರಯಕ್ಕೂ ಕಾರ್ಯಕಾರಣ ಭಾವಕ್ಕೂ ಕಟ್ಟು ಬೀಳದ ಬ್ರಹ್ಮವೇ ನಮ್ಮೆಲ್ಲರ ಆತ್ಮವೆಂಬುದನ್ನು ತಿಳಿಸುವ ಉಪನಿಷತ್ತಿದು.

**ಈಗ ಇದು ನಿಮ್ಮ ಕೈಯಲ್ಲಿದೆ** *(ಆರನೆಯ ಮುದ್ರಣ : ೨೦೦೨ – ಪುಟಗಳು ಡೆಮ್ಮಿ ೧೨ + ೨೦೮)*

4. ಮುಂಡಕೋಪನಿಷತ್ತು: ವೇದೋಕ್ತವಾದ ವಿದ್ಯೆಯನ್ನು ಪರವಿದ್ಯೆ, ಅಪರವಿದ್ಯೆ – ಎಂದು ಎರಡು ವರ್ಗಗಳಾಗಿ ವಿಂಗಡಿಸಿ ಜಗತ್ಕಾರಣವಾದ ಅಕ್ಷರವೆಂಬ ಹೆಸರಿನ ಅದ್ವಿತೀಯ ಬ್ರಹ್ಮವನ್ನು ಅರಿತುಕೊಳ್ಳುವ ವಿದ್ಯೆಯೇ ಪರವಿದ್ಯೆ ಎಂದು ಇಲ್ಲಿ ತಿಳಿಸಿದೆ. ಎಲ್ಲವೂ ಬ್ರಹ್ಮವೊಂದೇ ಆಗಿರುವದರಿಂದ ಅದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದೆಂತಲೂ, ಈ ಬ್ರಹ್ಮಜ್ಞಾನದಿಂದ ಜೀವನ್ಮುಕ್ತಿಯು ಲಭಿಸುವದೆಂತಲೂ ಪ್ರತಿಪಾದಿಸಿದೆ. ಜ್ಞಾನಕ್ಕೆ ಬೇಕಾದ ಸತ್ಯಾದಿಸಾಧನಗಳನ್ನು ಪ್ರತಿಪಾದಿಸಿರುವದು ಇದರ ವಿಶೇಷ.

*(ನಾಲ್ಕನೆಯ ಮುದ್ರಣ : ೧೯೯೯ – ಪುಟಗಳು ಡೆಮ್ಮಿ ೧೮ + ೧೬೦)*

5. **ಪ್ರಶ್ನೋಪನಿಷತ್ತು**: ಮುಂಡಕೋಪನಿಷತ್ತಿನ ವಿಷಯವನ್ನು ಇಲ್ಲಿ ವಿವರಿಸಿದೆ. ಮುಂಡಕ–ಪ್ರಶ್ನೆಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷರಾಖ್ಯಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯೂ ಉಪಾಸನೆಯಿಂದ ಕ್ರಮಮುಕ್ತಿಯೂ ಆಗುವದೆಂದು ನಿರೂಪಿಸುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರವರು ಅವಸ್ಥಾತ್ರಯ, ಜ್ಞಾನಸ್ವರೂಪ, ಕರ್ತೃತ್ವ ಭೋಕ್ತೃತ್ವ– ಎಂಬ ಮೂರು ವಿಷಯಗಳನ್ನು ವಿಸ್ತಾರವಾಗಿ ಚರ್ಚಿಸಿರುತ್ತಾರೆ.

*(ನಾಲ್ಕನೆಯ ಮುದ್ರಣ : ೧೯೯೨ – ಪುಟಗಳು ಡೆಮ್ಮಿ ೧೮ + ೧೬೮)*

6. **ಮಾಂಡೂಕ್ಯೋಪನಿಷತ್ತು**: ಎಚ್ಚರ, ಕನಸು, ತನಿನಿದ್ರೆ – ಎಂಬ ಮೂರವಸ್ಥೆಗಳ ಸೋಂಕೂ ಇಲ್ಲದ ನಿರ್ಮಲವಾಗಿರುವ ನಮ್ಮೆಲ್ಲರ ಆತ್ಮನಾದ ಬ್ರಹ್ಮದ ಸ್ವರೂಪವನ್ನು ಅನುಭವಾನುಸಾರವಾಗಿ

ವಿಷಯಾನುಕ್ರಮಣಿಕೆ

ಶ್ರೀ ಶಾಂಕರಭಾಷ್ಯ ಸಮೇತ

# ಕಾಠಕೋಪನಿಷತ್ತು



ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ-573211

2002

| | | |
|---|---|---|
| ಮೊದಲನೆಯ ಮುದ್ರಣ | 1930 | (೧೦೦೦ ಪ್ರತಿಗಳು) |
| ಎರಡನೆಯ ಮುದ್ರಣ | 1945 | (೧೦೦೦ ,, ) |
| ಮೂರನೆಯ ಮುದ್ರಣ | 1968 | (೧೦೦೦ ,, ) |
| ನಾಲ್ಕನೆಯ ಮುದ್ರಣ | 1983 | (೧೦೦೦ ,, ) |
| ಐದನೆಯ ಮುದ್ರಣ | 1993 | (೨೦೦೦ ,, ) |
| ಆರನೆಯ ಮುದ್ರಣ (ಪರಿಷ್ಕರಿಸಿದೆ) | 2002 | (೨೦೦೦ ,, ) |



**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು**

***All Rights Reserved***



ಅಕ್ಷರ ಜೋಡಣೆ

**ಪ್ರಶಾಂತ್ ಎಂಟರ್‌ಪ್ರೈಸಸ್**

ನಂ. 45, 3ನೇ ಮುಖ್ಯರಸ್ತೆ

ನಾಗಸಂದ್ರ, ತ್ಯಾಗರಾಜನಗರ ಪೋಸ್ಟ್

ಬೆಂಗಳೂರು - 560 028

✆ : 6764650

ಮುದ್ರಣಸ್ಥಾನ :

**ಸ್ಟಾಂಡರ್ಡ್ ಪ್ರಿಂಟರ್ಸ್**

ಶಂಕರ ಮಠದ ರಸ್ತೆ, ಶಂಕರಪುರಂ

ಬೆಂಗಳೂರು - 560 004

✆ : 6521527

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಕನ್ನಡಿಸಿ ಅನುಗ್ರಹಿಸಿರುವ ಶಾಂಕರಭಾಷ್ಯಸಮೇತವಾದ ಉಪನಿಷತ್ತುಗಳಲ್ಲಿ ಕಾಠಕೋಪನಿಷತ್ತಿನ ಆರನೆಯ ಸಂಸ್ಕರಣವನ್ನು ಪರಿಷ್ಕರಿಸಿ ಈಗ ವಾಚಕರಿಗೆ ಸಮರ್ಪಿಸಲು ಸಂತೋಷವಾಗುತ್ತಿದೆ. ಅಧ್ಯಾತ್ಮಗ್ರಂಥಗಳ ವಾಚಕರ ಸಂಖ್ಯೆಯು ಈಚೆಗೆ ಬೆಳೆಯುತ್ತಿರುವದರ ಫಲವಾಗಿಯೂ ಕಾರ್ಯಾಲಯದವರು ಕೈಗೊಂಡಿರುವ ಪ್ರಚಾರದ ಕಾರಣದಿಂದಲೂ ಓದುಗರ ಸಂಖ್ಯೆಯು ಗಣನೀಯವಾಗಿ ಅಭಿವೃದ್ಧಿಯಾಗುತ್ತಿರುವದರಿಂದಲೇ ಈ ಹೊಸಸಂಸ್ಕರಣವನ್ನು ಹೊರತರಲು ಅವಕಾಶವಾಗಿರುತ್ತದೆ. ಇದಕ್ಕಾಗಿ ವಾಚಕವೃಂದಕ್ಕೆ ನಾವು ಕೃತಜ್ಞರಾಗಿದ್ದೇವೆ.

ಅಧ್ಯಾತ್ಮಗ್ರಂಥಗಳ ಪ್ರಕಟನೆಯು ವ್ಯಾವಹಾರಿಕವಾಗಿ ಲಾಭದಾಯಕವಲ್ಲವಾದರೂ ಕೆಲವು ಉದಾರಮಹಾಶಯರ ದಾನಧರ್ಮಗಳ ನಿಮಿತ್ತದಿಂದ ಸಂಸ್ಥೆಯ ಚಟುವಟಿಕೆಗಳಿಗೆ ಅಡ್ಡಿಯಾಗದಂತೆ ಪ್ರಕಟನೆಯ ಕಾರ್ಯವು ಈವರೆಗೂ ಸಾಗುತ್ತಾ ಬಂದಿದೆ. ಹಿಂದಿನ ಸಂಸ್ಕರಣಗಳಂತೆಯೇ ಈ ಸಂಸ್ಕರಣ ವನ್ನೂ ಯಾವ ಬದಲಾವಣೆಯೂ ಇಲ್ಲದಂತೆ ಪೂರ್ಣವಾಗಿ ಮುದ್ರಿಸಿ ಹೊರತರಲಾಗಿದೆ.

ಬೆಂಗಳೂರಿನಲ್ಲಿರುವ ನಿವೃತ್ತ ಇಂಜಿನಿಯರ್ ಟಿ.ಆರ್. ಚಂದ್ರಶೇಖರ್ ರವರು ಈ ಗ್ರಂಥದ ಮುದ್ರಣಕ್ಕೆ ೫೦೦೦ ರೂ.ಗಳನ್ನು ಉದಾರವಾಗಿ ಸಹಾಯ ಮಾಡಿರುತ್ತಾರೆ. ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳು.

ಎಂದಿನಂತೆ ವಾಚಕರು ನಮ್ಮ ಪ್ರಯತ್ನವನ್ನು ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಹೊಳೆನರಸೀಪುರ — ಇತಿ-

ದಿನಾಂಕ : 6- 1- 2002 — **ಸಂಸ್ಥೆಯ ಪರವಾಗಿ**

# ಪೀಠಿಕೆ

ಕಠೋಪನಿಷತ್ತು ಕೃಷ್ಣಯಜುರ್ವೇದಕ್ಕೆ ಸೇರಿದ್ದೆಂದು ಪ್ರಸಿದ್ಧಿ. ಆದರೆ ಉಪನಿಷತ್ತಿಗೂ ಹಿಂದಿನ ಗ್ರಂಥಕ್ಕೂ ಸಂಬಂಧವನ್ನು ಭಾಷ್ಯದಲ್ಲಿ ತಿಳಿಸಿರುವದಿಲ್ಲವಾದ್ದರಿಂದ ಈ ಉಪನಿಷತ್ತನ್ನು ಯಾವ ವೇದದ ಭಾಗವೆಂತ ಶಂಕರಭಗವತ್ಪಾದರವರು ಎಣಿಸಿದ್ದರೆಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ.

## ನಚಿಕೇತನ ಕಥೆ

ಉಪನಿಷತ್ತಿನಲ್ಲಿ ನಚಿಕೇತನೆಂಬ ಬ್ರಹ್ಮಚಾರಿಗೆ ಮೃತ್ಯುದೇವತೆಯು ತತ್ತ್ವವನ್ನು ಉಪದೇಶಿಸಿದಂತೆ ಕಥೆ ಇದೆಯಷ್ಟೆ. ಈ ಕಥೆಯ ಅಂಶವು **ಮಹಾಭಾರತದಲ್ಲಿಯೂ** (ಅನುಶಾಸನ ೧೦೬), **ತೈತ್ತಿರೀಯಬ್ರಾಹ್ಮಣದಲ್ಲಿಯೂ** (೩-೧-೮) ಕಂಡುಬರುತ್ತದೆ. ಮಹಾಭಾರತದ ಕಥೆಗೆ ಈ ಉಪನಿಷತ್ತೇ ಆಧಾರವಾಗಿದ್ದರೂ ಇರಬಹುದು. ಆದರೆ ಅಲ್ಲಿ ಗೋದಾನವನ್ನು ಹೊಗಳುವದಷ್ಟೇ ಉದ್ದೇಶವಾಗಿರುತ್ತದೆ. ಆಜ್ಞೆಯನ್ನು ಉಲ್ಲಂಘಿಸಿದನೆಂಬ ಕಾರಣದಿಂದ ತಂದೆಯು 'ಯಮನನ್ನು ನೋಡು' ಎಂದು ಮಗನನ್ನು ಶಪಿಸಿದಂತೆಯೂ ಯಮನು ನಚಿಕೇತನನ್ನು ಸತ್ಕರಿಸಿ ಅವನಿಗೆ ಪುಣ್ಯವಂತರ ಲೋಕಗಳನ್ನು ತೋರಿಸಿದಂತೆಯೂ ಅಲ್ಲಿ ಕಥೆಯಿದೆ. ಗೋದಾನವನ್ನು ಮಾಡಿದವರಿಗೆ ಆಗುವ ಉತ್ತಮಲೋಕಗಳನ್ನು ತಿಳಿದು ನಚಿಕೇತನು ತಂದೆಗೆ ಆ ಸಮಾಚಾರವನ್ನೆಲ್ಲ ತಿಳಿಸುತ್ತಾನೆ. ತೈತ್ತೀರಿಯಬ್ರಾಹ್ಮಣದಲ್ಲಿ ಉಪನಿಷತ್ತಿನಂತೆಯೇ ಕಥಾಸಂವಿಧಾನವಿದೆ. ಆದರೆ ಅಲ್ಲಿ ನಚಿಕೇತನು ಕೇಳಿಕೊಂಡ ವರಗಳು ಈ ಮೂರು : (೧) ತಾನು ತಂದೆಯ ಬಳಿಗೆ ಜೀವಂತವಾಗಿ ಹಿಂತಿರುಗಬೇಕು. (೨) ಇಷ್ಟಾಪೂರ್ತಗಳು ಅಕ್ಷಯವಾಗುವ ವಿಧಾನವನ್ನು ತನಗೆ ತಿಳಿಸಬೇಕು ; (೩) ಮೃತ್ಯುವನ್ನು ಜಯಿಸುವ ರೀತಿಯನ್ನು ತಿಳಿಸಬೇಕು. ಕೊನೆಯ ಎರಡು ವರಗಳಿಗೂ ನಾಚಿಕೇತಾಗ್ನಿಯ ಚಯನವನ್ನೇ ಮೃತ್ಯುವು ಉಪದೇಶಿಸಿರುತ್ತಾನೆ. ಆ ಚಯನದಿಂದ ಅನೇಕ ದೃಷ್ಟಫಲಗಳೂ ಸ್ವರ್ಗಲೋಕಪ್ರಾಪ್ತಿಯೂ ಆದಿತ್ಯಸಾಯುಜ್ಯವೂ ಆಗುವವೆಂದು ಆ ಬ್ರಾಹ್ಮಣದಲ್ಲಿಹೇಳಿರುತ್ತದೆ. **'ಯೋಽಗ್ನಿಂ ನಾಚಿಕೇತಂ ಚಿನುತೇ । ಯ ಉ ಚೈನಮೇವಂ ವೇದ'** ಎಂಬ ವಾಕ್ಯವು ಅಲ್ಲಿ ಹಲವು ಬಾರಿ ಬಂದಿರುತ್ತದೆಯಾದ್ದರಿಂದ ಉಪಾಸನೆಯಲ್ಲಿ ಅನುವಾದಮಾಡಿಕೊಂಡಿರುವ ಕರ್ಮೋಪಾಸನೆಗಳ ಸಮುಚ್ಚಯಾನುಷ್ಠಾನದ ಫಲದ ವಿಷಯವನ್ನು ತಿಳಿಸುವ ಕಥೆಯ ಪೂರ್ವರೂಪವಿದೆಂದು ನಾವು ಇಟ್ಟುಕೊಳ್ಳಬಹುದಾಗಿದೆ. ತೈತ್ತಿರೀಯಬ್ರಾಹ್ಮಣದ ಮೂರನೆಯ ಅಷ್ಟಕದ ಹತ್ತನೆಯ ಪ್ರಶ್ನೆಯಿಂದ ಮುಂದಕ್ಕಿರುವ ಭಾಗವನ್ನು

'ಕಾಠಕ'ವೆಂದೇ ವೈದಿಕರು ಕರೆಯುತ್ತಾರೆ. ಈ ಭಾಗವು ಮೊದಲು ಕಾಠಕಶಾಖೆಯ ಬ್ರಾಹ್ಮಣಕ್ಕೆ ಸೇರಿದ್ದು, ಈಚೆಗೆ ತೈತ್ತಿರೀಯದೊಳಗೆ ಸೇರಿಕೊಂಡಿರಬಹುದೆ ? ಎಂಬುದನ್ನು ಪುರಾತತ್ತ್ವವಿದರು ಶೋಧಿಸ ಬೇಕಾಗಿದೆ. ಮೊದಲನೆಯ ಎರಡು ಅಷ್ಟಕಗಳಲ್ಲಿ ಎಂಟೆಂಟೇ ಪ್ರಶ್ನೆಗಳಿರುವಲ್ಲಿ ಮೂರನೆಯ ಅಷ್ಟಕದಲ್ಲಿ ಮಾತ್ರ ಹನ್ನೆರಡು ಪ್ರಶ್ನೆಗಳಿರುವದೂ ಅಷ್ಟಕವೆಂಬ ಹೆಸರಿಗೆ ಹೊಂದುಗಡೆಯಾಗುವದಿಲ್ಲವೆಂಬುದೂ ಇಲ್ಲಿ ನೆನಪಿಡತಕ್ಕದ್ದಾಗಿದೆ.

## ಬ್ರಹ್ಮವಿದ್ಯೆಯ ಸ್ವರೂಪ

ನಚಿಕೇತನು ಕೇಳಿಕೊಂಡ ಮೂರನೆಯ ವರದ ಸ್ವರೂಪವನ್ನು ಭಾಷ್ಯಕಾರರು ಹೇಗೆ ವಿವರಿಸಿರುವರೆಂಬುದನ್ನು ಇಲ್ಲಿ ಒಂದಿಷ್ಟು ವಿಚಾರಿಸುವದು ಒಳ್ಳೆಯದು. ದೇಹವ್ಯತಿರಿಕ್ತನಾದ ಆತ್ಮನೊಬ್ಬನಿರುವನೆ ? ಅವನ ಪರಮಾರ್ಥಸ್ವರೂಪವು ಹೇಗಿರುವದು ? (೧-೧-೨೦, ೧-೨-೧೪) ಎಂಬುದು ನಚಿಕೇತನ ಪ್ರಶ್ನೆ. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ- ಇವುಗಳೆಲ್ಲಕ್ಕಿಂತ ಬೇರೆಯಾಗಿ ಆತ್ಮನಿರುವನೆಂಬುದಕ್ಕೆ ಪ್ರತ್ಯಕ್ಷವಾಗಲಿ ಅನುಮಾನವಾಗಲಿ, ಸಹಾಯಕವಾಗುವದಿಲ್ಲ. ಏಕೆಂದರೆ ಇಂದ್ರಿಯಾದಿಗಳೇ ಅತೀಂದ್ರಿಯವಾಗಿವೆ, ಅವನ್ನು ಮೀರಿರುವ ವಸ್ತುವೊಂದಿದ್ದರೆ ಅದು ಹೇಗೆ ಇಂದ್ರಿಯಗೋಚರವಾದೀತು? ಇಂದ್ರಿಯಕ್ಕೆ ವಿಷಯವೂ ಅಲ್ಲದ, ಇಂದ್ರಿಯಕ್ಕೆ ವಿಷಯವಾದ ಗುರುತಿನ ಸಂಬಂಧವೂ ಇಲ್ಲದ, ವಸ್ತುವನ್ನು ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ತಿಳಿಯುವದಕ್ಕೆ ಹೇಗೆ ಆದೀತು ? ಆದ್ದರಿಂದ ಆತ್ಮವಸ್ತುವನ್ನು ತಿಳಿಯುವದಕ್ಕೆ ಪ್ರತ್ಯಕ್ಷಾದಿಗಳಿಗಿಂತ ಬೇರೆಯಾದ ಪ್ರಮಾಣವಿದ್ದರೆ ಅದನ್ನು ತಿಳಿಸು ಎಂಬುದು ನಚಿಕೇತನ ಪ್ರಶ್ನೆ.

ಇದಕ್ಕೆ ಯಮನ ಉತ್ತರವೇನೆಂದರೆ ಆತ್ಮತತ್ತ್ವವನ್ನು ಸಾಮಾನ್ಯ ಜನರು ವಿಚಾರಮಾಡುವದೇ ಇಲ್ಲ. ಅವರು ವಿಚಾರಮಾಡಿದರೂ ಅದು ಅವರಿಗೆ ತಿಳಿಯುವದೂ ಇಲ್ಲ (೧-೨-೫,೬,೭). ಇದು ತರ್ಕಕ್ಕೆ ನಿಲುಕುವದಿಲ್ಲ. (೧-೨-೮,೯). ಇದು ನಮ್ಮ ಹೃದಯದಲ್ಲಿಯೇ ಇರುವದರಿಂದ ಇದನ್ನು ಅಧ್ಯಾತ್ಮಯೋಗದಿಂದ ತಿಳಿದುಕೊಂಡು ಶೋಕಾದಿಗಳಿಂದ ಬಿಡುಗಡೆಯನ್ನು ಹೊಂದಬಹುದು (೧-೨-೧೨,೧೩). ಈ ಆತ್ಮನನ್ನು ತಿಳಿದುಕೊಳ್ಳುವದಕ್ಕೆ ಅವಿದ್ಯೆಯೂ ಕಾಮವೂ ಅಡ್ಡಿಯಾಗಿರುವವು ( ೨-೧-೧,೨). ಇದನ್ನು ತಿಳಿದು ಕೊಳ್ಳುವವನೂ ಹೇಳಿಕೊಡುವವನೂ ಆಶ್ಚರ್ಯಪ್ರಾಯರು (೧-೨-೭). ಇದನ್ನು ತಿಳಿದುಕೊಳ್ಳಬೇಕೆನ್ನುವವನು ದುರಾಚಾರವನ್ನು ಬಿಟ್ಟು ಅಂತಃಕರಣ

ಬಹಿಃಕರಣಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರಬೇಕು (೧-೨-೨೪), ಆತ್ಮನನ್ನೇ ಬಯಸುತ್ತಿರಬೇಕು (೧-೨-೨೩). ಉತ್ತಮನಾದ ಆಚಾರ್ಯನನ್ನು ಸೇವಿಸಿ, ತತ್ತ್ವವನ್ನು ಅರಿತುಕೊಳ್ಳಬೇಕು ( ೧- ೩-೧೪), ಆಚಾರ್ಯನು ಬ್ರಹ್ಮಜ್ಞಾನ ವನ್ನು ಹೊಂದಿ ಆ ಬ್ರಹ್ಮವೇ ತಾನೆಂಬ ಅರಿವಿನಲ್ಲಿ ನಿಂತವನಾಗಿರಬೇಕು (೧-೨-೮), ಹಾಗಾದರೆ ಮಾತ್ರ ಅದರ ಅರಿವಾಗುತ್ತದೆ.

## ಅವಿದ್ಯೆಯೆಂದರೇನು ?

ಆತ್ಮನನ್ನು ಅರಿಯುವದಕ್ಕೆ ಅಡ್ಡಿಯಾಗಿರುವ ಅವಿದ್ಯೆಯ ಸ್ವರೂಪದ ಬಗ್ಗೆ ಭಾಷ್ಯಕಾರರ ಅಭಿಪ್ರಾಯವೇನೆಂದರೆ : ಆತ್ಮನಲ್ಲಿ ಅವಿಚಾರಸ್ವಭಾವದಿಂದ ಕ್ರಿಯಾ ಕಾರಕಫಲಗಳನ್ನು ಆರೋಪಿಸುವದೇ ಅಜ್ಞಾನವು ( ೧-೧-೨೦). ಈ ಅವಿದ್ಯೆಗೆ **ಮಿಥ್ಯಾಜ್ಞಾನ**ವೆಂದೂ ಹೆಸರು. ಅವಿದ್ಯೆಯಿಂದ ತೋರುವ ಕ್ರಿಯಾಕಾರಕಫಲ ರೂಪವಾದ ಪ್ರಪಂಚವೇ ನಾಮರೂಪಕರ್ಮಾತ್ಮಕವಾದ ಅನಾತ್ಮವು (೧-೩-೧೪) ; ನಮ್ಮ ಹೊರಗೆ ಅನಾತ್ಮವನ್ನು ಸ್ವಭಾವದಿಂದ ನೋಡುತ್ತಿರುವದೇ ಅವಿದ್ಯೆ (೨-೧-೨) ; ಉಪಾಧಿಯ ಸ್ವಭಾವದಿಂದ ಆಗಿರುವ ಭೇದದರ್ಶನವೇ ಅವಿದ್ಯೆ (೨-೧-೧೦) .

ಅಜ್ಞಾನವು ಅಥವಾ ಅವಿದ್ಯೆಯು ಸಂಸಾರಕ್ಕೆ **ಬೀಜ**ವೆಂದು ( ೧-೧-೨೦) ಹೇಳಿರುವದಲ್ಲದೆ ಅವ್ಯಕ್ತ (ಅಥವಾ ಅವ್ಯಾಕೃತ)ವೂ ಜಗತ್ತಿಗೆ **ಬೀಜ**ವೆಂದು (೧-೩-೧೧) ಭಾಷ್ಯದಲ್ಲಿ ಬರೆದಿರುವದು ಅಜ್ಞಾನ (ಅಥವಾ ಅವಿದ್ಯೆ) ಮತ್ತು ಅವ್ಯಾಕೃತ (ಅಥವಾ ಮಾಯೆ) - ಇವೆರಡೂ ಒಂದೇ ಪದಾರ್ಥವೆಂದು ಕೆಲವರು ಭ್ರಮಿಸುವದಕ್ಕೆ ಕಾರಣವಾಗುತ್ತದೆ. ಆಚಾರ್ಯರು ಅವಿದ್ಯೆ, ಮಾಯೆ - ಎಂಬ ಶಬ್ದಗಳನ್ನು ಕೆಲವು ಕಡೆಗಳಲ್ಲಿ ಪರ್ಯಾಯವಾಗಿ ಪ್ರಯೋಗಿಸಿರುತ್ತಾರಾದರೂ **ಅವಿದ್ಯೆಯೆಂಬುದು** ವಿದ್ಯೆಯಿಂದ ಹೋಗುವ ಮಿಥ್ಯಾಜ್ಞಾನವೆಂದೂ (ಅಧ್ಯಾಸಭಾಷ್ಯ) **ಮಾಯೆಯೆಂಬುದು** ಅವಿದ್ಯಾಕಲ್ಪಿತವಾದ ನಾಮರೂಪಗಳ ಬೀಜರೂಪವೆಂದೂ, (ಸೂ.ಭಾ. ೨-೧-೧೪) ವಿವೇಚನೆಮಾಡಿರುವದಲ್ಲದೆ, 'ಅವ್ಯಕ್ತ 'ವೆಂಬ ಶಬ್ದದ ಅರ್ಥವನ್ನು ವಿವೇಚನೆಮಾಡುವದಕ್ಕಾಗಿ ಹೊರಟಿರುವ ಒಂದು ಸೂತ್ರದ ಭಾಷ್ಯದಲ್ಲಿ ಅವ್ಯಕ್ತವೆಂದರೆ ಮಾಯೆಯೆಂದು ಒಂದು ಪಕ್ಷ, ಅವಿದ್ಯೆಯೆಂದು ಇನ್ನೊಂದು ಪಕ್ಷ - ಹೀಗೆ ಎರಡರ್ಥಗಳ ಎರಡು ಪಕ್ಷಗಳನ್ನು ಬೇರೆಬೇರೆಯಾಗಿ ಬರೆದಿರುವದರಿಂದ (ಸೂ.ಭಾ. ೧-೪-೩) ಶಾಂಕರ ಪ್ರಸ್ಥಾನದಲ್ಲಿ ಅವಿದ್ಯೆಯು ಜ್ಞಾನಕೋಟಿಗೆ ಸೇರಿರುವದೆಂದೂ ಮಾಯೆಯು

ಜ್ಞೇಯಕೋಟಿಗೆ ಸೇರಿರಿರುವದೆಂದೂ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಅವಿದ್ಯೆಯು ಸಂಸಾರಕ್ಕೆ ಬೀಜವೆಂದರೆ ನಿಮಿತ್ತವು, ಅವ್ಯಕ್ತವು ಜಗತ್ತಿಗೆ ಬೀಜ ವೆಂದರೆ ಉಪಾದಾನಕಾರಣವು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ.

## ಆತ್ಮಜ್ಞಾನಕ್ಕೆ ಸಹಾಯಕವಾದ ತರ್ಕ

ಆತ್ಮನು ತರ್ಕಕ್ಕೆ ಸಿಕ್ಕುವದಿಲ್ಲ ( ೧-೨-೮, ೯) ಎಂದು ಹೇಳಿರುವದರಿಂದ ತರ್ಕವು ಯಾವ ಬಗೆಯಿಂದಲೂ ಇಲ್ಲಿ ಉಪಯೋಗಕ್ಕೆ ಬರುವದಿಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದು ಸರಿಯಲ್ಲ, ಏಕೆಂದರೆ ಈ ಉಪನಿಷತ್ತಿನಲ್ಲಿಯೇ ಆತ್ಮಸ್ವರೂಪವನ್ನು ತಿಳಿಸುವದಕ್ಕೆ ತರ್ಕವನ್ನು ಉಪಯೋಗಿಸಿರುತ್ತದೆ. ಆದ್ದರಿಂದಲೇ 'ಬರಿಯ ತನ್ನ ಬುದ್ಧಿಯಿಂದ ಮಾಡಿದ ಅಭಿಮಾನದ ಊಹೆಗೆ ಆತ್ಮನು ಸಿಕ್ಕುವದಿಲ್ಲ' (೧-೨-೮) ಎಂದು ಆಚಾರ್ಯರು ಶ್ರುತಿಗೆ ಅರ್ಥವನ್ನು ಮಾಡಿರುತ್ತಾರೆ. ಸ್ವತಂತ್ರವಾದ ತರ್ಕವು ಮತ್ತೊಂದು ಪ್ರಬಲತರ್ಕದಿಂದ ಬಾಧಿತವಾಗಬಹುದು ;ಆದರೆ ಶ್ರುತ್ಯುಕ್ತತರ್ಕವು ಅನುಭವಾನುಸಾರಿಯಾಗಿರುವದರಿಂದ ಅದು ಅಬಾಧ್ಯವಾಗಿರುತ್ತದೆ ಎಂಬುದೇ ಇಲ್ಲಿ ತಿಳಿಯಬೇಕಾದದ್ದು. ಆಗಮೋಪಪತ್ತಿಗಳಿಂದ ತಿಳಿದ ಅರ್ಥವು ಅಂಗೈನೆಲ್ಲಿಯಂತೆ ಸಂಪೂರ್ಣವಾಗಿ ಅನುಭವಕ್ಕೆ ಬರುತ್ತದೆ ಎಂದು ಬೃಹದಾರಣ್ಯಕ, ಮಾಂಡೂಕ್ಯ, ಬ್ರಹ್ಮಸೂತ್ರ-ಮುಂತಾದವುಗಳ ಭಾಷ್ಯದಲ್ಲಿ ಬರೆದಿರುವದಕ್ಕೆ ಇದೇ ಅಭಿಪ್ರಾಯವು.

ಆತ್ಮಸ್ವರೂಪವನ್ನು ತಿಳಿಯುವದಕ್ಕೆ ಅನುಕೂಲವೆಂದು ಈ ಉಪನಿಷತ್ತಿನಲ್ಲಿ ಸೂಚಿಸಿರುವ ತರ್ಕಗಳು ಯಾವವೆಂದರೆ : -

೧) ಇಂದ್ರಿಯ, ಮನಸ್ಸು, ಬುದ್ಧಿ, ಅವ್ಯಕ್ತ - ಇವುಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಒಳಗಿನ ಆತ್ಮನಾಗಿಯೂ ಇರುವವು ; ಇವುಗಳೆಲ್ಲಕ್ಕಿಂತಲೂ ಸೂಕ್ಷ್ಮನಾಗಿ ವ್ಯಾಪಕನಾಗಿರುವ ಒಳತಿರುಳೇ ಆತ್ಮನು . ( ೧-೩-೧೦,೧೧ ; ೨-೩-೭,೮).

೨) ಯಾವ ಚೈತನ್ಯದಿಂದಲೇ ಹೊರಗಿನ ಶಬ್ದಾದಿಗಳನ್ನೂ ಒಳಗಿನ ದೇಹೇಂದ್ರಿಯಾದಿಗಳನ್ನೂ ಅರಿಯುವರೋ ಆ ಸ್ವರೂಪವೇ ಆತ್ಮ ( ೨-೧-೩).

೩) ಎಚ್ಚರ ಕನಸುಗಳೆಂಬ ಅವಸ್ಥೆಗಳನ್ನು ಯಾವ ವ್ಯಾಪಕವಾದ ಚೈತನ್ಯದಿಂದ ನಾವು ಅರಿಯುತ್ತಿರುವೆವೋ, ಆ ಸಾಕ್ಷಿಯೇ ಆತ್ಮ ( ೨-೧-೪).

೪) ಕರ್ಮಫಲವನ್ನನುಭವಿಸುತ್ತಾ ಕಾಲತ್ರಯಕ್ಕೆ ಕಟ್ಟುಬಿದ್ದಿರುವಂತೆ ತೋರುವ ಭೋಕ್ತೃವಿನ ಪರಮಾರ್ಥರೂಪವೇ ಆತ್ಮನು (೨-೧-೫,೧೩).

೫) ಶರೀರೇಂದ್ರಿಯಪ್ರಾಣಗಳು ಒಂದಕ್ಕೊಂದು ಕೂಡಿಕೊಂಡು ಯಾರಿಗಾಗಿ, ಯಾರಿಂದ ಪ್ರೇರಿತವಾದಂತೆ ಕೆಲಸಮಾಡುತ್ತಿರುವವೋ ಅಂಥ ಚೈತನ್ಯವೇ, ಅವುಗಳೊಡನೆ ಸೇರಿಕೊಳ್ಳದೆ ಸ್ವತಂತ್ರನಾಗಿರುವ ಸರ್ವವಿಕ್ರಿಯೆಗಳ ಆಧಾರರೂಪನೇ ಆತ್ಮನು ( ೨-೨-೧, ೩) .

ಇವು ಆತ್ಮನಿರಬೇಕೆಂದು ಸಾಧಿಸುವ ಬರಿಯ ಅನುಮಾನಗಳಲ್ಲ ; ಏಕೆಂದರೆ ತನ್ನ ಸ್ವರೂಪವನ್ನು ತರ್ಕದಿಂದ ಅಲ್ಲಗಳೆಯುವದು ಯಾರಿಂದಲೂ ಆಗಲಾರದು. (ನ ಹಾತವ್ಯಾ, ೧-೨-೯ ಭಾಷ್ಯ) . ಚೈತನ್ಯಸ್ವರೂಪವು ನಿತ್ಯಸಿದ್ಧವೆಂಬುದನ್ನು ನೆನಪುಕೊಡುವದಕ್ಕೆ ಇವು ಬಲವಾದ ಅನುಕೂಲತರ್ಕಗಳಾಗಿವೆ. ವೈದಿಕಸಂಪ್ರದಾಯಕ್ಕೆ **ಆಗಮವೆಂದು** ಹೆಸರು. ಆ ಆಗಮವನ್ನು ಬಿಟ್ಟು ಪ್ರತ್ಯಕ್ಷಾನುಮಾನಗಳಿಂದ ನೋಡಿ ಆತ್ಮನು ಇದ್ದಾನೆ, ಸ್ಥೂಲ, ಅಣು - ಎಂದು ಮುಂತಾಗಿ ವಿಕಲ್ಪಿಸುವ ಚಾರ್ವಾಕರು, ಕ್ಷಣಿಕವಿಜ್ಞಾನಿಗಳು ಮುಂತಾದ ( ೨-೧-೧೩) ಕುತಾರ್ಕಿಕರ ವಾದಗಳು ಅನುಭವವಿರುದ್ಧವಾಗಿವೆ ಮತ್ತು ಪರಸ್ಪರ ವಿರುದ್ಧವಾಗಿವೆ. ಇದನ್ನು ತಿಳಿಸುವದೇ ಆತ್ಮನು ತರ್ಕಕ್ಕೆ ನಿಲುಕುವದಿಲ್ಲವೆಂಬ ವಚನದ ಉದ್ದೇಶವು.

## ಯೋಗಕ್ಕೂ ಜ್ಞಾನಕ್ಕೂ ಸಂಬಂಧ

ಅಧ್ಯಾತ್ಮಯೋಗದಿಂದ (೧-೨-೧೨) ಜ್ಞಾನವಾಗುವದೆಂದೂ ನಚಿಕೇತನು ಯೋಗವಿಧಾನವನ್ನು ತಿಳಿದುಕೊಂಡು ಬ್ರಹ್ಮಸ್ವರೂಪವನ್ನು ಹೊಂದಿದನೆಂದೂ (೨-೩-೧೮) ಹೇಳಿರುತ್ತದೆಯಷ್ಟೆ. ಆತ್ಮೈಕ್ಯವನ್ನು ಸುಮ್ಮನೆ ತಿಳಿದುಕೊಂಡರೆ ಸಾಲದೆಂದೂ ಅದನ್ನು ನೇರಾಗಿ ಕಂಡುಕೊಳ್ಳಬೇಕೆಂದೂ ಈ ವಾಕ್ಯಕ್ಕೆ ಕೆಲವರು ತಾತ್ಪರ್ಯವನ್ನು ಕಲ್ಪಿಸುತ್ತಾರೆ. 'ಸಾಕ್ಷಾದ್ ವಿಜಾನಾತಿ' ( ೧-೨-೨೦) 'ಅವಗಮ್ಯ ಆತ್ಮಭಾವೇನ ಸಾಕ್ಷಾತ್' ( ೨-೧-೪), 'ಸಾಕ್ಷಾದನುಭವನ್ತಿ' ( ೨-೨-೧೨) ಎಂಬ ಭಾಷ್ಯವಚನಗಳು ಈ ಅಭಿಪ್ರಾಯಕ್ಕೆ ಬೆಂಬಲವನ್ನು ಕೊಡುವಂತೆಯೂ ಕಾಣಿಸುತ್ತವೆ. ಆದರೆ ಈ ಸಾಕ್ಷಾತ್ಕಾರದ ಸ್ವರೂಪವೇನು ? ಎಂದುದನ್ನು ಸ್ವಲ್ಪ ವಿಚಾರಿಸುವದು ಅವಶ್ಯ. ಏಕೆಂದರೆ ಆತ್ಮನನ್ನು ಪ್ರತ್ಯಕ್ಷಾದಿಗಳ ವಿಷಯಗಳಂತೆ ವಿಷಯವಾಗಿ ಅರಿಯುವದಕ್ಕೆ ಆಗಲಾರದೆಂದು ಭಾಷ್ಯಕಾರರೇ ಅಡಿಗಡಿಗೆ ಹೇಳುತ್ತಾ ಬಂದಿರುತ್ತಾರೆ, 'ವಾಕ್ಯಾರ್ಥವನ್ನು ಅರಿತುಕೊಂಡಮೇಲೆ ಮತ್ತೇನೂ

ಮಾಡಬೇಕಾದದ್ದು ಇರುವದಿಲ್ಲ' (ಮುಂ. ಭಾ. ೧-೧-೬) ಉತ್ತಮಾಧಿಕಾರಿಗಳಿಗೆ ಒಂದುಸಲ ವೇದಾಂತವಾಕ್ಯವನ್ನು ಶ್ರವಣಮಾಡುವದರಿಂದಲೇ ಜ್ಞಾನವಾಗಿಬಿಡುತ್ತದೆ. (ಸೂ. ಭಾ. ೪-೧-೨) ಎಂದು ಸ್ಪಷ್ಟವಾಗಿ ಹೇಳುವ ಭಾಷ್ಯವಚನಗಳೂ ಇರುತ್ತವೆ. ಆದ್ದರಿಂದ ಸಾಕ್ಷಾತ್ತಾಗಿ ತಿಳಿಯುವದು ಎಂದರೆ ತನ್ನ ಸ್ವರೂಪದಲ್ಲಿಯೇ ನೆಲೆನಿಲ್ಲುವದೇ ಹೊರತು ಮತ್ತೆ ಬೇರೆಯ ಅನುಭವವನ್ನು ಪಡೆಯುವದೆಂದೇನೂ ಅಲ್ಲ. ಆದರಿಂದಲೇ ಯೋಗದ ಅವಸ್ಥೆಯಲ್ಲಿ 'ಅವಿದ್ಯಾಧ್ಯಾರೋಪಣವರ್ಜಿತವಾದ ಸ್ವರೂಪದಲ್ಲಿ ಆತ್ಮನು ನಿಂತಿರುತ್ತಾನೆ' (೨-೩-೧೧) ಎಂದು ಆಚಾರ್ಯರು ಬರೆದಿರುತ್ತಾರೆ. ಯೋಗವನ್ನು ಹೊಂದಿದಮೇಲೆ ಮತ್ತೇನೂ ಮಾಡಬೇಕಾದದ್ದಿಲ್ಲವಾದ್ದರಿಂದ ಅದನ್ನು ಪಡೆಯುವದಕ್ಕಾಗಿಯೂ ಅದು ಬಂದದ್ದು ಹೋಗದೆ ಇರುವದಕ್ಕಾಗಿಯೂ ಪ್ರಯತ್ನವನ್ನು ಮಾಡಬೇಕೆಂದು ಹೇಳುವ (೨-೩-೧) ಭಾಷ್ಯವಚನವೂ ಇದಕ್ಕೆ ಅನುಕೂಲವಾಗಿರುತ್ತದೆ. 'ಅಧ್ಯಾತ್ಮಯೋಗವೆಂದರೆ ವಿಷಯಗಳಿಂದ ಚಿತ್ತವನ್ನು ಸೆಳೆದು ಆತ್ಮನಲ್ಲಿ ನಿಲ್ಲಿಸಿಕೊಳ್ಳುವದು' (೧-೨-೧೨) ಎಂಬ ಭಾಷ್ಯಕ್ಕೆ 'ಏಕಾಗ್ರತೆಯಿಂದ ನೋಡಿದರೆ ಆತ್ಮಜ್ಞಾನವಾಗುತ್ತದೆ' ಎಂದೇ ತಾತ್ಪರ್ಯ. ಆದ್ದರಿಂದ ಜ್ಞಾನಕ್ಕಾಗಿ ಯೋಗವೇ ಹೊರತು ಜ್ಞಾನವಾದಮೇಲೆ ಯೋಗದಿಂದ ಸಾಕ್ಷಾತ್ಕಾರವನ್ನು ಹೊಂದಬೇಕೆನ್ನುವವರ ಪಕ್ಷಕ್ಕೆ ಭಾಷ್ಯದಲ್ಲಿ ಎಲ್ಲಿಯೂ ಆಧಾರವು ದೊರಕುವದಿಲ್ಲವೆಂದು ತಿಳಿಯಬೇಕು.

## ಜ್ಞಾನದಿಂದಾಗುವ ಮುಕ್ತಿ

ಮುಕ್ತಿಯನ್ನು ಪಡೆಯುವ ಅಧಿಕಾರಿಗಳನ್ನು ಎರಡು ರಾಶಿಗಳಾಗಿ ಉಪನಿಷತ್ತಿನಲ್ಲಿ ವರ್ಗೀಕರಣಮಾಡಿರುತ್ತದೆ. ಸಗುಣಬ್ರಹ್ಮವನ್ನು ಉಪಾಸನೆ ಮಾಡುವವರು ಮರಣಕಾಲದವರೆಗೂ ಉಪಾಸನೆಮಾಡುತ್ತಿದ್ದು ಅದೇ ತಾನೆಂಬ ಗಟ್ಟಿಭಾವನೆಯ ಸಾಕ್ಷಾತ್ಕಾರವನ್ನು ಪಡೆದುಕೊಂಡು (೧-೧-೧೭) ಬದುಕಿರುವಾಗಲೇ ಅಧರ್ಮ, ಅಜ್ಞಾನ - ಮುಂತಾದವುಗಳಿಂದ ಬಿಡುಗಡೆಹೊಂದಿ (೧-೧-೧೮) **ಸುಷುಮ್ನಾನಾಡಿಯ** ದ್ವಾರವಾಗಿ ಹೊರಟು ಸೂರ್ಯದ್ವಾರದಿಂದ ಬ್ರಹ್ಮಲೋಕವನ್ನು ಸೇರುವರು. ಇದು ಬಹುಕಾಲ ಇರುವ ಫಲವಾದ್ದರಿಂದ **ಆಪೇಕ್ಷಿಕವಾದ ಅಮೃತವೆನಿಸುವದು.** ಅಥವಾ ಬ್ರಹ್ಮಲೋಕದಲ್ಲಿ ಜ್ಞಾನವನ್ನು ಹೊಂದಿ ಕಲ್ಪಾಂತದಲ್ಲಿ ಬ್ರಹ್ಮನೊಡನೆ **ಮುಖ್ಯವಾದ ಅಮೃತತತ್ವವನ್ನೇ** ಪಡೆಯುವರು ( ೨-೩-೧೬). ಹೀಗೆ ಬ್ರಹ್ಮಲೋಕಕ್ಕೆ ಹೋಗಿ ಜ್ಞಾನವನ್ನು ಪಡೆದು ಮುಕ್ತಿಯನ್ನು ಪಡೆಯುವದನ್ನು **ಕ್ರಮಮುಕ್ತಿ** ಎಂದು ಆಚಾರ್ಯರು

ಕರೆದಿರುತ್ತಾರೆ. ಇದಕ್ಕೆ ಬದಲು ಬದುಕಿರುವಾಗ ಈ ಲೋಕದಲ್ಲಿಯೇ ಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದಿದರೆ ಅದು **ಸದ್ಯೋಮುಕ್ತಿ** ಎನಿಸುವದು. ಲೋಕಾಂತರದಲ್ಲಿ ಕ್ರಮಮುಕ್ತಿಯನ್ನು ಪಡೆಯುವುದು ಕಷ್ಟಸಾಧ್ಯವಾದ್ದರಿಂದ ಇಲ್ಲಿಯೇ ಜ್ಞಾನದಿಂದ ಮುಕ್ತಿಯನ್ನು ಪಡೆದುಕೊಳ್ಳಬೇಕೆಂದು (೨-೩-೪,೫) ಹೇಳಿರುವದಲ್ಲದೆ ಭಾಷ್ಯಕಾರರು ಈ ಸದ್ಯೋಮುಕ್ತಿಯನ್ನು ಮುಖ್ಯವೆಂದು ಒತ್ತಿ ಹಲವು ಕಡೆಗಳಲ್ಲಿ (೨-೨-೧, ೨-೩-೮, ೨-೩-೧೪, ೨-೩-೧೫) ಹೇಳಿರುತ್ತಾರೆ. ಜ್ಞಾನಿಯು ದೇಹವನ್ನು ಬಿಟ್ಟಮೇಲೆ ಮತ್ತೆ ಶರೀರವನ್ನು ಧರಿಸುವದಿಲ್ಲವೆಂಬ ಕಾರಣದಿಂದ **ವಿದೇಹಮುಕ್ತಿ**ಯನ್ನೂ ಗೌಣವಾಗಿ (೨-೨-೧, ೨-೩-೮) ಒಪ್ಪಿರುತ್ತಾರೆ.

ಹೀಗಿದ್ದರೂ ಕೆಲವರು ವೇದಾಂತಿಗಳು **ಜೀವನ್ಮುಕ್ತಿ**ಯಲ್ಲಿ ಒಂದಿಷ್ಟು ಅವಿದ್ಯೆ ಉಳಿದುಕೊಂಡಿರುವದರಿಂದ ಅದು ಗೌಣಮುಕ್ತಿಯೆಂದೂ ವಿದೇಹ ಮುಕ್ತಿಯೇ ಮುಖ್ಯವೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಸದ್ಯೋಮುಕ್ತಿಯೆಂದರೆ ಜ್ಞಾನವುಂಟಾದಕೂಡಲೆ ಶರೀರವು ಬಿದ್ದುಹೋಗುವದು ಎಂದೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ (!). ಈ ಅಭಿಪ್ರಾಯಗಳು ಭಾಷ್ಯವಿರುದ್ಧವಾಗಿರುವ ವಲ್ಲದೆ ಜ್ಞಾನದಿಂದಲೇ ಮೋಕ್ಷವಾಗುವದೆಂಬ ಅದ್ವೈತದ ಮುಖ್ಯ ಸಿದ್ಧಾಂತಕ್ಕೂ ವಿರುದ್ಧವಾಗಿರುವವೆಂಬುದನ್ನು ಹೇಳಬೇಕಾದದ್ದಿಲ್ಲ.

## ಈ ಉಪನಿಷತ್ತಿನ ಟೀಕಾಕಾರರು

ಈ ಉಪನಿಷತ್ತಿಗೆ 'ಆನಂದಜ್ಞಾನ' 'ಬಾಲಗೋಪಾಲೇಂದ್ರಯತೀಶ್ವರ' ಎಂಬ ಇಬ್ಬರು ವ್ಯಾಖ್ಯಾನವನ್ನು ಬರೆದಿರುತ್ತಾರೆ. ಆನಂದಜ್ಞಾನರು ಮುಂಡಕೋಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವವರೇ ಎಂದು ತೋರುತ್ತದೆ. ಏಕೆಂದರೆ ಈ ಎರಡು ವ್ಯಾಖ್ಯಾನಗಳಲ್ಲಿಯೂ '**ಪ್ರಕಟಾರ್ಥ**'ವೆಂಬ ವೇದಾಂತ ಗ್ರಂಥವನ್ನು ಪ್ರಮಾಣವಾಗಿ ಬರೆದುಕೊಂಡಿರುತ್ತದೆ ; ಎರಡರಲ್ಲಿಯೂ ಭಾಸ್ಕರಾಚಾರ್ಯರ ಮತವನ್ನು ಖಂಡಿಸಿರುತ್ತದೆ. ಇದು ನಿಜವಾದರೆ ಬೃಹದಾರಣ್ಯಕೋಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವ 'ಆನಂದಗಿರಿ' ಗಳೆಂಬವರು ಇವರಲ್ಲವೆಂದು ಹೇಳಬೇಕಾಗುತ್ತದೆ ; ಏಕೆಂದರೆ ಬೃಹದಾರಣ್ಯಕ ವ್ಯಾಖ್ಯಾನಕಾರರು ಏಕಜೀವವಾದಿಗಳು ; ಮುಂಡಕೋಪನಿಷತಿನ ವ್ಯಾಖ್ಯಾನ ಕಾರರು ನಾನಾಜೀವವಾದಿಗಳು. ಭಾಷ್ಯದಲ್ಲಿ ಈ ವಾದಗಳ ಸುಳಿವೇ ಇಲ್ಲ ; ಇವು ಅವರಿಂದೀಚೆಗೆ ವೇದಾಂತಿಗಳಲ್ಲಿ ಉಂಟಾದ ಚರ್ಚೆಗೆ ಸೇರಿದ ಪ್ರಶ್ನೆಗಳಾಗಿರು ತ್ತವೆ. ವ್ಯಾಖ್ಯಾನಕಾರರುಗಳು ಭಾಷ್ಯಕಾರರಿಗಿಂತ ಈಚಿನವರಾದ್ದರಿಂದ ಇವರು

ತಮ್ಮ ವ್ಯಾಖ್ಯಾನದಲ್ಲಿ ಹೊಸವೇದಾಂತಿಗಳ ವಾದಗಳನ್ನೂ ಬೆರೆಯಿಸಿಕೊಂಡಿರುತ್ತಾರೆ. ಬಾಲಗೋಪಾಲಯತೀಶ್ವರರು ಆನಂದಜ್ಞಾನರ ವ್ಯಾಖ್ಯಾನವನ್ನು ಬಲು ಮಟ್ಟಿಗೆ ಶಬ್ದಶಃ ಉಪಯೋಗಿಸಿಕೊಂಡು ಅದನ್ನು ಇನ್ನಷ್ಟು ವಿಸ್ತರಿಸಿರುತ್ತಾರೆ.

ಕಠೋಪನಿಷತ್ತು ಚಿಕ್ಕದಾದರೂ ಇದರಲ್ಲಿ ಅಮೋಘವಾದ ತತ್ತ್ವಗಳು ಅಡಗಿವೆ ಎಂಬುದನ್ನು ಭಾಷ್ಯಕಾರರು ಹೃದಯಂಗಮವಾದ ರೀತಿಯಿಂದ ತೋರಿಸಿಕೊಟ್ಟಿರುತ್ತಾರೆ. ಈ ಉಪನಿಷತ್ತಿನ ಸಾರವನ್ನು ಕೊನೆಯ ಮಂತ್ರಗಳಲ್ಲಿ ಸಂಗ್ರಹಿಸಿ ಹೇಳಿರುವದೇನೆಂದರೆ : ಮನುಷ್ಯನ ಹೃದಯದಲ್ಲಿ ಪರಿಚ್ಛಿನ್ನನಾಗಿ ಸಂಸಾರಿಯಾಗಿರುವಂತೆ ಕಾಣುತ್ತಿರುವ ಜೀವನನ್ನು ಉಪಾಧಿಗಳಿಂದ ವಿಂಗಡಿಸಿಕೊಂಡು ಅವನೇ ನಿತ್ಯಶುದ್ಧವಾದ ಅಮೃತವಾದ ಬ್ರಹ್ಮವೆಂದು ತಿಳಿದುಕೊಳ್ಳಬೇಕು. ನಮ್ಮ ಬುದ್ಧಿಗೆ ಗಂಟುಹಾಕಿಕೊಂಡಿರುವಂತೆ ಇರುವ ತಪ್ಪುತಿಳಿವಳಿಕೆಗಳನ್ನು ಕಳೆದುಕೊಂಡು ಕಾಮಗಳೆಲ್ಲವನ್ನೂ ಸಮೂಲವಾಗಿ ನಾಶಪಡಿಸಿಕೊಂಡರೆ ಮರ್ತ್ಯರೆನಿಸಿರುವ ನಾವು ಅಮೃತರಾಗುವೆವು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳಬಹುದು. ಇದೇ ಸರ್ವವೇದಾಂತದ ಸಾರವು ಎಂಬುದು ಉಪನಿಷತ್ತಿನ ಕೊನೆಯ ಮಾತು.

ಗ್ರಂಥಕರ್ತ.

# ವಿಷಯಾನುಕ್ರಮಣಿಕೆ

(ಸಂಖ್ಯೆಗಳು ಪುಟಗಳನ್ನು ಸೂಚಿಸುವವು)

## ಭಾಷ್ಯಕಾರರ ಅವತರಣಿಕೆ

ಉಪನಿಷತ್ತೆಂದರೆ ಏನು ? (೨)
ಉಪನಿಷತ್ತಿನ ಅನುಬಂಧಚತುಷ್ಟಯ (೬), ಪುಟ ೧-೭.

## ಒಂದನೆಯ ಅಧ್ಯಾಯ

### ಒಂದನೆಯ ವಲ್ಲಿ

ನಚಿಕೇತನು ಯಮನ ಬಳಿಗೆ ಹೋದದ್ದು (೮)
ಯಮನು ವರಗಳನ್ನು ಕೊಟ್ಟಿದ್ದು (೧೮)
ಮೊದಲನೆಯ ವರ : ತಂದೆಯ ಪ್ರಸನ್ನತೆ (೧೯)
ಎರಡನೆಯ ವರ : ಅಗ್ನಿವಿದ್ಯೆ (೨೧)
ಯಮನು ತಾನಾಗಿ ಕೊಟ್ಟ ನಾಲ್ಕನೆಯ ವರ (೨೬)
ಕರ್ಮೋಪಾಸನೆಗಳ ಫಲ (೨೭)
ಮೂರನೆಯ ವರ : ಆತ್ಮವಿದ್ಯೆ (೩೨)
ನಚಿಕೇತನ ಯೋಗ್ಯತಾಪರೀಕ್ಷೆ (೩೫) ಪುಟ ೮-೪೫.

### ಎರಡನೆಯ ವಲ್ಲಿ

ವಿದ್ಯಾವಿದ್ಯೆಗಳಲ್ಲಿ ವಿದ್ಯೆಯ ಹೆಚ್ಚುಗಾರಿಕೆ (೪೬)
ಆತ್ಮಸ್ವರೂಪ ವಿಷಯದ ಪ್ರಶ್ನೆ (೬೬)
ಓಂಕಾರದ ಮೂಲಕ ಬ್ರಹ್ಮದ ಉಪದೇಶ (೬೭)
ಬ್ರಹ್ಮದ ಸಾಕ್ಷಾಜ್ಜ್ಞಾನ (೭೧)
ಆತ್ಮಜ್ಞಾನಕ್ಕೆ ಸಾಧನ (೮೧) ಪುಟ ೪೬-೮೫

### ಮೂರನೆಯ ವಲ್ಲಿ

ಸಂಸಾರಗತಿ, ಮೋಕ್ಷಗತಿ (೮೬)
ಆತ್ಮನು ಎಲ್ಲಕ್ಕೂ ಸೂಕ್ಷ್ಮನು (೯೭)
ಅಧ್ಯಾತ್ಮ ಯೋಗ (೧೦೪)
ಆತ್ಮಜ್ಞಾನದ ಪ್ರಶಂಸೆ (೧೧೨) ಪುಟ ೮೬-೧೧೩

## ಎರಡನೆಯ ಅಧ್ಯಾಯ

### ಒಂದನೆಯ ವಲ್ಲಿ


| | | |
|---|---|---|
| ವಿಷಯಗಳ ಆಸೆಯೇ ಆತ್ಮದರ್ಶನಕ್ಕೆ ಅಡ್ಡಿ | (೧೧೪) | |
| ಆತ್ಮನನ್ನು ಅರಿಯುವ ರೀತಿ | (೧೧೯) | |
| ಆತ್ಮನೂ ಹಿರಣ್ಯಗರ್ಭನೂ ಅದ್ವಿತೀಯವಾದ ಬ್ರಹ್ಮವೇ | (೧೨೩) | |
| ಬ್ರಹ್ಮದಲ್ಲಿ ಯಾವ ಭೇದವೂ ಇಲ್ಲ | (೧೨೯) | |
| ಜ್ಞಾನಾಜ್ಞಾನಗಳಿಗೆ ಫಲ | (೧೩೪) | ಪುಟ ೧೧೪-೧೩೬ |


### ಎರಡನೆಯ ವಲ್ಲಿ


| | | |
|---|---|---|
| ಶಾರೀರಾತ್ಮನ ನಿಜವನ್ನು ಅರಿತರೆ ಮುಕ್ತಿ | (೧೩೭) | |
| ಆತ್ಮನನ್ನು ಕಂಡುಹಿಡಿಯುವದಕ್ಕೆ ಹೆಗ್ಗುರುತುಗಳು | (೧೪೧) | |
| ಬ್ರಹ್ಮಾತ್ಮೈಕತ್ವ | (೧೪೫) | |
| ಬ್ರಹ್ಮವು ಸ್ವಪ್ರಕಾಶವು | (೧೫೬) | ಪುಟ ೧೩೭-೧೫೮ |


### ಮೂರನೆಯ ವಲ್ಲಿ


| | | |
|---|---|---|
| ಜಗತ್ಕಾರಣವೇ ಬ್ರಹ್ಮ | (೧೫೯) | |
| ಜಗತ್ತಿನ ವ್ಯವಸ್ಥೆಗೆ ಕಾರಣವಾಗಿರುವದು ಬ್ರಹ್ಮ | (೧೬೩) | |
| ಬ್ರಹ್ಮವನ್ನು ಈ ಲೋಕದಲ್ಲಿಯೇ ಅರಿತುಕೊಳ್ಳಬೇಕು | (೧೬೫) | |
| ಇಂದ್ರಿಯಾದಿಗಳಿಂದ ಆತ್ಮನನ್ನು ವಿಂಗಡಿಸಿ ಅರಿತುಕೊಳ್ಳಬೇಕು | (೧೬೮) | |
| ಜ್ಞಾನಕ್ಕೆ ಸಾಧನವಾದ ಯೋಗ | (೧೭೩) | |
| ಬ್ರಹ್ಮಜ್ಞಾನವೂ ಅದರ ಫಲವೂ | (೧೭೫) | |
| ಉಪಸಂಹಾರ | (೧೮೬) | ಪುಟ ೧೫೯-೧೯೦ |

| | |
|---|---|
| **ಉಪನಿಷತ್ತಿನ ಸಾರ** | ಪುಟ ೧೯೧ |
| **ಮಂತ್ರಗಳ ಅನುಕ್ರಮಣಿಕೆ** | ಪುಟ ೧೯೭ |
| **ಶಬ್ದಾನುಕ್ರಮಣಿಕೆ** | ಪುಟ ೨೦೧ |


------

# ಸಂಕೇತಗಳ ವಿವರ

ಈಶ, ಕೇನ - ಈ ಉಪನಿಷತ್ತುಗಳಂತೆಯೇ ಇಲ್ಲಿಯೂ ಉಪನಿಷತ್ತುಗಳು, ಗೀತೆ - ಇವುಗಳನ್ನು ಮೊದಲನೆಯ ಅಕ್ಷರದಿಂದಲೂ ಆಯಾ ಭಾಷ್ಯವನ್ನು ಭಾ. ಎಂಬ ಅಕ್ಷರದಿಂದಲೂ ಸೂಚಿಸಿರುತ್ತದೆ. ಕೆಲವು ಸಂಕೇತಗಳನ್ನು ಮಾತ್ರ ಕೆಳಗೆ ವಿವರಿಸಿರುತ್ತದೆ.

| | |
|---|---|
| (ಆ) | ಆನಂದಾಶ್ರಮಮುದ್ರಿತಪುಸ್ತಕದಲ್ಲಿರುವ ಪಾಠ. ಆನಂದಜ್ಞಾನರ ವ್ಯಾಖ್ಯಾನ |
| (ಆ ॥ ಗೋ॥) | ಆನಂದಜ್ಞಾನರ ಮತ್ತು ಬಾಲಗೋಪಾಲೇಂದ್ರಯತೀಶ್ವರರ ಕಾಠಕೋಪನಿಷದ್ವ್ಯಾಖ್ಯಾನ. |
| ಋ. | ಋಗ್ವೇದ |
| ತೈ. ಬ್ರಾ. | ತೈತ್ತಿರೀಯಬ್ರಾಹ್ಮಣ |
| ತೈ. ಸಂ. | ತೈತ್ತಿರೀಯಸಂಹಿತೆ |
| ಭಾ. ಭಾ. | ಭಾಷ್ಯಭಾಗ : ಈ ಉಪನಿಷತ್ತಿನ ಸಂಸ್ಕೃತಭಾಷ್ಯಭಾಗಗಳನ್ನು ತಿಳಿಸುವದಕ್ಕೆ ಉಪಯೋಗಿಸಿರುವ ಸಂಖ್ಯೆಗಳನ್ನು ಹೀಗೆ ತಿಳಿಸಿದೆ. |
| ಮನು. | ಮನುಸ್ಮೃತಿ |
| (ಮೈ ॥) | ಮೈಸೂರಿನಲ್ಲಿ ಮುದ್ರಿತವಾದ ತೆಲುಗಕ್ಷರದ ಪಾಠ. |
| ವಿ. ಪು. | ವಿಷ್ಣುಪುರಾಣ |
| ಶ್ವೇ. | ಶ್ವೇತಾಶ್ವತರೋಪನಿಷತ್ತು |
| ಸೂ. ಭಾ. | ಸೂತ್ರಭಾಷ್ಯ, ಬ್ರಹ್ಮಸೂತ್ರಕ್ಕೆ ಶಂಕರಾಚಾರ್ಯರ ಭಾಷ್ಯ. |

---------

|| ಓಂ ||

ಶ್ರೀಶಾಂಕರಭಾಷ್ಯಸಮೇತವಾದ

# ಕಾಠಕೋಪನಿಷತ್ತು

## ಭಾಷ್ಯಕಾರರ ಅವತರಣಿಕೆ

(ಭಾಷ್ಯ)

೧. ಓಂ ನಮೋ ಭಗವತೇ ವೈವಸ್ವತಾಯ ಮೃತ್ಯವೇ ಬ್ರಹ್ಮವಿದ್ಯಾಚಾರ್ಯಾಯ ನಚಿಕೇತಸೇ ಚ । ಅಥ ಕಾಠಕೋಪನಿಷದ್ವಲ್ಲೀನಾಂ ಸುಖಾರ್ಥಪ್ರಬೋಧನಾರ್ಥಮ್ ಅಲ್ಪಗ್ರನ್ಥಾ ವೃತ್ತಿರಾರಭ್ಯತೇ ॥

(ಭಾಷ್ಯಾರ್ಥ)

ಓಂ ! ಭಗವಂತನೂ[1] ವಿವಸ್ವಂತನ ಮಗನೂ[2] ಬ್ರಹ್ಮವಿದ್ಯಾಚಾರ್ಯನೂ[3] ಆದ ಮೃತ್ಯುವಿಗೂ[4] ನಚಿಕೇತಸ್ಸಿಗೂ ನಮಸ್ಕಾರವು. ಈಗ ಕಾಠಕೋಪನಿಷತ್ತಿನ[5]

1. 'ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ ಗತಿಮ್ । ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥' (ಪ್ರಾಣಿಗಳ ಉತ್ಪತ್ತಿಯನ್ನೂ ಪ್ರಲಯವನ್ನೂ ಆಗುಹೋಗುಗಳನ್ನೂ ವಿದ್ಯೆಯನ್ನೂ ಅವಿದ್ಯೆಯನ್ನೂ ಅರಿತಿರುವಾತನನ್ನು ಭಗವಂತನೆನ್ನಬೇಕು) ಎಂದು ಪುರಾಣವಾಕ್ಯ (ವಿ. ಪು. ೬-೫-೭೮).

2. ಸೂರ್ಯನ ಮಗನು. ಸೂರ್ಯನು ಬ್ರಹ್ಮವಿದ್ಯೆಯನ್ನು ಮನುವಿಗೆ ಹೇಳಿದನೆಂದು ಗೀತೆಯಲ್ಲಿದೆ (೪-೧).

3. ಮೂಲದಲ್ಲಿ ಈ ವಿಶೇಷಣವು ಮೃತ್ಯುವಿಗೂ ನಚಿಕೇತಸ್ಸಿಗೂ ಅನ್ವಯಿಸುವಂತೆ ಇದೆ. ಮೃತ್ಯುವೇ ಉಪನಿಷತ್ತಿನಲ್ಲಿ ಆಚಾರ್ಯನಾಗಿದ್ದರೂ ನಚಿಕೇತಸ್ಸು ಯಮನಿಂದ ಪಡೆದ ವಿದ್ಯೆಯನ್ನು ಭೂಲೋಕದಲ್ಲಿ ಹರಡಿದನು ಎಂಬ ಅರ್ಥವನ್ನು ಸೂಚಿಸುವದಕ್ಕಾಗಿ 'ನಚಿಕೇತಸೇ' ಎಂಬ ಮಾತಿನ ಹಿಂದೆ ಈ ವಿಶೇಷಣವನ್ನು ಹಾಕಿರಬೇಕೆಂದು ತೋರುತ್ತದೆ.

4. 'ಯಮನಿಗೂ. ಯಮನು ಜ್ಞಾನಿಯಾದರೂ ಅಧಿಕಾರಪುರುಷನಾದ್ದರಿಂದ ಪ್ರಾರಬ್ಧಕರ್ಮವು ಮುಗಿಯುವವರೆಗೆ ತನ್ನ ಅಧಿಕಾರದ ಕೆಲಸವನ್ನು ನಡೆಯಿಸುತ್ತಿರುವನು' (ಆ । ಟೀ ।) ಸೂ. ಭಾ. ೩-೩-೩೨ ನೋಡಿ.

5. ಕೃಷ್ಣಯಜುರ್ವೇದದಲ್ಲಿ 'ಕಾಠಕ'ವೆಂಬುದೊಂದು ಶಾಖೆಯುಂಟು. ಈ ಉಪನಿಷತ್ತು ಅದಕ್ಕೆ ಸೇರಿದ್ದೆಂದು ಹೇಳುತ್ತಾರೆ. ಪೀಠಿಕೆಯನ್ನು ನೋಡಿ.

ವಲ್ಲಿಗಳಿಗೆ[1] ಸುಲಭವಾಗಿ ಅರ್ಥವು ತಿಳಿಯಲೆಂದು ಸ್ವಲ್ಪಗ್ರಂಥದ ವೃತ್ತಿ[2]ಯನ್ನು ಪ್ರಾರಂಭಿಸಿರುತ್ತದೆ.

## ಉಪನಿಷತ್ತೆಂದರೆ ಏನು ?

(ಭಾಷ್ಯ)

೧. ಸದೇರ್ಧಾತೋರ್ವಿಶರಣಗತ್ಯವಸಾದನಾರ್ಥಸ್ಯ, ಉಪನಿಪೂರ್ವಸ್ಯ, ಕ್ವಿಪ್‌ಪ್ರತ್ಯಯಾನ್ತಸ್ಯ ರೂಪಮಿದಮ್[3] 'ಉಪನಿಷತ್' ಇತಿ । ಉಪನಿಷಚ್ಛಬ್ದೇನ ಚ ವ್ಯಾಚಿಖ್ಯಾಸಿತಗ್ರನ್ಥಪ್ರತಿಪಾದ್ಯವೇದ್ಯವಸ್ತುವಿಷಯಾ ವಿದ್ಯಾ ಉಚ್ಯತೇ । ಕೇನ ಪುನರರ್ಥಯೋಗೇನ ಉಪನಿಷಚ್ಛಬ್ದೇನ ವಿದ್ಯಾ ಉಚ್ಯತ ಇತಿ ? ಉಚ್ಯತೇ । ಯೇ ಮುಮುಕ್ಷವೋ ದೃಷ್ಟಾನುಶ್ರವಿಕವಿಷಯ ವಿತೃಷ್ಣಾಃ ಸನ್ತಃ ಉಪನಿಷಚ್ಛಬ್ದವಾಚ್ಯಾಂ ವಕ್ಷ್ಯಮಾಣಲಕ್ಷಣಾಂ ವಿದ್ಯಾಮ್ ಉಪಸದ್ಯ ಉಪಗಮ್ಯ ತನ್ನಿಷ್ಠತಯಾ ನಿಶ್ಚಯೇನ ಶೀಲಯನ್ತಿ, ತೇಷಾಮ್ ಅವಿದ್ಯಾದೇಃ ಸಂಸಾರಬೀಜಸ್ಯ ವಿಶರಣಾತ್ ಹಿಂಸನಾತ್ ವಿನಾಶನಾತ್ ಇತ್ಯನೇನ ಅರ್ಥಯೋಗೇನ ವಿದ್ಯಾ 'ಉಪನಿಷತ್' ಇತ್ಯುಚ್ಯತೇ । ತಥಾ ಚ ವಕ್ಷ್ಯತಿ 'ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' (೧-೩-೧೫) ಇತಿ ॥

(ಭಾಷ್ಯಾರ್ಥ)

(೧) ವಿಶರಣ (೨) ಗತಿ, (೩) ಅವಸಾದನ - ಎಂಬ ಅರ್ಥಗಳುಳ್ಳ[4] 'ಸದ್' ಧಾತುವಿಗೆ ಹಿಂದೆ 'ಉಪ', 'ನಿ'- ಎಂಬ (ಉಪಸರ್ಗಗಳೂ) ಮುಂದೆ ಕ್ವಿಪ್[5] ಎಂಬ ಪ್ರತ್ಯಯವೂ ಬಂದು 'ಉಪನಿಷದ್' ಎಂಬ ಈ ರೂಪವಾಗಿರುತ್ತದೆ. ಮತ್ತು (ಈ) 'ಉಪನಿಷದ್' ಎಂಬ ಶಬ್ದದಿಂದ (ನಾವು ಈಗ) ವ್ಯಾಖ್ಯಾನಮಾಡಬೇಕೆಂದಿರುವ ಗ್ರಂಥದಲ್ಲಿ ಹೇಳಿರುವದಾಗಿಯೂ (ಮುಮುಕ್ಷುಗಳು) ತಿಳಿದುಕೊಳ್ಳಬೇಕಾದದ್ದಾಗಿಯೂ ಇರುವ ವಸ್ತುವಿನ[6] ವಿಷಯವಾದ ವಿದ್ಯೆಯು ಹೇಳಲ್ಪಡುವದು.

1. ಈ ಉಪನಿಷತ್ತಿನ ಅಧ್ಯಾಯದ ವಿಭಾಗಗಳಿಗೆ 'ವಲ್ಲಿ'ಗಳೆಂದು ಹೆಸರು.

2. ಭರ್ತೃಪ್ರಪಂಚರು ಮೊದಲಾದವರೂ ಉಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವರಾದರೂ ಅವರ ಗ್ರಂಥವು ಶಬ್ದಗಳ ದೃಷ್ಟಿಯಿಂದ ದೊಡ್ಡದು, ಅರ್ಥದ ದೃಷ್ಟಿಯಿಂದ ಅದರಲ್ಲಿ ಕೊರತೆಯಿದೆ- ಎಂದು ಭಾವ. (ಗೋ ॥). 3. 'ಇದಮ್' ಎಂಬ ಮಾತು (ಆ॥) ಪಾಠದಲ್ಲಿಲ್ಲ ; ಇಲ್ಲದಿದ್ದರೂ ಸಾಗುತ್ತದೆ. 4. ಈ ಅರ್ಥಗಳನ್ನು ಒಂದೊಂದಾಗಿ ಮುಂದೆ ವಿವರಿಸುವರು. 5. ಕ್ವಿಪ್ ಎಂಬ ಪ್ರತ್ಯಯವು ಬಂದು ಲೋಪವಾಗಿದೆ. ಉಪ ನಿಸದ್ ಕ್ವಿಪ್ = ಉಪನಿಷದ್. 6. ಬ್ರಹ್ಮವಸ್ತುವಿನ.

(ಪ್ರಶ್ನೆ) :- ಹಾಗಾದರೆ ಯಾವ ಅರ್ಥದ ಸಂಬಂಧದಿಂದ[1] (ಈ ಮಾತಿನಿಂದ) ವಿದ್ಯೆಯು ಹೇಳಲ್ಪಡುವದು ?

(ಉತ್ತರ) :- ಹೇಳುತ್ತೇವೆ (ಕೇಳಿರಿ) : ಯಾವ ಮುಮುಕ್ಷುಗಳು (ಈ ಲೋಕದಲ್ಲಿ) ಕಂಡಿರುವವುಗಳಾಗಿಯೂ (ಪರಲೋಕದಲ್ಲಿವೆಯೆಂದು) ಶ್ರುತಿಯಲ್ಲಿ (ಹೇಳಿ)ರುವವುಗಳಾಗಿಯೂ ಇರುವ ವಿಷಯಗಳಲ್ಲಿ ಬಯಕೆಯಿಲ್ಲದವರಾಗಿ ಉಪನಿಷತ್ತು ಎಂಬ ಶಬ್ದಕ್ಕೆ ವಾಚ್ಯವಾದ ಮುಂದೆ ಹೇಳುವಂಥ ವಿದ್ಯೆಯನ್ನು (ಅದರ) ಹತ್ತಿರಕ್ಕೆ ಬಂದು ('ಉಪ') ಅದರಲ್ಲಿಯೇ ತಾತ್ಪರ್ಯವುಳ್ಳವರಾಗಿ ನಿಶ್ಚಯದಿಂದ ('ನಿ') ಪರಿಶೀಲಿಸುವರೋ ಅವರ ಸಂಸಾರಕ್ಕೆ ಬೀಜವಾದ[2] ಅವಿದ್ಯೆಯೇ ಮುಂತಾದವುಗಳನ್ನು[3] ವಿಶರಣಮಾಡುವದರಿಂದ ಎಂದರೆ ಹಿಂಸೆಮಾಡುವದರಿಂದ ವಿನಾಶಗೊಳಿಸುವದರಿಂದ ('ಸದ್')-[4] ಎಂಬೀ ಅರ್ಥದ ಸಂಬಂಧದಿಂದ ವಿದ್ಯೆಯು ''ಉಪನಿಷತ್ತು'' ಎನಿಸುತ್ತದೆ. ಆದ್ದರಿಂದಲೇ ಮುಂದೆ (ಶ್ರುತಿಯು) ''ಅವನನ್ನು ಅರಿತುಕೊಂಡರೆ ಮೃತ್ಯುವಿನ ಬಾಯಿಯಿಂದ ಬಿಡುಗಡೆಹೊಂದುತ್ತಾನೆ'' (೧-೩-೧೫) ಎಂದು ಹೇಳುವದು.

(ಭಾಷ್ಯ)

**೩. ಪೂರ್ವೋಕ್ತವಿಶೇಷಣಾನ್ ಮುಮುಕ್ಷೂನ್ ವಾ ಪರಂ ಬ್ರಹ್ಮ ಗಮಯತೀತಿ ಬ್ರಹ್ಮಗಮಯಿತೃತ್ವೇನ ಯೋಗಾದ್ ಬ್ರಹ್ಮವಿದ್ಯಾ ಉಪನಿಷತ್ । ತಥಾ ಚ ವಕ್ಷ್ಯತಿ 'ಬ್ರಹ್ಮಪ್ರಾಪ್ತೋ ವಿರಜೋಽಭೂದ್ ವಿಮೃತ್ಯುಃ' (೨-೩-೧೮) ಇತಿ ॥**

(ಭಾಷ್ಯಾರ್ಥ)

ಅಥವಾ ಹಿಂದೆ ಹೇಳಿರುವ ವಿಶೇಷಣಗಳುಳ್ಳ ಮುಮುಕ್ಷುಗಳನ್ನು ಪರಬ್ರಹ್ಮ

---

1. ಕಲ್ಲು, ಮಣ್ಣು- ಮುಂತಾದ ವಸ್ತುಗಳನ್ನು ರೂಢಿಯಿಂದ ಆ ಶಬ್ದಗಳು ಹೇಳುತ್ತವೆ. ಎಳನೀರು, ಒಡನಾಡಿ- ಮುಂತಾದವುಗಳನ್ನು ಯೋಗವೃತ್ತಿಯಿಂದ ಆ ಶಬ್ದಗಳು ಹೇಳುವವು. ''ಉಪನಿಷದ್' ಎಂಬ ಶಬ್ದಕ್ಕೆ ಬ್ರಹ್ಮವಿದ್ಯೆ ಎಂಬುದು ರೂಢಿಯ ಅರ್ಥವೊ, ಯೋಗದ (ಅವಯವಾ) ರ್ಥವೊ ?- ಎಂದು ಪ್ರಶ್ನೆ.

2. ಕಾರಣವಾದ. 3. ಅವಿದ್ಯೆ, ಕಾಮ, ಕರ್ಮ- ಇವನ್ನು.

4. ಷದ್ಲೃ ವಿಶರಣಗತ್ಯವಸಾದನೇಷು' ಎಂದು ಧಾತುವಿಗೆ ಮೂರು ಅರ್ಥಗಳನ್ನು ಕೊಟ್ಟಿತ್ತಷ್ಟೆ. ಈಗ ಮುಮುಕ್ಷುಗಳ ಸಂಸಾರಬೀಜವನ್ನು ನಾಶಪಡಿಸುತ್ತದೆ ಎಂದು ವಿಶರಣಾರ್ಥವನ್ನು ತೋರಿಸಿರುತ್ತಾರೆ. ಮುಮುಕ್ಷುಗಳ ವಿಶೇಷಣದಲ್ಲಿ ಇಹಾಮುತ್ರಫಲಭೋಗವಿರಾಗ, (ವಿತೃಷ್ಣಾಃ), ಶಮಾದಿಗಳು (ನಿಶ್ಚಯೇನ), ವಿವೇಕ (ಶೀಲಯನ್ತಿ) - ಎಂಬ ಸಾಧನಗಳನ್ನು ಸೂಚಿಸಿರುವದನ್ನು ಲಕ್ಷ್ಯದಲ್ಲಿಡಬೇಕು.

ವನ್ನು ಪಡೆಯಿಸುತ್ತದೆ ಎಂದು ಬ್ರಹ್ಮವನ್ನು ಪಡೆಯಿಸುವದೆಂಬ[1] (''ಸದ್'') ಅರ್ಥದ ಯೋಗದಿಂದಲಾದರೂ ಬ್ರಹ್ಮವಿದ್ಯೆಯು ಉಪನಿಷತ್ತೆ(ನಿಸುವದು). ಆದ್ದರಿಂದಲೇ ಮುಂದೆ (ಶ್ರುತಿಯು) 'ಬ್ರಹ್ಮವನ್ನು ಹೊಂದಿ ಕಲ್ಮಷವಿಲ್ಲದವನೂ ಮೃತ್ಯುವಿಲ್ಲದವನೂ ಆದನು' (೨-೩-೧೮) ಎಂದು ಹೇಳುವದು.

(ಭಾಷ್ಯ)

೪. ಲೋಕಾದಿರ್ಬ್ರಹ್ಮಜ್ಞೋ ಯೋಽಗ್ನಿಃ, ತದ್ವಿಷಯಾಯಾ ವಿದ್ಯಾಯಾ ದ್ವಿತೀಯೇನ ವರೇಣ ಪ್ರಾರ್ಥ್ಯಮಾನಾಯಾಃ ಸ್ವರ್ಗಲೋಕಫಲ ಪ್ರಾಪ್ತಿಹೇತುತ್ವೇನ ಗರ್ಭವಾಸಜನ್ಮಜರಾದ್ಯುಪದ್ರವವೃನ್ದಸ್ಯ ಲೋಕಾನ್ತರೇ ಪೌನಃಪುನ್ಯೇನ ಪ್ರವೃತ್ತಸ್ಯ ಅವಸಾದಯಿತೃತ್ವೇನ ಶೈಥಿಲ್ಯಾಪಾದನೇನ (ಚ?) ಧಾತ್ವರ್ಥಯೋಗಾತ್, ಅಗ್ನಿವಿದ್ಯಾಪಿ ''ಉಪನಿಷದ್'' ಇತ್ಯುಚ್ಯತೇ । ತಥಾ ಚ ವಕ್ಷ್ಯತಿ 'ಸ್ವರ್ಗಲೋಕಾ ಅಮೃತತ್ವಂ ಭಜನ್ತೇ'(೧-೧-೧೩) ಇತ್ಯಾದಿ ॥

(ಭಾಷ್ಯಾರ್ಥ)

(ಇನ್ನು) ಲೋಕಕ್ಕೆಲ್ಲ ಮೊದಲನೆಯವನಾಗಿಯೂ ಬ್ರಹ್ಮನಿಂದ ಹುಟ್ಟಿದವನಾಗಿಯೂ (ಎಲ್ಲವನ್ನೂ) ತಿಳಿಯುವಾತನಾಗಿಯೂ[2] ಇರುವ ಅಗ್ನಿಯುಂಟಷ್ಟೆ[3] ; (ನಚಿಕೇತನು ತನಗೆ) ಎರಡನೆಯ ವರವೆಂದು ಪ್ರಾರ್ಥಿಸಿರುವ ಆ (ಅಗ್ನಿ) ವಿಷಯವಾದ ವಿದ್ಯೆಯು[4] ಸ್ವರ್ಗಲೋಕವೆಂಬ[5] ಫಲವು ದೊರಕುವದಕ್ಕೆ ಕಾರಣವಾಗಿರುವದರಿಂದಲೂ[6] ಅದಕ್ಕಿಂತ ಬೇರೆಯಾದ (ಭೂ)ಲೋಕದಲ್ಲಿ ಮತ್ತೆ ಮತ್ತೆ ಆಗುತ್ತಿರುವ ಗರ್ಭವಾಸ, ಹುಟ್ಟು, ಮುಪ್ಪು - ಮುಂತಾದ ಸಂಕಟಗಳ ಸಮೂಹವನ್ನು ಅವಸಾದನ ಮಾಡುವದರಿಂದಲೂ ಎಂದರೆ ಸಡಿಲಮಾಡುವದರಿಂದಲೂ[7] (ಸದ್) ಧಾತುವಿನ ಅರ್ಥವು (ಅಗ್ನಿವಿದ್ಯೆಗೂ) ಇರುವದರಿಂದ ಅಗ್ನಿವಿದ್ಯೆಯೂ ಉಪನಿಷತ್ತು

1. ಇದು ಧಾತುವಿನ ಎರಡನೆಯ ಅರ್ಥವಾದ ''ಗತಿ'' ಎಂಬುದನ್ನು ತೆಗೆದುಕೊಂಡು ಬ್ರಹ್ಮವಿದ್ಯೆಗೆ ಉಪನಿಷತ್ತೆಂಬ ಹೆಸರು ಬಂದಿರುವ ಪ್ರಕಾರವನ್ನು ತಿಳಿಸುವದು.

2. ಈ ವಿಶೇಷಣಗಳು ೧-೧-೧೭, ೧-೧-೧೮ ಈ ಮಂತ್ರಗಳನ್ನು ಸೂಚಿಸುವವು.

3. ಅಗ್ನಿ ಎಂದರೆ ಇಲ್ಲಿ ವಿರಾಟ್ಪುರುಷನು. ಸಮಷ್ಟಿಸ್ಥೂಲೋಪಾಧಿಯುಳ್ಳ ಅಪರಬ್ರಹ್ಮ. 4. ಪರಬ್ರಹ್ಮವಿದ್ಯೆಯಂತೆ ಅಪರಬ್ರಹ್ಮವಿದ್ಯೆಯಾದ ಉಪಾಸನೆಯೂ ಉಪನಿಷತ್ತೆನಿಸುತ್ತದೆ ಎಂದು ಭಾವ. 5. ಇಲ್ಲಿ ಸ್ವರ್ಗಲೋಕವೆಂದರೆ ಅಪರಬ್ರಹ್ಮ ಲೋಕವು.

6. ಅಗ್ನಿವಿದ್ಯೆಯು ಸ್ವರ್ಗಲೋಕಕ್ಕೆ ಕಾರಣವಾಗಿರುವದರಿಂದ ಸದ್ ಧಾತುವಿನ ''ಗತಿ'' ಎಂಬರ್ಥವನ್ನು ಇಟ್ಟುಕೊಂಡರೆ ಉಪನಿಷತ್ತೆಂಬ ಹೆಸರಿಗೆ ತಕ್ಕದ್ದೆಂದಾಗುವದೆಂದು ಭಾವ. 7. ಗರ್ಭವಾಸಾದಿಗಳು ಅಗ್ನಿವಿದ್ಯೆಯಿಂದ ಅತ್ಯಂತವಾಗಿ ಹೋಗದಿದ್ದರೂ ಅವು ಒಂದು ಕಲ್ಪದವರೆಗೆ ಇಲ್ಲದಂತೆ ಆಗುವವು ; ಸ್ವರ್ಗಲೋಕದಲ್ಲಿ ಈ ದುಃಖಗಳಿಲ್ಲವಾದ್ದರಿಂದ ಇವನ್ನು ಅದು ಸಡಿಲಮಾಡುವದು ಎಂದಿರುತ್ತದೆ.

ಎನಿಸುವದು. ಆದ್ದರಿಂದಲೇ ಮುಂದೆ (ಶ್ರುತಿಯು) 'ಸ್ವರ್ಗಲೋಕ(ವನ್ನು ಪಡೆದ ವರು) ಅಮೃತತ್ವವನ್ನು[1] ಪಡೆಯುವರು' (೧-೧-೧೩) ಎಂದು ಮುಂತಾಗಿ (ಇದನ್ನೂ) ಹೇಳುವದು.

(ಭಾಷ್ಯ)

೫. ನನು ಚ ಉಪನಿಷಚ್ಛಬ್ದೇನ ಅಧ್ಯೇತಾರೋ ಗ್ರನ್ಥಮಪ್ಯಭಿಲಪನ್ತಿ 'ಉಪನಿಷದಮ್ ಅಧೀಮಹೇ' (ಇತಿ), '(ಉಪನಿಷದಮ್)[2] ಅಧ್ಯಾಪಯಾಮಃ' ಇತಿ ಚೈವಮ್ । ನೈಷ ದೋಷಃ । ಅವಿದ್ಯಾದಿಸಂಸಾರಹೇತುವಿಶರಣಾದೇಃ ಸದಿಧಾತ್ವರ್ಥಸ್ಯ ಗ್ರನ್ಥಮಾತ್ರೇ ಅಸಮ್ಭವಾತ್, ವಿದ್ಯಾಯಾಂ ಚ ಸಮ್ಭವಾತ್ । ಗ್ರನ್ಥಸ್ಯಾಪಿ ತಾದರ್ಥ್ಯೇನ ತಚ್ಛಬ್ದತ್ವೋಪಪತ್ತೇಃ । 'ಆಯುರ್ವೈ ಘೃತಮ್' (ತೈ. ಸಂ. ೨-೩-೧೧) ಇತ್ಯಾದಿವತ್ । ತಸ್ಮಾತ್, ವಿದ್ಯಾಯಾಂ ಮುಖ್ಯಯಾ ವೃತ್ತ್ಯಾ ಉಪನಿಷಚ್ಛಬ್ದೋ ವರ್ತತೇ । ಗ್ರನ್ಥೇ ತು ಭಕ್ತ್ಯಾ ಇತಿ ॥

(ಭಾಷ್ಯಾರ್ಥ)

(ಶಂಕೆ) :- ಅಧ್ಯಯನಮಾಡುವವರು 'ಉಪನಿಷತ್ತನ್ನು ಅಧ್ಯಯನಮಾಡುತ್ತಿದ್ದೇವೆ' ಎಂದೂ '(ಉಪನಿಷತ್ತನ್ನು) ಹೇಳಿಕೊಡುತ್ತಿದ್ದೇವೆ' ಎಂದೂ ಈ ಬಗೆಯಾಗಿ 'ಉಪನಿಷತ್ತು' ಎಂಬ ಶಬ್ದದಿಂದ ಗ್ರಂಥವನ್ನು ಹೇಳುತ್ತಿರುವರಲ್ಲ!

(ಪರಿಹಾರ) :- ಇದೇನೂ ತಪ್ಪಲ್ಲ. ಏಕೆಂದರೆ ಅವಿದ್ಯೆಯೇ ಮುಂತಾದ ಸಂಸಾರಹೇತುಗಳನ್ನು ನಾಶಮಾಡುವದು ಮುಂತಾದ[3] 'ಸದ್' ಧಾತುವಿನ ಅರ್ಥವು ಬರಿಯ ಗ್ರಂಥಕ್ಕೆ ಹೊಂದುವಹಾಗಿಲ್ಲ ಮತ್ತು ವಿದ್ಯೆಗೆ ಹೊಂದುತ್ತದೆ. (ಆದ್ದರಿಂದ ವಿದ್ಯೆಯೇ ನಿಜವಾದ ಉಪನಿಷತ್ತು) ; ಆ (ವಿದ್ಯೆಗೆ) ಕಾರಣವಾಗಿರುವದರಿಂದ ಗ್ರಂಥವೂ ಆ (ಉಪನಿಷತ್ತೆಂಬ) ಶಬ್ದದಿಂದ (ಕರೆಯಲ್ಪಡ) ಬಹುದಾಗಿದೆ. 'ತುಪ್ಪವೇ ಆಯುಸ್ಸು' (ತೈ. ಸಂ.೨-೩-೧೧) ಮುಂತಾದ (ಪ್ರಯೋಗ)ಗಳಂತೆಯೇ[4] (ಇದು). ಆದ್ದರಿಂದ ಉಪನಿಷತ್ತು ಎಂಬ ಶಬ್ದವು ವಿದ್ಯೆಯಲ್ಲಿ ಮುಖ್ಯವೃತ್ತಿಯಿಂದ

1. ಇದು ಸಾಪೇಕ್ಷವಾದ ಅಮೃತತ್ವವು ; ಇತರಲೋಕಗಳ ಮರ್ತ್ಯತ್ವಕ್ಕೆ ಹೋಲಿಸಿದರೆ ಬಹುಕಾಲ ಮರಣವಿಲ್ಲದೆ ಇರುವ ಸ್ಥಿತಿಯು.

2. ಈ ಮಾತು ಪಾ ॥ ಪಾಠದಲ್ಲಿ ಮಾತ್ರ ಇದೆ. 3. ಬ್ರಹ್ಮವನ್ನು ಪಡೆಯಿಸುವದು ಎಂಬರ್ಥವನ್ನು 'ಮುಂತಾದ' ಎಂಬುದರಿಂದ ಗ್ರಹಿಸಬೇಕು.

4. 'ತುಪ್ಪವು ಆಯುಸ್ಸು' ಎಂದರೆ ಆಯುಸ್ಸು ಹೆಚ್ಚುವದಕ್ಕೆ ಕಾರಣವಾಗಿರುವದು ಎಂದರ್ಥ; ಇದರಂತೆ 'ಗ್ರಂಥವು ಉಪನಿಷತ್ತು' ಎಂದರೆ ಉಪನಿಷತ್ತಿಗೆ, ವಿದ್ಯೆಗೆ, ಕಾರಣವಾದದು ಎಂದರ್ಥ.

ಬಂದಿರುತ್ತದೆ ;ಗ್ರಂಥದಲ್ಲಿಯೋ ಎಂದರೆ ಗೌಣವೃತ್ತಿಯಿಂದ (ಬಂದಿರುತ್ತದೆ ಎಂದು ನಿಶ್ಚಯಿಸಬೇಕು).

## ಉಪನಿಷತ್ತಿನ ಅನುಬಂಧಚತುಷ್ಟಯ

(ಭಾಷ್ಯ)

೬. ಏವಮ್ ಉಪನಿಷನ್ನಿರ್ವಚನೇನೈವ ವಿಶಿಷ್ಟೋಽಧಿಕಾರೀ ವಿದ್ಯಾಯಾಮ್ ಉಕ್ತಃ । ವಿಷಯಶ್ಚ ವಿಶಿಷ್ಟ ಉಕ್ತೋ ವಿದ್ಯಾಯಾಃ ಪರಂ ಬ್ರಹ್ಮ ಪ್ರತ್ಯಗಾತ್ಮಭೂತಮ್ । ಪ್ರಯೋಜನಂ ಚಾಸ್ಯಾ (ಉಪನಿಷದಃ)[1] ಆತ್ಯನ್ತಿಕೀ ಸಂಸಾರನಿವೃತ್ತಿರ್ಬ್ರಹ್ಮಪ್ರಾಪ್ತಿಲಕ್ಷಣಾ । ಸಮ್ಬನ್ಧಶ್ಚೈವಂಭೂತಪ್ರಯೋಜನೇನ ಉಕ್ತಃ । ಅತೋ ಯಥೋಕ್ತಾಧಿಕಾರಿವಿಷಯಪ್ರಯೋಜನಸಮ್ಬನ್ಧಾಯಾ ವಿದ್ಯಾಯಾಃ ಕರತಲನ್ಯಸ್ತಾಮಲಕವತ್ ಪ್ರಕಾಶಕತ್ವೇನ ವಿಶಿಷ್ಟಾಧಿಕಾರಿವಿಷಯ ಪ್ರಯೋಜನಸಮ್ಬನ್ಧಾ ಏತಾ ವಲ್ಲ್ಯೋ ಭವನ್ತಿ । ಇತ್ಯತಸ್ತಾ ಯಥಾಪ್ರತಿಭಾನಂ ವ್ಯಾಚಕ್ಷ್ಮಹೇ ॥

(ಭಾಷ್ಯಾರ್ಥ)

ಈ ರೀತಿಯಲ್ಲಿ ಉಪನಿಷತ್ತೆಂದರೇನೆಂಬುದನ್ನು ಗೊತ್ತುಪಡಿಸಿ ಹೇಳಿದ್ದರಿಂದಲೇ ವಿದ್ಯೆಗೆ ತಕ್ಕ ಅಧಿಕಾರಿ[2] (ಯಾರೆಂಬುದನ್ನು) ಹೇಳಿದಂತಾಯಿತು. ಒಳಗಿನ ಆತ್ಮನಾಗಿರುವ ಪರಬ್ರಹ್ಮವೇ[3] ಇದಕ್ಕೆ ಅಸಾಧಾರಣವಿಷಯವೆಂದು ಹೇಳಿದಂತಾಯಿತು. ಈ (ಉಪನಿಷತ್ತಿಗೆ) ಬ್ರಹ್ಮಪ್ರಾಪ್ತಿರೂಪವಾದ ಆತ್ಯಂತಿಕವಾದ ಸಂಸಾರ ನಿವೃತ್ತಿಯೇ[4] ಪ್ರಯೋಜನ(ವೆಂದೂ ಹೇಳಿದಂತಾಯಿತು)[5]. (ಉಪನಿಷತ್ತಿಗೂ) ಇಂಥ ಪ್ರಯೋಜನಕ್ಕೂ ಇರುವ ಸಂಬಂಧ[6]ವನ್ನೂ ಹೇಳಿದಂತಾಯಿತು. ಆದ್ದರಿಂದ ಹಿಂದೆ ಹೇಳಿದಂತೆ ಅಧಿಕಾರಿ, ವಿಷಯ, ಪ್ರಯೋಜನ, ಸಂಬಂಧ- ಇವುಗಳನ್ನುಳ್ಳ

---

1. ಈ ಮಾತು (ಆ ।।) ಪಾಠದಲ್ಲಿ ಮಾತ್ರ ಇದೆ.

2. ಹಿಂದೆ ೨ನೆಯ ಭಾಷ್ಯಭಾಗದಲ್ಲಿ ಹೇಳಿರುವ ವಿಶೇಷಣಗಳುಳ್ಳವರೇ ಅಧಿಕಾರಿಗಳು - ಎಂದರ್ಥ. 3. ಕೇ. ಭಾ.ದಸಂಬಂಧಗ್ರಂಥಗಳನ್ನು ನೋಡಿರಿ.

4. ಬ್ರಹ್ಮವನ್ನು ಜ್ಞಾನದಿಂದ ಪಡೆದುಕೊಂಡಲ್ಲದೆ ಸಂಸಾರವು ಮತ್ತೆ ಬರದಂತೆ ನಾಶವಾಗಲಾರದು. ಆದರಿಂದ ಬ್ರಹ್ಮವಿದ್ಯೆಗೆ ಸಂಸಾರನಿವೃತ್ತಿಯು ಅಸಾಧಾರಣ ಪ್ರಯೋಜನವು.

5. ಭಾ. ಭಾ. ೫ರಲ್ಲಿ ಇದನ್ನು ಹೇಳಿರುತ್ತದೆ.

6. ವಿದ್ಯೆಯು ಸಾಧನ, ಸಂಸಾರನಿವೃತ್ತಿಯು ಸಾಧ್ಯ ; ಆದ್ದರಿಂದ ವಿದ್ಯೆಯೆಂಬ ಉಪನಿಷತ್ತಿಗೂ ಪ್ರಯೋಜನಕ್ಕೂ ಈ ಬಗೆಯ ಸಾಧನಸಾಧ್ಯಭಾವವು, ಎಂದರೆ ಪ್ರಕಾಶಕ ಪ್ರಕಾಶ್ಯತ್ವವೆಂಬ ಸಂಬಂಧವು ಇದೆ.

ವಿದ್ಯೆಯನ್ನು ಅಂಗೈಯಲ್ಲಿಟ್ಟ ನೆಲ್ಲಿಕಾಯಿಯಂತೆ[1] ಬೆಳಗಿಸುವದರಿಂದ ಈ ವಲ್ಲಿಗಳಿಗೆ[2] ಅಸಾಧಾರಣವಾದ ಅಧಿಕಾರಿ, ವಿಷಯ, ಪ್ರಯೋಜನ, ಸಂಬಂಧ - ಇವುಗಳು ಇದ್ದಂತಾಯಿತು. ಆದ್ದರಿಂದ[3] ಇವುಗಳನ್ನು ತಿಳಿದಮಟ್ಟಿಗೆ ವ್ಯಾಖ್ಯಾನ ಮಾಡುತ್ತೇವೆ.

1. ಪೂರ್ಣವಾಗಿ, ಸಂಶಯಕ್ಕೆ ಎಡೆಯಿಲ್ಲದಂತೆ

2. ವಲ್ಲಿಗಳು ಕಠೋಪನಿಷತ್ತಿನ ಭಾಗಗಳು. ಗ್ರಂಥರೂಪವಾದ ಈ ಉಪನಿಷತ್ತು ವಿದ್ಯೆಯನ್ನು ತಿಳಿಸಿಕೊಡುತ್ತದೆ. ವಿದ್ಯೆಗೆ ಮೇಲೆ ಹೇಳಿದಂತೆ ಅಧಿಕಾರಿಯೇ ಮುಂತಾದ ಅನುಬಂಧಗಳಿವೆ. ಆದ್ದರಿಂದ ಗ್ರಂಥಕ್ಕೂ ಇವು ಇದ್ದಂತಾಯಿತೆಂದು ಭಾವ.

3. ಗ್ರಂಥವು ಯಾರಿಗೆ, ಏನನ್ನು ಹೇಳುವದು, ಯಾವ ಪ್ರಯೋಜನವನ್ನು ಕೊಡತಕ್ಕದ್ದು, ಗ್ರಂಥಕ್ಕೂ ಪ್ರಯೋಜನಾದಿಗಳಿಗೂ ಸಂಬಂಧವೇನು ?- ಎಂಬುದನ್ನು ತಿಳಿಸುವದು ಅತ್ಯವಶ್ಯ. ಏಕೆಂದರೆ ಈ ಅನುಬಂಧಚತುಷ್ಟಯವಿಲ್ಲದಿದ್ದರೆ ಯಾರೂ ಗ್ರಂಥವನ್ನು ಓದಲಾರರು.

# ಒಂದನೆಯ ಅಧ್ಯಾಯ - ಒಂದನೆಯ ವಲ್ಲಿ

## ನಚಿಕೇತನು ಯಮನ ಬಳಿಗೆ ಹೋದದ್ದು

ಉಶನ್ ಹ ವೈ ವಾಜಶ್ರವಸಃ ಸರ್ವವೇದಸಂ ದದೌ ।
ತಸ್ಯ ಹ ನಚಿಕೇತಾ ನಾಮ ಪುತ್ರ ಆಸ ॥೧॥

೧. ಬಯಸುವವನಾಗಿ ವಾಜಶ್ರವಸನು ಸರ್ವವೇದಸವನ್ನು ಕೊಟ್ಟನಂತೆ. ಅವನಿಗೆ ನಚಿಕೇತಸ್ಸೆಂಬ ಮಗನಿದ್ದನಂತೆ.

(ಭಾಷ್ಯ)

೭. ತತ್ರ ಆಖ್ಯಾಯಿಕಾ ವಿದ್ಯಾಸ್ತುತ್ಯರ್ಥಾ । ಉಶನ್ ಕಾಮಯಮಾನಃ ಹ ವೈ ಇತಿ ವೃತ್ತಾರ್ಥಸ್ಮರಣಾರ್ಥೌ ನಿಪಾತೌ । ವಾಜಮ್ ಅನ್ನಮ್ ತದ್ದಾನಾದಿ ನಿಮಿತ್ತಂ ಶ್ರವೋ ಯಸ್ಯ ಸ ವಾಜಶ್ರವಾಃ । ರೂಢಿತೋ ವಾ । ತಸ್ಯ ಅಪತ್ಯಂ ವಾಜಶ್ರವಸಃ । ಸ ವಾಜಶ್ರವಸಃ[1] ಕಿಲ ವಿಶ್ವಜಿತಾ ಸರ್ವಮೇಧೇನ ಈಜೇ । ತತ್ಫಲಂ ಕಾಮಯಮಾನಃ । ಸ ತಸ್ಮಿನ್ ಕ್ರತೌ ಸರ್ವವೇದಸಂ ಸರ್ವಸ್ವಂ ಧನಂ ದದೌ ದತ್ತವಾನ್ । ತಸ್ಯ ಯಜಮಾನಸ್ಯ ಹ ನಚಿಕೇತಾ ನಾಮ ಪುತ್ರಃ ಕಿಲ ಆಸ ಬಭೂವ ॥

(ಭಾಷ್ಯಾರ್ಥ)

ಇಲ್ಲಿ ಕಥೆ(ಯನ್ನು ಪ್ರಾರಂಭಿಸಿರುವದು) ವಿದ್ಯೆಯನ್ನು ಹೊಗಳುವದಕ್ಕೆ[2]. ಬಯಸುವವನಾಗಿ ಎಂದರೆ (ಫಲವನ್ನು) ಇಚ್ಛಿಸುವವನಾಗಿ (ಮೂಲದಲ್ಲಿ) 'ಹ' 'ವಾ' - ಎಂಬಿವೆರಡೂ ಹಿಂದೆ ನಡೆದ ವಿಷಯವನ್ನು ನೆನಪುಕೊಡುವ ನಿಪಾತಗಳು[3]. ವಾಜವೆಂದರೆ ಅನ್ನವು ; ಅದನ್ನು ದಾನಮಾಡುವದೇ ಮುಂತಾದ ನಿಮಿತ್ತದಿಂದ (ಬಂದ) ಶ್ರವ ಎಂದರೆ ಹೆಸರುವಾಸಿಯುಳ್ಳವನಾದ್ದರಿಂದ ವಾಜಶ್ರವಸ್ಸು (ಎಂದು

1. ''ಸ ವಾಜಶ್ರವಸಃ'' ಎಂಬ ಮಾತುಗಳು (ವಾ॥) ಪಾಠದಲ್ಲಿವೆ.

2. ಈ ಬ್ರಹ್ಮವಿದ್ಯೆಯನ್ನು ಆಧಿಕಾರಿಕಪುರುಷನಾದ ಯಮನು ಹೇಳಿರುತ್ತಾನೆ. ಶ್ರದ್ಧಾವಂತನೂ ವಿರಕ್ತನೂ ಆದ ನಚಿಕೇತಸ್ಸು ಶ್ರವಣಮಾಡಿ ಮುಕ್ತನಾಗಿರುತ್ತಾನೆ. ಇಂಥ ಹೆಚ್ಚಿನ ಮಹಿಮೆಯದು ಈ ವಿದ್ಯೆ- ಎಂದು ವಿದ್ಯೆಯನ್ನು ಹೊಗಳುವದಕ್ಕೆ.

3. 'ಹ ವಾ' ಎಂಬಿವು ಅಂತೆ ಎಂಬರ್ಥದ ನಿಪಾತಗಳು ಎಂದರ್ಥ.

ಅವನಿಗೆ ಹೆಸರು) ; ಅಥವಾ ರೂಢಿಯಿಂದಲೇ[1] (ಆ ಹೆಸರು ಅವನಿಗೆ ಬಂದಿದ್ದರೂ ಇರಬಹುದು). ಅವನ ಮಗನು ವಾಜಶ್ರವಸನು.

ಆ ವಾಜಶ್ರವಸನು "**ವಿಶ್ವಜಿತ್ತು**" ಎಂಬ ಎಲ್ಲವನ್ನೂ ಜಯಿಸುವ **ಸರ್ವಮೇಧ** ಎಂಬ ಯಾಗವನ್ನು ಮಾಡಿದನಂತೆ. ಆ (ಯಾಗದ) ಫಲವನ್ನು ಬಯಸುವವನಾಗಿ ಅವನು ಯಜ್ಞದಲ್ಲಿ "ಸರ್ವವೇದಸಮ್" ಎಂದರೆ ತನ್ನ ಎಲ್ಲಾ ಧನವನ್ನೂ ಕೊಟ್ಟನು, ದಾನ ಮಾಡಿದವನಾದನು. ಆ ಯಜಮಾನನಿಗೆ[2] ನಚಿಕೇತಸ್ಸೆಂಬ ಮಗನಿದ್ದನಂತೆ.

**ತಗ್ಂ ಹ ಕುಮಾರಗ್ಂ ಸನ್ಂ ದಕ್ಷಿಣಾಸು ನೀಯಮಾನಾಸು**

**ಶ್ರದ್ಧಾ ವಿವೇಶ ಸೋಽಮನ್ಯತ ॥ ೨ ॥**

೨. ದಕ್ಷಿಣೆಗಳನ್ನು ಒಯ್ಯುತ್ತಿರುವಾಗ ಕುಮಾರನಾಗಿರುವ ಅವನಿಗೆ ಶ್ರದ್ಧೆಯು ಬಂದುಹೊಕ್ಕಿತು. ಅವನು ಯೋಚಿಸಿಕೊಂಡ(ನೇನೆಂದರೆ) :

(ಭಾಷ್ಯ)

**೮. ತಂ ಹ ನಚಿಕೇತಸಂ ಕುಮಾರಂ ಪ್ರಥಮವಯಸಂ ಸನ್ತಮ್ ಅಪ್ರಾಪ್ತಪ್ರಜನನಶಕ್ತಿಂ ಬಾಲಮೇವ ಶ್ರದ್ಧಾ ಆಸ್ತಿಕ್ಯಬುದ್ಧಿಃ ಪಿತುರ್ಹಿತ-ಕಾಮಪ್ರಯುಕ್ತಾ ಆವಿವೇಶ ಪ್ರವಿಷ್ಟವತೀ । ಕಸ್ಮಿನ್ ಕಾಲೇ ಇತಿ ? ಆಹ - ಋತ್ವಿಗ್ಭ್ಯಃ ಸದಸ್ಯೇಭ್ಯಶ್ಚ ದಕ್ಷಿಣಾಸು ನೀಯಮಾನಾಸು ವಿಭಾಗೇನ ಉಪನೀಯಮಾನಾಸು ದಕ್ಷಿಣಾರ್ಥಾಸು ಗೋಷು । ಸ ಆವಿಷ್ಟಶ್ರದ್ಧೋ ನಚಿಕೇತಾ ಅಮನ್ಯತ ॥**

(ಭಾಷ್ಯಾರ್ಥ)

ಕುಮಾರನಾಗಿರುವ ಎಂದರೆ (ಇನ್ನೂ) ಮೊದಲನೆಯ ವಯಸ್ಸಿನಲ್ಲಿಯೇ ಇರುವ. (ಮಕ್ಕಳನ್ನು) ಹಡೆಯುವ ಶಕ್ತಿ ಇನ್ನೂ ಬಂದಿಲ್ಲದ, ಬಾಲಕನೇ ಆಗಿರುವ ಆ ನಚಿಕೇತನಿಗೆ[3] ಶ್ರದ್ಧೆಯು, ತಂದೆಗೆ ಒಳ್ಳೆಯದಾಗಲೆಂಬ ಬಯಕೆಯ ನಿಮಿತ್ತದಿಂದಾದ ಆಸ್ತಿಕ್ಯಬುದ್ಧಿಯು, ಬಂದುಹೊಕ್ಕಿತು, ಸೇರಿಕೊಂಡಿತು. ಯಾವ ಕಾಲ

ವಾಜಶ್ರವಸ್ಸು ಎಂಬ ಶಬ್ದಕ್ಕೆ ಅನ್ನದಾನವೇ ಮುಂತಾದ ಕಾರಣದಿಂದ ಪ್ರಖ್ಯಾತನಾದವನು ಎಂದು ಅವಯವಾರ್ಥವಾಗುತ್ತದೆ. ಇದು ಅನ್ವರ್ಥನಾಮವಾದರೂ ಆಗಿರಬಹುದು. ಅಥವಾ ತಂದೆತಾಯಿಗಳು ಇಟ್ಟಿದ್ದ ಸಂಕೇತನಾಮವಾದರೂ ಆಗಿರಬಹುದು - ಎಂದರ್ಥ. 2. ಯಜ್ಞಮಾಡಿದ ವಾಜಶ್ರವಸನಿಗೆ.

3. "ನಚಿಕೇತಸ್ಸು", "ನಚಿಕೇತ" - ಎಂದು ಎರಡು ಬಗೆಯಲ್ಲಿಯೂ ಕನ್ನಡದಲ್ಲಿ ಪ್ರಯೋಗಿಸಬಹುದು. ಇನ್ನು ಮುಂದೆ "ನಚಿಕೇತ" ಎಂದೇ ಬರೆಯುವೆವು.

ದಲ್ಲಿ ?- ಎಂದರೆ (ಶ್ರುತಿಯು) ಹೇಳುತ್ತದೆ : ಋತ್ವಿಜರುಗಳಿಗೂ[1] ಸದಸ್ಯರಿಗೂ[2] ದಕ್ಷಿಣೆಗಳನ್ನು ಒಯ್ಯುತ್ತಿರುವಾಗ, ಎಂದರೆ ದಕ್ಷಿಣೆಗಾಗಿ ಗೋವುಗಳನ್ನು (ಕೊಡುವ ದಕ್ಕೆಂದು ಅವರವರಿಗೆ) ಬೇರೆಬೇರೆಯಾಗಿ ಒಯ್ಯುತ್ತಿರುವಾಗ (ಶ್ರದ್ಧೆಯು ಬಂದಿತು). ಆ ಶ್ರದ್ಧೆಯಿಂದೊಡಗೂಡಿದ[3] ನಚಿಕೇತನು ಯೋಚಿಸಿಕೊಂಡದ್ದೇನೆಂದರೆ ;

**ಪೀತೋದಕಾ ಜಗ್ಧತೃಣಾ ದುಗ್ಧದೋಹಾ ನಿರಿನ್ದ್ರಿಯಾಃ ।**

**ಅನನ್ದಾ ನಾಮ ತೇ ಲೋಕಾಸ್ತಾನ್ ಸ ಗಚ್ಛತಿ ತಾ ದದತ್ ॥ ೩ ॥**

೩. ನೀರುಕುಡಿದವುಗಳಾಗಿಯೂ ಹುಲ್ಲುಮೇದವುಗಳಾಗಿಯೂ ಹಾಲು ಕರೆದವುಗಳಾಗಿಯೂ ಇಂದ್ರಿಯ (ಶಕ್ತಿ)ಯಿಲ್ಲದವುಗಳಾಗಿಯೂ (ಇರುವ) ಇಂಥ (ಹಸುಗಳನ್ನು) ದಾನಮಾಡುವವನು 'ಅನಂದ' ಎಂಬ ಆ ಲೋಕಗಳನ್ನು ಪಡೆಯುವನು.

(ಭಾಷ್ಯ)

**೯. ಕಥಮಿತಿ ? ಉಚ್ಯತೇ । 'ಪೀತೋದಕಾಃ' ಇತ್ಯಾದಿನಾ ದಕ್ಷಿಣಾರ್ಥಾ ಗಾವೋ ವಿಶೇಷ್ಯನ್ತೇ । ಪೀತಮ್ ಉದಕಂ ಯಾಭಿಸ್ತಾಃ ಪೀತೋದಕಾಃ । ಜಗ್ಧಂ ಭಕ್ಷಿತಂ ತೃಣಂ ಯಾಭಿಸ್ತಾ ಜಗ್ಧತೃಣಾಃ । ದುಗ್ಧೋ ದೋಹಃ ಕ್ಷೀರಾಖ್ಯೋ ಯಾಸಾಂ ತಾಃ ದುಗ್ಧದೋಹಾಃ । ನಿರಿನ್ದ್ರಿಯಾಃ ಪ್ರಜನನಾಸಮರ್ಥಾಃ[4] ಜೀರ್ಣಾಃ ನಿಷ್ಫಲಾ ಗಾವ ಇತ್ಯರ್ಥಃ । ಯಾಸ್ತಾ ಏವಂಭೂತಾ ತಾಃ ಋತ್ವಿಗ್ಭ್ಯೋ ದಕ್ಷಿಣಾಬುದ್ಧ್ಯಾ ದದತ್ ಪ್ರಯಚ್ಛನ್ ಅನನ್ದಾಃ ಅನಾನನ್ದಾಃ ಅಸುಖಾ ನಾಮ ಇತ್ಯೇತತ್ । ಯೇ ತೇ ಲೋಕಾಃ ತಾನ್ ಸಃ ಯಜಮಾನಃ ಗಚ್ಛತಿ॥**

(ಭಾಷ್ಯಾರ್ಥ)

ಹೇಗೆ (ಯೋಚಿಸಿಕೊಂಡನು) ? ಎಂದರೆ (ಶ್ರುತಿಯು) ಹೇಳುತ್ತದೆ :

---

1. ಯಾಗದಲ್ಲಿ ಯಜಮಾನನಿಗೆ ಸಹಾಯಮಾಡುವವರು.

2. ಯಜ್ಞವು ನಡೆಯುತ್ತಿರುವ ಸಭೆಯಲ್ಲಿ ನೋಡುತ್ತಾ ಕುಳಿತಿರುವ ವಿದ್ವಾಂಸರು. ಆ ಸಭೆಗೆ ''ಸದಸ್ಸು'' ಎಂದು ಹೆಸರು.

3. ಕರ್ಮಕ್ಕೆ ಶ್ರದ್ಧೆಯು ಬಹಳ ಮುಖ್ಯ. ಇನ್ನೂ ಹುಡುಗನಾದ ನಚಿಕೇತನಿಗೆ ಕರ್ಮಶ್ರದ್ಧೆಯು ಇಷ್ಟು ಬಲವಾಗಿರುವದರಿಂದ ಅವನ ಚಿತ್ತವು ಮೇಲುಮಟ್ಟದಲ್ಲಿರುವದೆಂಬುದು ಸ್ಪಷ್ಟವಾಗುತ್ತದೆ.

4. 'ಅಪ್ರಜನನಸಮರ್ಥಾಃ' ಎಂದು (ಆ॥) ಪಾಠ.

ಪೀತೋದಕಾಃ ಮುಂತಾದವು ದಕ್ಷಿಣೆಗಾಗಿ (ಒಯ್ಯುತ್ತಿದ್ದ) ಗೋವುಗಳ ವಿಶೇಷಣ ಗಳು. ನೀರನ್ನು ಕುಡಿದದ್ದು ಆಗಲೆ ಆಗಿಬಿಟ್ಟಿದೆ, ಅಂಥವು 'ಪೀತೋದಕಾಃ' (ಎನಿಸು ವವು) ; ಹುಲ್ಲನ್ನು ತಿಂದದ್ದು ಮೇದದ್ದು ಆಗಲೆ ಆಗಿಬಿಟ್ಟಿದೆ, ಅಂಥವು 'ಜಗ್ಧತೃಣಾಃ'; ಹಾಲೆಂಬ ಕರೆಯುವ (ವಸ್ತುವನ್ನು) ಕರೆದದ್ದು ಆಗಲೆ ಆಗಿ ಬಿಟ್ಟಿದೆ, ಅಂಥವು 'ದುಗ್ಧದೋಹಾಃ'. 'ನಿರಿನ್ದ್ರಿಯಾಃ'- ಎಂದರೆ ಕರುಹಾಕಲಾರದೆ ಮುದಿ ಯಾಗಿರುವವು, ಬರಡಾಗಿರುವ ಆಕಳುಗಳು ಎಂದರ್ಥ. ಯಾವ (ಹಸುಗಳು) ಇಂಥವೋ ಅವನ್ನು ಈ ಜಾತಿಯ (ಹಸುಗಳನ್ನು) ಋತ್ವಿಜರುಗಳಿಗೆ ದಕ್ಷಿಣೆಯೆಂಬ ಭಾವನೆಯಿಂದ ದಾನಮಾಡುವವನು, ಕೊಡುವವನು ಅನಂದ - ಅನಾನಂದ - ಸುಖವಿಲ್ಲದವು ಎಂದರ್ಥ. (ಈ ಹೆಸರಿನ) ಲೋಕಗಳಿವೆಯಲ್ಲ, ಅವುಗಳನ್ನು ಆ ಯಜಮಾನನು ಪಡೆಯುವನು.

**ಸ ಹೋವಾಚ ಪಿತರಂ ತತ ಕಸ್ಮೈ ಮಾಂ ದಾಸ್ಯಸೀತಿ ।**
**ದ್ವಿತೀಯಂ ತೃತೀಯಂ ತಗ್ಂ ಹೋವಾಚ ಮೃತ್ಯವೇ**
**ತ್ವಾ ದದಾಮೀತಿ ॥ ೪ ॥**

೪. ಅವನು 'ತಂದೆಯೆ, ನನ್ನನ್ನು ಯಾರಿಗೆ ದಾನಮಾಡುತ್ತೀಯೆ ?' ಎಂದು ತಂದೆಯನ್ನು ಕೇಳಿದನಂತೆ. ಎರಡನೆಯ ಮೂರನೆಯ (ಸಲ)ವೂ ಕೇಳಿದ ನಂತೆ. ಅವನನ್ನು ಕುರಿತು 'ಮೃತ್ಯುವಿಗೆ ನಿನ್ನನ್ನು ಕೊಟ್ಟಿರುತ್ತೇನೆ' ಎಂದನಂತೆ.

(ಭಾಷ್ಯ)

**೧೦. ತದೇವಂ ಕ್ರತ್ವಸಮ್ಪತ್ತಿನಿಮಿತ್ತಂ ಪಿತುರನಿಷ್ಟಂ ಫಲಂ ಮಯಾ ಪುತ್ರೇಣ ಸತಾ ನಿವಾರಣೀಯಮ್ ಆತ್ಮಪ್ರದಾನೇನಾಪಿ ಕ್ರತುಸಮ್ಪತ್ತಿಂ ಕೃತ್ವಾ ಇತ್ಯೇವಂ ಮತ್ವಾ[1] ಪಿತರಮ್ ಉಪಗಮ್ಯ ಸ ಹೋವಾಚ ಪಿತರಮ್ ॥**

(ಭಾಷ್ಯಾರ್ಥ)

ಹೀಗೆ ಯಜ್ಞವು ಪೂರ್ಣವಾಗದೆ ಇರುವ ನಿಮಿತ್ತದಿಂದ ತಂದೆಗೆ ಆಗಬಹು ದಾದ ಅನಿಷ್ಟವಾದ ಫಲವನ್ನು[2] ಮಗನಾದ ನಾನು ನನ್ನನ್ನೇ ಆದರೂ ದಾನಮಾಡಿ ಕೊಂಡು ಯಜ್ಞವನ್ನು ಪರಿಪೂರ್ತಿಗೊಳಿಸಿ ನಿವಾರಿಸತಕ್ಕದ್ದು (ಯುಕ್ತವು) - ಎಂದು ಯೋಚಿಸಿಕೊಂಡು ತಂದೆಯ ಬಳಿಗೆ ಬಂದು (ಆ) ತಂದೆಯನ್ನು ಕುರಿತು ಅವನಿಂತೆಂದನು.

1. 'ಮನ್ಯಮಾನಃ' ಎಂದು ಪಾ ||ಪಾಠ.

2. ಕರ್ಮವು ಪರಿಪೂರ್ಣವಾಗದಿದ್ದರೆ ಅದರ ಫಲವು ದೊರಕುವದಿಲ್ಲ ; ಅದ ರಿಂದ ಕೆಟ್ಟ ಫಲವೂ ಆಗಬಹುದು.

(ಭಾಷ್ಯ)

೧೧. ಹೇ ತತ ತಾತ ಕಸ್ಮೈ ಋತ್ವಿಗ್ವಿಶೇಷಾಯ ದಕ್ಷಿಣಾರ್ಥಂ ಮಾಂ ದಾಸ್ಯಸೀತಿ ಪ್ರಯಚ್ಛಸೀತ್ಯೇತತ್ । ಸ ಏವಮುಕ್ತೇನ ಪಿತ್ರಾ, ಉಪೇಕ್ಷ್ಯಮಾಣೋಽಪಿ ದ್ವಿತೀಯಂ ತೃತೀಯಮಪಿ ಉವಾಚ 'ಕಸ್ಮೈ ಮಾಂ ದಾಸ್ಯಸಿ', 'ಕಸ್ಮೈ ಮಾಂ ದಾಸ್ಯಸಿ ?' ಇತಿ । ನಾಯಂ ಕುಮಾರಸ್ವಭಾವ ಇತಿ ಕ್ರುದ್ಧಃ ಸನ್ ಪಿತಾ ತಂ ಹ ಪುತ್ರಂ ಕಿಲ ಉವಾಚ 'ಮೃತ್ಯವೇ ವೈವಸ್ವತಾಯ ತ್ವಾ ತ್ವಾಂ ದದಾಮಿ' ಇತಿ ॥

(ಭಾಷ್ಯಾರ್ಥ)

ಎಲೈ, 'ತತ' ತಂದೆಯೆ, ಯಾವ ಗೊತ್ತಾದ ಋತ್ವಿಜನಿಗೆ ದಕ್ಷಿಣೆಗಾಗಿ ನನ್ನನ್ನು ದಾನಮಾಡುತ್ತೀಯೆ, ಎಂದರೆ ಕೊಡುತ್ತೀಯೆ ? ಎಂದರ್ಥ. ಹೀಗೆಂದ ಬಳಿಕ ತಂದೆಯು ಉಪೇಕ್ಷೆಮಾಡಿದರೂ (ಬಿಡದೆ) ಎರಡನೆಯ ಸಲವೂ ಮೂರನೆಯ ಸಲವೂ 'ನನ್ನನ್ನು ಯಾರಿಗೆ ಕೊಡುವೆ, ನನ್ನನ್ನು ಯಾರಿಗೆ ಕೊಡುವೆ ?' ಎಂದು (ಮತ್ತೆಮತ್ತೆ) ಕೇಳಿದನು. ತಂದೆಯು ಇವನು ಕುಮಾರಸ್ವಭಾವದವನಾಗಿಲ್ಲ[1] ಎಂದು ಸಿಟ್ಟಾಗಿ ಆ ಪುತ್ರನನ್ನು ಕುರಿತು 'ನಿನ್ನನ್ನು ಮೃತ್ಯುವಿಗೆ ಎಂದರೆ ವಿವಸ್ವಂತನ ಮಗನಿಗೆ ಕೊಟ್ಟಿರುತ್ತೇನೆ' ಎಂದನಂತೆ.

(ಭಾಷ್ಯ)

೧೨. ಸ ಏವಮುಕ್ತಃ ಪುತ್ರಃ ಏಕಾನ್ತೇ ಪರಿದೇವಯಾಂಚಕಾರ । ಕಥಮಿತಿ ? ಉಚ್ಯತೇ -

(ಭಾಷ್ಯಾರ್ಥ)

ಹೀಗೆಂದು ಹೇಳಲು ಆ ಮಗನು ಏಕಾಂತದಲ್ಲಿ (ತನ್ನಲ್ಲಿ ತಾನು) ಚಿಂತಿಸುತ್ತಿದ್ದನು. ಹೇಗೆಂದರೆ (ಮಂತ್ರವು) ಹೇಳುತ್ತದೆ :

ಬಹೂನಾಮೇಮಿ ಪ್ರಥಮೋ ಬಹೂನಾಮೇಮಿ ಮಧ್ಯಮಃ ।
ಕಿಗ್ಂ ಸ್ವಿದ್ಯಮಸ್ಯ ಕರ್ತವ್ಯಂ ಯನ್ಮಯಾದ್ಯ ಕರಿಷ್ಯತಿ ॥ ೫ ॥

೫. ಬಹುಜನರಲ್ಲಿ ಮೊದಲನೆಯವನಾಗಿ ಹೋಗುತ್ತಿರುವೆನು, ಬಹುಜನರಲ್ಲಿ ಮಧ್ಯಮನಾಗಿ ಹೋಗುತ್ತಿರುವೆನು. ನನ್ನಿಂದ ಈಗ (ತಾನು) ಮಾಡಿಕೊಳ್ಳಬೇಕಾಗಿರುವ ಯಮನ ಕರ್ತವ್ಯವೇನಿದ್ದೀತು ?

1. ಹುಡುಗನಾದ್ದರಿಂದ ತಿಳಿಯದೆ ಆಡಿದ ಮಾತೆನ್ನುವದಕ್ಕೆ ಬರುವಟಲ್ಲವೆಂದು ಭಾವ.

(ಭಾಷ್ಯ)

೧೩. ಬಹೂನಾಂ ಶಿಷ್ಯಾಣಾಂ ಪುತ್ರಾಣಾಂ ವಾ ಏಮಿ ಗಚ್ಛಾಮಿ ಪ್ರಥಮಃ ಸನ್ ಮುಖ್ಯಯಾ ಶಿಷ್ಯಾದಿವೃತ್ತ್ಯಾ ಇತ್ಯರ್ಥಃ । ಮಧ್ಯಮಾನಾಂ ಚ ಬಹೂನಾಂ ಮಧ್ಯಮಃ ಮಧ್ಯಮಯೈವ ವೃತ್ತ್ಯಾ ಏಮಿ । ನಾಧಮಯಾ ಕದಾಚಿದಪಿ। ತಮೇವಂ ವಿಶಿಷ್ಟಗುಣಮಪಿ ಪುತ್ರಂ ಮಾಮ್ 'ಮೃತ್ಯವೇ ತ್ವಾ ದದಾಮಿ' ಇತ್ಯುಕ್ತವಾನ್ ಪಿತಾ । ಸ ಕಿಂ ಸ್ವಿದ್ ಯಮಸ್ಯ ಕರ್ತವ್ಯಂ ಪ್ರಯೋಜನಂ ಮಯಾ ಪ್ರತ್ತೇನ ಕರಿಷ್ಯತಿ ಯತ್ ಕರ್ತವ್ಯಮ್ ಅದ್ಯ ? ನೂನಂ ಪ್ರಯೋಜನಮ್ ಅನಪೇಕ್ಷ್ಯೈವ ಕ್ರೋಧವಶಾತ್ ಉಕ್ತವಾನ್ ಪಿತಾ । ತಥಾಪಿ ತತ್ ಪಿತುರ್ವಚೋ ಮೃಷಾ ಮಾ ಭೂತ್ ಇತ್ಯೇವಂ ಮತ್ವಾ ಪರಿದೇವನಾಪೂರ್ವಕಮ್ ಆಹ ಪಿತರಂ ಶೋಕಾವಿಷ್ಟಂ ಕಿಂ ಮಯಾ ಉಕ್ತಮ್ । ಇತಿ ॥

(ಭಾಷ್ಯಾರ್ಥ)

ಬಹುಜನಶಿಷ್ಯರಲ್ಲಿ ಅಥವಾ ಪುತ್ರರಲ್ಲಿ (ನಾನು) ಮೊದಲನೆಯವನಾಗಿ, ಎಂದರೆ ಮುಖ್ಯರಾದ ಶಿಷ್ಯರೇ ಮುಂತಾದವರ ನಡೆಯಿಂದ ನಾನು ಹೋಗುತ್ತಿರುವೆನು, ನಡೆಯುತ್ತಿರುವೆನು ಎಂದರ್ಥ. ನಡುತರದ ಬಹುಜನರಲ್ಲಿ ನಾನು ನಡುತರದವನಾಗಿಯೇ ನಡೆದುಕೊಳ್ಳುತ್ತಿರುವೆನು. ಅಧಮವೃತ್ತಿಯಿಂದ ಯಾವಾಗಲೂ (ನಡೆದುಕೊಂಡಿ)ಲ್ಲ. ಇಂಥ ಗುಣಗಳಿಂದೊಡಗೂಡಿದ ಪುತ್ರನಾದರೂ[1] ನನ್ನನ್ನು 'ನಿನ್ನನ್ನು ಮೃತ್ಯುವಿಗೆ ಕೊಟ್ಟಿರುತ್ತೇನೆ' ಎಂದು ತಂದೆ ಹೇಳಿರುವ (ನಲ್ಲ) ? ನನ್ನನ್ನು ಯಮನಿಗೆ ಕೊಟ್ಟು ಈಗ ಆ (ನಮ್ಮ ತಂದೆಯು) ಮಾಡಬೇಕಾಗಿರುವ ಯಮನ ಕರ್ತವ್ಯವು ಎಂದರೆ (ಯಮನಿಗಾಗಬೇಕಾದ) ಪ್ರಯೋಜನವು ಯಾವದಿರಬಹುದು ?[2] ನಿಜವಾಗಿಯೂ ಪ್ರಯೋಜನವನ್ನು ಲೆಕ್ಕಿಸದೆಯೇ ಸಿಟ್ಟಿಗ ವಶನಾಗಿ(ಯೇ) ತಂದೆಯು (ಹೀಗೆಂದು) ನುಡಿದಿರಬೇಕು.

1. ಗುರುವಿನ ಮನೋವೃತ್ತಿಯನ್ನು ಅರಿತುಕೊಂಡು ನಡೆಯುವದು ಉತ್ತಮಶಿಷ್ಯನ ಅಥವಾ ಪುತ್ರನ ಸ್ವಭಾವವು ; ಹೇಳಿದಂತೆ ನಡೆಯುವದು ಮಧ್ಯಮಶಿಷ್ಯನ ಅಥವಾ ಪುತ್ರನ ಸ್ವಭಾವವು ; ಹೇಳಿದರೂ ಅದರಂತೆ ನಡೆಯದಿರುವದು ಅಧಮನ ಲಕ್ಷಣವು. ''ನಾನು ಕೈಯಲ್ಲಾದಮಟ್ಟಿಗೂ ಉತ್ತಮಶಿಷ್ಯನು ಆಗಿ, ಮಧ್ಯಮತರಗತಿಯವರ ಗುಂಪನ್ನು ಎಂದಿಗೂ ಬಿಡದೆ ನಡೆದುಕೊಳ್ಳುತ್ತಿರುವೆನಲ್ಲ ? ಯಾವಾಗಲೂ ತಂದೆಯ ಆಜ್ಞೆಯನ್ನು ಮೀರಿ ನಡೆದವನಲ್ಲವಲ್ಲ! ಹೀಗಿದ್ದರೂ ತಂದೆ ಈ ರೀತಿ ನುಡಿವದ್ದೇಕಾಗಬಹುದು ?'' ಎಂದು ಭಾವ.

2. ಯಮನಿಗೆ ಇಂಥ ದಾನವನ್ನು ಕೊಡಬೇಕೆಂಬ ವಿಧಿಯೇನೂ ಇಲ್ಲವಲ್ಲ !- ಎಂದು ಭಾವ.

ಹೀಗಿದ್ದರೂ ಆ ತಂದೆಯ ಮಾತು ಸುಳ್ಳಾಗಬಾರದು - ಹೀಗೆಂದು ಯೋಚಿಸಿ ಚಿಂತಾಪೂರ್ವಕವಾಗಿ 'ಅಯ್ಯೋ ! ಏನು ಹೇಳಿಬಿಟ್ಟೆನು !' ಎಂದು ಶೋಕದಿಂದ ತುಂಬಿದ್ದ ತಂದೆಯನ್ನು ಕುರಿತು (ನಚಿಕೇತನು) ಹೇಳುತ್ತಾನೆ :

**ಅನುಪಶ್ಯ ಯಥಾ ಪೂರ್ವೇ ಪ್ರತಿಪಶ್ಯ ತಥಾಪರೇ ।**
**ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವಾಜಾಯತೇ ಪುನಃ ॥ ೬ ॥**

೬. ಪೂರ್ವಿಕರು ಹೇಗೆಂಬುದನ್ನು ನೋಡು ; ಹಾಗೂ ಉಳಿದವರು (ಹೇಗೆಂಬುದನ್ನೂ) ನೋಡು. ಮನುಷ್ಯನು ಸಸ್ಯದಂತೆ ಪಕ್ವವಾಗುತ್ತಿರುವನು, ಸಸ್ಯದಂತೆ ಮತ್ತೆ ಹುಟ್ಟುತ್ತಿರುವನು.

(ಭಾಷ್ಯ)

**೧೪. ಅನುಪಶ್ಯ ಆಲೋಚಯ ವಿಭಾವಯ ಅನುಕ್ರಮೇಣ ಯಥಾ ಯೇನ ಪ್ರಕಾರೇಣ ವೃತ್ತಾಃ ಪೂರ್ವೇ ಅತಿಕ್ರಾನ್ತಾಃ ಪಿತೃಪಿತಾಮಹಾದಯಸ್ತವ । ತಾನ್ ದೃಷ್ಟ್ವಾ ಚ ತೇಷಾಂ ವೃತ್ತಮ್ ಆಸ್ಥಾತುಮ್ ಅರ್ಹಸಿ । ವರ್ತಮಾನಾಶ್ಚ ಅಪರೇ ಸಾಧವೋ ಯಥಾ ವರ್ತನ್ತೇ ತಾಂಶ್ಚ ಪ್ರತಿಪಶ್ಯ ಆಲೋಚಯ ತಥಾ । ನ ಚ ತೇಷಾಂ ಮೃಷಾಕರಣಮ್ ವೃತ್ತಂ ವರ್ತಮಾನಂ ವಾ ಅಸ್ತಿ । ತದ್ವಿಪರೀತಮ್ ಅಸತಾಂ ಚ ವೃತ್ತಂ ಮೃಷಾಕರಣಮ್ । ನ ಚ ಮೃಷಾಕೃತ್ವಾ ಕಶ್ಚಿದ್ ಅಜರಾಮರೋ ಭವತಿ । ಯತಃ ಸಸ್ಯಮಿವ ಮರ್ತ್ಯಃ ಮನುಷ್ಯಃ ಪಚ್ಯತೇ ಜೀರ್ಣೋ ಮ್ರಿಯತೇ । ಮೃತ್ವಾ ಚ ಸಸ್ಯಮಿವ ಆಜಾಯತೇ ಆವಿರ್ಭವತಿ ಪುನಃ । ಏವಮ್ ಅನಿತ್ಯೇ ಜೀವಲೋಕೇ ಕಿಂ ಮೃಷಾಕರಣೇನ ? ಪಾಲಯ ಆತ್ಮನಃ ಸತ್ಯಮ್, ಪ್ರೇಷಯ ಮಾಂ ಯಮಾಯ ಇತ್ಯಭಿಪ್ರಾಯಃ ॥**

(ಭಾಷ್ಯಾರ್ಥ)

ಪೂರ್ವಿಕರು ಎಂದರೆ ನಿನ್ನ ತಂದೆ ಅಜ್ಜ ಮೊದಲಾದ ಹಿಂದೆ ಆಗಿಹೋಗಿರುವವರು ಹೇಗೆ ಯಾವ ರೀತಿಯಿಂದ ನಡೆದುಕೊಂಡಿದ್ದರು ಎಂಬುದನ್ನು ನೋಡು, ಆಲೋಚಿಸು, ಒಬ್ಬೊಬ್ಬರನ್ನಾಗಿ ಕ್ರಮದಿಂದ (ಆಲೋಚಿಸಿ) ನೋಡು, ಅವರನ್ನು ನೋಡಿ (ನೀನೂ) ಅವರ ನಡೆಯನ್ನು ಸ್ವೀಕರಿಸುವದು ಯುಕ್ತ ಮತ್ತು ಉಳಿದವರು ಎಂದರೆ ಈಗಿರುವ ಸಜ್ಜನರು ಹೇಗೆ ನಡೆಯುತ್ತಿರುವರೋ ಅವರನ್ನೂ ನೋಡು, (ಅವರ ನಡೆಯನ್ನೂ) ಆಲೋಚಿಸು. (ಹಿಂದಿನವರಾಗಲಿ ಈಗಿನವರಾಗಲಿ) ಅವರಲ್ಲಿ ಸುಳ್ಳಾಡುವದು ಇರಲೂ ಇಲ್ಲ, ಇರುವದೂ ಇಲ್ಲ. ಇದಕ್ಕೆ ವಿರುದ್ಧವಾಗಿ

ಸುಳ್ಳಾಡುವದೆಂಬ ದುರ್ಜನರ ನಡೆಯನ್ನೂ (ನೋಡು)[1]. (ಹೀಗೆ) ಸುಳ್ಳಾಡಿ ಯಾವನೂ ಮುಪ್ಪುಮರಣಗಳಿಲ್ಲದವನಾಗಲಾರನು ; ಏಕೆಂದರೆ ಮರ್ತ್ಯನು ಎಂದರೆ ಮನುಷ್ಯನು ಸಸ್ಯದಂತೆ ಪಕ್ವವಾಗುತ್ತಿರುವನು, ಮುದಿಯಾಗಿ ಸಾಯುತ್ತಿರುವನು ; ಮತ್ತು ಸತ್ತು, ಸಸ್ಯದಂತೆ ಮತ್ತೆ ಹುಟ್ಟುತ್ತಿರುವನು. ಹೊರತೋರಿಕೊಳ್ಳುತ್ತಿರುವನು. ಹೀಗೆ ಜೀವಲೋಕವು ಅನಿತ್ಯವಾಗಿರುವಲ್ಲಿ ಸುಳ್ಳಾಡುವದರಿಂದೇನು ಪ್ರಯೋಜನ ? ನಿನ್ನ ಸತ್ಯವನ್ನು ಕಾಪಾಡಿಕೊ, ನನ್ನನ್ನು ಯಮ(ನಲ್ಲಿ)ಗೆ ಕಳುಹಿಸಿಕೊಡು- ಎಂದು ಅಭಿಪ್ರಾಯ.

(ಭಾಷ್ಯ)

**೧೫. ಸ ಏವಮುಕ್ತಃ ಪಿತಾ ಆತ್ಮನಃ ಸತ್ಯತಾಯೈ ಪ್ರೇಷಯಾಮಾಸ । ಸ ಚ ಯಮಭವನಂ ಗತ್ವಾ ತಿಸ್ರೋ ರಾತ್ರೀರುವಾಸ ಯಮೇ ಪ್ರೋಷಿತೇ । ಪ್ರೋಷ್ಯ ಆಗತಂ ಯಮಮ್ ಅಮಾತ್ಯಾ ಭಾರ್ಯಾ ವಾ ಊಚುರ್ಬೋಧಯನ್ತಃ ॥**

(ಭಾಷ್ಯಾರ್ಥ)

ಹೀಗೆನ್ನಲು ಆ ತಂದೆಯು ತನ್ನ ಸತ್ಯಕ್ಕಾಗಿ (ಮಗನನ್ನು) ಕಳುಹಿಸಿಕೊಟ್ಟನು. ಆ (ನಚಿಕೇತ)ನು, ಯಮನ ಮನೆಗೆ ಹೋಗಿ ಯಮನು (ಎಲ್ಲಿಯೋ)[2] ಹೊರಗೆ ಹೋಗಿರಲಾಗಿ (ಅಲ್ಲಿ) ಮೂರು ರಾತ್ರೆಗಳವರೆಗೆ ಇರುತ್ತಿದ್ದನು. ಹೊರಗೆ ಹೋಗಿದ್ದು ಬಂದ ಯಮನನ್ನು ಕುರಿತು (ಅವನ) ಅಮಾತ್ಯರೋ ಹೆಂಡತಿಯೋ (ವಿಷಯವನ್ನು) ತಿಳಿಸುವದಕ್ಕಾಗಿ ಇಂತೆಂದರು :-

**ವೈಶ್ವಾನರಃ ಪ್ರವಿಶತ್ಯತಿಥಿರ್ಬ್ರಾಹ್ಮಣೋ ಗೃಹಾನ್ ।**
**ತಸ್ಯೈತಾಗ್ಂ ಶಾನ್ತಿಂ ಕುರ್ವನ್ತಿ ಹರ ವೈವಸ್ವತೋದಕಮ್ ॥ ೭ ॥**

೭. ಅತಿಥಿಯಾದ ಬ್ರಾಹ್ಮಣನು ವೈಶ್ವಾನರನಾಗಿ ಮನೆಯನ್ನು ಪ್ರವೇಶಿಸುತ್ತಾನೆ. ಆತನಿಗೆ ಈ ಶಾಂತಿಯನ್ನು ಮಾಡುತ್ತಾರೆ. ವೈವಸ್ವತನೆ, ಉದಕವನ್ನು ಒಯ್ದು ತಾ.

(ಭಾಷ್ಯ)

**೧೬. ವೈಶ್ವಾನರಃ ಅಗ್ನಿರೇವ ಸಾಕ್ಷಾತ್ ಪ್ರವಿಶತಿ ಅತಿಥಿಃ ಸನ್ ಬ್ರಾಹ್ಮಣಃ ಗೃಹಾನ್ ದಹನ್ನಿವ । ತಸ್ಯ, ದಾಹಂ ಶಮಯನ್ತ ಇವಾಗ್ನೇಃ, ಏತಾಂ**

1. ಇದು ಮೂಲವಾಕ್ಯದಲ್ಲಿಲ್ಲದಿದ್ದರೂ ಅರ್ಥದಿಂದ ಹೊಂದುತ್ತದೆ ; ಮುಂದಿನ ಗ್ರಂಥಸಂದರ್ಭಕ್ಕೆ ಬೇಕೇ ಆಗಿದೆ.

2. ಬ್ರಪ್ಮನ ಮನೆಗೆ ಹೋಗಿದ್ದನೆಂದು (ಗೋ ॥) ವ್ಯಾಖ್ಯಾನದಲ್ಲಿದೆ.

ಪಾದ್ಯಾಸನಾದಿದಾನಲಕ್ಷಣಾಮ್ ಶಾನ್ತಿಂ ಕುರ್ವನ್ತಿ ಸನ್ತಃ ಅತಿಥೇರ್ಯತಃ, ಅತಃ ಹರ ಆಹರ ಹೇ ವೈವಸ್ವತ ಉದಕಂ ನಚಿಕೇತಸೇ ಪಾದ್ಯಾರ್ಥಮ್ ॥

(ಭಾಷ್ಯಾರ್ಥ)

ಅತಿಥಿಯಾಗಿರುವ ಬ್ರಾಹ್ಮಣನು ವೈಶ್ವಾನರನಾಗಿ ಎಂದರೆ ಸಾಕ್ಷಾದಗ್ನಿಯೇ ಆಗಿ ಸುಡುವವನಂತೆ[1] ಮನೆಯನ್ನು ಪ್ರವೇಶಿಸುತ್ತಾನೆ. ಅಗ್ನಿಯ ದಾಹವನ್ನು ಶಮನಮಾಡುವವರಂತೆ, ಸತ್ಪುರುಷರು ಆ ಅತಿಥಿಗೆ ಪಾದ್ಯ, ಆಸನ - ಮುಂತಾದದ್ದನ್ನು ಕೊಡುವದೆಂಬ ಈ[2] ಶಾಂತಿಯನ್ನು ಮಾಡುತ್ತಾರೆ. ಆದ್ದರಿಂದ ಎಲೈ ವೈವಸ್ವತನೆ, (ಈ) ನಚಿಕೇತನಿಗೆ ಕಾಲುತೊಳೆದುಕೊಳ್ಳುವದಕ್ಕಾಗಿ ನೀರನ್ನು ಒಯ್ದು ತಾ, ಎಂದರೆ ತೆಗೆದುಕೊಂಡು ಬಾ.

(ಭಾಷ್ಯ)

೧೭. ಯತಶ್ಚ ಅಕರಣೇ ಪ್ರತ್ಯವಾಯಃ ಶ್ರೂಯತೇ -

(ಭಾಷ್ಯಾರ್ಥ)

ಇದೂ ಅಲ್ಲದೆ (ಹೀಗೆ ಸತ್ಕಾರ)ಮಾಡದೆ ಇದ್ದರೆ ಪ್ರತ್ಯವಾಯವನ್ನು[3] ಶ್ರುತಿಯಲ್ಲಿ ಹೇಳಿರುತ್ತದೆ. ಹೇಗೆಂದರೆ :-

ಆಶಾಪ್ರತೀಕ್ಷೇ ಸಙ್ಗತಗ್ಂ ಸೂನೃತಾಂ
ಚೇಷ್ಟಾಪೂರ್ತೇ ಪುತ್ರಪಶೂಗ್ಂಶ್ಚ ಸರ್ವಾನ್ ।
ಏತದ್ವೃಙ್ಕ್ತೇ ಪುರುಷಸ್ಯಾಲ್ಪಮೇಧಸೋ
ಯಸ್ಯಾನಶ್ನನ್ ವಸತಿ ಬ್ರಾಹ್ಮಣೋ ಗೃಹೇ ॥ ೮ ॥

೮. ಆಶೆ, ಪ್ರತೀಕ್ಷೆ - ಇವುಗಳನ್ನೂ ಸಿಕ್ಕಿರುವದನ್ನೂ ಸೂನೃತವನ್ನೂ ಇಷ್ಟಾಪೂರ್ತಗಳನ್ನೂ ಎಲ್ಲ ಪುತ್ರಪಶುಗಳನ್ನೂ - ಯಾವ ಅಲ್ಪಬುದ್ಧಿಯ ಮನೆಯಲ್ಲಿ ಬ್ರಾಹ್ಮಣನು ಊಟವಿಲ್ಲದೆ ವಾಸಮಾಡುವನೋ ಆ ಪುರುಷನ ಈ (ಎಲ್ಲ)ವನ್ನೂ ಬಿಡಿಸುವನು.

1. ಸುಡುವವನಂತೆ ಎಂದಿರುವದರಿಂದ ಬ್ರಾಹ್ಮಣನು ಎಂದರೆ ಸುಡುವ ಅಗ್ನಿಯೇ ಬಂದಂತೆ ಎಂದು ಉಪಮಾನವನ್ನು ಸೂಚಿಸಿದಂತಾಯಿತು. ಮುಂದೆ 'ಸುಡುವ ಅಗ್ನಿಯನ್ನು ಶಮನಮಾಡುವಂತೆ' ಎಂಬ ಉಪಮಾನವೂ ಈ ಅರ್ಥವನ್ನೇ ಪುಷ್ಟಿಗೊಳಿಸುತ್ತದೆ. ಆದ್ದರಿಂದ 'ವೈಶ್ವಾನರನೇ ಬ್ರಾಹ್ಮಣನಾಗಿ' ಎಂದು ಕನ್ನಡಿಸುವದಕ್ಕಿಂತ ನಾವು ಕನ್ನಡಿಸಿರುವಂತೆ ಅನುವಾದಮಾಡುವದೇ ಉತ್ತಮವೆಂದು ತೋರುತ್ತದೆ. 2. ಶಾಸ್ತ್ರಪ್ರಸಿದ್ಧವಾದ.

3. ಯಾವ ಕರ್ಮವನ್ನು ಮಾಡದಿದ್ದರೆ 'ಪ್ರತ್ಯವಾಯ' (ದೋಷ)ವನ್ನು ಶಾಸ್ತ್ರದಲ್ಲಿ ಹೇಳಿದೆಯೋ ಅದನ್ನು ಅವಶ್ಯವಾಗಿ ಮಾಡಬೇಕು.

(ಭಾಷ್ಯ)

೧೮. ಆಶಾಪ್ರತೀಕ್ಷೇ ಅನಿರ್ಜ್ಞಾತಪ್ರಾಪ್ಯೇಷ್ಟಾರ್ಥಪ್ರಾರ್ಥನಾ ಆಶಾ, ನಿರ್ಜ್ಞಾತಪ್ರಾಪ್ಯಾರ್ಥಪ್ರತೀಕ್ಷಣಂ ಪ್ರತೀಕ್ಷಾ । ತೇ ಆಶಾಪ್ರತೀಕ್ಷೇ । ಸಙ್ಗತಂ ತತ್ಸಂಯೋಗಜಂ ಫಲಮ್[1] । ಸೂನೃತಾಂ ಚ । ಸೂನೃತಾ ಹಿ ಪ್ರಿಯಾವಾಕ್ ತನ್ನಿಮಿತ್ತಂ ಚ । ಇಷ್ಟಾಪೂರ್ತೇ । ಇಷ್ಟಂ ಯಾಗಜಂ, ಪೂರ್ತಮ್ ಆರಾಮಾದಿ ಕ್ರಿಯಾಜಂ ಫಲಮ್ । ಪುತ್ರಪಶೂಂಶ್ಚ । ಪುತ್ರಾಂಶ್ಚಂ ಪಶೂಂಶ್ಚ, ಸರ್ವಾನ್ । ಏತತ್ಸರ್ವಂ ಯಥೋಕ್ತಂ ವೃಙ್ಕ್ತೇ ವರ್ಜಯತಿ, ವಿನಾಶಯತಿ ಇತ್ಯೇತತ್ । ಪುರುಷಸ್ಯ ಅಲ್ಪಮೇಧಸಃ ಅಲ್ಪಪ್ರಜ್ಞಸ್ಯ । ಯಸ್ಯ ಅನಶ್ನನ್ ಅಭುಞ್ಜಾನಃ ಬ್ರಾಹ್ಮಣಃ ಗೃಹೇ ವಸತಿ । ತಸ್ಮಾತ್, ಅನುಪೇಕ್ಷಣೀಯಃ ಸರ್ವಾಸ್ವವಸ್ಥಾಸ್ವಪ್ಯತಿಥಿಃ ಇತ್ಯರ್ಥಃ ॥

(ಭಾಷ್ಯಾರ್ಥ)

ಆಶಾಪ್ರತೀಕ್ಷೆಗಳನ್ನು (ತನಗೆ) ಗೊತ್ತಿಲ್ಲದೆಇರುವ ಬೇಕಾಗಿರುವ ಪದಾರ್ಥಗಳು ಸಿಕ್ಕಬೇಕೆಂಬ ಬಯಕೆಯೇ **ಆಶೆಯು** ಗೊತ್ತಿರುವ ಇಂಥ ಪದಾರ್ಥವು ಸಿಕ್ಕುವದೆಂದು ಎದುರುನೋಡುತ್ತಿರುವದು **ಪ್ರತೀಕ್ಷೆಯು** - ಈ ಆಶಾಪ್ರತೀಕ್ಷೆಗಳೆರಡನ್ನೂ ಅವು ಸಿಕ್ಕಿದ್ದರಿಂದಾಗುವ ಫಲವನ್ನೂ 'ಸೂನೃತವನ್ನೂ' ; **ಸೂನೃತ**ವೆಂದರೆ ಪ್ರಿಯವಾದ ಮಾತು, ಅದರಿಂದ ಬರುವ (ಫಲವನ್ನೂ ಎಂದರ್ಥ). 'ಇಷ್ಟಾಪೂರ್ತಗಳನ್ನೂ'- **ಇಷ್ಟ**ವೆಂದರೆ ಯಾಗದಿಂದ ಉಂಟಾಗುವ (ಫಲವು), **ಪೂರ್ತ**ವೆಂದರೆ (ಜನರಿಗಾಗಿ) ತೋಪು (ಮುಂತಾದದ್ದನ್ನು ನಿರ್ಮಿಸುವದು) ಮುಂತಾದ ಕ್ರಿಯೆಯಿಂದ ಉಂಟಾಗುವ ಫಲವು. 'ಪುತ್ರಪಶುಗಳನ್ನೂ'ಎಂದರೆ ಪುತ್ರರನ್ನೂ ಪಶುಗಳನ್ನೂ ಎಲ್ಲರನ್ನೂ ಈ ಮೇಲೆ ಹೇಳಿದ ಎಲ್ಲವನ್ನೂ ಬಿಡಿಸುವನು[2] ಎಂದರೆ ನಾಶಗೊಳಿಸುವನು ಎಂದರ್ಥ. ಯಾವ ಅಲ್ಪಬುದ್ಧಿಯಾದ ಕಡಿಮೆಯ ತಿಳಿವಳಿಕೆಯ ಪುರುಷನ ಮನೆಯಲ್ಲಿ ಬ್ರಾಹ್ಮಣನು, ಊಟವಿಲ್ಲದೆ, ಊಟವನ್ನು ಮಾಡದೆ ವಾಸಮಾಡುವನೋ (ಅವನ ಈ ಎಲ್ಲವನ್ನೂ ನಾಶಗೊಳಿಸುವನು)[3], ಆದ್ದರಿಂದ ಯಾವ ಅವಸ್ಥೆಗಳಲ್ಲಿದ್ದರೂ[4] ಅತಿಥಿಯನ್ನು ಉಪೇಕ್ಷೆಮಾಡತಕ್ಕದ್ದಲ್ಲ ಎಂದರ್ಥ.

1. 'ತತ್ಸಂಯೋಗಜಮ್' ಎಂಬುದಕ್ಕೆ ಬದಲು 'ಸತ್ಸಂಯೋಗಜಮ್' (ಒಳ್ಳೆಯವರ ಸಂಬಂಧದಿಂದುಂಟಾಗುವ) ಎಂದೂ (ವಾ ॥ ಮೈ ॥), 'ಯೋಗಜಮ್' (ಯೋಗದಿಂದುಂಟಾಗುವ) ಎಂದೂ (ಗೋ ॥) ಪಾಠಾಂತರಗಳಿವೆ. 2. 'ವರ್ಜಯತಿ' ಎಂಬುದರ ಬದಲು 'ಆವರ್ಜಯತಿ' ಎಂಬ (ಆ ॥ ಮೈ ॥) ಪಾಠವೂ ಉಂಟು. 'ವಶಗೊಳಿಸಿಕೊಳ್ಳುತ್ತಾನೆ'ಎಂದು ಅದಕ್ಕೆ ಅರ್ಥ. 3. ಅತಿಥಿಸತ್ಕಾರವನ್ನು ಮಾಡದಿರುವವರಿಗೆ ಆಗುವ ಪ್ರತ್ಯವಾಯದ ಫಲವು ಇದೇ. 4. ಎಂಥ ಕಷ್ಟಕ್ಕೆ ಸಿಕ್ಕಿಬಿದ್ದಿದ್ದರೂ

## ಯಮನು ವರಗಳನ್ನು ಕೊಟ್ಟದ್ದು

(ಭಾಷ್ಯ)

೧೯. ಏವಮುಕ್ತೋ ಮೃತ್ಯುರುವಾಚ ನಚಿಕೇತಸಮ್ ಉಪಗಮ್ಯ ಪೂಜಾಪುರಸ್ಸರಮ್-

(ಭಾಷ್ಯಾರ್ಥ)

ಹೀಗೆಂದು ಹೇಳಲು ಮೃತ್ಯುವು ನಚಿಕೇತನ ಬಳಿಗೆ ಬಂದು ಪೂಜೆಯನ್ನು ಮಾಡಿ ಇಂತೆಂದನು :

ತಿಸ್ರೋ ರಾತ್ರೀರ್ಯದವಾತ್ಸೀರ್ಗೃಹೇ ಮೇ
ಅನಶ್ನನ್ ಬ್ರಹ್ಮನ್ನತಿಥಿರ್ನಮಸ್ಯಃ ।
ನಮಸ್ತೇಽಸ್ತು ಬ್ರಹ್ಮನ್ ಸ್ವಸ್ತಿ ಮೇಽಸ್ತು ತಸ್ಮಾತ್
ಪ್ರತಿ ತ್ರೀನ್ ವರಾನ್ ವೃಣೀಷ್ವ ॥೯॥

೯. ಬ್ರಾಹ್ಮಣನೆ, ಅತಿಥಿಯೂ ನಮಸ್ಕಾರಾರ್ಹನೂ ಆದ (ನೀನು) ಮೂರು ರಾತ್ರಿಗಳು ಊಟಮಾಡದೆ ನನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದೆಯಷ್ಟೆ. ಆದ್ದರಿಂದ, ಬ್ರಾಹ್ಮಣನೆ, ನಿನಗೆ ನಮಸ್ಕಾರವಿರಲಿ ! ಅದರಿಂದ ನನಗೆ ಸ್ವಸ್ತಿಯಾಗಲಿ ! ಇದಕ್ಕಾಗಿ ಮೂರು ವರಗಳನ್ನು ಕೇಳಿಕೊ.

(ಭಾಷ್ಯ)

೨೦. ತಿಸ್ರೋ ರಾತ್ರೀಃ ಯತ್ ಯಸ್ಮಾತ್ ಅವಾತ್ಸೀಃ ಉಷಿತವಾನಸಿ ಗೃಹೇ ಮೇ ಮಮ ಅನಶ್ನನ್ ಹೇ ಬ್ರಹ್ಮನ್ ಅತಿಥಿಃ ಸನ್ ನಮಸ್ಯಃ ನಮಸ್ಕಾರಾರ್ಹಶ್ಚ । ತಸ್ಮಾತ್ ನಮಃ ತೇ ತುಭ್ಯಮ್ ಅಸ್ತು ಭವತು । ಹೇ ಬ್ರಹ್ಮನ್ ಸ್ವಸ್ತಿ ಭದ್ರಂ ಮೇ ಅಸ್ತು, ತಸ್ಮಾತ್ ಭವತೋಽನಶನೇನ ಮದ್ಗೃಹವಾಸನಿಮಿತ್ತಾದ್ ದೋಷಾತ್ ತತ್ಪ್ರಾಪ್ತ್ಯುಪಶಮನೇನ । ಯದ್ಯಪಿ ಭವದನುಗ್ರಹೇಣ ಸರ್ವಂ ಮಮ ಸ್ವಸ್ತಿ ಸ್ಯಾತ್, ತಥಾಪಿ ತ್ವದಧಿಕಸಮ್ಪ್ರಸಾದನಾರ್ಥಮ್ ಅನಶನೇನೋಷಿತಾಮ್ ಏಕೈಕಾಂ ರಾತ್ರಿಂ ಪ್ರತಿ ತ್ರೀನ್ ವರಾನ್ ವೃಣೀಷ್ವ ಅಭಿಪ್ರೇತಾರ್ಥವಿಷಯಾನ್ ಪ್ರಾರ್ಥಯಸ್ವ ಮತ್ತಃ ॥

(ಭಾಷ್ಯಾರ್ಥ)

ಎಲೈ ಬ್ರಾಹ್ಮಣನೆ, ಅತಿಥಿಯೂ ನಮಸ್ಯನೂ- ಎಂದರೆ ನಮಸ್ಕಾರಕ್ಕೆ ತಕ್ಕವನೂ (ಆಗಿರುವ ನೀನು) ಮೂರು ರಾತ್ರಿಗಳು ನನ್ನ ಮನೆಯಲ್ಲಿ ಊಟಮಾಡದೆ ವಾಸಮಾಡಿಕೊಂಡಿದ್ದೆಯಷ್ಟೆ, ಇದ್ದೆಯಷ್ಟೆ. ಆದ್ದರಿಂದ ನಿನಗೆ ನಮಸ್ಕಾರವು ಇರಲಿ !

ಎಲೆ, ಬ್ರಾಹ್ಮಣನೆ, ಅದರಿಂದ ಎಂದರೆ ನೀನು ಊಟಮಾಡದೆ ನನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದ ಕಾರಣದಿಂದ ಆಗುವ ದೋಷದಿಂದ, ಅದು ನನಗೆ ತಗಲದಂತೆ ಪರಿಹಾರವಾಗಿ, ನನಗೆ ಸ್ವಸ್ತಿಯಾಗಲಿ, ಮಂಗಳವಾಗಲಿ ![1] ನಿನ್ನ ಅನುಗ್ರಹದಿಂದಲೇ ನನಗೆ ಎಲ್ಲಾ ಸ್ವಸ್ತಿಯೂ ಆದೀತಾದರೂ ನೀನು (ಇನ್ನೂ) ಹೆಚ್ಚು ಪ್ರಸನ್ನನಾಗಲೆಂದು (ಕೇಳುತ್ತಿದ್ದೇನೆ). ಊಟವಿಲ್ಲದೆ (ಇಲ್ಲಿ) ವಾಸವಾಗಿದ್ದ ಒಂದೊಂದು ರಾತ್ರಿಗೂ (ಒಂದೊಂದರಂತೆ) ಮೂರು ವರಗಳನ್ನು ನನ್ನಿಂದ ಕೇಳಿಕೊ, ನಿನಗೆ ಬೇಕಾದ ವಿಷಯದ (ಮೂರು ವರಗಳನ್ನು) ಕೇಳಿಕೊ.

## ಮೊದಲನೆಯ ವರ : ತಂದೆಯ ಪ್ರಸನ್ನತೆ

ಶಾನ್ತಸಙ್ಕಲ್ಪಃ ಸುಮನಾ ಯಥಾ ಸ್ಯಾ-
ದ್ವೀತಮನ್ಯುರ್ಗೌತಮೋ ಮಾಭಿ ಮೃತ್ಯೋ ।
ತ್ವತ್ಪ್ರಸೃಷ್ಟಂ ಮಾಭಿವದೇತ್ ಪ್ರತೀತ
ಏತತ್ತ್ರಯಾಣಾಂ ಪ್ರಥಮಂ ವರಂ ವೃಣೇ ॥ ೧೦ ॥

೧೦. ಮೃತ್ಯುವೆ, ಗೌತಮನು ನನ್ನ ವಿಷಯದಲ್ಲಿ ಶಾಂತಸಂಕಲ್ಪನಾಗಿ, ಒಳ್ಳೆಯ ಮನಸ್ಸುಳ್ಳವನಾಗಿ, ವೀತಮನ್ಯುವಾಗಿ ಆಗುವಂತೆಯೂ, ನಿನ್ನಿಂದ ಬೀಳ್ಕೊಂಡ ನನ್ನನ್ನು ಅರಿತುಕೊಂಡು ಮಾತನಾಡಿಸುವಂತೆಯೂ (ಆಗಲಿ) ! ಮೂರು ವರಗಳಲ್ಲಿ ಈ ಮೊದಲನೆಯ ವರವನ್ನು ಬೇಡುತ್ತೇನೆ.

(ಭಾಷ್ಯ)

೨೧. ನಚಿಕೇತಾಸ್ತ್ವಾಹ - ಯದಿ ದಿತ್ಸುರ್ವರಾನ್ ಶಾನ್ತಸಙ್ಕಲ್ಪಃ ಉಪಶಾನ್ತಃ ಸಙ್ಕಲ್ಪೋ ಯಸ್ಯ ಮಾಂ ಪ್ರತಿ ಯಮಂ ಪ್ರಾಪ್ಯ ಕಿಂ ನು ಕರಿಷ್ಯತಿ ಮಮ ಪುತ್ರ ಇತಿ ಸ ಶಾನ್ತಸಙ್ಕಲ್ಪಃ । ಸುಮನಾಃ ಪ್ರಸನ್ನಚಿತ್ತಶ್ಚ[2] ಯಥಾ ಸ್ಯಾತ್ । ವೀತಮನ್ಯುಃ ವಿಗತರೋಷಶ್ಚ । ಗೌತಮಃ ಮಮ ಪಿತಾ । ಮಾ ಅಭಿ ಮಾಂ ಪ್ರತಿ, ಹೇ ಮೃತ್ಯೋ । ಕಿಂ ಚ ತ್ವತ್ಪ್ರಸೃಷ್ಟಂ ತ್ವಯಾ ವಿನಿರ್ಮುಕ್ತಂ ಪ್ರೇಷಿತಂ ಗೃಹಂ ಪ್ರತಿ ಮಾ ಮಾಮ್ ಅಭಿವದೇತ್ ಪ್ರತೀತಃ ಲಬ್ಧಸ್ಮೃತಿಃ "ಸ ಏವಾಯಂ ಪುತ್ರೋ ಮಮಾಗತಃ" ಇತ್ಯೇವಂ ಪ್ರತ್ಯಭಿಜಾನನ್ ಇತ್ಯರ್ಥಃ । ಏತತ್ತ್ರಯೋಜನಂ

1. ಯಮನು ಜ್ಞಾನಿಯೇ ಆದರೂ ಗೃಹಸ್ಥರಾದವರು ಮಾಡಬೇಕಾದದ್ದನ್ನು ತಿಳಿಸಿಕೊಡುವದಕ್ಕಾಗಿ ಹೀಗೆ ಮಾತನಾಡಿರುತ್ತಾನೆ. ನಿಜವಾಗಿ ಅವನಿಗೆ ಕರ್ಮವನ್ನು ಬಿಟ್ಟಿದ್ದರಿಂದ ಆಗುವ ಪ್ರತ್ಯವಾಯವೇನೂ ಇಲ್ಲ. ಗೀ. ಭಾ ೩-೧೮, ಬೃ. ಭಾ. ೪-೪-೬ನ್ನು ನೋಡಿರಿ. 2. "ಮನಾಶ್ಚ" ಎಂದು (ಆ ॥) ಪಾಠವು; (ಪಾ ॥) ಪಾಠದಲ್ಲಿ ಹೀಗಿದೆ.

ತ್ರಯಾಣಾಂ ವರಾಣಾಂ ಪ್ರಥಮಮ್ ಆದ್ಯಂ ವರಂ ವೃಣೇ ಪ್ರಾರ್ಥಯೇ ಯತ್ಪಿತುಃ ಪರಿತೋಷಣಮ್ ॥

(ಭಾಷ್ಯಾರ್ಥ)

ನಚಿಕೇತನಾದರೋ (ಹೀಗೆ) ಹೇಳುತ್ತಾನೆ : ಎಲೈ ಮೃತ್ಯುವೆ, (ನೀನು) ವರಗಳನ್ನು ಕೊಡಬೇಕೆಂದಿದ್ದರೆ, ನನ್ನ ತಂದೆಯಾದ ಗೌತಮನು[1] ಶಾಂತ ಸಂಕಲ್ಪನಾಗಿ ಎಂದರೆ 'ಯಮನ ಹತ್ತಿರಕ್ಕೆ ಹೋದ ನನ್ನ ಮಗನು ಏನುಮಾಡುವನೋ' ಎಂದು ನನ್ನ ವಿಷಯದಲ್ಲಿ ಸಂಕಲ್ಪವು ಶಾಂತವಾದವನಾಗಿ (ಸಂಕಲ್ಪವು) ತೊಲಗಿದವನಾಗಿ ; 'ಒಳ್ಳೆಯ ಮನಸ್ಸುಳ್ಳವನಾಗಿ' ಎಂದರೆ ಪ್ರಸನ್ನನಾದ ಚಿತ್ತವುಳ್ಳವನಾಗಿ ಆಗುವಂತೆಯೂ ಮತ್ತು ನಿನ್ನಿಂದ ಬೀಳ್ಕೊಂಡ, ನೀನು ನನ್ನನ್ನು ಬಿಟ್ಟು ಮನೆಗೆ ಕಳುಹಿಸಿದ ಮೇಲೆ ನನ್ನನ್ನು ಅರಿತುಕೊಂಡು ಎಂದರೆ 'ಅದೇ ನನ್ನ ಮಗನೇ ಬಂದಿರುವನು' ಎಂದು ನೆನಪನ್ನು ಪಡೆದು ಗುರುತಿಸಿ ನನ್ನನ್ನು ಮಾತನಾಡಿಸುವಂತೆಯೂ (ಆಗಲಿ) ! ಎಂದರ್ಥ. ತಂದೆಯನ್ನು ಸಂತೋಷ ಗೊಳಿಸುವದೆಂಬ ಈ ಪ್ರಯೋಜನವನ್ನೇ ಮೂರು ವರಗಳಲ್ಲಿ ಒಂದನೆಯ ವರವಾಗಿ ಮೊದಲನೆಯದನ್ನಾಗಿ ಬೇಡುತ್ತೇನೆ, ಕೇಳಿಕೊಳ್ಳುತ್ತೇನೆ.

ಯಥಾ ಪುರಸ್ತಾದ್ ಭವಿತಾ ಪ್ರತೀತ
ಔದ್ದಾಲಕಿರಾರುಣಿರ್ಮತ್ಪ್ರಸೃಷ್ಟಃ ।
ಸುಖಗ್ಂ ರಾತ್ರೀಃ ಶಯಿತಾ ವೀತಮನ್ಯು-
ಸ್ತ್ವಾಂ ದದೃಶಿವಾನ್ ಮೃತ್ಯುಮುಖಾತ್ ಪ್ರಮುಕ್ತಮ್ ॥೧೧॥

೧೧. ಔದ್ದಾಲಕಿ ಆರುಣಿಯು ನನ್ನಿಂದ ಬಿಡಲ್ಪಟ್ಟವನಾಗಿ ಮೊದಲಿನಂತೆ ಅರಿತುಕೊಂಡವನಾಗುವನು. ರಾತ್ರಿಗಳಲ್ಲಿ ಸುಖವಾಗಿ ಮಲಗಿರುವನು. ಮೃತ್ಯು ಮುಖದಿಂದ ಬಿಡುಗಡೆಯಾದ ನಿನ್ನನ್ನು ಕಂಡು ವೀತಮನ್ಯು(ವೂ ಆಗುವನು).

(ಭಾಷ್ಯ)

೨೨. ಮೃತ್ಯುರುವಾಚ- ಯಥಾ ಬುದ್ಧಿಃ ತ್ವಯಿ ಪುರಸ್ತಾತ್ ಪೂರ್ವಮ್ ಆಸೀತ್ ಸ್ನೇಹಸಮನ್ವಿತಾ ಪಿತುಸ್ತವ, ಭವಿತಾ ಪ್ರೀತಿಸಮನ್ವಿತಸ್ತವ ಪಿತಾ ತಥೈವ ಪ್ರತೀತಃ ಪ್ರತೀತವಾನ್ ಸನ್ । ಔದ್ದಾಲಕಿಃ । ಉದ್ದಾಲಕ ಏವ ಔದ್ದಾಲಕಿಃ । ಅರುಣಸ್ಯ ಅಪತ್ಯಮ್ ಆರುಣಿಃ । ದ್ವ್ಯಾಮುಷ್ಯಾಯಣೋ ವಾ । ಮತ್ಪ್ರಸೃಷ್ಟಃ ಮಯಾಽನುಜ್ಞಾತಃ ಸನ್ । ಇತರಾ ಅಪಿ ರಾತ್ರೀಃ ಸುಖಂ ಪ್ರಸನ್ನಮನಾಃ ಶಯಿತಾ

1. ವಾಜಶ್ರವಸನು ಗೋತಮಗೋತ್ರದವನು.

ಸ್ವಪ್ತಾ । ವೀತಮನ್ಯುಃ ವಿಗತಮನ್ಯುಶ್ಚ ಭವಿತಾ ಸ್ಯಾತ್ ತ್ವಾಂ ಪುತ್ರಂ ದದೃಶಿವಾನ್ ದೃಷ್ಟವಾನ್ ಸನ್ ಮೃತ್ಯುಮುಖಾತ್ ಮೃತ್ಯುಗೋಚರಾತ್ ಪ್ರಮುಕ್ತಂ ಸನ್ತಮ್ ॥

(ಭಾಷ್ಯಾರ್ಥ)

ಮೃತ್ಯು ಹೇಳಿದನೇನೆಂದರೆ :- ನಿನ್ನಲ್ಲಿ ನಿನ್ನ ತಂದೆಯ ಬುದ್ಧಿಯು ಮೊದಲು ಹಿಂದಕ್ಕೆ ಹೇಗೆ ಪ್ರೀತಿಪೂರ್ವಕವಾಗಿದ್ದಿತೋ ಹಾಗೆಯೇ (ಇನ್ನು ಮುಂದೆಯೂ ಇರುವದು). ನಿನ್ನ ತಂದೆಯು ಅರಿತುಕೊಂಡು ನಿನ್ನ ಗುರುತುಹಿಡಿದುಕೊಂಡು ಪ್ರೀತಿಯುಕ್ತನಾಗಿಯೇ ಇರುವನು. ಔದ್ದಾಲಕಿ (ಆರುಣಿಯು ಎಂಬಲ್ಲಿ ) **ಔದ್ದಾಲಕಿ** ಎಂದರೆ ಉದ್ದಾಲಕನೇ[1] ; ಆರುಣಿ ಎಂದರೆ ಅರುಣನ ಮಗನು. ಅಥವಾ ಇವನು ಇಬ್ಬರಿಗೂ ಮಗನಾಗಿರಬಹುದು.[2] (ಅವನು) ನನ್ನಿಂದ ಬಿಡಲ್ಪಟ್ಟು, ಎಂದರೆ ನನ್ನಿಂದ ಅನುಜ್ಞೆಯನ್ನು ಪಡೆದು[3] ಎಂದರ್ಥ. ಉಳಿದ[4] ರಾತ್ರಿಗಳಲ್ಲಿಯೂ ಸುಖವಾಗಿ ಎಂದರೆ ಪ್ರಸನ್ನವಾದ ಮನಸ್ಸಿನಿಂದ ಮಲಗುವನು. ನಿದ್ರಿಸುವನು. ಮೃತ್ಯುಮುಖದಿಂದ ಎಂದರೆ ಮೃತ್ಯುವಿನ ಹಿಡಿತದಿಂದ ಬಿಡುಗಡೆಯಾಗಿರುವ ಪುತ್ರನಾದ ನಿನ್ನನ್ನು ಕಂಡು, ಕಂಡವನಾಗಿ ವೀತಮನ್ಯುವೂ ಆಗುವನು. ಸಿಟ್ಟಿಲ್ಲದವನೂ ಆಗುವನು.

## ಎರಡನೆಯ ವರ : ಅಗ್ನಿವಿದ್ಯೆ

**ಸ್ವರ್ಗೇ ಲೋಕೇ ನ ಭಯಂ ಕಿಞ್ಚನಾಸ್ತಿ**
**ನ ತತ್ರ ತ್ವಂ ನ ಜರಯಾ ಬಿಭೇತಿ ।**
**ಉಭೇ ತೀರ್ತ್ವಾ ಅಶನಾಯಾಪಿಪಾಸೇ**
**ಶೋಕಾತಿಗೋ ಮೋದತೇ ಸ್ವರ್ಗಲೋಕೇ	॥೧೨॥**

೧೨. ಸ್ವರ್ಗಲೋಕದಲ್ಲಿ ಸ್ವಲ್ಪವೂ ಭಯವಿರುವದಿಲ್ಲ. ಅಲ್ಲಿ ನೀನೂ (ಕ್ರೈಮಾಡು)ವದಿಲ್ಲ, (ಜನವು) ಮುಪ್ಪಿಗೂ ಹೆದರುವದಿಲ್ಲ, ಹಸಿವು, ಬಾಯಾರಿಕೆ- ಈ ಎರಡನ್ನೂ ದಾಟಿ ಶೋಕವನ್ನು ಅತಿಕ್ರಮಿಸಿದವನಾಗಿ ಸ್ವರ್ಗಲೋಕದಲ್ಲಿ ಸಂತೋಷಪಡುತ್ತಾನೆ.

1. 'ಉದ್ದಾಲಕ ಏವ ಔದ್ದಾಲಕಿ' ಎಂದು ಸ್ವಾರ್ಥದಲ್ಲಿ ತದ್ಧಿತಪ್ರತ್ಯಯವು ಬಂದಿದೆ ಎಂದು ಭಾವ. 2. ಒಬ್ಬನಿಗೆ ಹೊಟ್ಟೆಯಲ್ಲಿ ಹುಟ್ಟಿದವನು ; ಇನ್ನೊಬ್ಬನಿಗೆ ವಾಗ್ದಾನದಂತೆ ದತ್ತ ಪುತ್ರನಾದವನು. ಇಂಥವನು ದ್ವ್ಯಾಮುಷ್ಯಾಯಣನೆನಿಸುವನು ಇವನಿಗೆ ಇಬ್ಬರ ಗೋತ್ರಗಳೂ ಸೇರಿರುತ್ತವೆ.

3. 'ನನ್ನ ಅನುಗ್ರಹದಿಂದ' ಎಂಬ ವಿಶೇಷಣವನ್ನು ಮೂರು ವಾಕ್ಯಗಳಿಗೂ ಅನ್ವಯಿಸಿಕೊಳ್ಳಬಹುದು.

4. "ಉತ್ತರಾ" ಎಂಬ (ವಾ॥)ಪಾಠದಲ್ಲಿ 'ಮುಂದಿನ' ಎಂದರ್ಥ.

(ಭಾ॰

೨೩. ನಚಿಕೇತಾ ಉವಾಚ - ಸ್ವರ್ಗೇ ಲೋಕೇ ರೋಗಾದಿನಿಮಿತ್ತಂ ಭಯಂ ಕಿಞ್ಚನ ಕಿಞ್ಚಿದಪಿ ನಾಸ್ತಿ । ನ ಚ ತತ್ರ ತ್ವಂ ಮೃತ್ಯೋ ಸಹಸಾ ಪ್ರಭವಸಿ । ಅತೋ ಜರಯಾ ಯುಕ್ತ ಇಹಲೋಕವತ್ ತ್ವತ್ತೋ ನ ಬಿಭೇತಿ ಕಶ್ಚಿತ್[1] ತತ್ರ । ಕಿಂ ಚ ಉಭೇ ಅಶನಾಯಾಪಿಪಾಸೇ ತೀರ್ತ್ವಾ ಅತಿಕ್ರಮ್ಯ ಶೋಕಮತೀತ್ಯ ಗಚ್ಛತೀತಿ ಶೋಕಾತಿಗಃ ಸನ್ ಮಾನಸೇನ ದುಃಖೇನ ವರ್ಜಿತಃ, ಮೋದತೇ ಹೃಷ್ಯತಿ ಸ್ವರ್ಗಲೋಕೇ ದಿವಿ[2] ॥

(ಭಾಷ್ಯಾರ್ಥ)

ನಚಿಕೇತನು ಹೇಳಿದನೇನೆಂದರೆ :- ಸ್ವರ್ಗಲೋಕದಲ್ಲಿ ರೋಗವೇ ಮುಂತಾದ ಕಾರಣದಿಂದ (ಯಾವ) ಭಯವೂ ಒಂದಿಷ್ಟೂ ಸ್ವಲ್ಪವೂ ಕೂಡ ಇರುವದಿಲ್ಲ. ಮೃತ್ಯುವೆ, ಅಲ್ಲಿ ನೀನೂ ತಟ್ಟನೆ (ಜನರಮೇಲೆ) ಕೈಮಾಡುವದಿಲ್ಲ. ಆದ್ದರಿಂದ ಈ ಲೋಕದಹಾಗೆ ಅಲ್ಲಿ ಯಾರೊಬ್ಬರೂ ಮುಪ್ಪಿನಿಂದ ಕೂಡಿದವರಾಗಿ ನಿನಗೆ ಹೆದರಿಕೊಳ್ಳುವದಿಲ್ಲ. ಮತ್ತು ಹಸಿವು, ಬಾಯಾರಿಕೆ- ಈ ಎರಡನ್ನೂ ದಾಟಿ ಎಂದರೆ ಮೀರಿ, ಶೋಕವನ್ನು ಅತಿಕ್ರಮಿಸಿ ಹೋಗುವನಾಗಿ ಎಂದರೆ ಮಾನಸದುಃಖದಿಂದ ಬಿಡುಗಡೆಯನ್ನು ಹೊಂದಿ ಸ್ವರ್ಗಲೋಕದಲ್ಲಿ ಎಂದರೆ ಆದಿತ್ಯಲೋಕದಲ್ಲಿ ಸಂತೋಷಪಡುತ್ತಾನೆ, ಹರ್ಷದಿಂದಿರುತ್ತಾನೆ[3].

ಸ ತ್ವಮಗ್ನಿಗ್ಂ ಸ್ವರ್ಗ್ಯಮಧ್ಯೇಷಿ ಮೃತ್ಯೋ
ಪ್ರಬ್ರೂಹಿ ತಗ್ಂ ಶ್ರದ್ದಧಾನಾಯ ಮಹ್ಯಮ್ ।
ಸ್ವರ್ಗಲೋಕಾ ಅಮೃತತ್ವಂ ಭಜನ್ತ
ಏತದ್ವಿತೀಯೇನ ವೃಣೇ ವರೇಣ ॥ ೧೩ ॥

೧೩. ಎಲೈ ಮೃತ್ಯುವೆ, ಆ ನೀನು ಸ್ವರ್ಗ್ಯವಾದ ಅಗ್ನಿಯನ್ನು ಅಧ್ಯಯನ ಮಾಡುತ್ತಿರುತ್ತೀಯೆ. ಶ್ರದ್ಧೆಯುಳ್ಳ ನನಗೆ ಅದನ್ನು ಹೇಳಿಕೊಡು. ಸ್ವರ್ಗಲೋಕದವರು ಅಮೃತತ್ವವನ್ನು ಹೊಂದುತ್ತಾರೆ. ಇದನ್ನು ಎರಡನೆಯ ವರದಿಂದ ಬೇಡುತ್ತೇನೆ.

---

1. "ಕುತಶ್ಚಿತ್" (ಏತಕ್ಕೂ) ಎಂಬ (ಆ ॥ ಮೈ॥) ಪಾಠಕ್ಕಿಂತ ನಾವು ಕೊಟ್ಟಿರುವ (ವಾ ॥) ಪಾಠವೇ ಮೇಲು. 2. ಇದು (ವಾ॥) ಪಾಠ.

3. ಇಲ್ಲಿ ಸ್ವರ್ಗಲೋಕವೆಂದರೆ ಕರ್ಮೋಪಾಸನೆಗಳಿಂದ ಪಡೆಯುವ ವಿರಾಟ್ಪುರುಷನ ಸ್ಥಾನವು. ಇಲ್ಲಿ ಹಸಿವುಬಾಯಾರಿಕೆ ಮುಪ್ಪು, ಮರಣ, ಶೋಕ, ಮೋಹ- ಮುಂತಾದವುಗಳು ಇರುವದಿಲ್ಲವಾದರೂ ಅವುಗಳ ಆತ್ಯಂತಿಕನಾಶವಾಗಿರುವದಿಲ್ಲ. ಆದ್ದರಿಂದಲೇ ಇಲ್ಲಿ ಮೃತ್ಯುವು 'ಸಹಸಾ' (ತಟ್ಟನೆ) ಮೇಲೆ ಬೀಳುವದಿಲ್ಲವೆಂದು ಹೇಳಿದೆ.

(ಭಾಷ್ಯ)

೨೪. ಏವಂಗುಣವಿಶಿಷ್ಟಸ್ಯ ಸ್ವರ್ಗಲೋಕಸ್ಯ ಪ್ರಾಪ್ತಿಸಾಧನಭೂತಮ್ ಅಗ್ನಿಮ್ ಸ್ವರ್ಗ್ಯಂ ಸ ತ್ವಂ ಮೃತ್ಯುಃ ಅಧ್ಯೇಷಿ ಸ್ಮರಸಿ ಜಾನಾಸಿ ಇತ್ಯರ್ಥಃ । ಹೇ ಮೃತ್ಯೋ ಯತಃ, ತಂ ಪ್ರಬ್ರೂಹಿ ಕಥಯ ಶ್ರದ್ದಧಾನಾಯ ಶ್ರದ್ಧಾವತೇ ಮಹ್ಯಂ ಸ್ವರ್ಗಾರ್ಥಿನೇ । ಯೇನಾಗ್ನಿನಾ ಚಿತೇನ ಸ್ವರ್ಗಲೋಕಾಃ ; ಸ್ವರ್ಗೋ ಲೋಕೋ ಯೇಷಾಂ ತೇ ಸ್ವರ್ಗಲೋಕಾಃ ಯಜಮಾನಾಃ ಅಮೃತತ್ವಮ್ ಅಮರಣತಾಂ ದೇವತ್ವಮ್ ಭಜನ್ತೇ ಪ್ರಾಪ್ನುವನ್ತಿ । ತದೇತತ್ ಅಗ್ನಿವಿಜ್ಞಾನಂ ದ್ವಿತೀಯೇನ ವರೇಣ ವೃಣೇ ॥

(ಭಾಷ್ಯಾರ್ಥ)

ಇಂಥ ಗುಣಗಳಿಂದೊಡಗೂಡಿರುವ ಸ್ವರ್ಗಲೋಕವನ್ನು ಹೊಂದುವದಕ್ಕೆ ಸಾಧನವಾಗಿರುವ ಅಗ್ನಿಯನ್ನು, ಆ ಮೃತ್ಯುವಾದ ನೀನು ಅಧ್ಯಯನಮಾಡಿರುತ್ತೀಯೆ, ನೆನಪಿಟ್ಟಿರುವೆ, ತಿಳಿದಿರುವೆ ಎಂದರ್ಥ. ಎಲೈ ಮೃತ್ಯುವೆ, ಹೀಗಿರುವದರಿಂದ ಶ್ರದ್ಧೆಯುಳ್ಳ ಶ್ರದ್ಧೆಯಿಂದ ಕೂಡಿರುವ, ಸ್ವರ್ಗವನ್ನು ಬಯಸುವ ನನಗೆ ಆ(ಅಗ್ನಿಯನ್ನು) ಹೇಳಿಕೊಡು. ಯಾವ ಅಗ್ನಿಯನ್ನು ಚಯನಮಾಡುವದರಿಂದ[1] ಸ್ವರ್ಗಲೋಕದವರಾದವರು - ಸ್ವರ್ಗವೆಂಬ ಲೋಕವನ್ನು ಯಾರು (ಹೊಂದುವರೋ) ಅವರು ಸ್ವರ್ಗಲೋಕದವರು ;ಆ ಯಾಜಕರು **ಅಮೃತತ್ವವನ್ನು** ಎಂದರೆ ಸಾವಿಲ್ಲದಿರುವಿಕೆಯನ್ನು ಎಂದರೆ ದೇವತ್ವವನ್ನು[2] ಹೊಂದುತ್ತಾರೋ ಪಡೆದುಕೊಳ್ಳುತ್ತಾರೋ ಅಂಥ ಈ ಅಗ್ನಿವಿದ್ಯೆಯನ್ನು ಎರಡನೆಯ ವರದಿಂದ ಬೇಡುತ್ತೇನೆ.

ಪ್ರ ತೇ ಬ್ರವೀಮಿ ತದು ಮೇ ನಿಬೋಧ
ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್ ।
ಅನನ್ತಲೋಕಾಪ್ತಿಮಥೋ ಪ್ರತಿಷ್ಠಾಂ
ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಮ್ ॥ ೧೪ ॥

1. ಇಲ್ಲಿ ಕರ್ಮ ಮತ್ತು ಉಪಾಸನೆ ಎರಡನ್ನೂ ಗ್ರಹಿಸಬೇಕು.

2. ಕರ್ಮೋಪಾಸನೆಗಳ ಸಮುಚ್ಚಯದಿಂದ ದೇವಾತ್ಮಭಾವವೆಂಬ ಅಮೃತತ್ವವು ದೊರಕುತ್ತದೆ ಎಂದು ಈ. ೧೧ರಲ್ಲಿ ಹೇಳಿರುವದನ್ನು ನೋಡಿರಿ. ಅಗ್ನಿವಿದ್ಯೆಯಿಂದಲೇ ಮುಖ್ಯವಾದ ಅಮೃತತ್ವವು ದೊರಕುವದಾದರೆ ಮುಂದಿನ ಜ್ಞಾನವಿಷಯಕವಾದ ಪ್ರಶ್ನೋತ್ತರಭಾಗವು ವ್ಯರ್ಥವಾಗುತ್ತದೆ. ಮುಕ್ತಿಯು ಸಾಧನಸಾಧ್ಯವಲ್ಲವಾದ್ದರಿಂದ ಅಗ್ನಿಯನ್ನು ಚಯನಮಾಡಿ ಉಪಾಸನೆಮಾಡಿದವರಿಗೆ ಮುಕ್ತಿಯು ದೊರಕುವದೆಂಬುದು ಯುಕ್ತಿಗೂ ವಿರುದ್ಧವಾಗಿರುತ್ತದೆ. ಆದ್ದರಿಂದ ವಿರಾಟ್ಪದವಿಯೂ ಒಂದು ಕಲ್ಪಕಾಲವಿರುವದರಿಂದ ಅಮೃತತ್ವವೆಂದು ಕರೆಯಲ್ಪಡುತ್ತದೆ ಎಂದು ತಿಳಿಯಬೇಕು. ತೈ. ಶಿಕ್ಷಾವಲ್ಲಿಯ ಉಪಸಂಹಾರಭಾಷ್ಯವನ್ನು ನೋಡಿ.

೧೪. ನಚಿಕೇತನೆ, ಸ್ವರ್ಗ್ಯವಾದ ಅಗ್ನಿಯನ್ನು ತಿಳಿದವನಾಗಿ ನಿನಗೆ ಹೇಳಿಕೊಡುತ್ತೇನೆ, ಅದನ್ನು ನನ್ನಿಂದ ತಿಳಿದುಕೊ. ಈ (ಅಗ್ನಿಯು) ಅನಂತವಾದ ಲೋಕವನ್ನು ಪಡೆಯಿಸುವದಾಗಿಯೂ ಮತ್ತು ಪ್ರತಿಷ್ಠಾ (ರೂಪ)ವಾಗಿಯೂ ಗುಹೆಯಲ್ಲಿ ಇಡಲ್ಪಟ್ಟಿರುವದೆಂದು ನೀನು ತಿಳಿ.

(ಭಾಷ್ಯ)

೨೫. ಮೃತ್ಯೋಃ ಪ್ರತಿಜ್ಞಾ ಇಯಮ್ । ತೇ ತುಭ್ಯಂ ಪ್ರಬ್ರವೀಮಿ । ಯತ್ ತ್ವಯಾ ಪ್ರಾರ್ಥಿತಂ ತತ್ ಉ ಮೇ ಮಮ ವಚಸೋ ನಿಬೋಧ ಬುಧ್ಯಸ್ವ ಏಕಾಗ್ರಮನಾಃ ಸನ್ । ಸ್ವರ್ಗ್ಯಂ ಸ್ವರ್ಗಾಯ ಹಿತಮ್, ಸ್ವರ್ಗಸಾಧನಮ್, ಅಗ್ನಿಂ ಹೇ ನಚಿಕೇತಃ । ಪ್ರಜಾನನ್ ವಿಜ್ಞಾತವಾನ್ ಸನ್ ಅಹಮ್ ಇತ್ಯರ್ಥಃ । 'ಪ್ರಬ್ರವೀಮಿ, ತನ್ನಿಬೋಧ' ಇತಿ ಚ ಶಿಷ್ಯಬುದ್ಧಿಸಮಾಧಾನಾರ್ಥಂ ವಚನಮ್' ಅಧುನಾ ಅಗ್ನಿಂ ಸ್ತೌತಿ । ಅನನ್ತಲೋಕಾಪ್ತಿಂ ಸ್ವರ್ಗಲೋಕಫಲ ಪ್ರಾಪ್ತಿ ಸಾಧನಮ್ ಇತ್ಯೇತತ್ । ಅಥೋ ಅಪಿ ಪ್ರತಿಷ್ಠಾಮ್ ಆಶ್ರಯಂ ಜಗತೋ ವಿರಾಟ್ಸ್ವರೂಪೇಣ । ತಮೇತಮ್ ಅಗ್ನಿಂ ಮಯಾ ಉಚ್ಯಮಾನಂ ವಿದ್ಧಿ ಜಾನೀಹಿ ತ್ವಂ ನಿಹಿತಂ ಸ್ಥಿತಂ ಗುಹಾಯಾಂ ವಿದುಷಾಂ ಬುದ್ಧೌ ನಿವಿಷ್ಟಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಇದು ಮೃತ್ಯುವಿನ ಮಾತು : ಯಾವದನ್ನು ನೀನು ಕೇಳಿಕೊಂಡಿರುವೆಯೋ (ಆ ಅಗ್ನಿಯನ್ನು) ನಿನಗೋಸ್ಕರ ಹೇಳಿಕೊಡುತ್ತೇನೆ. ಅದನ್ನು ನನ್ನ ಮಾತಿನಿಂದ ಏಕಾಗ್ರವಾದ ಮನಸ್ಸುಳ್ಳವನಾಗಿ ತಿಳಿದುಕೊ. ಸ್ವರ್ಗ್ಯವಾದ, ಎಂದರೆ ಸ್ವರ್ಗಕ್ಕೆ ಹಿತವಾಗಿರುವ, ಸ್ವರ್ಗಕ್ಕೆ ಸಾಧನವಾದ ಅಗ್ನಿಯನ್ನು. ಎಲೈ ನಚಿಕೇತನೆ, ತಿಳಿದವನಾಗಿ ಎಂದರೆ (ಅದನ್ನು) ಅರಿತವನಾಗಿ ನಾನು (ಹೇಳಿಕೊಡುತ್ತೇನೆ) ಎಂದರ್ಥ. 'ಹೇಳಿಕೊಡುತ್ತೇನೆ' (ಎಂದೂ) 'ಅದನ್ನು ತಿಳಿದುಕೊ' ಎಂದೂ ಹೇಳಿರುವದು ಶಿಷ್ಯನು ಬುದ್ಧಿಯನ್ನು ಸಮಾಧಾನ(ವಾಗಿಟ್ಟುಕೊಳ್ಳ)ಲೆಂಬುದಕ್ಕಾಗಿ. ಈಗ ಆ ಅಗ್ನಿಯನ್ನು ಹೊಗಳುತ್ತಾನೆ : ಅನಂತವಾದ ಲೋಕವನ್ನು ಪಡೆಯಿಸುವದಾಗಿಯೂ ಎಂದರೆ ಸ್ವರ್ಗಲೋಕಕ್ಕೆ[1] ಸ್ವರ್ಗಲೋಕವೆಂಬ ಫಲಪ್ರಾಪ್ತಿಗೆ ಸಾಧನವಾಗಿಯೂ ಎಂದರ್ಥ. ಅಥೋ ಎಂದರೆ ಮತ್ತು ಪ್ರತಿಷ್ಠಾ(ರೂಪ)ವಾಗಿಯೂ ಎಂದರೆ ವಿರಾಟ್ಸ್ವರೂಪದಿಂದ ಜಗತ್ತಿಗೆ ಆಶ್ರಯವಾಗಿಯೂ (ಇರುವ) ಆ ಈ ಅಗ್ನಿಯು ಗುಹೆಯಲ್ಲಿ ಎಂದರೆ

1. ಅಪರಬ್ರಹ್ಮಲೋಕವು ಸಾಪೇಕ್ಷವಾಗಿ ಅನಂತವಾಗಿಯೇ ಇರುತ್ತದೆ. ಅತ್ಯಂತವಾಗಿ ಅಂತವೇ ಇಲ್ಲವೆಂದರೆ ಪ್ರಕರಣಕ್ಕೆ ವಿರೋಧವಾಗುವದರಿಂದ 'ಸ್ವರ್ಗಲೋಕ'ವೆಂದು ಅರ್ಥವನ್ನು ಮಾಡಿರುತ್ತದೆ.

ಬಲ್ಲವರ[1] ಬುದ್ಧಿಯಲ್ಲಿ ಇಡಲ್ಪಟ್ಟಿರುವದು ; ಇರುತ್ತಿರುವದು ; (ಹೀಗೆ) ಹೊಕ್ಕಿರುವದನ್ನು ನಾನು ಹೇಳುವೆನು, ನೀನು ತಿಳಿದುಕೊ-ಎಂದರ್ಥ.

**ಲೋಕಾದಿಮಗ್ನಿಂ ತಮುವಾಚ ತಸ್ಮೈ**

**ಯಾ ಇಷ್ಟಕಾ ಯಾವತೀರ್ವಾ ಯಥಾ ವಾ ।**

**ಸ ಚಾಪಿ ತತ್ ಪ್ರತ್ಯವದದ್ಯಥೋಕ್ತ-**

**ಮಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ ॥೧೫॥**

೧೫. ಲೋಕಾದಿಯಾದ ಅಗ್ನಿಯನ್ನು ಅವನಿಗೆ ಹೇಳಿದನು. ಯಾವ ಇಟ್ಟಿಗೆಗಳು, ಎಷ್ಟು, ಅಥವಾ ಹೇಗೆ ಎಂಬುದನ್ನು (ಹೇಳಿದನು). ಅವನೂ ಅದನ್ನು ಹೇಳಿದಂತೆಯೇ ಮತ್ತೆ ಹೇಳಿದನು. ಆಮೇಲೆ ಮೃತ್ಯುವು ತುಷ್ಟನಾಗಿ ಮತ್ತೂ ಇಂತೆಂದನು.

(ಭಾಷ್ಯ)

**೨೬. ಇದಂ ಶ್ರುತೇರ್ವಚನಮ್ । ಲೋಕಾದಿಂ ಲೋಕಾನಾಮಾದಿಮ್, ಪ್ರಥಮಶರೀರಿತ್ವಾತ್ । ಅಗ್ನಿಂ ತಂ ಪ್ರಕೃತಂ ನಚಿಕೇತಸಾ ಪ್ರಾರ್ಥಿತಮ್-ಉವಾಚ ಉಕ್ತವಾನ್ ಮೃತ್ಯುಃ ತಸ್ಮೈ ನಚಿಕೇತಸೇ । ಕಿಂ ಚ ಯಾ ಇಷ್ಟಕಾಃ ಚೇತವ್ಯಾಃ ಸ್ವರೂಪೇಣ, ಯಾವತೀರ್ವಾ ಸಙ್ಖ್ಯಯಾ, ಯಥಾ ವಾ ಚೀಯತೇ ಅಗ್ನಿರ್ಯೇನ ಪ್ರಕಾರೇಣ, ಸರ್ವಮೇತದುಕ್ತವಾನ್ ಇತ್ಯರ್ಥಃ । ಸ ಚಾಪಿ ನಚಿಕೇತಾಃ ತತ್ ಮೃತ್ಯುನಾ ಉಕ್ತಂ ಪ್ರತ್ಯವದತ್ ಯಥಾವತ್ ಪ್ರತ್ಯಯೇನ ಅವದತ್ ಪ್ರತ್ಯುಚ್ಚಾರಿತವಾನ್ । ಅಥ ತಸ್ಯ ಪ್ರತ್ಯುಚ್ಚಾರಣೇನ ತುಷ್ಟಃ ಸನ್ ಮೃತ್ಯುಃ ಪುನರೇವಾಹ ವರತ್ರಯವ್ಯತಿರೇಕೇಣ ಅನ್ಯಂ ವರಂ ದಿತ್ಸುಃ ॥**

(ಭಾಷ್ಯಾರ್ಥ)

ಇದು ಶ್ರುತಿಯ ಮಾತು. ಲೋಕಾದಿ ಎಂದರೆ ಲೋಕಗಳಿಗೆಲ್ಲ ಆದಿ. ಏಕೆಂದರೆ (ವಿರಾಜನು) **ಪ್ರಥಮಶರೀರಿಯಾಗಿರುತ್ತಾನೆ.**[2] ಆ ಅಗ್ನಿಯನ್ನು ಎಂದರೆ ಪ್ರಕೃತದಲ್ಲಿ ನಚಿಕೇತನು ಕೇಳಿದ್ದನಲ್ಲ, (ಆ ಅಗ್ನಿಯನ್ನು) ಮೃತ್ಯುವು ಆ ನಚಿಕೇತನಿಗೆ ಹೇಳಿದನು, ಹೇಳಿದವನಾದನು. ಮತ್ತು ಎಂಥ ಇಟ್ಟಿಗೆಗಳನ್ನು **ಚಯನಮಾಡಬೇಕು** (ಎಂದು ಇಟ್ಟಿಗೆಗಳ) ಸ್ವರೂಪವನ್ನೂ, ಎಷ್ಟು (ಇಟ್ಟಿಗೆಗಳು ಎಂಬ) ಸಂಖ್ಯೆಯನ್ನೂ

1. ಉಪಾಸಕರ. ಅಗ್ನಿವಿದ್ಯೆಯನ್ನು ಬಲ್ಲ ಉಪಾಸಕರ ಹೃದಯದಲ್ಲಿ ವಿರಾಟ್ಪುರುಷನ ಸಾಕ್ಷಾತ್ಕಾರವಾಗಿರುತ್ತದೆ.

2. 'ಸ ವೈ ಶರೀರೀ ಪ್ರಥಮಃ ಸ ವೈ ಪುರುಷ ಉಚ್ಯತೇ । ಆದಿಕರ್ತಾ ಸ ಭೂತಾನಾಂ ಬ್ರಹ್ಮಾಗ್ರೇ ಸಮವರ್ತತ ॥' (?) ಎಂಬ ಸ್ಮೃತಿಯಲ್ಲಿ ವಿರಾಟ್ಪುರುಷನು ಸೃಷ್ಟಿಯಲ್ಲಿ ಮೊದಲು ಹುಟ್ಟಿದ ಶರೀರಿಯೆಂದು ಹೇಳಿದೆ.

ಮತ್ತು ಹೇಗೆ (ಮಾಡಬೇಕು) ಎಂಬ ಪ್ರಕಾರವನ್ನೂ[1]- ಇದೆಲ್ಲವನ್ನೂ ಹೇಳಿದನು ಎಂದರ್ಥ. ಆ ನಚಿಕೇತನು ಕೂಡ ಅದನ್ನು ಎಂದರೆ ಮೃತ್ಯುವು ಹೇಳಿದ್ದನ್ನು ಹಾಗೆಯೇ ತಿಳಿದುಕೊಂಡು ಮತ್ತೆ ಹೇಳಿದನು, ಎಂದರೆ ತಿರುಗಿ ಉಚ್ಚರಿಸಿದನು. ಬಳಿಕ ಅವನು ತಿರುಗಿ ಹೇಳಿದ್ದರಿಂದ ಮೃತ್ಯುವು ತುಷ್ಟನಾಗಿ ಮೂರು ವರಗಳಲ್ಲದೆ ಮತ್ತೊಂದು ವರವನ್ನು ಕೊಡಬೇಕೆಂಬ ಇಚ್ಛೆಯಿಂದ ಮತ್ತೂ (ಹೀಗೆ) ಹೇಳುತ್ತಾನೆ:

## ಯಮನು ತಾನಾಗಿ ಕೊಟ್ಟ ನಾಲ್ಕನೆಯ ವರ

**ತಮಬ್ರವೀತ್ ಪ್ರೀಯಮಾಣೋ ಮಹಾತ್ಮಾ**
**ವರಂ ತವೇಹಾದ್ಯ ದದಾಮಿ ಭೂಯಃ ।**
**ತವೈವ ನಾಮ್ನಾ ಭವಿತಾಽಯಮಗ್ನಿಃ**
**ಸೃಙ್ಕಾಂ ಚೇಮಾಮನೇಕರೂಪಾಂ ಗೃಹಾಣ ॥೧೬॥**

೧೬. ಸಂತೋಷಪಟ್ಟ (ಆ) ಮಹಾತ್ಮನು ಅವನನ್ನು ಕುರಿತು (ಹೀಗೆಂದು) ನುಡಿದನು. ''ನಿನಗೆ ಇಲ್ಲಿ ಈಗ ಮತ್ತೂ (ಒಂದು) ವರವನ್ನು ಕೊಡುತ್ತೇನೆ ; ಈ ಅಗ್ನಿಯು ನಿನ್ನ ಹೆಸರಿನಿಂದಲೇ (ಪ್ರಸಿದ್ಧ)ವಾಗಿರುವದು. ಅನೇಕರೂಪವಾಗಿರುವ ಈ ಸೃಂಕೆಯನ್ನು ತೆಗೆದುಕೊ.

(ಭಾಷ್ಯ)

**೨೭. ಕಥಮ್ ? ತಂ ನಚಿಕೇತಸಮ್ ಅಬ್ರವೀತ್ ಪ್ರೀಯಮಾಣಃ ಶಿಷ್ಯಸ್ಯ ಯೋಗ್ಯತಾಂ ಪಶ್ಯನ್ ಪ್ರೀಯಮಾಣಃ ಪ್ರೀತಿಮನುಭವನ್ ಮಹಾತ್ಮಾ ಅಕ್ಷುದ್ರಬುದ್ಧಿಃ । ವರಂ ತವ ಚತುರ್ಥಮ್ ಇಹ ಪ್ರೀತಿನಿಮಿತ್ತಮ್ ಅದ್ಯ ಇದಾನೀಮ್ ದದಾಮಿ ಭೂಯಃ ಪುನಃ ಪ್ರಯಚ್ಛಾಮಿ । ತವೈವ ನಚಿಕೇತಸಃ ನಾಮ್ನಾ ಅಭಿಧಾನೇನ ಪ್ರಸಿದ್ಧೋ ಭವಿತಾ ಮಯೋಚ್ಯಮಾನೋಽ-ಯಮಗ್ನಿಃ । ಕಿಂ ಚ ಸೃಙ್ಕಾಂ ಶಬ್ದವತೀಂ ರತ್ನಮಯೀಂ ಮಾಲಾಮ್ ಇಮಾಮ್ ಅನೇಕರೂಪಾಂ ವಿಚಿತ್ರಾಂ ಗೃಹಾಣ ಸ್ವೀಕುರು । ಯದ್ವಾ ಸೃಙ್ಕಾಮ್ ಅಕುತ್ಸಿತಾಂ ಗತಿಂ ಕರ್ಮಮಯೀಂ ಗೃಹಾಣ । ಅನ್ಯದಪಿ ಕರ್ಮವಿಜ್ಞಾನಮ್ ಅನೇಕಫಲಹೇತುತ್ವಾತ್ ಸ್ವೀಕುರು ಇತ್ಯರ್ಥಃ ॥**

1. ಚಯನಪ್ರಕರಣದಲ್ಲಿ ಇದನ್ನು ಹೇಳಿರುತ್ತದೆ ಎಂದು ಟೀಕೆಯಲ್ಲಿದೆ. ಈ ಉಪನಿಷತ್ತಿನ ಬ್ರಾಹ್ಮಣದಲ್ಲಿ ಇದನ್ನು ನೋಡಬೇಕಾದದ್ದು ಯುಕ್ತ. ಆದರೆ ಕಾಠಕಸಂಹಿತೆಯು ಮುದ್ರಿತವಾಗಿದೆಯಾದರೂ ಬ್ರಾಹ್ಮಣವು ಮುದ್ರಿತವಾಗಿಲ್ಲ. ಮುದ್ರಿತವಾಗಿರುವ ತೈತ್ತಿರೀಯಬ್ರಾಹ್ಮಣದಲ್ಲಿ ೧೦-೧೧-೧೨ನೆಯ ಪ್ರಶ್ನಗಳಲ್ಲಿ ಈ ವಿಚಾರವಿದೆ. ಈ ಭಾಗವನ್ನು ಕಾಠಕವೆಂದೂ ಕರೆಯುತ್ತಾರೆ. ಪೀಠಿಕೆಯನ್ನು ನೋಡಿ.

(ಭಾಷ್ಯಾರ್ಥ)

ಹೇಗೆ (ಹೇಳಿದನು) ? ಎಂದರೆ : ಸಂತೋಷಪಟ್ಟ ಎಂದರೆ ಶಿಷ್ಯನ ಯೋಗ್ಯತೆಯನ್ನು ಕಂಡು ಸಂತೋಷಪಟ್ಟ, ಪ್ರೀತಿಯನ್ನು ಅನುಭವಿಸಿದ, (ಆ) ಮಹಾತ್ಮನು ಕ್ಷುದ್ರಬುದ್ಧಿಯಿಲ್ಲದ (ಆ ಯಮನು) ಆ ನಚಿಕೇತನನ್ನು ಕುರಿತು ಹೀಗೆಂದು ನುಡಿದನು : 'ನಿನಗೆ ಇಲ್ಲಿ (ನನ್ನ) ಪ್ರೀತಿಯ ನಿಮಿತ್ತವಾಗಿ ಈಗ, ಈ ಕಾಲದಲ್ಲಿ, ಮತ್ತೂ ಇನ್ನೂ (ಒಂದು) **ನಾಲ್ಕನೆಯ**[1] ವರವನ್ನು ಕೊಡುತ್ತೇನೆ. ನನ್ನಿಂದ ಹೇಳಲ್ಪಡುವ ಈ ಅಗ್ನಿಯು ನಚಿಕೇತನೆಂಬ ನಿನ್ನ ಹೆಸರಿನಿಂದಲೇ (ಈ) ಅಭಿಧಾನದಿಂದಲೇ (ಮುಂದೆ) ಪ್ರಸಿದ್ಧವಾಗುವದು. ಮತ್ತು ಈ ಸೃಂಕೆಯನ್ನು ಎಂದರೆ (ಝಣಝಣವೆಂದು) ಶಬ್ದಮಾಡುತ್ತಿರುವ ರತ್ನಮಯವಾದ, ಅನೇಕರೂಪವಾಗಿರುವ ಎಂದರೆ ವಿಚಿತ್ರವಾಗಿರುವ, ಮಾಲೆಯನ್ನು ತೆಗೆದುಕೊ, ಸ್ವೀಕರಿಸು. ಅಥವಾ 'ಸೃಙ್ಕಾಮ್' (ಎಂದರೆ) ಕೀಳ್ತರದ್ದಲ್ಲದ ಕರ್ಮಮಯವಾದ ಗತಿಯನ್ನು[2] ತೆಗೆದುಕೊ. ಅನೇಕಫಲಗಳಿಗೆ ಕಾರಣವಾಗಿರುವದರಿಂದ (ಅನೇಕ ರೂಪವಾಗಿರುವ) ಬೇರೆಯ ಕರ್ಮದ ತಿಳಿವಳಿಕೆಯನ್ನೂ ಸ್ವೀಕರಿಸು ಎಂದರ್ಥ.

## ಕರ್ಮೋಪಾಸನೆಗಳ ಫಲ

**ತ್ರಿಣಾಚಿಕೇತಸ್ತ್ರಿಭಿರೇತ್ಯ ಸನ್ಧಿಂ**
**ತ್ರಿಕರ್ಮಕೃತ್ ತರತಿ ಜನ್ಮಮೃತ್ಯೂ ।**
**ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ**
**ನಿಚಾಯ್ಯೇಮಾಗ್ಂ ಶಾನ್ತಿಮತ್ಯನ್ತಮೇತಿ ॥ ೧೭ ॥**

೧೭. ತ್ರಿಣಾಚಿಕೇತನಾಗಿ ಮೂರರಿಂದ ಸಂಧಿಯನ್ನು ಪಡೆದು ಮೂರು ಕರ್ಮಗಳನ್ನು ಮಾಡಿದಾತನು ಜನ್ಮಮೃತ್ಯುಗಳೆರಡನ್ನೂ ದಾಟುತ್ತಾನೆ. ಬ್ರಹ್ಮಜಜ್ಞನೂ ಈಡ್ಯನೂ ಆಗಿರುವ ದೇವನನ್ನು ತಿಳಿದು ಅರಿತು ಈ ಶಾಂತಿಯನ್ನು ಅತ್ಯಂತವಾಗಿ ಹೊಂದುತ್ತಾನೆ.

(ಭಾಷ್ಯ)

೨೮. **ಪುನರಪಿ ಕರ್ಮಸ್ತುತಿಮೇವಾಹ । ತ್ರಿಣಾಚಿಕೇತಃ ತ್ರಿಃಕೃತ್ವಃ ನಾಚಿಕೇತೋಽಗ್ನಿಃ ಚಿತಃ ಯೇನ ಸಃ ತ್ರಿಣಾಚಿಕೇತಃ । ತದ್ವಿಜ್ಞಾನಃ ತದಧ್ಯಯನಃ**

1. ನಚಿಕೇತನಿಗೆ ಯಮನು ಕೊಟ್ಟ ವರಗಳೆಷ್ಟೆಂಬುದನ್ನು ಸೂ. ಭಾ. ೧-೪-೬ರಲ್ಲಿ ಚರ್ಚಿಸಿದೆ.

2. 'ಸೃಙ್ಕಾ' ಎಂಬುದಕ್ಕೆ ಗತಿ, ಮಾರ್ಗ- ಎಂದೂ ಅರ್ಥಮಾಡಬಹುದೆಂದು ಭಾವ. ಈ ಅಧ್ಯಾಯದ ೨ನೆಯ ವಲ್ಲಿಯ ೩ನೆಯ ಮಂತ್ರದ ಭಾಷ್ಯವನ್ನು ನೋಡಿರಿ.

ತದನುಷ್ಠಾನವಾನ್ ವಾ । ತ್ರಿಭಿಃ ಮಾತೃಪಿತ್ರಾಚಾರ್ಯೈಃ ಏತ್ಯ ಪ್ರಾಪ್ಯ ಸನ್ಧಿಂ ಸನ್ಧಾನಂ ಸಮ್ಬನ್ಧಮ್ । ಮಾತ್ರಾದ್ಯನುಶಾಸನಂ ಯಥಾವತ್ ಪ್ರಾಪ್ಯ ಇತ್ಯೇತತ್ । ತದ್ಧಿ ಪ್ರಾಮಾಣ್ಯಕಾರಣಂ ಶ್ರುತ್ಯನ್ತರಾದವಗಮ್ಯತೇ, 'ಯಥಾ ಮಾತೃಮಾನ್ ಪಿತೃಮಾನ್'(ಬೃ.೪-೧-೨) ಇತ್ಯಾದೇಃ । ವೇದಸ್ಮೃತಿಶಿಷ್ಟೈರ್ವಾ । ಪ್ರತ್ಯಕ್ಷಾನುಮಾನಾಗಮೈರ್ವಾ । ತೇಭ್ಯೋ ಹಿ ವಿಶುದ್ಧಿಃ ಪ್ರತ್ಯಕ್ಷಾ । ತ್ರಿಕರ್ಮಕೃತ್ ಇಜ್ಯಾಧ್ಯಯನದಾನಾನಾಂ ಕರ್ತಾ । ತರತಿ ಅತಿಕ್ರಾಮತಿ ಜನ್ಮಮೃತ್ಯೂ । ಕಿಂ ಚ ಬ್ರಹ್ಮಜಜ್ಞಮ್ ಬ್ರಹ್ಮಣೋ ಹಿರಣ್ಯಗರ್ಭಾಜ್ಜಾತೋ ಬ್ರಹ್ಮಜಃ । ಬ್ರಹ್ಮಜಶ್ಚ ಅಸೌ ಜ್ಞಶ್ಚೇತಿ ಬ್ರಹ್ಮಜಜ್ಞಃ । ಸರ್ವಜ್ಞೋ ಹ್ಯಸೌ । ತಂ ದೇವಂ ದ್ಯೋತನಾತ್, ಜ್ಞಾನಾದಿಗುಣವನ್ತಮ್। ಈಡ್ಯಮ್ ಸ್ತುತ್ಯಮ್ । ವಿದಿತ್ವಾ ಶಾಸ್ತ್ರತಃ ನಿಚಾಯ್ಯ ದೃಷ್ಟ್ವಾ ಚಾತ್ಮಭಾವೇನ ಇಮಾಂ ಸ್ವಬುದ್ಧಿಪ್ರತ್ಯಕ್ಷಾಂ ಶಾನ್ತಿಮ್ ಉಪರತಿಮ್ ಅತ್ಯನ್ತಮೇತಿ ಅತಿಶಯೇನ ಇತಿ । ವೈರಾಜಂ ಪದಂ ಜ್ಞಾನಕರ್ಮಸಮುಚ್ಚಯಾನುಷ್ಠಾನೇನ ಪ್ರಾಪ್ನೋತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತೂ ಕರ್ಮದ[1] ಸ್ತುತಿಯನ್ನೇ ಹೇಳುತ್ತಾನೆ. ತ್ರಿಣಾಚಿಕೇತನಾಗಿ ಎಂದರೆ ಮೂರುಸಲ ನಾಚಿಕೇತನೆಂಬ ಅಗ್ನಿಯನ್ನು ಚಯನಮಾಡಿದವನಾಗಿ ಅದರ ಜ್ಞಾನ, ಅದರ ಅಧ್ಯಯನ, ಅದರ ಅನುಷ್ಠಾನಮಾಡಿದವನು (ತ್ರಿಣಾಚಿಕೇತನು ಎಂದಾದರೂ ಅರ್ಥಮಾಡಬಹುದು).[2] 'ಮೂರರಿಂದ ಸಂಧಿಯನ್ನು ಪಡೆದು' (ಎಂದರೆ) ತಾಯಿ, ತಂದೆ, ಆಚಾರ್ಯಃ- ಎಂಬ ಮೂವರಿಂದ ಸಂಧಿಯನ್ನು ಎಂದರೆ ಸಂಧಾನವನ್ನು, ಸಂಬಂಧವನ್ನು ಪಡೆದು ಹೊಂದಿ ; ತಾಯಿಯೇ ಮುಂತಾದವರ ಉಪದೇಶವನ್ನು ಸರಿಯಾಗಿ ಪಡೆದು ಎಂದರ್ಥ. (ಆ ತಾಯಿ ಮುಂತಾದವರ ಉಪದೇಶವೇ) ಪ್ರಾಮಾಣ್ಯಕ್ಕೆ[3] ಕಾರಣವಾಗುವದೆಂದು 'ಹೇಗೆ ತಾಯಿಯ ಉಪದೇಶವುಳ್ಳವನೂ ತಂದೆಯ ಉಪದೇಶವುಳ್ಳವನೂ (ಆಚಾರ್ಯರ ಉಪದೇಶವುಳ್ಳವನೂ ಹೇಳಿಯಾನೋ ಹಾಗೆಯೇ ಹೇಳಿದ್ದಾನೆ)' (ಬೃ.೪-೧-೨) ಎಂಬ ಬೇರೊಂದು ಶ್ರುತಿ

1. ನಾಚಿಕೇತಾಗ್ನಿಯ ಚಯನ ಮತ್ತು ಉಪಾಸನೆ - ಇವೆರಡೂ ಕರ್ಮಗಳೇ.

2. ಅಗ್ನಿಯನ್ನು ಮೂರು ಸಲ ಚಯನಮಾಡಿದವನು ಎಂಬುದಕ್ಕಿಂತ ಅದರ ವಿಷಯವನ್ನು ಅರಿತುಕೊಂಡು ಅಧ್ಯಯನಪೂರ್ವಕವಾಗಿ ಕರ್ಮಮಾಡಿದವನು ಎಂಬ ವ್ಯಾಖ್ಯಾನವು ಮೂರನ್ನೂ ಮಾಡಿದವನು ಎಂಬುದಕ್ಕೆ ಹೆಚ್ಚು ಒಪ್ಪುತ್ತದೆಂಬ ಭಾವ. ಇಲ್ಲಿ 'ತದ್ವಿಜ್ಞಾನವಾನ್' ಎಂದಿಷ್ಟೇ ಇರುವ (ವಾ ॥) ಪಾಠಕ್ಕಿಂತ (ಆ ॥) ಪಾಠವೇ ಉತ್ತಮ. 'ತದ್ವಿಜ್ಞಾನ ತದಧ್ಯಯನ ತದನುಷ್ಠಾನವಾನ್ ವಾ ಎಂದಿದ್ದ ಮತ್ತೂ ಚೆನ್ನಾಗಿರುತ್ತಿತ್ತು.

3. ತಾಯಿಯಿಂದ ತಿಳಿದದ್ದು ತಂದೆಯ ಉಪದೇಶದಿಂದ ಗಟ್ಟಿಯಾಗಿರುವದು, ಆಚಾರ್ಯನ ಉಪದೇಶದಿಂದ ನಿಶ್ಚಿತವಾಗುವದು.

ಯಿಂದ ಗೊತ್ತಾಗಿರುತ್ತದೆಯಲ್ಲವೆ ? ಅಥವಾ ವೇದ, ಸ್ಮೃತಿ, ಶಿಷ್ಟರು - ಇವರಿಂದ ಎಂದಾಗಲಿ, ಪ್ರತ್ಯಕ್ಷ, ಅನುಮಾನ, ಆಗಮ - ಇವುಗಳಿಂದ ಎಂದಾಗಲಿ (ವ್ಯಾಖ್ಯಾನ ಮಾಡಬಹುದು).[1] ಏಕೆಂದರೆ ಇವುಗಳಿಂದ (ತತ್ತ್ವದ) ಶುದ್ಧಿಯಾಗುವದೆಂಬುದು ಪ್ರತ್ಯಕ್ಷವಾಗಿರುತದೆ.[2] ಮೂರು ಕರ್ಮಗಳನ್ನು ಮಾಡಿದವನು ಎಂದರೆ ಯಜ್ಞ, ಅಧ್ಯಯನ, ದಾನ - ಇವುಗಳನ್ನು ಮಾಡಿದವನು (ಇಂಥವನು) ಹುಟ್ಟುಸಾವುಗಳೆರಡನ್ನೂ ದಾಟುತ್ತಾನೆ, ಎಂದರೆ ಮೀರುತ್ತಾನೆ. ಮತ್ತು ಬ್ರಹ್ಮಜಜ್ಞನೂ- ಬ್ರಹ್ಮನಿಂದ ಎಂದರೆ **ಹಿರಣ್ಯಗರ್ಭ**ನಿಂದ ಹುಟ್ಟಿದವನು[3] ಬ್ರಹ್ಮಜನು, ಬ್ರಹ್ಮಜನೂ ಜ್ಞಾತೃವೂ ಆಗಿರುವದರಿಂದ ಬ್ರಹ್ಮಜಜ್ಞನು. ಅವನು ಸರ್ವಜ್ಞನಲ್ಲವೆ[4] ? (ಆದ್ದರಿಂದ ಜ್ಞನು ಎಂದು ಕರೆದದ್ದು ಸರಿಯೇ). ಈಡ್ಯನೂ ಎಂದರೆ ಸ್ತುತ್ಯನಾಗಿರುವವನೂ ಆದ ಆ ದೇವನನ್ನು ಎಂದರೆ ಜ್ಞಾನವೇ ಮುಂತಾದ ಗುಣಗಳಿಂದ[5] ಕೂಡಿ ಹೊಳೆಯುತ್ತಿರುವ (ಈ ಅಗ್ನಿಯನ್ನು) ಶಾಸ್ತ್ರದಿಂದ ತಿಳಿದುಕೊಂಡು ಅರಿತುಕೊಂಡು ಎಂದರೆ ತನ್ನ ಸ್ವರೂಪವೆಂದು ಕಂಡುಕೊಂಡು[6] ಈ ತನ್ನ ಮನಸ್ಸಿಗೆ ಪ್ರತ್ಯಕ್ಷವಾಗಿರುವ[7] ಶಾಂತಿಯನ್ನು ಎಂದರೆ ಉಪರತಿಯನ್ನು ಅತ್ಯಂತವಾಗಿ ಹೆಚ್ಚಾಗಿ ಹೊಂದುತ್ತಾನೆ. ಜ್ಞಾನಕರ್ಮಗಳೆರಡನ್ನೂ ಸಮುಚ್ಚಯಮಾಡಿಕೊಂಡು ಅನುಷ್ಠಾನಮಾಡುವದರಿಂದ ವಿರಾಜನ ಪದವಿಯನ್ನು ಪಡೆಯುತ್ತಾನೆ ಎಂದರ್ಥ.

(ಭಾಷ್ಯ)

**೨೯. ಇದಾನೀಮಗ್ನಿವಿಜ್ಞಾನಚಯನಫಲಮ್ ಉಪಸಂಹರತಿ, ಪ್ರಕರಣಂ ಚ-**

1. 'ವೇದೋಽಖಿಲಂ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಮ್' (ಮನು. ೨-೬) 'ಪ್ರತ್ಯಕ್ಷಂ ಚಾನುಮಾನಂ ಚ ಶಾಸ್ತ್ರಂ ಚ ವಿವಿಧಾಗಮಮ್ । ತ್ರಯಂ ಸುವಿದಿತಂ ಕಾರ್ಯಂ ಧರ್ಮಶುದ್ಧಿಮಭೀಪ್ಸತಾ'(ಮನು. ೧೨-೧೦೫) ಎಂಬ ಸ್ಮೃತಿಯ ಸೂಚನೆ.

2. ಅನುಭವಸಿದ್ಧವಾಗಿದ್ದುದೆ.

3. ಬೃ. ಭಾ. ೧-೨-೨ ನೋಡಿರಿ.

4. ಹಿರಣ್ಯಗರ್ಭನು ಸರ್ವಜ್ಞನು ಅವನ ಮಗನಾದ ವಿರಾಟ್ಪುರುಷನೂ ಹಾಗೆಯೇ.

5. ಜ್ಞಾನ, ವೈರಾಗ್ಯ, ಐಶ್ವರ್ಯ, ಧರ್ಮ- ಎಂಬ ಗುಣಗಳು ನಿರತಿಶಯವಾಗಿ ಸಹಜವಾಗಿಯೇ ವಿರಾಟ್ಪುರುಷನಲ್ಲಿರುವವೆಂದು ಸ್ಮೃತಿ.

6. ವಿರಾಟ್ಪುರುಷನೇ ನಾನು ಎಂದು ಸಾಕ್ಷಾತ್ಕಾರಮಾಡಿಕೊಂಡು ; ಉಪಾಸನೆಗೆ ಸಾಕ್ಷಾತ್ಕಾರವಾಗುವದೂ ಅವಶ್ಯವೆಂಬುದಕ್ಕೆ ಸೂ. ಭಾ. ೩-೩-೫೯ ನೋಡಿರಿ.

7. ಸಾಕ್ಷಾತ್ಕಾರದಿಂದ ಮೊದಲೇ ಶಾಂತಿಯು ದೊರಕುವದು ಪ್ರತ್ಯಕ್ಷವಾಗಿ ತಿಳಿಯಬರುತ್ತದೆ ; ಸತ್ತಬಳಿಕ ಕಲ್ಪಾಂತದವರೆಗೆ ಶಾಂತಿಯು ನಿಂತಿರುತ್ತದೆ.

(ಭಾಷ್ಯಾರ್ಥ)

ಈಗ ಅಗ್ನಿಯ ವಿಷಯವಾದ ಜ್ಞಾನ ಮತ್ತು ಚಯನ[1] ಇವುಗಳ ಫಲವನ್ನೂ (ಈ) ಪ್ರಕರಣವನ್ನೂ[2] ಉಪಸಂಹಾರಮಾಡುತ್ತಾನೆ :-

ತ್ರಿಣಾಚಿಕೇತಸ್ತ್ರಯಮೇತದ್ ವಿದಿತ್ವಾ
ಯ ಏವಂ ವಿದ್ವಾಗ್ಂಶ್ಚಿನುತೇ ನಾಚಿಕೇತಮ್
ಸ ಮೃತ್ಯುಪಾಶಾನ್ ಪುರತಃ ಪ್ರಣೋದ್ಯ
ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥೧೮॥

೧೮. ತ್ರಿಣಾಚಿಕೇತನಾಗಿ ಈ ಮೂರನ್ನೂ ತಿಳಿದುಕೊಂಡು ಯಾವನು ಈ ರೀತಿಯಾಗಿ ತಿಳಿದು ನಾಚಿಕೇತಾಗ್ನಿಯನ್ನು ಚಯನಮಾಡುತ್ತಾನೋ ಅವನು ಮೃತ್ಯುಪಾಶಗಳನ್ನು ಮೊದಲು ತೊಲಗಿಸಿಕೊಂಡು ಶೋಕಗಳನ್ನು ಅತಿಕ್ರಮಿಸಿ ಸ್ವರ್ಗ ಲೋಕದಲ್ಲಿ ಸುಖಪಡುವನು.

(ಭಾಷ್ಯ)

೩೦. ತ್ರಿಣಾಚಿಕೇತಃ ತ್ರಯಂ ಯಥೋಕ್ತಮ್ 'ಯಾ ಇಷ್ಟಕಾ ಯಾವತೀರ್ವಾ ಯಥಾ ವಾ' ಇತ್ಯೇತದ್ ವಿದಿತ್ವಾ ಅವಗಮ್ಯ, ಯಶ್ಚ ಏವಮ್ ಆತ್ಮರೂಪೇಣ ಅಗ್ನಿಂ ವಿದ್ವಾನ್, ಚಿನುತೇ ನಿರ್ವರ್ತಯತಿ ನಾಚಿಕೇತಮಗ್ನಿಂ ಕ್ರತುಮ್ । ಸಃ ಮೃತ್ಯುಪಾಶಾನ್ ಅಧರ್ಮಾಜ್ಞಾನರಾಗದ್ವೇಷಾದಿಲಕ್ಷಣಾನ್ ಪುರತಃ ಅಗ್ರತಃ ಪೂರ್ವಮೇವ ಶರೀರಪಾತಾತ್ ಇತ್ಯರ್ಥಃ । ಪ್ರಣೋದ್ಯ ಅಪಹಾಯ, ಶೋಕಾತಿಗಃ ಮಾನಸೈರ್ದುಃಖೈರ್ವರ್ಜಿತಃ ಇತ್ಯೇತತ್ । ಮೋದತೇ ಸ್ವರ್ಗಲೋಕೇ ವೈರಾಜೇ ವಿರಾಡಾತ್ಮಸ್ವರೂಪ ಪ್ರತಿಪತ್ತ್ಯಾ ॥

(ಭಾಷ್ಯಾರ್ಥ)

ತ್ರಿಣಾಚಿಕೇತನಾಗಿ ಹಿಂದೆ[3] ಹೇಳಿರುವಂತೆ 'ಎಂಥ ಇಟ್ಟಿಗೆಗಳು, ಎಷ್ಟು ಹೇಗೆ' ಎಂಬುದನ್ನು ತಿಳಿದುಕೊಂಡು, ಗೊತ್ತುಮಾಡಿಕೊಂಡು ಮತ್ತು ಯಾವನು ಈ ರೀತಿಯಾಗಿ ಎಂದರೆ ತನ್ನ ಸ್ವರೂಪದಿಂದಲೇ ಅಗ್ನಿಯನ್ನು ತಿಳಿದು[4] ನಾಚಿಕೇತನೆಂಬ

ಬ್ರಾಹ್ಮಣದಲಿ ಹೇಳಿರುವ ಅಗ್ನಿ ಚಯನರೂಪವಾದ ಕರ್ಮ, ವಿರಾಡುಪಾಸನೆ- ಇವುಗಳನ್ನು ಕೂಡಿಸಿ ಅನುಷ್ಠಾನಮಾಡಿದ್ದು. 2. ಅಗ್ನಿವಿದ್ಯೆಯ ಪ್ರಕರಣವನ್ನೂ.
3. ೧೫ನೆಯ ಮಂತ್ರದಲ್ಲಿ 4. ವರ್ಷಕ್ಕೆ ಮುನ್ನೂರು ಅರವತ್ತು ದಿವಸ; ಹಗಲುರಾತ್ರಿಗಳನ್ನು ವಿಂಗಡಿಸಿದರೆ ಏಳುನೂರ ಇಪ್ಪತ್ತು ಇಟ್ಟಿಗೆಗಳು ಅಗ್ನಿಚಯನಕ್ಕೆ ಬೇಕಾಗುವವು. ಹಗಲುರಾತ್ರೆಗಳೆಂಬ ಅಷ್ಟು ಇಟ್ಟಿಗೆಗಳಿಂದ ಚಯನಮಾಡಿರುವ ನಚಿಕೇತಾಗ್ನಿಯು ನಾನು ಎಂದು ಧ್ಯಾನಮಾಡಿ ಸಾಕ್ಷಾತ್ಕಾರಮಾಡಿದವನಿಗೆ ಈ ಫಲ.

ಅಗ್ನಿಯನ್ನು ಎಂದರೆ ಕ್ರತುವನ್ನು ಚಯನಮಾಡುತ್ತಾನೋ ಅನುಷ್ಠಾನ ಮಾಡುತ್ತಾನೋ ಅವನು **ಮೃತ್ಯುಪಾಶಗಳನ್ನು** ಎಂದರೆ ಅಧರ್ಮ, ಅಜ್ಞಾನ, ರಾಗ, ದ್ವೇಷ- ಮುಂತಾದ ರೂಪದ (ಮೃತ್ಯುವಿನ ಹಗ್ಗದ ಕುಣಿಕೆಗಳನ್ನು) ಮೊದಲು ಎಂದರೆ ಶರೀರವು ಬಿದ್ದುಕೊಂಡು ಹೋಗುವ ಮುಂಚೆಯೇ[1] ತೊಲಗಿಸಿಕೊಂಡು ಬಿಡಿಸಿಕೊಂಡು ಶೋಕಗಳನು ಅತಿಕ್ರಮಿಸಿ ಎಂದರೆ ಮನಸ್ಸಿನ ದುಃಖಗಳು ಯಾವವೂ ಇಲ್ಲದೆ ಎಂದರ್ಥ. ಸ್ವರ್ಗಲೋಕದಲ್ಲಿ **ವಿರಾಜನ ಲೋಕದಲ್ಲಿ**[2] **ವಿರಾಡಾತ್ಮನ ಸ್ವರೂಪವನ್ನೇ ಪಡೆದುಕೊಂಡು**[3] ಸುಖಪಡುವನು.

**ಏಷ ತೇಽಗ್ನಿರ್ನಚಿಕೇತಃ ಸ್ವರ್ಗ್ಯೋ**
**ಯಮವೃಣೀಥಾ ದ್ವಿತೀಯೇನ ವರೇಣ ।**
**ಏತಮಗ್ನಿಂ ತವೈವ ಪ್ರವಕ್ಷ್ಯನ್ತಿ ಜನಾಸ-**
**ಸ್ತೃತೀಯಂ ವರಂ ನಚಿಕೇತೋ ವೃಣೀಷ್ವ ॥೧೯॥**

೧೯. ನಚಿಕೇತನೆ, ಯಾವದನ್ನು ಎರಡನೆಯ ವರದಿಂದ ಕೇಳಿದ್ದೆಯೋ ಇದೇ ನಿನಗೆ (ಕೊಟ್ಟಿರುವ ವರವಾದ) (ಆ) ಸ್ವರ್ಗ್ಯವಾದ ಅಗ್ನಿಯು. ಈ ಅಗ್ನಿಯನ್ನು ಜನರು ನಿನ್ನ (ಹೆಸರಿ)ನಿಂದಲೇ ಮುಂದೆ ಕರೆಯುವರು. ನಚಿಕೇತನೆ, ಮೂರನೆಯ ವರವನ್ನು ಕೇಳಿಕೊ.

(ಭಾಷ್ಯ)

**೩೧. ಏಷಃ ತೇ ತುಭ್ಯಮ್ ಅಗ್ನಿಃ ವರಃ ಹೇ ನಚಿಕೇತಃ ಸ್ವರ್ಗ್ಯಃ ಸ್ವರ್ಗಸಾಧನಃ । ಯಮ್ ಅಗ್ನಿಂ ವರಮ್ ಅವೃಣೀಥಾಃ ಪ್ರಾರ್ಥಿತವಾನಸಿ ದ್ವಿತೀಯೇನ ವರೇಣ ಸೋಽಗ್ನಿರ್ವರೋ ದತ್ತಃ ಇತ್ಯುಕ್ತೋಪಸಂಹಾರಃ । ಕಿಂ ಚ ಏತಮ್ ಅಗ್ನಿಂ ತವೈವ ನಾಮ್ನಾ ಪ್ರವಕ್ಷ್ಯನ್ತಿ ಜನಾಸಃ ಜನಾ ಇತ್ಯೇತತ್ । ಏಷ ವರೋ ದತ್ತೋ ಮಯಾ ಚತುರ್ಥಸ್ತುಷ್ಟೇನ । ತೃತೀಯಂ ವರಂ ನಚಿಕೇತಃ ವೃಣೀಷ್ವ । ತಸ್ಮಿನ್ ಹಿ ಅದತ್ತೇ ಋಣವಾನೇವಾಹಮ್ ಇತ್ಯಭಿಪ್ರಾಯಃ ॥**

1. ಅಧರ್ಮಾದಿಗಳು ಉಪಾಸಕನಿಗೆ ಶರೀರವು ಇರುವಾಗಲೇ ಹೋಗಿಬಿಟ್ಟಿರುವವು.

2. ಈ ಲೋಕವು ಸೂರ್ಯಮಂಡಲದ ಆಚೆ ಇರುವದೆಂದು ತೈ. ಬ್ರಾ. ಪ್ರ. ೧೧-೭-೪ರಲ್ಲಿದೆ.

3. ಯಾವ ದೇವತೆಯನ್ನು ಉಪಾಸನೆಮಾಡುವನೋ ಆ ದೇವತೆಯ ಸಾಕ್ಷಾತ್ಕಾರವನ್ನು ಹೊಂದಿ ಸತ್ತಬಳಿಕ ಅದರ ಸಾಯುಜ್ಯವನ್ನು ಹೊಂದುವರು ಎಂಬುದು ಶ್ರುತಿವಾದವು. ಬೃ. ಭಾ. ೪-೧-೨ ನೋಡಿರಿ.

(ಭಾಷ್ಯಾರ್ಥ)

ಎಲೈ ನಚಿಕೇತನೆ, ಇದು ನಿನಗೆ (ಕೊಟ್ಟಿರುವ) ಅಗ್ನಿಯೆಂಬ ಸ್ವರ್ಗ್ಯವಾದ ಸ್ವರ್ಗಕ್ಕೆ ಸಾಧನವಾದ ವರವು. ಯಾವ ಅಗ್ನಿ(ವಿದ್ಯೆ) ಎಂಬ ವರವನ್ನು ಎರಡನೆಯ ವರವಾಗಿ ಕೇಳಿದ್ದೆಯೋ ಪ್ರಾರ್ಥಿಸಿಕೊಂಡಿದ್ದೆಯೋ ಆ ಅಗ್ನಿ(ವಿದ್ಯೆ)ಯೆಂಬ ವರವನ್ನು ಕೊಟ್ಟಿದ್ದೇನೆ- ಎಂದು ಹಿಂದೆ ಹೇಳಿದ್ದನ್ನು ಉಪಸಂಹಾರಮಾಡಿರುತ್ತದೆ.[1] ಮತ್ತು ಈ ಅಗ್ನಿಯನ್ನು 'ಜನಾಸಃ' (ಜನಾಃ) ಜನರು ಎಂದರ್ಥ; ನಿನ್ನ ಹೆಸರಿನಿಂದಲೇ (ಇದನ್ನು) ಕರೆಯುವರು. ನಾನು ಸಂತೋಷಪಟ್ಟು ಕೊಟ್ಟ ನಾಲ್ಕನೆಯ ವರವಿದು.[2] ನಚಿಕೇತನೆ, ಮೂರನೆಯ ವರವನ್ನು[3] ಕೇಳಿಕೊ ; ಏಕೆಂದರೆ ಅದನ್ನು ಕೊಡದೆ ಇದ್ದರೆ ನಾನು (ನಿನಗೆ) ಇನ್ನೂ ಋಣಿಯಾಗಿಯೇ (ಇರುವೆನು) ಎಂದಭಿಪ್ರಾಯ.

## ಮೂರನೆಯ ವರ : ಆತ್ಮವಿದ್ಯೆ

(ಭಾಷ್ಯ)

೩೨. ಏತಾವದ್ ಹಿ ಅತಿಕ್ರಾನ್ತೇನ ವಿಧಿಪ್ರತಿಷೇಧಾರ್ಥೇನ ಮನ್ತ್ರಬ್ರಾಹ್ಮಣೇನ ಅವಗನ್ತವ್ಯಂ ಯದ್ ವರದ್ವಯಸೂಚಿತಂ ವಸ್ತು, ನಾತ್ಮತತ್ತ್ವವಿಷಯಯಾಥಾತ್ಮ್ಯವಿಜ್ಞಾನಮ್ । ಅತೋ ವಿಧಿಪ್ರತಿಷೇಧಾರ್ಥವಿಷಯಸ್ಯ ಆತ್ಮನಿ ಕ್ರಿಯಾಕಾರಕಫಲಾಧ್ಯಾರೋಪಣಲಕ್ಷಣಸ್ಯ ಸ್ವಾಭಾವಿಕಸ್ಯಾಜ್ಞಾನಸ್ಯ ಸಂಸಾರಬೀಜಸ್ಯ ನಿವೃತ್ತ್ಯರ್ಥಂ ತದ್ವಿಪರೀತಬ್ರಹ್ಮಾತ್ಮೈಕತ್ವವಿಜ್ಞಾನಂ ಕ್ರಿಯಾಕಾರಕಫಲಾಧ್ಯಾರೋಪಣ[4] ಶೂನ್ಯಮ್ ಆತ್ಯನ್ತಿಕನಿಶ್ಶ್ರೇಯಸಪ್ರಯೋಜನಂ ವಕ್ತವ್ಯಮ್ ಇತ್ಯುತ್ತರೋ ಗ್ರನ್ಥ ಆರಭ್ಯತೇ । ತಮೇತಮ್ ಅರ್ಥಂ ದ್ವಿತೀಯವರಪ್ರಾಪ್ತ್ಯಾಪ್ಯಕೃತಾರ್ಥತ್ವಂ ತೃತೀಯವರಗೋಚರಮ್ ಆತ್ಮಜ್ಞಾನಮನ್ತರೇಣ ಇತ್ಯಾಖ್ಯಾಯಿಕಯಾ ಪ್ರಪಞ್ಚಯತಿ । ಯತಃ ಪೂರ್ವಸ್ಮಾತ್ ಕರ್ಮಗೋಚರಾತ್, ಸಾಧ್ಯಸಾಧನಲಕ್ಷಣಾತ್, ಅನಿತ್ಯಾತ್ ವಿರಕ್ತಸ್ಯ ಆತ್ಮಜ್ಞಾನೇऽಧಿಕಾರಃ ಇತಿ ತನ್ನಿನ್ದಾರ್ಥಂ ಪುತ್ರಾದ್ಯುಪನ್ಯಾಸೇನ ಪ್ರಲೋಭನಂ ಕ್ರಿಯತೇ ॥

ನಚಿಕೇತಾ ಉವಾಚ 'ತೃತೀಯಂ ವರಂ ನಚಿಕೇತೋ ವೃಣೀಷ್ವ' ಇತ್ಯುಕ್ತಃ ಸನ್-

(ಭಾಷ್ಯಾರ್ಥ)

ವರಗಳೆರಡರಿಂದ ಸೂಚಿತವಾದ ವಸ್ತು ಯಾವುದಿದೆಯೋ ಅದಿಷ್ಟೇ ವಿಧಿ ಪ್ರತಿಷೇಧ- ಈ ಎರಡನ್ನೂ ಹೇಳುವದಕ್ಕೆ ಬಂದಿರುವ ಹಿಂದಿನ ಮಂತ್ರಬ್ರಾಹ್ಮಣ

1. ಹೊಸದೇನನ್ನೂ ಹೇಳಿಲ್ಲ. 2. ಆದದರಿಂದ ನೀನು ಕೇಳಿಕೊಂಡಿರುವ ಮೂರು ವರಗಳಲ್ಲಿ ಇದು ಸೇರಿಲ್ಲ. 3. ಈ ವರದ ವಿಚಾರವು ಬ್ರಾಹ್ಮಣದಲ್ಲಿಲ್ಲ; ಪೀಠಿಕೆಯನ್ನು ನೋಡಿರಿ. 4. ಇಲ್ಲಿ 'ಲಕ್ಷಣ' ಎಂಬ ಮಾತು (ಆ ॥ ಕಾ ॥) ಪಾಠದಲ್ಲಿ ಹೆಚ್ಚಾಗಿ ಬಿದ್ದಿದೆ.

ರೂಪವಾದ (ಗ್ರಂಥದಿಂದ) ತಿಳಿದುಕೊಳ್ಳಬೇಕಾದದ್ದು ; (ಇಷ್ಟೇ ಹೊರತು) ಆತ್ಮತತ್ತ್ವದ ವಿಷಯದ ಯಾಥಾತ್ಮ್ಯಜ್ಞಾನವು (ಅದರಿಂದ ಗೊತ್ತಾಗುವ)ದಿಲ್ಲ. ಆದ್ದರಿಂದ ವಿಧಿ, ಪ್ರತಿಷೇಧ - ಇವುಗಳ ಅರ್ಥಗಳ[1] ವಿಷಯವಾಗಿರುವ, ಆತ್ಮನಲ್ಲಿ ಕ್ರಿಯಾಕಾರಕಫಲಗಳನ್ನು ಹುಟ್ಟುಗಟ್ಟುವದೆಂಬ - ಸಂಸಾರಬೀಜವಾಗಿ ಯೂ (ಜೀವರಿಗೆ) ಸ್ವಾಭಾವಿಕವಾಗಿಯೂ ಇರುವ- ಅಜ್ಞಾನವನ್ನು ಹೋಗಲಾಡಿಸುವದಕ್ಕಾಗಿ ಇದಕ್ಕೆ ವಿರುದ್ಧವಾಗಿರುವ ಕ್ರಿಯಾಕಾರಕಫಲಗಳ ಹುಟ್ಟುಗಟ್ಟುವದೆಂಬುದಿಲ್ಲದ ಆತ್ಯಂತಿಕವಾದ ಮುಕ್ತಿಯೆಂಬ ಪ್ರಯೋಜನವನ್ನು ಕೊಡುವ ಬ್ರಹ್ಮಾತ್ಮೈಕತ್ವದ[2] ತಿಳಿವಳಿಕೆಯನ್ನು ಹೇಳಬೇಕೆಂದು ಮುಂದಿನ ಗ್ರಂಥವನ್ನು ಆರಂಭಿಸಿರುತ್ತದೆ. ಮೂರನೆಯ ವರಕ್ಕೆ ವಿಷಯವಾದ ಆತ್ಮಜ್ಞಾನವಿಲ್ಲದೆ ಎರಡನೆಯ ವರವನ್ನು ಪಡೆದಿದ್ದರೂ ಕೃತಕೃತ್ಯತೆಯಾಗಲಿಲ್ಲ ಎಂದು (ಮುಂದಿನ) ಕಥೆಯಿಂದ ಆ ಈ ವಿಷಯವನ್ನು ವಿವರಿಸಿರುತ್ತದೆ. (ಅದು) ಹೇಗೆ (ಗೊತ್ತೆ)ಂದರೆ ಹಿಂದೆ ಹೇಳಿದ ಕರ್ಮಕ್ಕೆ ವಿಷಯವಾದ ಸಾಧ್ಯಸಾಧನರೂಪವಾದ ಅನಿತ್ಯವಾಗಿರುವದಕ್ಕೆ[3] ಬೇಸತ್ತಿರುವವನಿಗೆ ಆತ್ಮಜ್ಞಾನದಲ್ಲಿ ಅಧಿಕಾರವು- ಎಂದು ಅದನ್ನು ನಿಂದಿಸುವದಕ್ಕಾಗಿ ಪುತ್ರಾದಿಗಳನ್ನು ಹೇಳಿ (ನಚಿಕೇತನಿಗೆ) ಆಶೆಯನ್ನು ತೋರಿಸಿರುತ್ತದೆ[4].

'ನಚಿಕೇತನೆ, ಮೂರನೆಯ ವರವನ್ನು ಕೇಳಿಕೊ' ಎಂದು (ಯಮನು) ಹೇಳಲಾಗಿ ನಚಿಕೇತನು ನುಡಿದದ್ದೇನೆಂದರೆ :-

**ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ**
**ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ ।**
**ಏತದ್ವಿದ್ಯಾಮನುಶಿಷ್ಟಸ್ತ್ವಯಾಹಂ**
**ವರಾಣಾಮೇಷ ವರಸ್ತೃತೀಯಃ** ॥ ೨೦ ॥

1. ಪ್ರವೃತ್ತಿನಿವೃತ್ತಿಗಳ.

2. ನಮ್ಮಗಳೆಲ್ಲರ ಆತ್ಮನು ಅಸಂಸಾರಿಯಾದ ಬ್ರಹ್ಮವು ; ಆ ಬ್ರಹ್ಮವು ಒಂದೇ ಎಂಬ ತಿಳಿವಳಿಕೆ.

3. ಪುತ್ರ, ಕರ್ಮ, ಉಪಾಸನೆ - ಎಂಬ ಸಾಧನಗಳು, ಅವುಗಳಿಗೆ ಸಿಕ್ಕುವ ಮನುಷ್ಯಲೋಕಜಯ, ಪಿತೃಲೋಕಜಯ, ದೇವಲೋಕಜಯ- ಎಂಬ ಸಾಧ್ಯಗಳು, ಬೃ. ಭಾ. ೧-೫-೧೭, ೩-೫-೧.

4. ಪುತ್ರಾದಿಫಲಗಳು ಹಿಂದೆ ಹೇಳಿದ ಕರ್ಮಕಾಂಡದ ಫಲಗಳು. ಇವುಗಳನ್ನು ಕೊಡುತ್ತೇನೆಂದರೂ ನಚಿಕೇತನು ಬೇಡವೆಂದಿರುತ್ತಾನೆ ; ಆತ್ಮಜ್ಞಾನವನ್ನೇ ಕೇಳಿರುತ್ತಾನೆ. ಆದ್ದರಿಂದ ಆತ್ಮಜ್ಞಾನವಿಲ್ಲದೆ ಅವನು ಕೃತಕೃತ್ಯನಾಗಲಿಲ್ಲವೆಂದು ನಿಶ್ಚಯವಾಯಿತು.

೨೦. ಮನುಷ್ಯನು ಸತ್ತಮೇಲೆ ಇರುತ್ತಾನೆಂದು ಕೆಲವರು, ಇವನು ಇರುವದಿಲ್ಲವೆಂದು ಕೆಲವರು - ಹೀಗೆ ಈ ಸಂಶಯವುಂಟಷ್ಟೆ. ನಿನ್ನಿಂದ ಅನುಶಿಷ್ಟನಾಗಿ ನಾನು ಇದನ್ನು ತಿಳಿಯಲಿಚ್ಛಿಸುವೆನು. ವರಗಳಲ್ಲಿ ಈ ವರವೇ ಮೂರನೆಯದು.

(ಭಾಷ್ಯ)

೩೩. ಯೇಯಂ ವಿಚಿಕಿತ್ಸಾ ಸಂಶಯಃ ಪ್ರೇತೇ ಮೃತೇ ಮನುಷ್ಯೇ ಅಸ್ತೀತ್ಯೇಕೇ 'ಅಸ್ತಿ ಶರೀರೇನ್ದ್ರಿಯಮನೋಬುದ್ಧಿವ್ಯತಿರಿಕ್ತೋ ದೇಹಾನ್ತರಸಮ್ಬನ್ಧ್ಯಾತ್ಮಾ'ಇತಿ ಏಕೇ । ನಾಯಮಸ್ತೀತಿ ಚೈಕೇ "ನಾಯಮ್ ಏವಂವಿಧಃ ಅಸ್ತಿ" ಇತಿ ಚ ಏಕೇ । ಅತಶ್ಚ ಅಸ್ಮಾಕಂ ನ ಪ್ರತ್ಯಕ್ಷೇಣ ನಾಪ್ಯನುಮಾನೇನ ನಿರ್ಣಯವಿಜ್ಞಾನಮ್, ಏತದ್ವಿಜ್ಞಾನಾಧೀನೋ ಹಿ ಪರಃ ಪುರುಷಾರ್ಥ ಇತ್ಯತಃ ಏತದ್ವಿದ್ಯಾಂ ವಿಜಾನೀಯಾಮ್ ಅಹಮ್ ಅನುಶಿಷ್ಟಃ ಜ್ಞಾಪಿತಃ ತ್ವಯಾ । ವರಾಣಾಮೇಷ ವರಸ್ತೃತೀಯಃ ಅವಶಿಷ್ಟಃ ॥

(ಭಾಷ್ಯಾರ್ಥ)

(ಈ ಲೋಕವನ್ನು) ಬಿಟ್ಟುಹೋದ, ಸತ್ತ, ಮನುಷ್ಯನ ವಿಷಯದಲ್ಲಿ ಇರುತ್ತಾನೆಂದು ಕೆಲವರು ; 'ಶರೀರ, ಇಂದ್ರಿಯ, ಮನಸ್ಸು, ಬುದ್ಧಿ - ಇವುಗಳಿಗಿಂತ ಬೇರೆಯಾಗಿ ಮತ್ತೊಂದು ದೇಹವನ್ನು ಸೇರುವ ಆತ್ಮನು ಇರುತ್ತಾನೆ' ಎಂದು ಕೆಲವರು ; ಮತ್ತು ಇವನು ಇರುವದಿಲ್ಲ ಎಂದು ಕೆಲವರು ; ಇವನು ಎಂದರೆ "ಇಂಥ (ಆತ್ಮನು) ಇರುವದಿಲ್ಲ" ಎಂದು ಕೆಲವರು[1] - ಹೀಗೆ ವಿಚಿಕಿತ್ಸೆ ಎಂದರೆ ಸಂಶಯವು ಉಂಟಷ್ಟೆ, ಹೀಗಿರುವದರಿಂದ[2] **ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ನಮಗೆ ಈ (ವಿಷಯದಲ್ಲಿ) ನಿರ್ಣಯಜ್ಞಾನವಿರುವದಿಲ್ಲ.** ಇದನ್ನರಿತುಕೊಳ್ಳುವದನ್ನೇ ಪರಮಪುರುಷಾರ್ಥದ (ಪ್ರಾಪ್ತಿಯು)[3] ಅವಲಂಬಿಸಿರುವದು. ಆದ್ದರಿಂದ

---

1. ದೇಹಾಂತರವನ್ನು ಪಡೆಯುವ ಆತ್ಮನೊಬ್ಬನು ಇದ್ದಾನೆ ಎಂದು ಮೀಮಾಂಸಕರೆನ್ನುವರು, ಇಲ್ಲವೆಂದು ಚಾರ್ವಾಕರ ಮತ.

2. ಸಂಶಯವಿರುವದರಿಂದ ಎಂದರ್ಥ. ಪ್ರತ್ಯಕ್ಷವಾಗಿ ನಿರ್ಣಯವಾಗಿದ್ದರೆ ಸಂಶಯವಾಗಲಾರದು. ಆದ್ದರಿಂದ ಪ್ರತ್ಯಕ್ಷದಿಂದ ಆತ್ಮಸ್ವರೂಪವನ್ನು ನಿರ್ಣಯಿಸುವದಕ್ಕೆ ಆಗುವದಿಲ್ಲ. ಆತ್ಮನ ಹೆಗ್ಗುರುತು ಯಾವದೂ ಇಲ್ಲದ್ದರಿಂದ ಅನುಮಾನದಿಂದಲೂ ಆತ್ಮನನ್ನು ನಿಶ್ಚಯಿಸುವದಕ್ಕೆ ಬರುವದಿಲ್ಲ. ಬೃಹದಾರಣ್ಯಕ ಸಂಬಂಧಭಾಷ್ಯವನ್ನು ನೋಡಿರಿ.

3. ಆತ್ಮನನ್ನು ಸರಿಯಾಗಿ ತಿಳಿದುಕೊಂಡರೆ ಸಂಸಾರವು ತೊಲಗಿ ಮೋಕ್ಷವು ದೊರಕುವದೆಂಬ ಪ್ರಯೋಜನವು ಉಂಟು. ಸಂದಿಗ್ಧವಾಗಿಯೂ, ತಿಳಿದರೆ ಪ್ರಯೋಜನದಾಯಕವಾಗಿಯೂ ಇರುವದನ್ನು ಕುರಿತು ವಿಚಾರಮಾಡಬೇಕು. ಆದ್ದರಿಂದ ಆತ್ಮವಿಚಾರವನ್ನು ಮಾಡತಕ್ಕದ್ದು ಯುಕ್ತ ಎಂದು ಭಾವ. ಸೂ. ಭಾ. ಉಪೋದ್ಘಾತದ ಸಾರವಿದು.

ನಿನ್ನಿಂದ ಅನುಶಿಷ್ಟನಾಗಿ ಬೋಧಿತನಾಗಿ ನಾನು ಇದನ್ನು ತಿಳಿಯಲಿಚ್ಛಿಸುವೆನು. (ನಾನು ಕೇಳಿದ) ವರಗಳಲ್ಲಿ ಇದೇ ಉಳಿದಿರುವ ಮೂರನೆಯ ವರವು.

## ನಚಿಕೇತನ ಯೋಗ್ಯತಾಪರೀಕ್ಷೆ

(ಭಾಷ್ಯ)

೩೪. ಕಿಮಯಮ್ ಏಕಾನ್ತತೋ ನಿಃಶ್ರೇಯಸಸಾಧನಾತ್ಮಜ್ಞಾನಾರ್ಹಃ, ನ ವಾ ಇತ್ಯೇತತ್ ಪರೀಕ್ಷಣಾರ್ಥಮ್ ಆಹ-

(ಭಾಷ್ಯಾರ್ಥ)

ಇವನು ಮುಕ್ತಿಗೆ ಸಾಧನವಾದ ಆತ್ಮಜ್ಞಾನಕ್ಕೆ ಸಂಪೂರ್ಣವಾಗಿ[1] ತಕ್ಕವನೊ, ಅಲ್ಲವೊ - ಎಂಬುದನ್ನು ಪರೀಕ್ಷಿಸಿ (ತಿಳಿದುಕೊಳ್ಳುವದಕ್ಕೆಂದು ಯಮನು) ಹೇಳುತ್ತಾನೆ :

ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ
ನ ಹಿ ಸುವಿಜ್ಞೇಯಮಣುರೇಷ ಧರ್ಮಃ ।
ಅನ್ಯಂ ವರಂ ನಚಿಕೇತೋ ವೃಣೀಷ್ವ
ಮಾ ಮೋಪರೋತ್ಸೀರತಿ ಮಾ ಸೃಜೈನಮ್ ॥ ೨೧ ॥

೨೧. ಪೂರ್ವದಲ್ಲಿ ದೇವತೆಗಳು ಕೂಡ ಇಲ್ಲಿ ಸಂಶಯಪಟ್ಟಿದ್ದರು. ಇದು ಸುಜ್ಞೇಯವಾದದ್ದಲ್ಲವೇ ಅಲ್ಲ. ಈ ಧರ್ಮವು ಅಣುವಾದದ್ದು. ನಚಿಕೇತನೆ, ಬೇರೊಂದು ವರವನ್ನು ಕೇಳಿಕೊ. ನನ್ನನ್ನು ನಿರ್ಬಂಧಿಸಬೇಡ ; ಇದನ್ನು ನನಗೆ ಬಿಟ್ಟುಕೊಡು.

(ಭಾಷ್ಯ)

೩೫. ದೇವೈರಪಿ ಅತ್ರ ಏತಸ್ಮಿನ್ ವಸ್ತುನಿ ವಿಚಿಕಿತ್ಸಿತಂ ಸಂಶಯಿತಂ ಪುರಾ ಪೂರ್ವಮ್, ನ ಹಿ ಸುವಿಜ್ಞೇಯಂ ಸುಷ್ಠು ವಿಜ್ಞೇಯಮ್ ಶ್ರುತಮಪಿ ಪ್ರಾಕೃತೈರ್ಜನೈಃ । ಯತಃ ಅಣುಃ ಸೂಕ್ಷ್ಮಃ ಏಷಃ ಆತ್ಮಾಖ್ಯಃ ಧರ್ಮಃ । ಅತಃ ಅನ್ಯಮ್ ಅಸನ್ದಿಗ್ಧಫಲಂ ವರಂ ನಚಿಕೇತಃ ವೃಣೀಷ್ವ । ಮಾ ಮಾಂ ಮಾ ಉಪರೋತ್ಸೀಃ ಉಪರೋಧಂ ಮಾ ಕಾರ್ಷೀಃ ಅಧಮರ್ಣಮಿವೋತ್ತಮರ್ಣಃ। ಅತಿಸೃಜ ವಿಮುಞ್ಚ ಏನಂ ವರಂ ಮಾ ಮಾಂ ಪ್ರತಿ ॥

---

1. ಮೂಲದಲ್ಲಿ 'ಏಕಾನ್ತತಃ' ಎಂದರೆ ಗೊತ್ತಾಗಿ, ನಿಯಮದಿಂದ ಎಂದರ್ಥ. ಕುತೂಹಲದಿಂದ ಕೇಳುತ್ತಾನೋ, ನಿಯಮವಾಗಿ ಆತ್ಮಜ್ಞಾನವೇ ಇವನಿಗೆ ಬೇಕಾಗಿದೆಯೋ ಎಂಬುದನ್ನು ತಿಳಿದುಕೊಳ್ಳುವದು ಯಮನ ಉದ್ದೇಶವೆಂಬುದನ್ನು ಈ ಮಾತು ಸೂಚಿಸುತ್ತದೆ.

(ಭಾಷ್ಯಾರ್ಥ)

ಇಲ್ಲಿ ಎಂದರೆ ಈ (ಆತ್ಮ)ವಸ್ತುವಿನ ವಿಷಯದಲ್ಲಿ ದೇವತೆಗಳುಕೂಡ ವಿಚಿಕಿತ್ಸೆಮಾಡಿದ್ದರು, ಸಂಶಯಪಟ್ಟಿದ್ದರು. ಸಾಮಾನ್ಯಜನರು ಶ್ರವಣಮಾಡಿದರೂ ಅವರಿಗೆ ಇದು ಸುವಿಜ್ಞೇಯವಲ್ಲ, ಚೆನ್ನಾಗಿ ತಿಳಿಯಬರತಕ್ಕದ್ದಲ್ಲ[1] ; ಏಕೆಂದರೆ ಈ ಆತ್ಮನೆಂಬ ವಸ್ತು ಅಣುವಾಗಿರುವದು[2]. ಆದ್ದರಿಂದ, ನಚಿಕೇತನೆ, ಪ್ರಯೋಜನ ವಿಷಯದಲ್ಲಿ ಸಂದೇಹವಿಲ್ಲದ[3], ಬೇರೊಂದು ವರವನ್ನು ಕೇಳಿಕೊ. ನನ್ನನ್ನು ಸಾಹುಕಾರನು ಸಾಲಗಾರನನ್ನು (ನಿರ್ಬಂಧಿಸುವಂತೆ) ನಿರ್ಬಂಧಪಡಿಸಬೇಡ, ನನಗೆ ಈ ವರವನ್ನು ಬಿಟ್ಟುಕೊಡು, (ಇದನ್ನು ಕೇಳದೆ) ಬಿಡು.

(ಭಾಷ್ಯ)

೩೬. ಏವಮುಕ್ತೋ ನಚಿಕೇತಾ ಆಹ-

(ಭಾಷ್ಯಾರ್ಥ)

ಹೀಗೆನ್ನಲು ನಚಿಕೇತನು ಹೇಳುತ್ತಾನೆ :

**ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ**
**ತ್ವಂ ಚ ಮೃತ್ಯೋ ಯನ್ನ ಸುಜ್ಞೇಯಮಾತ್ಥ ।**
**ವಕ್ತಾ ಚಾಸ್ಯ ತ್ವಾದೃಗನ್ಯೋ ನ ಲಭ್ಯೋ**
**ನಾನ್ಯೋ ವರಸ್ತುಲ್ಯ ಏತಸ್ಯ ಕಶ್ಚಿತ್** ॥ ೨೨ ॥

೨೨. ದೇವತೆಗಳು ಕೂಡ ಇಲ್ಲಿ ಸಂಶಯಪಟ್ಟಿದ್ದರಲ್ಲವೆ ? ಮೃತ್ಯುವೆ, (ಇದು) ಸುಜ್ಞೇಯವಲ್ಲವೆಂದು ನೀನೂ ಹೇಳುತ್ತಿರುವೆಯಷ್ಟೆ. ಇದನ್ನು ಹೇಳುವವನು ನಿನ್ನಂಥವನು ಮತ್ತೊಬ್ಬನು ಸಿಕ್ಕಲಾರನು ಇದಕ್ಕೆ ಸಮಾನವಾದ ಇನ್ನೊಂದು ವರವು ಯಾವದೂ ಇಲ್ಲ.

(ಭಾಷ್ಯ)

**೩೭. ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ । ಇತಿ ಭವತ ಏವ ನಃ ಶ್ರುತಮ್॥ ತ್ವಂ ಚ ಮೃತ್ಯೋ ಯತ್ ಯಸ್ಮಾತ್ ನ ಸುಜ್ಞೇಯಮ್ ಆತ್ಮತತ್ತ್ವಮ್ ಆತ್ಥ**

---

1. ಸಾಮಾನ್ಯರಿಗೆ ಹೇಳಿದರೂ ತಿಳಿಯುವಹಾಗಿಲ್ಲವೆಂಬುದೇ ಅವರಿಗೆ ಆತ್ಮಜ್ಞಾನವನ್ನು ಹೇಳಬಾರದೆನ್ನುವದಕ್ಕೆ ಕಾರಣ.

2. ಅಣು ಎಂದರೆ ಅತೀಂದ್ರಿಯವಾದದ್ದೆಂದು ಅರ್ಥ. ಪರಮಾಣುವಿನ ಪರಿಮಾಣವುಳ್ಳದ್ದೆಂದಲ್ಲ. ಬ್ರ. ಸೂ. ೨-೩-೨೯ ನೋಡಿ.

3. ಸುಲಭವಾದ ಬೇರೊಂದು ವಿಷಯವನ್ನು ಕೇಳಿಕೊಂಡರೆ ನಿನಗೆ ಪ್ರಯೋಜನವಾದೀತು. ಈ ವಿಚಾರದಲ್ಲಿ ಪ್ರಯೋಜನವಾಗುವದು ಸಂದಿಗ್ಧವಾಗಿದೆ.

**ಕಥಯಸಿ । ಅತಃ ಪಣ್ಡಿತೈರಪ್ಯವೇದನೀಯತ್ವಾತ್ ವಕ್ತಾ ಚ ಅಸ್ಯ ಧರ್ಮಸ್ಯ ತ್ವಾದೃಕ್ ತ್ವತ್ತುಲ್ಯಃ ಅನ್ಯಃ ಪಣ್ಡಿತಶ್ಚ ನ ಲಭ್ಯಃ ಅನ್ವಿಷ್ಯಮಾಣೋಽಪಿ । ಅಯಂ ತು ವರೋ ನಿಃಶ್ರೇಯಸಪ್ರಾಪ್ತಿಹೇತುಃ । ಅತಃ ನ ಅನ್ಯಃ ವರಃ ತುಲ್ಯಃ ಸದೃಶಃ ಅಸ್ತಿ ಏತಸ್ಯ ಕಶ್ಚಿದಪಿ । ಅನಿತ್ಯಫಲತ್ವಾದನ್ಯಸ್ಯ ಸರ್ವಸ್ಯೈವ ಇತ್ಯಭಿಪ್ರಾಯಃ ॥**

(ಭಾಷ್ಯಾರ್ಥ)

ದೇವತೆಗಳಿಗೂ ಈ ವಿಷಯದಲ್ಲಿ[1] ಸಂಶಯವುಂಟಾಗಿತ್ತಲ್ಲವೆ ? ಹೀಗೆಂದು ನಿನ್ನಿಂದಲೇ ನಮಗೆ ತಿಳಿಯಿತು. ಮೃತ್ಯುವೆ, (ಈ) ಆತ್ಮತತ್ತ್ವವು ಸುಲಭವಾಗಿ ತಿಳಿಯತಕ್ಕದ್ದಲ್ಲವೆಂದು ನೀನೂ ಹೇಳುತ್ತಿರುವೆಯಷ್ಟೆ. ಆದ್ದರಿಂದ ಪಂಡಿತರಿಗೂ ತಿಳಿಯತಕ್ಕದ್ದಲ್ಲವಾದ್ದರಿಂದ ಈ (ಆತ್ಮ)ವಸ್ತುವನ್ನು ಹೇಳುವಾತನು- ಹುಡುಕಿದರೂ ನಿನ್ನಂಥ ಮತ್ತೊಬ್ಬ ಜ್ಞಾನಿಯು ಸಿಕ್ಕಲಾರನು. ಈ ವರವೋ ಎಂದರೆ ಮುಕ್ತಿಪ್ರಾಪ್ತಿಗೆ ಕಾರಣವಾಗಿರುತ್ತದೆ. ಆದ್ದರಿಂದ ಇದಕ್ಕೆ ಸಮಾನವಾದ ಸರಿಯಾದ ವರವು ಇನ್ನೊಂದು ಯಾವದೂ ಇಲ್ಲ ; ಏಕೆಂದರೆ ಮಿಕ್ಕದ್ದೆಲ್ಲವೂ ಅನಿತ್ಯಫಲವುಳ್ಳದ್ದು - ಎಂದು ಅಭಿಪ್ರಾಯ.

(ಭಾಷ್ಯ)

**೩೮. ಏವಮುಕ್ತೋಽಪಿ ಪುನಃ ಪ್ರಲೋಭಯನ್ನುವಾಚ ಮೃತ್ಯುಃ -**

(ಭಾಷ್ಯಾರ್ಥ)

ಹೀಗೆಂದರೂ ಮೃತ್ಯುವು ಮತ್ತೂ (ನಚಿಕೇತನನ್ನು) ಆಶೆಯನ್ನು ತೋರಿಸಿ ಹೇಳಿದನೇನೆಂದರೆ -

**ಶತಾಯುಷಃ ಪುತ್ರಪೌತ್ರಾನ್ ವೃಣೀಷ್ವ**
**ಬಹೂನ್ ಪಶೂನ್ ಹಸ್ತಿ ಹಿರಣ್ಯಮಶ್ವಾನ್ ।**
**ಭೂಮೇರ್ಮಹದಾಯತನಂ ವೃಣೀಷ್ವ**
**ಸ್ವಯಂ ಚ ಜೀವ ಶರದೋ ಯಾವದಿಚ್ಛಸಿ ॥ ೨೩ ॥**

೨೩. ಶತಾಯುಸ್ಸುಳ್ಳ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಕೇಳಿಕೊ ; ಬಹುಪಶುಗಳನ್ನೂ ಹಸ್ತಿಹಿರಣ್ಯವನ್ನೂ ಕುದುರೆಗಳನ್ನೂ ಭೂಮಿಯ ದೊಡ್ಡ ಆಯತನವನ್ನೂ (ಬೇಡಿಕೊ). ನೀನೂ ಎಷ್ಟು ಶರತ್ಕಾಲ ಬದುಕಿರಲಿಚ್ಛಿಸುವೆಯೋ (ಅಷ್ಟು ಕಾಲ) ಬದುಕಿರು.

(ಭಾಷ್ಯ)

**೩೯. ಶತಾಯುಷಃ ಶತಂ ವರ್ಷಾಣಿ ಆಯೂಂಷಿ ಯೇಷಾಂ ತಾನ್**

---

1. 'ಅತ್ರಾಪಿ' ಎಂಬ (ವಾ ಮೃ) ಪಾಠವು ಸಾಕಾಗಿದೆ ; 'ಏತಸ್ಮಿನ್ ವಸ್ತುನಿ' ಬೇಕಿಲ್ಲ.

ಶತಾಯುಷಃ ಪುತ್ರಪೌತ್ರಾನ್ ವೃಣೀಷ್ವ । ಕಿಂ ಚ ಗವಾದಿಲಕ್ಷಣಾನ್ ಬಹೂನ್ ಪಶೂನ್ ಹಸ್ತಿಹಿರಣ್ಯಮ್ ಹಸ್ತೀ ಚ ಹಿರಣ್ಯಂ ಚ ಹಸ್ತಿಹಿರಣ್ಯಮ್ । ಅಶ್ವಾಂಶ್ಚ । ಕಿಂ ಚ ಭೂಮೇಃ ಪೃಥಿವ್ಯಾಃ ಮಹತ್ ವಿಸ್ತೀರ್ಣಮ್ ಆಯತನಮ್ ಆಶ್ರಯಂ ಮಣ್ಡಲಂ ರಾಜ್ಯಂ ವೃಣೀಷ್ವ । ಕಿಂ ಚ ಸರ್ವಮಪ್ಯೇತದನರ್ಥಕಂ ಸ್ವಯಂ ಚೇದಲ್ಪಾಯುಃ ಇತ್ಯತ ಆಹ- ಸ್ವಯಂ ಚ ತ್ವಂ ಜೀವ ಧಾರಯ ಶರೀರಂ ಸಮಗ್ರೇನ್ದ್ರಿಯ ಕಲಾಪಂ ಶರದಃ ವರ್ಷಾಣಿ ಯಾವತ್ ಇಚ್ಛಸಿ ಜೀವಿತಮ್ ॥

(ಭಾಷ್ಯಾರ್ಥ)

'ಶತಾಯುಸ್ಸುಳ್ಳ' : ನೂರು ವರ್ಷಗಳು ಆಯುಸ್ಸು ಇರುವಂಥವರು ಶತಾಯುಸ್ಸಿನವರು ; ಅಂಥ ಮಕ್ಕಳನ್ನೂ ಮುಮ್ಮಕ್ಕಳನ್ನೂ ಕೇಳಿಕೊ. ಹಸು ಮುಂತಾದ ರೂಪದ ಅನೇಕಪಶುಗಳನ್ನೂ ಹಸ್ತಿಹಿರಣ್ಯವನ್ನೂ ಎಂದರೆ ಆನೆ ಮತ್ತು ಬಂಗಾರ (ಇವನ್ನೂ), ಕುದುರೆಗಳನ್ನೂ (ಕೇಳಿಕೊ). ಮತ್ತು ಭೂಮಿಯ ದೊಡ್ಡ ವಿಸ್ತೀರ್ಣವಾದ ಆಯತನವನ್ನೂ ಎಂದರೆ ಆಶ್ರಯವನ್ನೂ, ಮಂಡಲವನ್ನೂ, ರಾಜ್ಯವನ್ನೂ ಬೇಡಿಕೊ. ಮತ್ತು ತಾನೊಬ್ಬ ಅಲ್ಪಾಯುವಾದರೆ ಇದೆಲ್ಲ ನಿಷ್ಪ್ರಯೋಜನವಾಗುವದಲ್ಲ ! ಎಂದರೆ ಹೇಳುತ್ತಾನೆ : ಮತ್ತು ನೀನು ಎಷ್ಟು ವರ್ಷಕಾಲ ಬದುಕಿರಲಿಚ್ಛಿಸುತ್ತೀಯೋ ಅಷ್ಟು ವರ್ಷವೂ ಬದುಕಿರು, ಇಂದ್ರಿಯಸಮೂಹವನ್ನೆಲ್ಲ ಉತ್ತಮ ಸ್ಥಿತಿಯಲ್ಲಿಟ್ಟುಕೊಂಡು ಶರೀರವನ್ನು ಧರಿಸಿರು.

ಏತತ್ತುಲ್ಯಂ ಯದಿ ಮನ್ಯಸೇ ವರಂ
ವೃಣೀಷ್ವ ವಿತ್ತಂ ಚಿರಜೀವಿಕಾಂ ಚ ।
ಮಹಾಭೂಮೌ ನಚಿಕೇತಸ್ತ್ವಮೇಧಿ
ಕಾಮಾನಾಂ ತ್ವಾ ಕಾಮಭಾಜಂ ಕರೋಮಿ ॥ ೨೪ ॥

೨೪. ಇದಕ್ಕೆ ಸಮಾನವಾದ ವರವೆಂದು ಎಣಿಸುವೆಯಾದರೆ (ಬೇರೆ) ವರವನ್ನು ಬೇಡಿಕೊ. ಧನವನ್ನೂ ಚಿರವಾದ ಆಯುಸ್ಸನ್ನೂ (ಬೇಡಿಕೊ). ಮಹಾಭೂಮಿಯಲ್ಲಿ, ನಚಿಕೇತನೆ, ನೀನು (ರಾಜ)ನಾಗಿರು. ಎಲ್ಲಾ ಕಾಮಗಳಲ್ಲಿ(ಯೂ) ನಿನ್ನನ್ನು ಕಾಮಭಾಜನನ್ನಾಗಿ ಮಾಡುವೆನು.

(ಭಾಷ್ಯ)

೪೦. ಏತತ್ತುಲ್ಯಮ್ ಏತೇನ ಯಥೋಪದಿಷ್ಟೇನ ಸದೃಶಮ್ ಅನ್ಯಮಪಿ ಯದಿ ಮನ್ಯಸೇ ವರಮ್ ತಮಪಿ ವೃಣೀಷ್ವ । ಕಿಂ ಚ ವಿತ್ತಂ ಪ್ರಭೂತಂ ಹಿರಣ್ಯರತ್ನಾದಿ ಚಿರಜೀವಿಕಾಂ ಚ ಸಹ ವಿತ್ತೇನ । ವೃಣೀಷ್ವ ಇತ್ಯೇತತ್ । ಕಿಂ

ಬಹುನಾ ? ಮಹಾಭೂಮೌ ಮಹತ್ಯಾಂ ಭೂಮೌ ರಾಜಾ ನಚಿಕೇತಃ ತ್ವಮ್ ಏಧಿ ಭವ । ಕಿಂ ಚಾನ್ಯತ್ । ಕಾಮಾನಾಂ ದಿವ್ಯಾನಾಂ ಮಾನುಷಾಣಾಂ ಚ ತ್ವಾ ತ್ವಾಂ ಕಾಮಭಾಜಂ ಕಾಮಭಾಗಿನಂ ಕಾಮಾರ್ಹಂ ಕರೋಮಿ । ಸತ್ಯಸಙ್ಕಲ್ಪೋ ಹ್ಯಹಂ ದೇವಃ ॥

(ಭಾಷ್ಯಾರ್ಥ)

ಮೇಲೆ ಹೇಳಿದ್ದಕ್ಕೆ ಬೇರೆ (ಯಾವದಾದರೂ) ವರವು ಸಮಾನವೆಂದು, (ಇದಕ್ಕೆ) ಸರಿಹೋಲುವದೆಂದು, ಎಣಿಸುವೆಯಾದರೆ ಅದನ್ನೂ ಬೇಡಿಕೊ. ಮತ್ತು ಹೇರಳವಾದ ಹಿರಣ್ಯ, ರತ್ನ - ಮುಂತಾದ ಧನವನ್ನೂ ದೀರ್ಘಾಯುಸ್ಸನ್ನೂ ಧನದ ಜೊತೆಗೂ[1] ಬೇಡಿಕೊ ಎಂದರ್ಥ. ಹೆಚ್ಚು ಹೇಳಿದ್ದರಿಂದೇನು ? ನಚಿಕೇತನೆ, ಮಹಾಭೂಮಿಯಲ್ಲಿ, ನೀನೇ ರಾಜನಾಗಿರು. ದಿವ್ಯವಾದ ಮತ್ತು ಮಾನುಷವಾದ ಕಾಮಗಳಿಗೆಲ್ಲ ನೀನು ಕಾಮಭಾಜನಾಗಿ ಕಾಮವನ್ನು ಪಡೆಯುವವನಾಗಿ ಕಾಮಗಳಿಗೆ ತಕ್ಕವನಾಗಿರುವಂತೆ ಮಾಡುವೆನು.[2] ನಾನು ಸತ್ಯಸಂಕಲ್ಪವುಳ್ಳ ದೇವತೆಯಷ್ಟೆ ?

ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ
ಸರ್ವಾನ್ ಕಾಮಾಗ್ಂಶ್ಛನ್ದತಃ ಪ್ರಾರ್ಥಯಸ್ವ ।
ಇಮಾ ರಾಮಾಃ ಸರಥಾಃ ಸತೂರ್ಯಾ
ನ ಹೀದೃಶಾ ಲಮ್ಭನೀಯಾ ಮನುಷ್ಯೈಃ ।
ಆಭಿರ್ಮತ್ಪ್ರತ್ತಾಭಿಃ ಪರಿಚಾರಯಸ್ವ
ನಚಿಕೇತೋ ಮರಣಂ ಮಾನುಪ್ರಾಕ್ಷೀಃ ॥ ೨೫ ॥

೨೫. ಮರ್ತ್ಯಲೋಕದಲ್ಲಿ ಯಾವಯಾವ ಕಾಮಗಳು ದುರ್ಲಭವಾಗಿರುವವೋ (ಆ) ಸರ್ವಕಾಮಗಳನ್ನೂ ಬೇಕಾದಂತೆ ಕೇಳಿಕೊ. ಈ ರಾಮೆಸ್ತ್ರೀಯರು, ರಥ ಗಳೊಡನೆಯೂ ತೂರ್ಯಗಳೊಡನೆಯೂ ಕೂಡಿರುತ್ತಾರೆ. ಇಂಥವರು ಮನುಷ್ಯ ರಿಗೆ ದೊರಕುವವರಲ್ಲ. ನಾನು ಕೊಡುವ ಇವರಿಂದ ಪರಿಚರ್ಯೆಯನ್ನು ಮಾಡಿಸಿಕೊ. ನಚಿಕೇತನೆ, ಮರಣವನ್ನು ಕುರಿತು ಪ್ರಶ್ನೆಮಾಡಬೇಡ.

(ಭಾಷ್ಯ)

೪೧. ಯೇ ಯೇ ಕಾಮಾಃ ಪ್ರಾರ್ಥನೀಯಾಃ ದುರ್ಲಭಾಶ್ಚ ಮರ್ತ್ಯ

1. ಆತ್ಮಜ್ಞಾನದ ಬದಲು ಪುತ್ರ, ಪಶು, ಧನ- ಮುಂತಾದವುಗಳನ್ನು ಒಂದೊಂದನ್ನಾದರೂ ಅಥವಾ ಒಟ್ಟಿಗೆ ಎಲ್ಲವನ್ನಾದರೂ ಬೇಡಿಕೊ ಎಂದಭಿಪ್ರಾಯ.

2. ಇಲ್ಲಿ ಭೋಗಪಡುವವರಲ್ಲೆಲ್ಲ ನಿನ್ನನ್ನು ಶ್ರೇಷ್ಠನಾದ ಭೋಗಿಯನ್ನಾಗಿ ಮಾಡುವೆನು ಎಂದೂ ಅರ್ಥಮಾಡಬಹುದು.

ಲೋಕೇ ಸರ್ವಾನ್ ತಾನ್ ಕಾಮಾನ್ ಛನ್ದತಃ ಇಚ್ಛಾತಃ ಪ್ರಾರ್ಥಯಸ್ವ । ಕಿಂ ಚ ಇಮಾಃ ದಿವ್ಯಾಃ ಅಪ್ಸರಸಃ ರಮಯನ್ತಿ ಪುರುಷಾನ್ ಇತಿ ರಾಮಾಃ[1] । ಸಹ ರಥೈರ್ವರ್ತನ್ತ ಇತಿ ಸರಥಾಃ, ಸತೂರ್ಯಾ ಸವಾದಿತ್ರಾಃ । ತಾಶ್ಚ ನ ಹಿ ಲಮ್ಭನೀಯಾಃ ಪ್ರಾಪಣೀಯಾಃ ಈದೃಶಾಃ ಏವಂವಿಧಾಃ ಮನುಷ್ಯೈಃ ಮರ್ತ್ಯೈಃ ಅಸ್ಮದಾದಿಪ್ರಸಾದಮನ್ತರೇಣ । ಆಭಿಃ ಮತ್ಪ್ರತ್ತಾಭಿಃ ಮಯಾ ಪ್ರದತ್ತಾಭಿಃ ಪರಿಚಾರಿಣೀಭಿಃ ಪರಿಚಾರಯಸ್ವ ಆತ್ಮಾನಮ್ । ಪಾದಪ್ರಕ್ಷಾಲನಾದಿಶುಶ್ರೂಷಾಂ ಕಾರಯ ಆತ್ಮನಃ ಇತ್ಯರ್ಥಃ । ಹೇ ನಚಿಕೇತಃ ಮರಣಂ ಮರಣಸಮ್ಬದ್ಧಂ ಪ್ರಶ್ನಂ ಪ್ರೇತೇ ಅಸ್ತಿ ನಾಸ್ತೀತಿ ಕಾಕದನ್ತಪರೀಕ್ಷಾರೂಪಂ ಮಾ ಅನುಪ್ರಾಕ್ಷೀಃ ಮೈವಂ ಪ್ರಷ್ಟುಮ್ ಅರ್ಹಸಿ ॥

(ಭಾಷ್ಯಾರ್ಥ)

ಮರ್ತ್ಯಲೋಕದಲ್ಲಿ ಯಾವಯಾವ ಕಾಮಗಳು ಬಯಸತಕ್ಕವಾಗಿರುವವೋ ಮತ್ತು ಪಡೆಯುವದಕ್ಕೆ ಕಷ್ಟವಾಗಿರುವವೋ ಆ ಕಾಮಗಳೆಲ್ಲವನ್ನೂ ಬೇಕಾದಂತೆ (ನಿನ್ನ) ಇಚ್ಛೆಗನುಸಾರವಾಗಿ ಕೇಳಿಕೊ. ಮತ್ತು ಈ ದಿವ್ಯ ಅಪ್ಸರೆಯರು, ಪುರುಷರಿಗೆ ರತಿಯನ್ನುಂಟುಮಾಡುವದರಿಂದ ರಾಮೆಯರೆನಿಸಿರುವರು : (ಇವರು) ಸರಥರು ಎಂದರೆ ರಥಗಳಿಂದ ಕೂಡಿರುವವರು, ಸತೂರ್ಯರು ಎಂದರೆ ವಾದ್ಯಗಳಿಂದ ಕೂಡಿರುವವರು, ಇಂಥವರು ಹೀಗಿರುವವರು ನಮ್ಮಂಥ (ದೇವತೆಗಳ) ಪ್ರಸಾದವಿಲ್ಲದೆ ಮನುಷ್ಯರಿಗೆ, ಮರ್ತ್ಯರಿಗೆ, ದೊರೆಯತಕ್ಕವರಲ್ಲ. ನಾನು ಕೊಡುವ ಈ ಪರಿಚಾರಿಣಿಯರಿಂದ ನಿನ್ನ ಪರಿಚರ್ಯೆಯನ್ನು ಮಾಡಿಸಿಕೊ, ಕಾಲುತೊಳೆಯುವದೇ ಮುಂತಾದ ಶುಶ್ರೂಷೆಯನ್ನು ಮಾಡಿಸಿಕೊ ಎಂದರ್ಥ. ಎಲೈ ನಚಿಕೇತನೆ, ಮರಣವನ್ನು ಕುರಿತು, ಎಂದರೆ ಸಾವಿನ ಸಂಬಂಧವಾದ ಸತ್ತಬಳಿಕ ಇರುತ್ತಾನೋ ಇಲ್ಲವೋ ಎಂದು ಕಾಗೆಯ ಹಲ್ಲುಗಳನ್ನು ಪರೀಕ್ಷೆ ಮಾಡುವಂತೆ[2] ಪ್ರಶ್ನೆಯನ್ನು ಮಾಡಬೇಡ, ಹೀಗೆ ಕೇಳದಿರು.

(ಭಾಷ್ಯ)

೪೨. ಏವಂ ಮೃತ್ಯುನಾ ಪ್ರಲೋಭ್ಯಮಾನೋಽಪಿ ನಚಿಕೇತಾ ಮಹಾಹ್ರದವದಕ್ಷೋಭ್ಯ ಆಹ-

---

1. ಈ ವ್ಯುತ್ಪತ್ತಿಯು ವ್ಯಾಕರಣದ ಪ್ರಕಾರ ಸರಿಯಲ್ಲವಾದರೂ ಭಾಷ್ಯಕಾರರು ಹೀಗೇಕೆ ಬರೆದರೆಂದು ವಿಚಾರಿಸತಕ್ಕದ್ದಿದೆ. ಅಧಿಕರಣಾರ್ಥದಲ್ಲಿ ಘಞ್‌ಪ್ರತ್ಯಯಮಾಡಿ 'ರಮನ್ತೇ ಪುರುಷಾಃ ಆಸು ಇತಿ ರಾಮಾಃ' ಎಂದು ಬರೆದಿದ್ದರೆ ಸರಿಯಾಗುತ್ತಿತ್ತು.

2. ಕಾಗೆಯ ಹಲ್ಲುಗಳು ಎಷ್ಟು ?- ಎಂದು ಪರೀಕ್ಷಿಸುವದರಿಂದ ಯಾವ ಪ್ರಯೋಜನವೂ ಇಲ್ಲ; ಅಂಥ ನಿರರ್ಥಕಪ್ರಶ್ನೆಯಿದು.

(ಭಾಷ್ಯಾರ್ಥ)

ಹೀಗೆ ಯಮನು ಆಸೆಯನ್ನು ತೋರಿಸಿದರೂ ನಚಿಕೇತನು ದೊಡ್ಡಮಡುವಿನಂತೆ[1] ಅಲುಗಾಡಿಸುವದಕ್ಕೆ ಆಗದವನಾಗಿ ಹೇಳುತ್ತಾನೆ :-

ಶ್ವೋಭಾವಾ ಮರ್ತ್ಯಸ್ಯ ಯದನ್ತಕೈತತ್
ಸರ್ವೇನ್ದ್ರಿಯಾಣಾಂ ಜರಯನ್ತಿ ತೇಜಃ ।
ಅಪಿ ಸರ್ವಂ ಜೀವಿತಮಲ್ಪಮೇವ
ತವೈವ ವಾಹಾಸ್ತವ ನೃತ್ಯಗೀತೇ ॥ ೨೬ ॥

೨೬. ಅಂತಕನೆ, ನಾಳೆಯವರೆಗೆ ಇರಬಹುದಾದಂಥ (ಈ ಭೋಗಗಳು) ಮರ್ತ್ಯನ ಸರ್ವೇಂದ್ರಿಯಗಳ ಯಾವ ಈ ತೇಜಸ್ಸನ್ನು ಜೀರ್ಣಮಾಡುವವು. ಎಲ್ಲಾ ಆಯುಸ್ಸೂ ಅಲ್ಪವೇ. (ಈ) ವಾಹನಗಳು ನಿನಗೇ (ಇರಲಿ), ನೃತ್ಯಗೀತೆಗಳೂ ನಿನಗೇ (ಇರಲಿ) !

(ಭಾಷ್ಯ)

೪೩. ಶ್ವೋಭಾವಾಃ ಶ್ವೋ ಭವಿಷ್ಯನ್ತಿ ನ ವಾ[2] ಇತಿ ಸನ್ದಿಹ್ಯಮಾನ ಏವ ಯೇಷಾಂ ಭಾವೋ ತ್ವಯಾ ಉಪನ್ಯಸ್ತಾನಾಂ ಭೋಗಾನಾಂ ತೇ ಶ್ವೋಭಾವಾಃ । ಕಿಂ ಚ ಮರ್ತ್ಯಸ್ಯ ಮನುಷ್ಯಸ್ಯ ಅನ್ತಕ ಹೇ ಮೃತ್ಯೋ, ಯತ್ ಏತತ್ ಸರ್ವೇನ್ದ್ರಿಯಾಣಾಂ ತೇಜಃ ತತ್ ಜರಯನ್ತಿ ಅಪಕ್ಷ(ಪ)ಯನ್ತಿ (?) ಅಪ್ಸರಃಪ್ರಭೃತಯೋ ಭೋಗಾಃ । ಅನರ್ಥಾಯೈವೈತೇ ಧರ್ಮವೀರ್ಯಪ್ರಜ್ಞಾತೇಜೋಯಶಃಪ್ರಭೃತೀನಾಂ ಕ್ಷಪಯಿತೃತ್ವಾತ್ । ಯಾಂ ಚಾಪಿ ದೀರ್ಘಜೀವಿಕಾಂ ತ್ವಂ ದಿತ್ಸಸಿ ತತ್ರಾಪಿ ಶೃಣು । ಸರ್ವಂ ಯದ್ಬ್ರಹ್ಮಣೋಽಪಿ ಜೀವಿತಮ್ ಆಯುಃ ಅಲ್ಪಮೇವ, ಕಿಮುತ ಅಸ್ಮದಾದಿದೀರ್ಘಜೀವಿಕಾ । ಅತಃ ತವೈವ ತಿಷ್ಠನ್ತು ವಾಹಾಃ ರಥಾದಯಃ । ತಥಾ ತವ ನೃತ್ಯಗೀತೇ ಚ ॥

(ಭಾಷ್ಯಾರ್ಥ)

ನಾಳೆಯವರೆಗೆ ಇರಬಹುದಾದಂಥವು ಎಂದರೆ ನಾಳೆ ಇರುವವೋ ಇಲ್ಲವೋ ಎಂದು ಸಂದೇಹಮಾಡಬಹುದಾದಂಥ ಇರುವಿಕೆಯುಳ್ಳವು, ನೀನು

---

1. ಸ್ವಲ್ಪ ನೀರು ಇರುವ ಗುಂಡಿಯ ನೀರಾದರೆ ಒಂದಿಷ್ಟು ಕಲಕಿದಮಾತ್ರದಿಂದ ಕದಡಿಹೋಗುವದು. ಆದರೆ ಆಳವಾಗಿ ವಿಶಾಲವಾಗಿರುವ ಮಡುವಿನ ನೀರು ಹಾಗೆ ಚಾಂಚಲ್ಯವನ್ನೂ ಹೊಂದದು, ಕದಡುವದೂ ಇಲ್ಲ. ಇದರಂತೆ ನಚಿಕೇತನು ಆಸೆಗಳೆಂಬ ಬಿರುಗಾಳಿಯಿಂದ ಅಲುಗಾಡದೆ ತನ್ನ ವರವನ್ನು ಬಿಟ್ಟು ಅತ್ತಿತ್ತ ಕದಲದೆ ಇದ್ದನು.

2. ವಾ ॥ ಪಾಠವಿದು.

ಭೋಗಗಳು ಮತ್ತು ಅಂತಕನೆ, ಎಲೈ ಮೃತ್ಯುವೆ, ಮರ್ತ್ಯನ ಎಂದರೆ ಮನುಷ್ಯನ ಇಂದ್ರಿಯಗಳಲ್ಲೆಲ್ಲ ಇರುವ ಈ ತೇಜಸ್ಸೆಂಬುದಿದೆಯಷ್ಟೆ, ಇದನ್ನು ಜೀರ್ಣಮಾಡುವವು, ಈ ಅಪ್ಸರಃಸ್ತ್ರೀಯರೇ ಮುಂತಾದ ಭೋಗಗಗಳು ಸವೆಯಿಸುವವು. ಇವುಗಳಿಂದ ಅನರ್ಥವೇ ಆಗುವದು : ಏಕೆಂದರೆ ಇವುಗಳು **ಧರ್ಮ, ವೀರ್ಯ, ಪ್ರಜ್ಞಾ, ತೇಜಸ್ಸು, ಯಶಸ್ಸು[1]- ಮುಂತಾದವುಗಳನ್ನು ನಾಶಗೊಳಿಸುವವು.** ಇನ್ನು ಯಾವ ದೀರ್ಘಾಯುಸ್ಸನ್ನೂ ಕೊಡುವೆನೆನ್ನುವೆಯೋ ಅದರ ವಿಷಯದಲ್ಲಿಯೂ (ಹೇಳುವೆನು) ಕೇಳು. ಎಲ್ಲಾ ಆಯುಸ್ಸೂ ಎಂದರೆ ಬ್ರಹ್ಮನ ಆಯುಸ್ಸು ಕೂಡ[2] ಸ್ವಲ್ಪವೇ, ಇನ್ನು ನಮ್ಮಂಥವರ ದೀರ್ಘಾಯುಸ್ಸಿನ ವಿಷಯದಲ್ಲಿ ಹೇಳತಕ್ಕದ್ದೇನಿದೆ ? ಆದ್ದರಿಂದ ರಥವೇ ಮುಂತಾದ ಯಾನಗಳೂ ನಿನಗೇ (ಇರಲಿ),' ಹಾಗೆಯೇ ನೃತ್ಯಗೀತಗಳೂ ನಿನಗೇ ಇರಲಿ !

**ನ ವಿತ್ತೇನ ತರ್ಪಣೀಯೋ ಮನುಷ್ಯೋ**
**ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮ ಚೇತ್ ತ್ವಾ ।**
**ಜೀವಿಷ್ಯಾಮೋ ಯಾವದೀಶಿಷ್ಯಸಿ ತ್ವಂ**
**ವರಸ್ತು ಮೇ ವರಣೀಯಃ ಸ ಏವ ॥ ೨೭ ॥**

೨೭. ಮನುಷ್ಯನು ವಿತ್ತದಿಂದ ತೃಪ್ತಿಹೊಂದುವಹಾಗಿಲ್ಲ. ನಿನ್ನನ್ನು ಕಂಡೆವೆಂದರೆ ವಿತ್ತವನ್ನು ಪಡೆಯುವೆವು. ನೀನು ಆಳುವವರೆಗೂ ಬದುಕಿರುವೆವು. ನಾನು ಬೇಡತಕ್ಕ ವರವಾದರೋ ಅದೇ.

(ಭಾಷ್ಯ)

**೪೪. ಕಿಂ ಚ ನ ಪ್ರಭೂತೇನ ವಿತ್ತೇನ ತರ್ಪಣೀಯೋ ಮನುಷ್ಯಃ । ನ ಹಿ ಲೋಕೇ ವಿತ್ತಲಾಭಃ ಕಸ್ಯಚಿತ್ ತೃಪ್ತಿಕರೋ ದೃಷ್ಟಃ । ಯದಿ ನಾಮ ಅಸ್ಮಾಕಂ ವಿತ್ತತೃಷ್ಣಾ ಸ್ಯಾತ್ ಲಪ್ಸ್ಯಾಮಹೇ, ಪ್ರಾಪ್ಸ್ಯಾಮಹೇ ವಿತ್ತಮ್ ಅದ್ರಾಕ್ಷ್ಮ ದೃಷ್ಟವನ್ತೋ ವಯಂ ಚೇತ್ ತ್ವಾ ತ್ವಾಮ್ । ಜೀವಿತಮಪಿ ತಥೈವ। ಜೀವಿಷ್ಯಾಮಃ ಯಾವತ್ ಯಾಮ್ಯೇ ಪದೇ ತ್ವಮ್ ಈಶಿಷ್ಯಸಿ ಈಶಿ ಷ್ಯಸೇ ಪ್ರಭುಃ ಸ್ಯಾಃ । ಕಥಂ ಹಿ ಮರ್ತ್ಯಃ ತ್ವಯಾ ಸಮೇತ್ಯ ಅಲ್ಪಧನಾಯುರ್ಭವೇತ್ ? ವರಸ್ತು ಮೇ ವರಣೀಯಃ ಸ ಏವ ಯದಾತ್ಮವಿಜ್ಞಾನಮ್॥**

1. ಧರ್ಮ - ಇಷ್ಟಾಪೂರ್ತಗಳು. ವೀರ್ಯ - ಸಾಮರ್ಥ್ಯ. ಪ್ರಜ್ಞಾ-ಶಾಸ್ತ್ರಾರ್ಥವನ್ನು ತಿಳಿಯುವ ಶಕ್ತಿ, ತೇಜಸ್ಸು - ಮೈಯ ಕಾಂತಿ, ಯಶಸ್ಸು - ಕೀರ್ತಿ. (ಗೋ) ಛಾಂ. ಭಾ. ೮-೧೪-೧ರಲ್ಲಿ ''ಅದತ್ಕಮ್'' ಎಂಬುದರ ವ್ಯಾಖ್ಯಾನವನ್ನು ನೋಡಿರಿ.

2. ಗೀ. ೮-೧೭ ನೋಡಿರಿ :

(ಭಾಷ್ಯಾರ್ಥ)

ಮತ್ತು ಹೇರಳವಾದ ಧನದಿಂದ ಮನುಷ್ಯನು ತೃಪ್ತಿಹೊಂದುವಹಾಗಿಲ್ಲ : ಲೋಕದಲ್ಲಿ ಯಾರಿಗೂ ಹಣದಿಂದ ತೃಪ್ತಿಯಾದದ್ದು ಕಂಡಿಲ್ಲವಷ್ಟೆ ? ಒಂದು ವೇಳೆ ನಮಗೆ ಧನದ ಆಶೆ ಬಂದರೂ ನಿನ್ನನ್ನು ನಾವು ಕಂಡೆವೆಂದರೆ (ನಿನ್ನ) ದರ್ಶನ ಮಾಡಿಕೊಂಡೆವೆಂದರೆ ಧನವನ್ನು ಪಡೆಯುವೆವು. ಆಯುಸ್ಸಿನ ವಿಷಯವೂ ಹಾಗೆಯೇ ; (ಏಕೆಂದರೆ) ನೀನು ಯಾಮ್ಯಪದವಿಯಲ್ಲಿ ಎಷ್ಟುಕಾಲ ಆಳುತ್ತಿರುವೆಯೋ ('ಈಶಿಷ್ಯಸಿ' ಎಂಬ ಮೂಲವು 'ಈಶಿಷ್ಯಸೇ' ಎಂಬುದಕ್ಕೆ ಬದಲು ಪ್ರಯೋಗವಾಗಿರುತ್ತದೆ). ಪ್ರಭುವಾಗಿರುವೆಯೋ ಅಲ್ಲಿಯವರೆಗೆ ಬದುಕಿಯೇ ಇರುವೆವು. ಏಕೆಂದರೆ ಮರ್ತ್ಯನಾದವನು ಹೇಗೆ ತಾನೆ ನಿನ್ನನ್ನು ಸಂಧಿಸಿದಮೇಲೆ ಅಲ್ಪಧನವುಳ್ಳವನೂ (ಅಲ್ಪಾ)ಯುಸ್ಸುಳ್ಳವನೂ ಆದಾನು ? ಆದರೆ ನಾನು ಬೇಡತಕ್ಕ ವರವು ಮಾತ್ರ ಅದೇ, ಎಂದರೆ ಆತ್ಮಜ್ಞಾನವೇ ಸರಿ.

**ಅಜೀರ್ಯತಾಮಮೃತಾನಾಮುಪೇತ್ಯ**
**ಜೀರ್ಯನ್ ಮರ್ತ್ಯಃ ಕ್ವಧಃಸ್ಥಃ ಪ್ರಜಾನನ್ ।**
**ಅಭಿಧ್ಯಾಯನ್ ವರ್ಣರತಿಪ್ರಮೋದಾ-**
**ನತಿದೀರ್ಘೇ ಜೀವಿತೇ ಕೋ ರಮೇತ ॥ ೨೮ ॥**

೨೮. ಮುಪ್ಪಿಲ್ಲದ ಅಮೃತರ (ಸಮೀಪವನ್ನು) ಹೊಂದಿ ಮುಪ್ಪುಳ್ಳವನಾಗಿ ಮರ್ತ್ಯನಾಗಿ ಕೆಳಗಿರುವ ಭೂಮಿಯಲ್ಲಿರುವವನು ತಿಳಿದು, ವರ್ಣರತಿಮೋದಗಳನ್ನು ಆಲೋಚಿಸುವ ಯಾವನುತಾನೆ ಅತಿದೀರ್ಘವಾದ ಜೀವಿತದಲ್ಲಿ ರತನಾದಾನು ?

(ಭಾಷ್ಯ)

**೪೫. ಯತಶ್ಚ ಅಜೀರ್ಯತಾಂ ವಯೋಹಾನಿಮ್ ಅಪ್ರಾಪ್ನುವತಾಮ್ ಅಮೃತಾನಾಂ ಸಕಾಶಮ್ ಉಪೇತ್ಯ ಉಪಗಮ್ಯ ಆತ್ಮನ ಉತ್ಕೃಷ್ಟಂ ಪ್ರಯೋಜನಾನ್ತರಂ ಪ್ರಾಪ್ತವ್ಯಂ ತೇಭ್ಯಃ ಪ್ರಜಾನನ್ ಉಪಲಭಮಾನಃ ಸ್ವಯಂ ತು ಜೀರ್ಯನ್ ಮರ್ತ್ಯಃ ಜರಾಮರಣವಾನ್ ಕ್ವಧಃಸ್ಥಃ ಕುಃ ಪೃಥಿವೀ ಅಧಶ್ಚಾಸೌ ಅನ್ತರಿಕ್ಷಾದಿಲೋಕಾಪೇಕ್ಷಯಾ, ತಸ್ಯಾಂ ತಿಷ್ಠತೀತಿ ಕ್ವಧಃಸ್ಥಃ ಸನ್ । ಕಥಮೇವಮ್ ಅವಿವೇಕಿಭಿಃ ಪ್ರಾರ್ಥನೀಯಂ ಪುತ್ರವಿತ್ತಾದ್ಯಸ್ಥಿರಂ[1] ವೃಣೀತೇ? "ಕ್ವ ತದಾಸ್ಥಃ" ಇತಿ ವಾ ಪಾಠಾನ್ತರಮ್ । ಅಸ್ಮಿನ್ ಪಕ್ಷೇ ಚ ಏವಮಕ್ಷರಯೋಜನಾ ತೇಷು ಪುತ್ರಾದಿಷು ಆಸ್ಥಾ ಆಸ್ಥಿತಿಃ ತಾತ್ಪರ್ಯೇಣ**

---

1. "ಪುತ್ರವಿತ್ತಹಿರಣ್ಯಾದ್ಯಸ್ಥಿರಮ್" ಎಂದು (ಅ ॥) ಪಾಠ. ಹಿರಣ್ಯವೆಂಬ ಮಾತು ಇಲ್ಲದಿದ್ದರೂ ಸಾಗುತ್ತದೆ.

ವರ್ತನಂ ಯಸ್ಯ ಸ ತದಾಸ್ಥಃ । ತತೋಽಧಿಕತರಂ ಪುರುಷಾರ್ಥಂ ದುಷ್ಪ್ರಾಪಮಪಿ ಪ್ರಾಪಯಿಷುಃ ಕ್ವತದಾಸ್ಥೋ ಭವೇತ್ ? ನ ಕಶ್ಚಿತ್ ತದಸಾರಜ್ಞಸ್ತದರ್ಥೀ ಸ್ಯಾತ್?- ಇತ್ಯರ್ಥಃ । ಸರ್ವೋ ಹಿ ಉಪರ್ಯುಪರ್ಯೇವ ಬುಭೂಷತಿ ಲೋಕಃ। ತಸ್ಮಾತ್, ನ ಪುತ್ರವಿತ್ತಾದಿಲೋಭ್ಯೈಃ ಪ್ರಲೋಭ್ಯೋಽಹಮ್ । ಕಿಂ ಚ ಅಪ್ಸರಃ ಪ್ರಮುಖಾನ್ ವರ್ಣರತಿಪ್ರಮೋದಾನ್ ಅನವಸ್ಥಿತರೂಪತಯಾ ಅಭಿಧ್ಯಾಯನ್ ನಿರೂಪಯನ್ ಯಥಾವತ್ ಅತಿದೀರ್ಘೇ ಜೀವಿತೇ ಕಃ ವಿವೇಕೀ ರಮೇತ ? ॥

(ಭಾಷ್ಯಾರ್ಥ)

ಮತ್ತೂ ಏಕೆಂದರೆ, ಮುಪ್ಪಿಲ್ಲದವರೂ ಎಂದರೆ ವಯಸ್ಸನ್ನು ಕಳೆದುಕೊಳ್ಳದವರೂ **ಅಮರರೂ** (ಆದ ದೇವತೆಗಳ) ಬಳಿಯನ್ನು ಹೊಂದಿ ಬಂದುಸೇರಿ, ತನಗೆ ಅವರಿಂದ ಉತ್ಕೃಷ್ಟವಾದ ಇನ್ನೊಂದು ಪ್ರಯೋಜನವು ದೊರಕತಕ್ಕದ್ದಿದೆ ಎಂಬುದನ್ನು ತಿಳಿದು ಕಂಡುಕೊಂಡು, ತಾನೋ ಮುಪ್ಪುಳ್ಳ ಮರ್ತ್ಯನಾಗಿ ಮುಪ್ಪುಸಾವುಗಳುಳ್ಳವನಾಗಿದ್ದು, ''ಕ್ವಧಃಸ್ಥಃ'' 'ಕು' ಎಂದರೆ ಭೂಮಿಯು, ಅದು ಅಂತರಿಕ್ಷವೇ ಮುಂತಾದ ಲೋಕಗಳಿಗೆ ಹೋಲಿಸಿದರೆ ''ಅಧಃ'' ಕೆಳಗೆ ಇರುತ್ತದೆ. ಅದರಲ್ಲಿರುವದರಿಂದ ''ಕ್ವಧಃಸ್ಥಃ''ನೆನಿಸುವನು- (ಕೆಳಗಿನ ಭೂಮಿಯ ಮೇಲೆ ಇರು)ವಂಥವನಾಗಿದ್ದುಕೊಂಡು ಹೀಗೆ ಅವಿವೇಕಿಗಳು ಬಯಸುವ ಪುತ್ರ, ವಿತ್ತ- ಮುಂತಾದ ಅಸ್ಥಿರವಾದ (ವಸ್ತುವನ್ನು) ಹೇಗೆ ಬೇಡಿಕೊಂಡಾನು ?

ಅಥವಾ ಮೂಲದಲ್ಲಿ 'ಕ್ವ ತದಾಸ್ಥಃ' ಎಂದು ಪಾಠಾಂತರವುಂಟು. ಈ ಪಕ್ಷದಲ್ಲಿ ಅಕ್ಷರಯೋಜನೆಯನ್ನು ಹೀಗೆ (ಮಾಡಬೇಕು) : ''ತದಾಸ್ಥಃ'' ಎಂದರೆ ಆ ಪುತ್ರಾದಿಗಳಲ್ಲಿ ಆಸ್ಥೆಯು, ನಿಲ್ಲುವಿಕೆಯು, (ಅವುಗಳಲ್ಲಿಯೇ) ತಾತ್ಪರ್ಯದಿಂದ ಇರುವಿಕೆಯು ಯಾವನಿಗಿರುವದೋ ಅವನು. ಅವುಗಳಿಗಿಂತಲೂ ಹೆಚ್ಚಿನ, ಪಡೆಯುವದಕ್ಕೆ ಕಷ್ಟವಾಗಿರುವ ಪುರುಷಾರ್ಥವನ್ನು ಪಡೆಯಬೇಕೆಂದು ಬಯಸುವವನು ಎಲ್ಲಿ ತದಾಸ್ಥನಾದಾನು ? ಅವುಗಳಲ್ಲಿ ಸಾರವಿಲ್ಲವೆಂಬುದನ್ನು ಬಲ್ಲವನು ಯಾವನೂ ಅವುಗಳನ್ನು ಪ್ರಾರ್ಥಿಸಲಾರನು ಎಂದರ್ಥ. ಜನರೆಲ್ಲರೂ ಮೇಲೆ ಮೇಲಕ್ಕೇ ಹೋಗಬೇಕೆಂದು ಬಯಸುವರಲ್ಲವೆ ? ಆದ್ದರಿಂದ ನನಗೆ ಪುತ್ರವಿತ್ತಾದಿಗಳ ಆಸೆಯನ್ನು ತೋರಿಸಿ ಎಳೆಯುವದು ಆಗಲಾರದು (ಎಂದು ಅಭಿಪ್ರಾಯ).

ಮತ್ತು ಅಪ್ಸರಃಸ್ತ್ರೀಯರೇ ಮುಂತಾದ ವರ್ಣರತಿಪ್ರಮೋದಗಳನ್ನು[1] (ಅವು) ಒಂದು ವ್ಯವಸ್ಥಿತವಾದ ರೂಪದಲ್ಲಿರುವವಲ್ಲವೆಂದು ಚೆನ್ನಾಗಿ ಆಲೋಚಿಸಿ ಪರೀಕ್ಷಿಸಿ (ತಿಳಿದುಕೊಂಡಿರುವ) ಯಾವ ವಿವೇಕಿಯುತಾನೆ ಅತಿದೀರ್ಘವಾದ ಜೀವಿತದಲ್ಲಿ ರತನಾದಾನು ?

1. ವರ್ಣ-ಗಾನ, ರತಿ-ಕ್ರಿಯೆ, ಪ್ರಮೋದ- ಇವುಗಳಿಂದಾದ ಸುಖ (ಗೋ ॥) ತೋರುವ ವಸ್ತುಗಳಲ್ಲಿರುವ ಆಸಕ್ತಿಯಿಂದಾಗುವ ಸುಖ ಎಂದೂ ಅರ್ಥಮಾಡಬಹುದು.

ಯಸ್ಮಿನ್ನಿದಂ ವಿಚಿಕಿತ್ಸನ್ತಿ ಮೃತ್ಯೋ
ಯತ್ ಸಾಮ್ಪರಾಯೇ ಮಹತಿ ಬ್ರೂಹಿ ನಸ್ತತ್ ।
ಯೋಽಯಂ ವರೋ ಗೂಢಮನುಪ್ರವಿಷ್ಟೋ
ನಾನ್ಯಂ ತಸ್ಮಾನ್ನಚಿಕೇತಾ ವೃಣೀತೇ ॥ ೨೯ ॥

೨೯. ಮೃತ್ಯುವೆ, ಯಾವ (ವಿಷಯ)ದಲ್ಲಿ ಈ ಸಂಶಯವನ್ನು ಹೊಂದುತ್ತಿರುವರೋ ಯಾವದು ಸಾಂಪರಾಯದ ಮಹಾ (ಪ್ರಯೋಜನಕ್ಕೆ ಸಾಧನವೋ) ಅದನ್ನು ನಮಗೆ ಹೇಳು. ಯಾವ ಈ ವರವು ಗೂಢವಾಗಿ ಒಳಹೊಕ್ಕಿರುವದೋ ಅದಕ್ಕಿಂತ ಬೇರೆಯೊಂದನ್ನು ನಚಿಕೇತನು ಬೇಡುವದಿಲ್ಲ.

(ಭಾಷ್ಯ)

೪೬. ಅತೋ ವಿಹಾಯ ಅನಿತ್ಯೈಃ ಕಾಮೈಃ ಪ್ರಲೋಭನಮ್, ಯನ್ಮಯಾ ಪ್ರಾರ್ಥಿತಂ ಯಸ್ಮಿನ್ ಪ್ರೇತೇ ಇದಂ ವಿಚಿಕಿತ್ಸನಂ ವಿಚಿಕಿತ್ಸನ್ತಿ 'ಅಸ್ತಿ' 'ನಾಸ್ತಿ' ಇತ್ಯೇವಂಪ್ರಕಾರಮ್, ಹೇ ಮೃತ್ಯೋ, ಸಾಮ್ಪರಾಯೇ ಪರಲೋಕವಿಷಯೇ ಮಹತಿ ಮಹತ್ಪ್ರಯೋಜನನಿಮಿತ್ತೇ ಆತ್ಮನೋ ನಿರ್ಣಯವಿಜ್ಞಾನಂ ಯತ್ ತತ್ ಬ್ರೂಹಿ ಕಥಯ ನಃ ಅಸ್ಮಭ್ಯಮ್ । ಕಿಂ ಬಹುನಾ । ಯೋಽಯಂ ಪ್ರಕೃತ ಆತ್ಮವಿಷಯಃ ವರಃ ಗೂಢಂ ಗಹನಂ ದುರ್ವಿವೇಚನಂ ಪ್ರಾಪ್ತಃ ಅನುಪ್ರವಿಷ್ಟಃ, ತಸ್ಮಾತ್ ವರಾತ್ ಅನ್ಯಮ್ ಅವಿವೇಕಿಭಿಃ ಪ್ರಾರ್ಥನೀಯಮ್ ಅನಿತ್ಯವಿಷಯಂ ವರಂ ನಚಿಕೇತಾಃ ನ ವೃಣೀತೇ ಮನಸಾಪಿ ಇತಿ ಶ್ರುತೇರ್ವಚನಮಿತಿ ॥

(ಭಾಷ್ಯಾರ್ಥ)

ಆದ್ದರಿಂದ, ಎಲೈ ಮೃತ್ಯುವೆ, ಅನಿತ್ಯವಾದ ಕಾಮಗಳಿಂದ ಆಸೆತೋರಿಸಿ (ಮನಸ್ಸನ್ನೆಳೆಯುವದನ್ನು) ಬಿಟ್ಟು, ಯಾವ ಸತ್ತವನ ವಿಷಯದಲ್ಲಿ 'ಇದಾನೆ', 'ಇಲ್ಲ', ಎಂದು ಈ ಪ್ರಕಾರವಾಗಿ ಸಂಶಯವನ್ನು ಹೊಂದುತ್ತಿರುವರೋ ಮಹಾಪ್ರಯೋಜನಕ್ಕೆ ಕಾರಣವಾದ ಸಾಂಪರಾಯದಲ್ಲಿ ಎಂದರೆ ಪರಲೋಕವಿಷಯದಲ್ಲಿ (ಉಪಯೋಗವಾಗುವ) ಆತ್ಮಜ್ಞಾನವು ಯಾವದುಂಟೋ ಅದನ್ನು ನಮಗೆ ಹೇಳು, ತಿಳಿಸು. ಹೆಚ್ಚು ಹೇಳಿದ್ದರಿಂದೇನು ? ಯಾವ ಈ ಪ್ರಕೃತವಾದ ಆತ್ಮವಿಷಯವಾದ ವರವು ಗೂಢವನ್ನು ಎಂದರೆ ಗಹನವನ್ನು, ವಿಂಗಡಿಸಿ ತಿಳಿಯುವದಕ್ಕೆ ಆಗದ ಸ್ಥಿತಿಯನ್ನು, ಹೊಂದಿ ಒಳಹೊಕ್ಕಿರುವದೋ ಆ ವರಕ್ಕಿಂತ ಬೇರೆಯಾದ ಅವಿವೇಕಿಗಳು ಕೇಳಿಕೊಳ್ಳಬಹುದಾದ ಅನಿತ್ಯವಸ್ತುವಿನ ವಿಷಯವಾದ ವರವನ್ನು ನಚಿಕೇತನು ಮನಸ್ಸಿನಲ್ಲಿಯೂ ಕೇಳಲಾರನು. ಇದು ಶ್ರುತಿಯ ವಚನವು.[1]

1. 'ನಚಿಕೇತನು ಕೇಳುವವನಲ್ಲ' ಎಂದು ನಚಿಕೇತನೇ ಹೇಳಿದ್ದರೂ ಹೇಳಿರಬಹುದು. ನಚಿಕೇತನು ಮತ್ತೊಂದು ವರವನ್ನು ಕೇಳಲಿಲ್ಲ ಎಂಬ ತಾತ್ಪರ್ಯದಿಂದ ಶ್ರುತಿ ಹೇಳಿದೆ ಎಂದು ಭಾಷ್ಯಕಾರರು ಬರೆದಿರುತ್ತಾರೆ.

# ಒಂದನೆಯ ಅಧ್ಯಾಯ-ಎರಡನೆಯ ವಲ್ಲಿ

## ವಿದ್ಯಾವಿದ್ಯೆಗಳಲ್ಲಿ ವಿದ್ಯೆಯ ಹೆಚ್ಚುಗಾರಿಕೆ

(ಭಾಷ್ಯ)

೪೭. ಪರೀಕ್ಷ್ಯ ಶಿಷ್ಯಂ ವಿದ್ಯಾಯೋಗ್ಯತಾಂ ಚಾಸ್ಯಾವಗಮ್ಯ ಆಹ-

(ಭಾಷ್ಯಾರ್ಥ)

ಶಿಷ್ಯನನ್ನು ಪರೀಕ್ಷೆಮಾಡಿ ಇವನಲ್ಲಿ ವಿದ್ಯೆಗೆ ಬೇಕಾದ ಯೋಗ್ಯತೆ ಇದೆಯೆಂದು ನಿಶ್ಚಯಿಸಿ (ಯಮನು) ಹೇಳುತ್ತಾನೆ :-

ಅನ್ಯಚ್ಛ್ರೇಯೋಽನ್ಯದುತೈವ ಪ್ರೇಯ-

ಸ್ತೇ ಉಭೇ ನಾನಾರ್ಥೇ ಪುರುಷಗ್ಂ ಸಿನೀತಃ ।

ತಯೋಃ ಶ್ರೇಯ ಆದದಾನಸ್ಯ ಸಾಧು

ಭವತಿ ಹೀಯತೇಽರ್ಥಾತ್ ಯ ಉ ಪ್ರೇಯೋ ವೃಣೀತೇ ॥ ೧ ॥

೧. ಶ್ರೇಯಸ್ಸು ಬೇರೆ, ಮತ್ತು ಪ್ರೇಯಸ್ಸೇ ಬೇರೆ. ಅವೆರಡೂ ಬೇರೆ ಬೇರೆಯ ಅರ್ಥವುಳ್ಳವಾಗಿ ಪುರುಷನನ್ನು ಕಟ್ಟುವವು. ಅವೆರಡರಲ್ಲಿ ಶ್ರೇಯಸ್ಸನ್ನು ಸ್ವೀಕರಿಸುವವನಿಗೆ ಒಳ್ಳೆಯದು ಆಗುವದು, ಮತ್ತು ಯಾವನು ಪ್ರೇಯಸ್ಸನ್ನು ಆರಿಸಿಕೊಳ್ಳುವನೋ ಅವನು ಅರ್ಥದಿಂದ ತಪ್ಪಿಹೋಗುವನು.

(ಭಾಷ್ಯ)

೪೮. ಅನ್ಯತ್ ಪೃಥಗೇವ ಶ್ರೇಯಃ ನಿಶ್ಶ್ರೇಯಸಮ್ ತಥಾ ಅನ್ಯತ್ ಉತೈವ[1] ಅಪಿ ಚ ಪ್ರೇಯಃ ಪ್ರಿಯತರಮಪಿ । ತೇ ಶ್ರೇಯಃಪ್ರೇಯಸೀ ಉಭೇ ನಾನಾರ್ಥೇ ಭಿನ್ನಪ್ರಯೋಜನೇ ಸತೀ ಪುರುಷಮ್ ಅಧಿಕೃತಂ ವರ್ಣಾಶ್ರಮಾದಿ ವಿಶಿಷ್ಟಂ ಸಿನೀತಃ ಬಧ್ನೀತಃ । ತಾಭ್ಯಾಮ್ ಆತ್ಮಕರ್ತವ್ಯತಯಾ ಪ್ರಯುಜ್ಯತೇ ಸರ್ವಃ ಪುರುಷಃ । ಶ್ರೇಯಃಪ್ರೇಯಸೋರ್ಹಿ ಅಭ್ಯುದಯಾಮೃತತ್ವಾರ್ಥೀ ಪುರುಷಃ ಪ್ರವರ್ತತೇ । ಅತಃ ಶ್ರೇಯಃಪ್ರೇಯಃಪ್ರಯೋಜನಕರ್ತವ್ಯತಯಾ ತಾಭ್ಯಾಂ ಬದ್ಧ ಇತ್ಯುಚ್ಯತೇ ಸರ್ವಃ ಪುರುಷಃ । ತೇ ಯದ್ಯಪ್ಯೇಕೈಕಪುರುಷಾರ್ಥ ಸಮ್ಬನ್ಧಿನೀ ವಿದ್ಯಾವಿದ್ಯಾರೂಪತ್ವಾತ್ ವಿರುದ್ಧೇ ಇತ್ಯನ್ಯತರಾಪರಿತ್ಯಾಗೇನ ಏಕೇನ

1. (ವಾ ॥) ಪಾಠ.

ಪುರುಷೇಣ ಸಹಾನುಷ್ಠಾತುಮ್ ಅಶಕ್ಯತ್ವಾತ್ ತಯೋಃ ಹಿತ್ವಾ ಅವಿದ್ಯಾರೂಪಂ ಪ್ರೇಯಃ ಶ್ರೇಯ ಏವ ಕೇವಲಮ್ ಆದದಾನಸ್ಯ ಉಪಾದಾನಂ ಕುರ್ವತಃ ಸಾಧು ಶೋಭನಂ ಶಿವಂ ಭವತಿ । ಯಸ್ತು ಅದೂರದರ್ಶೀ ವಿಮೂಢೋ ಹೀಯತೇ ವಿಯುಜ್ಯತೇ ಅರ್ಥಾತ್ ಪುರುಷಾರ್ಥಾತ್ ಪಾರಮಾರ್ಥಿಕಾತ್ ಪ್ರಯೋಜನಾತ್ ನಿತ್ಯಾತ್ ಪ್ರಚ್ಯವತೇ ಇತ್ಯರ್ಥಃ । ಕೋಽಸೌ ? ಯ ಉ ಪ್ರೇಯಃ ವೃಣೀತೇ ಉಪಾದತ್ತೇ ಇತ್ಯೇತತ್ ॥

(ಭಾಷ್ಯಾರ್ಥ)

ಶ್ರೇಯಸ್ಸು ಮುಕ್ತಿ (ಸಾಧನವು) ಬೇರೆಯೇ ; ಮತ್ತು ಪ್ರೇಯಸ್ಸೆಂಬುದೇ ಪ್ರಿಯತರವಾ(ಗಿ ಕಾಣುವ ಅಭ್ಯುದಯಸಾಧನವು)ಕೂಡ ಬೇರೆಯೇ. ಈ ಶ್ರೇಯಸ್ಸು, ಪ್ರೇಯಸ್ಸು - ಎಂಬೆರಡೂ ಬೇರೆಬೇರೆಯ ಪ್ರಯೋಜನವುಳ್ಳವಾಗಿ ವರ್ಣಾಶ್ರಮಾದಿಗಳಿಂದ ಕೂಡಿ ಅಧಿಕಾರಿಯಾಗಿರುವ ಪುರುಷನನ್ನು[1] 'ಸಿನೀತಃ' ಎಂದರೆ ಕಟ್ಟುವವು. ಇವುಗಳನ್ನು ತಾನು ಮಾಡತಕ್ಕದ್ದು ಎಂದು ಪ್ರತಿಯೊಬ್ಬ ಪುರುಷನೂ ಪ್ರೇರಿತನಾಗಿರುತ್ತಾನೆ. ಶ್ರೇಯಸ್ಸು, ಪ್ರೇಯಸ್ಸು - (ಇವುಗಳಲ್ಲಿ)[2] ಅಭ್ಯುದಯ, ಅಮೃತತ್ವ[3] - ಇವುಗಳನ್ನು ಬಯಸುವ ಪುರುಷನು ತೊಡಗುತ್ತಾನಲ್ಲವೆ ? ಆದ್ದರಿಂದ ಶ್ರೇಯಸ್ಸು, ಪ್ರೇಯಸ್ಸು - ಇವುಗಳ ಪ್ರಯೋಜನವೇ (ತಾನು ಸಾಧನವನ್ನು) ಮಾಡಿ ಪಡೆಯತಕ್ಕದ್ದು ಎಂದು (ಪುರುಷನು ಪ್ರವರ್ತಿಸುವದರಿಂದ) ಇವೆರಡರಿಂದ ಪ್ರತಿಯೊಬ್ಬನೂ[4] ಕಟ್ಟುಬಿದ್ದಿರುವನು ಎಂದು (ಶ್ರುತಿಯಲ್ಲಿ) ಹೇಳಿರುತ್ತದೆ. ಇವುಗಳೆರಡೂ ಒಂದೊಂದು (ಬೇರೆಯ) ಪುರುಷಾರ್ಥಕ್ಕೆ ಸಂಬಂಧವುಳ್ಳವಾಗಿದ್ದರೂ[5] ವಿದ್ಯೆ, ಅವಿದ್ಯೆ - ಇವುಗಳ ರೂಪಗಳುಳ್ಳವಾಗಿರುವದ

---

1. ವರ್ಣ, ಆಶ್ರಮ - ಮುಂತಾದ ವೇದೋಕ್ತವಾದ ಅಧಿಕಾರವುಳ್ಳ ಪುರುಷನು ಅವಶ್ಯವಾಗಿ ಅಭ್ಯುದಯ, ಮುಕ್ತಿ - ಇವುಗಳಲ್ಲಿ ಒಂದಕ್ಕಾಗಿ ಪ್ರವರ್ತಿಸುತ್ತಾನೆ - ಎಂದರ್ಥ.

2. ಇಲ್ಲಿ ಶ್ರೇಯಸ್ಸೆಂದರೆ ಮುಕ್ತಿಗೆ ಕಾರಣವಾದ ಜ್ಞಾನ, ಪ್ರೇಯಸ್ಸು ಎಂದರೆ ಅಭ್ಯುದಯಕ್ಕೆ ಕಾರಣವಾದ ಕರ್ಮ. ಜ್ಞಾನದಲ್ಲಿ ತೊಡಗುವದೆಂದರೆ ಅದಕ್ಕಾಗಿ ವಿಚಾರ ಮಾಡುವದು.

3. ಅಭ್ಯುದಯವೆಂದರೆ ಏಳಿಗೆ, ಸ್ವರ್ಗಾದಿಫಲ ; ಅಮೃತತ್ವವೆಂದರೆ ಮುಕ್ತಿ.

4. ಪ್ರತಿಯೊಬ್ಬ ಅಧಿಕಾರಿಯೂ ಎಂದೇ ಅರ್ಥ ; ಅನಧಿಕಾರಿಯಾದವನಿಗೆ ಸೇ ಪ್ರವೃತ್ತಿಯೇ ಉಂಟಾಗುತ್ತದೆ.

5. 'ಏಕೈಕಪುರುಷಸಂಬನ್ಧಿನೀ' ಎಂದು (ಆ ॥ ಗೋ ॥) ವ್ಯಾಖ್ಯಾನಾನುಸಾರವಾದ ಪಾಠ. ಒಬ್ಬೊಬ್ಬ ಪುರುಷನಿಗೆ ಸಂಬಂಧಪಟ್ಟಿದ್ದರೂ ಎಂದು ಅದಕ್ಕೆ ಅರ್ಥ. ಇಬ್ಬರು ಬೇರೆಬೇರೆಯಾಗಿ ಕರ್ಮವನ್ನೂ ವಿದ್ಯೆಯನ್ನೂ ಆರಿಸಿಕೊಳ್ಳುವದು ಸಹಜವೇ ಆಗಿರುವದರಿಂದ ಆ ಪಾಠದಲ್ಲಿ ವಿರೋಧವೇನೂ ಕಾಣುವದಿಲ್ಲ.

ರಿಂದ[1] (ಒಂದಕ್ಕೊಂದಕ್ಕೆ) ವಿರುದ್ಧವಾಗಿರುವವು ; ಆದ್ದರಿಂದ (ಇವುಗಳಲ್ಲಿ) ಒಂದನ್ನೂ ಬಿಡದೆ ಒಬ್ಬನೇ ಪುರುಷನು ಒಂದೇಕಾಲದಲ್ಲಿ (ಎರಡನ್ನೂ) ಅನುಷ್ಠಾನ ಮಾಡುವದು ಆಗುವಹಾಗಿಲ್ಲವಾದ್ದರಿಂದ ಈ ಎರಡರಲ್ಲಿ ಅವಿದ್ಯಾರೂಪವಾಗಿರುವ ಪ್ರೇಯಸ್ಸನ್ನು ಕೈಬಿಟ್ಟು, ಬರಿಯ ಶ್ರೇಯಸ್ಸನ್ನೇ ಸ್ವೀಕರಿಸುವವನಿಗೆ ಎಂದರೆ (ಅದೊಂದನ್ನೇ) ತೆಗೆದುಕೊಳ್ಳುವವನಿಗೆ ಒಳ್ಳೆಯದು, ಶುಭವು, ಮಂಗಳವು ಆಗುವದು. ಯಾವ ದೂರದರ್ಶಿಯಲ್ಲದ ಮೂಢನಾದರೋ ಅರ್ಥದಿಂದ ಎಂದರೆ ಪರಮಾರ್ಥವಾದ ಪುರುಷಾರ್ಥದಿಂದ ತಪ್ಪಿಹೋಗುವನು. (ಅದರಿಂದ) ಅಗಲುವನು. ನಿತ್ಯವಾದ ಪ್ರಯೋಜನದಿಂದ (ಕೆಳಕ್ಕೆ) ಜಾರುವನು ಎಂದರ್ಥ. ಇವನು ಯಾರು ? ಎಂದರೆ ಯಾವನು ಪ್ರೇಯಸ್ಸನ್ನೇ ಆರಿಸಿಕೊಳ್ಳುವನೋ (ಸಾಧನವಾಗಿ) ತೆಗೆದುಕೊಳ್ಳುವನೋ (ಅವನು) ಎಂದಭಿಪ್ರಾಯ.

(ಭಾಷ್ಯ)

೪೯. ಯದ್ಯುಭೇ ಅಪಿ ಕರ್ತುಂ ಸ್ವಾಯತ್ತೇ ಪುರುಷೇಣ, ಕಿಮರ್ಥಂ ಪ್ರೇಯ ಏವ ಆದತ್ತೇ ಬಾಹುಲ್ಯೇನ ಲೋಕ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಇವೆರಡನ್ನೂ ಮಾಡುವದು ಪುರುಷನಿಗೆ ತನ್ನ ಅಧೀನದಲ್ಲಿಯೇ ಇರುವದಾದರೆ, ಜನರು ಬಹಳವಾಗಿ ಪ್ರೇಯಸ್ಸನ್ನೇ ಏಕೆ ತೆಗೆದುಕೊಳ್ಳುತ್ತಾರೆ ?- ಎಂದರೆ ಹೇಳುತ್ತಾನೆ :-

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತ-**
**ಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ ।**
**ಶ್ರೇಯೋ ಹಿ ಧೀರೋಽಭಿ ಪ್ರೇಯಸೋ ವೃಣೀತೇ**
**ಪ್ರೇಯೋ ಮನ್ದೋ ಯೋಗಕ್ಷೇಮಾದ್ ವೃಣೀತೇ ॥ ೨ ॥**

೨. ಶ್ರೇಯಸ್ಸೂ ಪ್ರೇಯಸ್ಸೂ ಮನು ಬಳಿಗೆ ಬರುವವು. ಅವುಗಳನ್ನು ಚೆನ್ನಾಗಿ ಒಳಹೊಕ್ಕು ಧೀರನು ವಿವೇಚನೆಮಾಡುಕೊಳ್ಳುತ್ತಾನೆ. ಧೀರನಾದವನು ಪ್ರೇಯಸ್ಸನ್ನು ಬಿಟ್ಟು ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಮೂಢನು ಯೋಗಕ್ಷೇಮಕ್ಕೆಂದು ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ.

1. ಕರ್ಮವು ಕ್ರಿಯಾಕಾರಕಫಲಗಳನ್ನು ಬೇರೆಬೇರೆಯೆಂದು ತಿಳಿಯುವ ಅವಿದ್ಯೆಯನ್ನವಲಂಬಿಸಿ ಉಂಟಾಗುತ್ತದೆ ಜ್ಞಾನವು ಆ ಭೇದವಿಲ್ಲದ ಆತ್ಮೈಕತ್ವವನ್ನು ತಿಳಿಸುವದು. ಆದ್ದರಿಂದ ಇವೆರಡೂ ಒಟ್ಟಿನಲ್ಲಿ ಏಕಕಾಲದಲ್ಲಿರುವದು ಆಗಲಾರದು. ಈ. ಭಾ ಭಾ. ೭, ೧೯, ೩೯ ನೋಡಿ.

(ಭಾಷ್ಯ)

೫೦. ಸತ್ಯಂ ಸ್ವಾಯತ್ತೇ । ತಥಾಪಿ ಸಾಧನತಃ ಫಲತಶ್ಚ ಮನ್ದಬುದ್ಧೀನಾಂ ದುರ್ವಿವೇಕರೂಪೇ ಸತೀ ವ್ಯಾಮಿಶ್ರೀಭೂತೇ ಇವ ಮನುಷ್ಯಂ ಪುರುಷಮ್ ಆ ಇತಃ ಪ್ರಾಪ್ನುತಃ ಶ್ರೇಯಶ್ಚ ಪ್ರೇಯಶ್ಚ । ಅತೋ ಹಂಸ ಇವಾಮ್ಭಸಃ ಪಯಃ, ತೌ ಶ್ರೇಯಃಪ್ರೇಯಃಪದಾರ್ಥೌ ಸಂಪರೀತ್ಯ ಸಮ್ಯಕ್ಪರಿಗಮ್ಯ ಮನಸಾ ಆಲೋಚ್ಯ ಗುರುಲಾಘವಂ ವಿವಿನಕ್ತಿ ಪೃಥಕ್ಕರೋತಿ ಧೀರಃ ಧೀಮಾನ್ । ವಿವಿಚ್ಯ ಚ ಶ್ರೇಯೋ ಹಿ ಶ್ರೇಯ ಏವ ಅಭಿವೃಣೀತೇ ಅಭ್ಯರ್ಹಿತತ್ವಾತ್ ಪ್ರೇಯಸಃ[1]। ಕೋಽಸೌ ? ಧೀರಃ । ಯಸ್ತು ಮನ್ದಃ ಅಲ್ಪಬುದ್ಧಿಃ ಸಃ ವಿವೇಕಾಸಾಮರ್ಥ್ಯಾತ್[2] ಯೋಗಕ್ಷೇಮಾತ್ ಯೋಗಕ್ಷೇಮನಿಮಿತ್ತಂ ಶರೀರಾದ್ಯುಪಚಯರಕ್ಷಣ ನಿಮಿತ್ತಮ್ ಇತ್ಯೇತತ್ । ಪ್ರೇಯಃ ಪಶುಪುತ್ರಾದಿ ಲಕ್ಷಣಂ ವೃಣೀತೇ ॥

(ಭಾಷ್ಯಾರ್ಥ)

ನಿಜ, ಇವೆರಡೂ ಅಧೀನದಲ್ಲಿಯೇ ಇರುತ್ತವೆ. ಆದರೂ ಮೂಢಬುದ್ಧಿಯುಳ್ಳವರಿಗೆ ಸಾಧನದೃಷ್ಟಿಯಿಂದಲೂ ಫಲದ ದೃಷ್ಟಿಯಿಂದಲೂ[3] ವಿಂಗಡಿಸಿಕೊಳ್ಳುವದಕ್ಕೆ ಆಗದಂತೆ ಬೆರೆತುಕೊಂಡಿರುವಹಾಗೆ (ಕಾಣುತ್ತಾ) ಮನುಷ್ಯನ ಬಳಿಗೆ, ಪುರುಷನ (ಬಳಿಗೆ) ಎಲ್ಲಾ ಕಡೆಯಿಂದಲೂ ಬರುತ್ತವೆ, ಶ್ರೇಯಸ್ಸೂ ಪ್ರೇಯಸ್ಸೂ ಬಂದು ಸೇರುತ್ತವೆ. ಆದಕಾರಣ ಹಂಸವು ನೀರಿನಿಂದ ಹಾಲನ್ನು (ವಿಂಗಡಿಸಿಕೊಳ್ಳುವಂತೆ) ಧೀರನು, ತಿಳಿವಳಿಕೆಯುಳ್ಳವನು, ಆ ಶ್ರೇಯಸ್ಸು, ಪ್ರೇಯಸ್ಸು- ಎಂಬ ಪದಾರ್ಥಗಳೆರಡನ್ನೂ ಚೆನ್ನಾಗಿ ಒಳಹೊಕ್ಕು ಮನಸ್ಸಿನಿಂದ ಆಲೋಚಿಸಿ ಹೆಚ್ಚಿನದು ಯಾವದು, ಕಡಿಮೆಯದು ಯಾವದು ? ಎಂಬುದನ್ನು ವಿವೇಚನೆಮಾಡಿಕೊಳ್ಳುತ್ತಾನೆ, ವಿಂಗಡಿಸಿಕೊಳ್ಳುತ್ತಾನೆ. (ಹೀಗೆ) ವಿಂಗಡಿಸಿಕೊಂಡು ಪ್ರೇಯಸ್ಸಿಗಿಂತ ಶ್ರೇಯಸ್ಸೇ ಪೂಜ್ಯವಾಗಿರುವದರಿಂದ ಆ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವನು ಯಾರು ? ಎಂದರೆ ಧೀರನು. ಆದರೆ ಯಾವನು ಮೂಢನೋ, ಅಲ್ಪಬುದ್ಧಿಯುಳ್ಳವನೋ, ಅವನಿಗೆ (ಹೀಗೆ) ವಿಂಗಡಿಸಿಕೊಳ್ಳುವ ಸಾಮರ್ಥ್ಯವಿಲ್ಲದ್ದರಿಂದ (ಅವನು) 'ಯೋಗಕ್ಷೇಮಕ್ಕೆಂದು' ಯೋಗಕ್ಷೇಮಗಳ ನಿಮಿತ್ತವಾಗಿ - ಎಂದರೆ ಶರೀರವೇ ಮುಂತಾದವುಗಳನ್ನು ಬೆಳೆಸಿಕೊಳ್ಳುವದು, ಕಾಪಾಡಿಕೊಳ್ಳುವದು - ಇವುಗಳಿಗಾಗಿ

1. (ವಾ॥) ಪಾಠ. 2. 'ಸದಸದ್ವಿವೇಕಾಸಾಮರ್ಥ್ಯಾತ್' ಎಂಬ ವಾ ಪಾಠಕ್ಕಿಂತ 'ವಿವೇಕಾಸಾಮರ್ಥ್ಯಾತ್' (ಅ ॥) ಎಂಬುದೇ ಸಾಕು.

3. ಯಾವ ಸಾಧನವು ಸುಲಭ, ಯಾವ ಫಲವು ನಿತ್ಯ - ಎಂಬುದು ಸಾಮಾನ್ಯಬುದ್ಧಿಯವರಿಗೆ ಹೊಳೆಯುವದಿಲ್ಲ.

ಎಂದರ್ಥ. ಪಶು, ಪುತ್ರ- ಮುಂತಾದ ರೂಪದಲ್ಲಿರುವ ಪ್ರೇಯಸ್ಸನ್ನೇ[1] ಆರಿಸಿ ಕೊಳ್ಳುತ್ತಾನೆ.

ಸ ತ್ವಂ ಪ್ರಿಯಾನ್ ಪ್ರಿಯರೂಪಾಗ್‌ಂಶ್ಚ ಕಾಮಾ-
ನಭಿಧ್ಯಾಯನ್ನಚಿಕೇತೋಽತ್ಯಸ್ರಾಕ್ಷೀಃ ।
ನೈತಾಗ್‌ಂ ಸೃಙ್ಕಾಂ ವಿತ್ತಮಯೀಮವಾಪ್ತೋ
ಯಸ್ಯಾಂ ಮಜ್ಜನ್ತಿ ಬಹವೋ ಮನುಷ್ಯಾಃ ॥ ೩ ॥

೩. ನಚಿಕೇತನೆ, ಆ ನೀನಾದರೋ ಪ್ರಿಯವಾಗಿಯೂ ಪ್ರಿಯರೂಪ ವಾಗಿಯೂ ಇರುವ ಕಾಮಗಳನ್ನು ಆಲೋಚಿಸಿ ಕೈಬಿಟ್ಟಿರುತ್ತೀಯೆ. ಯಾವದರಲ್ಲಿ ಬಹಳ ಮನುಷ್ಯರು ಮುಳುಗಿರುತ್ತಾರೋ ಅಂಥ ವಿತ್ತಮಯವಾದ ಈ ಸೃಂಕೆಯನ್ನು ಪಡೆಯಲಿಲ್ಲ.

(ಭಾಷ್ಯ)

೫೧. ತ್ವಂ ಪುನಃಪುನರ್ಮಯಾ ಪ್ರಲೋಭ್ಯಮಾನೋಽಪಿ ಪ್ರಿಯಾನ್ ಪುತ್ರಾದೀನ್, ಪ್ರಿಯರೂಪಾಂಶ್ಚ ಅಪ್ಸರಃಪ್ರಭೃತಿಲಕ್ಷಣಾನ್ ಕಾಮಾನ್ ಅಭಿಧ್ಯಾಯನ್ ಚಿನ್ತಯನ್ ತೇಷಾಮ್ ಅನಿತ್ಯತ್ವಾಸಾರತ್ವಾದಿ ದೋಷಾನ್ ಹೇ ನಚಿಕೇತಃ, ಅತ್ಯಸ್ರಾಕ್ಷೀಃ ಅತಿಸೃಷ್ಟವಾನ್ ಪರಿತ್ಯಕ್ತವಾನಸಿ । ಅಹೋ ಬುದ್ಧಿಮತ್ತಾ ತವ ! ನ ಏತಾಮ್ ಅವಾಪ್ತವಾನಸಿ ಸೃಙ್ಕಾಂ ಸೃತಿಂ ಕುತ್ಸಿತಾಂ ಮೂಢಜನಪ್ರವೃತ್ತಾಂ ವಿತ್ತಮಯೀಂ ಧನಪ್ರಾಯಾಮ್ । ಯಸ್ಯಾಂ ಸೃತೌ ಮಜ್ಜನ್ತಿ ಸೀದನ್ತಿ ಬಹವಃ ಅನೇಕೇ ಮೂಢಾ ಮನುಷ್ಯಾಃ ॥

(ಭಾಷ್ಯಾರ್ಥ)

ಆ ನೀನಾದರೋ ಮತ್ತೆಮತ್ತೆ ನಾನು (ನಿನ್ನನ್ನು) ಆಸೆಗೊಳಿಸಿದರೂ ಪ್ರಿಯವಾಗಿರುವ ಪುತ್ರಾದಿಗಳು, ಪ್ರಿಯರೂಪವಾಗಿರುವ[2] ಅಪ್ಸರಃಸ್ತ್ರೀಯರೇ ಮುಂತಾದವುಗಳು ಎಂಬ ಕಾಮಗಳನ್ನು ಆಲೋಚಿಸಿ ಅವುಗಳ ಅನಿತ್ಯತ್ವ, ಅಸಾರತ್ವ- ಮುಂತಾದ ದೋಷಗಳನ್ನು ಬಗೆದು ಎಲೈ ನಚಿಕೇತನೆ 'ಅತ್ಯಸ್ರಾಕ್ಷೀಃ = ಅತಿಸೃಷ್ಟ ವಾನಸಿ (ಅವುಗಳನ್ನು) ಕೈಬಿಟ್ಟಿರುತ್ತೀಯೆ - ಆಹಾ ನಿನ್ನ ಬುದ್ಧಿಯು ಎಂಥದ್ದು ! ಯಾವ ಮಾರ್ಗದಲ್ಲಿ ಅನೇಕ ಮೂಢಮನುಷ್ಯರು ಮುಳುಗಿರುವರೋ ಕುಸಿದು

1. ಅಭ್ಯುದಯಸಾಧನವನ್ನೇ.

2. ಸಾಮಾನ್ಯರು ಪ್ರಿಯವೆಂದು ಭಾವಿಸುವ ಎಂದರ್ಥ. ನಿಜವಾಗಿ ಆತ್ಮನೇ ಪ್ರಿಯನು. ಬೃ. ೨-೪-೫ ನೋಡಿರಿ.

ಕೊಂಡಿರುವರೋ ಅಂಥ ಮೂಢಜನರು ನಡೆಯುವ ವಿತ್ತಮಯವಾದ ಧನಬಾಹುಲ್ಯವುಳ್ಳ ಈ ಸೃಂಕೆಯನ್ನು ಕುತ್ಸಿತವಾದ ಹಾದಿಯನ್ನು (ನೀನು) ಪಡೆಯಲಿಲ್ಲ(ವಲ್ಲ) ವಲ್ಲ!

(ಭಾಷ್ಯ)

೫೨. ''ತಯೋಃ ಶ್ರೇಯ ಆದದಾನಸ್ಯ ಸಾಧು- ಭವತಿ ಹೀಯತೇಽರ್ಥಾದ್ಯ ಉ ಪ್ರೇಯೋ ವೃಣೀತೇ'' ಇತ್ಯುಕ್ತಮ್ । ತತ್ ಕಸ್ಮಾತ್ ? ಯತಃ-

(ಭಾಷ್ಯಾರ್ಥ)

''ಅವೆರಡರಲ್ಲಿ ಶ್ರೇಯಸ್ಸನ್ನು ಸ್ವೀಕರಿಸುವವನಿಗೆ ಒಳ್ಳೆಯದಾಗುವದು, ಮತ್ತು ಯಾವನು ಪ್ರೇಯಸ್ಸನ್ನು ಆರಿಸಿಕೊಳ್ಳುವನೋ ಅವನು ಅರ್ಥದಿಂದ ತಪ್ಪಿಹೋಗುವನು'' (೧-೨-೧) ಎಂದು ಹೇಳಿತ್ತಷ್ಟೆ. ಅದು ಏಕೆಂದರೆ -

ದೂರಮೇತೇ ವಿಪರೀತೇ ವಿಷೂಚೀ
ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ ।
ವಿದ್ಯಾಭೀಪ್ಸಿನಂ ನಚಿಕೇತಸಂ ಮನ್ಯೇ
ನ ತ್ವಾ ಕಾಮಾ ಬಹವೋಽಲೋಲುಪನ್ತ ॥ ೪ ॥

೪. ಯಾವದು ಅವಿದ್ಯೆಯೆಂದೂ ಯಾವದು ವಿದ್ಯೆಯೆಂದೂ ತಿಳಿದು ಬಂದಿರುವದೋ - ಈ ಎರಡೂ ದೂರವಾಗಿ ವಿರುದ್ಧವಾಗಿರುವವು, ಬೇರೆ ಹೋಗಿರುವವು. ನಚಿಕೇತನನ್ನು ವಿದ್ಯಾಭೀಪ್ಸೆಯುಳ್ಳವನೆಂದು ಎಣಿಸುತ್ತೇನೆ. ನಿನ್ನನ್ನು ಕಾಮಗಳು ಬಹಳವಾಗಿ ಆಶೆಗೊಳಿಸಲಿಲ್ಲ.

(ಭಾಷ್ಯ)

೫೩. ದೂರಂ ದೂರೇಣ ಮಹತಾ ಅನ್ತರೇಣ ಏತೇ ವಿಪರೀತೇ ಅನ್ಯೋನ್ಯವ್ಯಾವೃತ್ತರೂಪೇ ವಿವೇಕಾವಿವೇಕಾತ್ಮಕತ್ವಾತ್, ತಮಃಪ್ರಕಾಶಾ ವಿವ । ವಿಷೂಚೀ ವಿಷೂಚ್ಯೌ ನಾನಾಗತೀ ಭಿನ್ನಫಲೇ ಸಂಸಾರಮೋಕ್ಷಹೇತು ತ್ವೇನ ಇತ್ಯೇತತ್ । ಕೇ ತೇ ಇತಿ ? ಉಚ್ಯತೇ । ಯಾ ಚ ಅವಿದ್ಯಾ ಪ್ರೇಯೋ ವಿಷಯಾ ವಿದ್ಯಾ ಇತಿ ಚ ಶ್ರೇಯೋವಿಷಯಾ ಜ್ಞಾತಾ ನಿರ್ಜ್ಞಾತಾ ಅವಗತಾ ಪಣ್ಡಿತೈಃ । ತತ್ರ ವಿದ್ಯಾಭೀಪ್ಸಿನಂ ವಿದ್ಯಾರ್ಥಿನಂ ನಚಿಕೇತಸಂ ತ್ವಾಮ್ ಅಹಂ ಮನ್ಯೇ । ಕಸ್ಮಾತ್ ? ಯಸ್ಮಾದ್ ಅವಿದ್ವದ್ಬುದ್ಧಿಪ್ರಲೋಭಿನಃ ಕಾಮಾ ಅಪ್ಸರಃ ಪ್ರಭೃತಯೋ ಬಹವೋಽಪಿ ತ್ವಾ ತ್ವಾಂ ನ ಅಲೋಲುಪನ್ತ ನ ವಿಚ್ಛೇದಂ ಕೃತವನ್ತಃ ಶ್ರೇಯೋ ಮಾರ್ಗಾತ್ ಆತ್ಮೋಪಭೋಗಾಭಿವಾಞ್ಛಾಸಮ್ಪಾದನೇನ । ಅತೋ ವಿದ್ಯಾರ್ಥಿನಂ ಶ್ರೇಯೋಭಾಜನಂ ಮನ್ಯೇ ಇತ್ಯಭಿ ಪ್ರಾಯಃ ॥

(ಭಾಷ್ಯಾರ್ಥ)

ಈ ಎರಡೂ 'ದೂರ' (ಒಂದಕ್ಕೊಂದು) ದೂರದಲ್ಲಿ(ರುವವು), ಬಹಳ ಅಂತರವುಳ್ಳವು. **ವಿರುದ್ಧವಾಗಿರುವವು, ವಿವೇಕರೂಪವಾಗಿಯೂ ಅವಿವೇಕ ರೂಪವಾಗಿಯೂ**[1] **ಇರುವದರಿಂದ ಕತ್ತಲೆಬೆಳಕುಗಳ ಹಾಗೆ ಒಂದಕ್ಕೊಂದು (ತೀರ) ಭಿನ್ನವಾದ ರೂಪವಾಗಿರತಕ್ಕವು.** ''ವಿಷೂಚೀ'' = ''ವಿಷೂಚ್ಯೌ'' ಬೇರೆ ಬೇರೆ ಹೋಗಿರುವವು, (ಒಂದು) ಸಂಸಾರಕ್ಕೂ (ಇನ್ನೊಂದು) ಮೋಕ್ಷಕ್ಕೂ ಕಾರಣ ವಾಗಿರುವದರಿಂದ ಬೇರೆಬೇರೆಯ ಫಲಗಳನ್ನು ಕೊಡತಕ್ಕವು ಎಂದರ್ಥ. ಇವೆರಡೂ ಯಾವವು ? ಎಂದರೆ ಹೇಳುತ್ತಾನೆ ; ಯಾವದು ಪ್ರೇಯಸ್ಸಿನ ವಿಷಯವಾದ **ಅವಿದ್ಯೆ** ಯೆಂದೂ, ಮತ್ತು (ಯಾವದು) ಶ್ರೇಯಸ್ಸಿನ ವಿಷಯವಾದ **ವಿದ್ಯೆ**ಯೆಂದೂ ತಿಳಿದು ಬಂದಿರುವದೋ ಅರಿಕೆಯಾಗಿರುವವೋ ಪಂಡಿತರಿಗೆ ನಿಶ್ಚಯವಾಗಿರುವವೋ (ಅವು). ಇವುಗಳಲ್ಲಿ ನಚಿಕೇತನನ್ನು ಎಂದರೆ ನಿನ್ನನ್ನು ವಿದ್ಯಾಭೀಪ್ಸೆಯುಳ್ಳವನೆಂದು ವಿದ್ಯೆಯನ್ನು ಬಯಸುವವನೆಂದು ನಾನು ಎಣಿಸುತ್ತೇನೆ. ಏಕೆ ? ಏಕೆಂದರೆ ತಿಳಿಯದವರ ಬುದ್ಧಿಯನ್ನು ಸೆಳೆಯುವಂಥ ಅಪ್ಸರಃಸ್ತ್ರೀಯರೇ ಮುಂತಾದ ಬಹಳ ಕಾಮಗಳು ಕೂಡ ನಿನ್ನನ್ನು ಬಿಡಿಸಿಕೊಂಡುಹೋಗಿಲ್ಲ, ತಮ್ಮನ್ನು ಉಪಭೋಗಿಸೆಂದು ಇಚ್ಛೆಯನ್ನುಂಟುಮಾಡಿ ಶ್ರೇಯಸ್ಸಿನ ಮಾರ್ಗದಿಂದ ತಪ್ಪಿಸಿರುವದಿಲ್ಲ. ಆದ್ದರಿಂದ ವಿದ್ಯೆಯನ್ನು ಬಯಸಿ ಶ್ರೇಯಸ್ಸನ್ನು ಪಡೆಯುವವನೆಂದು ಎಣಿಸುತ್ತೇನೆ ಎಂದು ಅಭಿಪ್ರಾಯ.

**ಅವಿದ್ಯಾಯಾಮನ್ತರೇ ವರ್ತಮಾನಾಃ**
**ಸ್ವಯಂ ಧೀರಾಃ ಪಣ್ಡಿತಂ ಮನ್ಯಮಾನಾಃ ।**
**ದನ್ದ್ರಮ್ಯಮಾಣಾಃ ಪರಿಯನ್ತಿ ಮೂಢಾ**
**ಅನ್ಧೇನೈವ ನೀಯಮಾನಾ ಯಥಾನ್ಧಾಃ** ॥ ೫ ॥

೫. ಅವಿದ್ಯೆಯ ನಡುವೆ ಇರುವವರಾಗಿ ತಾವೇ ಧೀರರು ಪಂಡಿತರು ಎಂದೆಣಿಸಿಕೊಂಡು ವಕ್ರವಾಗಿ ನಡೆಯುತ್ತಾ ಕುರುಡನೇ ಕರೆದುಕೊಂಡು ಹೋಗು ತ್ತಿರುವ ಕುರುಡರ ಹಾಗೆ ಮೂಢರು ತೊಳಲುತ್ತಿರುವರು.

(ಭಾಷ್ಯ)

**೫೪. ಯೇ ತು ಸಂಸಾರಭಾಜನಾಃ ಅವಿದ್ಯಾಯಾಮ್ ಅನ್ತರೇ ಮಧ್ಯೇ ಘನೀಭೂತೇ ಇವ ತಮಸಿ ವರ್ತಮಾನಾಃ ವೇಷ್ಟ್ಯಮಾನಾಃ ಪುತ್ರ**

1. ಇಲ್ಲಿ ಅವಿವೇಕವೆಂದರೆ ವಿಂಗಡಿಸಿ ತಿಳಿಯದೆ ಇರುವದು ಎಂಬಷ್ಟೆ ಅರ್ಥವಲ್ಲ. ಒಂದನ್ನೊಂದೆಂದು ಕಲೆಬೆರಕೆಮಾಡಿಕೊಂಡು ತಿಳಿಯುವದು ಎಂದು ಅರ್ಥ. ಇದನ್ನೇ 'ಅಧ್ಯಾಸ'ವೆಂದು ಕರೆಯುವರು.

ಪಶ್ವಾದಿತೃಷ್ಣಾಪಾಶಶತೈಃ ಸ್ವಯಂ[1] ಧೀರಾಃ ಪ್ರಜ್ಞಾವನ್ತಃ ಪಣ್ಡಿತಾಃ ಶಾಸ್ತ್ರಕುಶಲಾಶ್ಚ ಇತಿ ಮನ್ಯಮಾನಾಃ ತೇ ದನ್ದ್ರಮ್ಯಮಾಣಾಃ ಅತ್ಯರ್ಥಂ ಕುಟಿಲಾಮ್ ಅನೇಕಾಂ ಗತಿಂ ಗಚ್ಛನ್ತಃ ಜರಾಮರಣರೋಗಾದಿದುಃಖೈಃ ಪರಿಯನ್ತಿ ಪರಿಗಚ್ಛನ್ತಿ ಮೂಢಾ ಅವಿವೇಕಿನಃ ಅನ್ಧೇನೈವ ದೃಷ್ಟಿವಿಹೀನೇನೈವ ನೀಯಮಾನಾ ವಿಷಮೇ ಪಥಿ ಯಥಾ ಬಹವಃ ಅನ್ಧಾಃ ಮಹಾನ್ತಮ್ ಅನರ್ಥಮ್ ಋಚ್ಛನ್ತಿ, ತದ್ವತ್ ॥

(ಭಾಷ್ಯಾರ್ಥ)

ಆದರೆ ಯಾರು ಸಂಸಾರಕ್ಕೆ ತಕ್ಕವರಾಗಿ ದಟವಾಗಿರುವ ಕತಲೆಯಲಿರು(ವವ)ರಂತೆ ಅವಿದ್ಯೆಯ ನಡುವೆ ಇರುವವರಾಗಿ ಮಕ್ಕಳುಮರಿಗಳು, ದನಕರುಗಳು- ಮುಂತಾದವುಗಳ ಬಯಕೆಗಳೆಂಬ ನೂರಾರು ಹಗ್ಗಗಳಿಗೆ ಕಟ್ಟುಬಿದ್ದು ತಾವೇ ಧೀರರು ತಿಳಿವಳಿಕೆಯುಳ್ಳವರು ಮತ್ತು ಪಂಡಿತರು, ಶಾಸ್ತ್ರದಲ್ಲಿ ಜಾಣರು ಎಂದು ತಿಳಿದುಕೊಳ್ಳುತ್ತಾರೋ ಅಂಥವರು 'ದನ್ದ್ರಮ್ಯಮಾಣಾಃ' ಬಹಳವಾಗಿ ಡೊಂಕುಡೊಂಕಾಗಿರುವ ಬಲುಬಗೆಯ (ಕರ್ಮ)ಗತಿಯಲ್ಲಿ ನಡೆಯುತ್ತಾ ಮುಪ್ಪು, ಸಾವು, ಬೇನೆ - ಮುಂತಾದ ದುಃಖಗಳಿಂದ ಮೂಢರು (ಈ) ಅವಿವೇಕಿಗಳು ತೊಳಲುತ್ತಿರುವರು, (ಸಂಸಾರದಲ್ಲಿ) ಸುತ್ತುತ್ತಿರುವರು. ತಗ್ಗುತಿಟ್ಟಿನ (ದಾರಿಯಲ್ಲಿ) ಕುರುಡನೇ, ಕಣ್ಣಿಲ್ಲದವನೇ, ಕರೆದುಕೊಂಡು ಹೋಗುತ್ತಿರುವ ಬಲುಮಂದಿ ಕುರುಡರು ಹೇಗೆ ಹೆಚ್ಚಿನ ಅನರ್ಥವನ್ನು ಪಡೆಯುವರೋ ಅದರಂತೆ (ಇವರೂ ತೊಳಲುತ್ತಿರುವರು).[2]

ನ ಸಾಮ್ಪರಾಯಃ ಪ್ರತಿಭಾತಿ ಬಾಲಂ
　　ಪ್ರಮಾದ್ಯನ್ತಂ ವಿತ್ತಮೋಹೇನ ಮೂಢಮ್ ।
ಅಯಂ ಲೋಕೋ ನಾಸ್ತಿ ಪರ ಇತಿ ಮಾನೀ
　　ಪುನಃಪುನರ್ವಶಮಾಪದ್ಯತೇ ಮೇ　　॥ ೬ ॥

೬. ಪ್ರಮತ್ತನಾಗಿರುವ, ವಿತ್ತದ ಮೋಹದಿಂದ ಮೂಢನಾಗಿರುವ, ಬಾಲಕನಿಗೆ ಸಾಂಪರಾಯವು ತೋರುವದಿಲ್ಲ. ಇದೇ ಲೋಕವು, ಪರ(ಲೋಕ)ವಿಲ್ಲ- ಎಂದು ತಿಳಿದುಕೊಂಡವನು ಮತ್ತೆಮತ್ತೆ ನನ್ನ ವಶವನ್ನೈದುವನು.

(ಭಾಷ್ಯ)

೫೫. ಅತ ಏವ ಮೂಢತ್ವಾತ್ ನ ಸಾಮ್ಪರಾಯಃ ಪ್ರತಿಭಾತಿ । ಸಂಪರೇಯತೇ ಇತಿ ಸಮ್ಪರಾಯಃ ಪರಲೋಕಃ ತತ್ಪ್ರಾಪ್ತಿಪ್ರಯೋಜನಃ

1. (ಅ॥) ಪಯಂ ಎಂಬ ಮಾತು ಹೆಚ್ಚಾಗಿದೆ ; ಅದಿಲ್ಲದಿದ್ದರೂ ಸಾಗುತ್ತದೆ.
2. ಮುಂ. ೧-೨-೮ರ ಭಾಷ್ಯವನ್ನು ಇದಕ್ಕೆ ಹೋಲಿಸಿ ನೋಡಿರಿ.

ಸಾಧನವಿಶೇಷಃ ಶಾಸ್ತ್ರೀಯಃ ಸಾಮ್ಪರಾಯಃ । ಸ ಚ ಬಾಲಮ್ ಅವಿವೇಕಿನಂ ಪ್ರತಿ ನ ಭಾತಿ ನ ಪ್ರಕಾಶತೇ ನೋಪತಿಷ್ಠತೇ ಇತ್ಯೇತತ್ । ಪ್ರಮಾದ್ಯನ್ತಂ ಪ್ರಮಾದಂ ಕುರ್ವನ್ತಂ ಪುತ್ರಪಶ್ವಾದಿಪ್ರಯೋಜನೇಷು ಆಸಕ್ತಮನಸಮ್ । ತಥಾ ವಿತ್ತ ಮೋಹೇನ ವಿತ್ತನಿಮಿತ್ತೇನ ಅವಿವೇಕೇನ ಮೂಢಂ ತಮಸಾಚ್ಛನ್ನಂ ಸನ್ತಮ್ । ಅಯಮೇವ ಲೋಕಃ ಯೋಽಯಂ ದೃಶ್ಯಮಾನಃ ಸ್ತ್ರ್ಯನ್ನಪಾನಾದಿವಿಶಿಷ್ಟಃ ನಾಸ್ತಿ ಪರಃ ಅದೃಷ್ಟೋ ಲೋಕಃ ಇತಿ ಏವಂ ಮನನಶೀಲೋ ಮಾನೀ ಪುನಃ ಪುನಃ ಜನಿತ್ವಾ ವಶಮ್ ಅಧೀನತಾಮ್ ಆಪದ್ಯತೇ ಮೇ ಮೃತ್ಯೋರ್ಮಮ । ಜನನಮರಣಾದಿಲಕ್ಷಣದುಃಖಪ್ರಬನ್ಧಾರೂಢ ಏವ ಭವತಿ ಇತ್ಯರ್ಥಃ । ಪ್ರಾಯೇಣ ಹ್ಯೇವಂವಿಧ ಏವ ಲೋಕಃ ॥

(ಭಾಷ್ಯಾರ್ಥ)

ಹೀಗೆ ಮೂಢನಾಗಿರುವದರಿಂದಲೇ ಸಾಂಪರಾಯವು ತೋರುವದಿಲ್ಲ. 'ಸಂಪರಾ ಈಯತೇ' ಸತ್ತಬಳಿಕ ಸರಿಯಾಗಿ ಸೇರಿಕೊಳ್ಳತಕ್ಕದ್ದಾದ್ದರಿಂದ ಪರಲೋಕವು ಸಂಪರಾಯವೆನಿಸುವದು ಅದನ್ನು ಪಡೆಯುವದಕ್ಕೆ ಕಾರಣವಾಗಿ ರುವ ಶಾಸ್ತ್ರದಲ್ಲಿ ಹೇಳಿರುವ ಆಯಾ ಸಾಧನವೇ ಸಾಂಪರಾಯವು. ಅಂಥ (ಸಾಂಪ ರಾಯವು) ಬಾಲನಿಗೆ ಎಂದರೆ ಅವಿವೇಕಿಯಾದವನಿಗೆ ತೋರುವದಿಲ್ಲ, (ಅವನಿಗೆ) ಬೆಳಗುವದಿಲ್ಲ, ಅವನ ಹತ್ತಿರ ಬರುವದಿಲ್ಲ ಎಂದರ್ಥ. ಪ್ರಮತ್ತನಾಗಿರುವ ಎಂದರೆ ಪ್ರಮಾದವನ್ನು ಮಾಡುತ್ತಿರುವ, ಮಕ್ಕಳುಮರಿಗಳು, ದನಕರುಗಳು - ಮುಂತಾದ ಪ್ರಯೋಜನಗಳಲ್ಲಿ ಆಸಕ್ತವಾಗಿರುವ ಮನಸ್ಸಿನ, ವಿತ್ತದ ಮೋಹದಿಂದ ವಿತ್ತದ ಕಾರಣದಿಂದಾಗಿರುವ ಅವಿವೇಕದಿಂದ ಮೂಢನಾಗಿರುವ, (ಅಜ್ಞಾನದ) ಮಬ್ಬು ಕವಿದಿರುವ (ಬಾಲನಿಗೆ ಪರಲೋಕಸಾಧನವು ತೋಚುವದಿಲ್ಲ). ಇದೇ, ಎಂದರೆ ಹೆಂಗಸರು, ಅನ್ನಪಾನಗಳು - ಮುಂತಾದವುಗಳಿಂದ ಕೂಡಿ 'ಇಗೋ ಕಾಣುತ್ತಿದೆ ಯಲ್ಲ, ಈ (ಲೋಕವೇ) ಲೋಕವು, ನಾವು ಕಾಣದ ಮತ್ತೊಂದು (ಪರ)ಲೋಕ ವೆಂಬುದಿಲ್ಲ' ಎಂದೀ ಪರಿಯಲ್ಲಿ ಸ್ವಭಾವದಿಂದ ಯೋಚಿಸಿಕೊಳ್ಳುತ್ತಾ (ಅವನು) ಮತ್ತೆ ಮತ್ತೆ ಹುಟ್ಟಿ ನನ್ನ, ಮೃತ್ಯುವಾದ ನನ್ನ, ವಶವನ್ನು ಅಧೀನತೆಯನ್ನು, ಹೊಂದುತ್ತಿರುವನು. ಹುಟ್ಟುವದು, ಸಾಯುವದು - ಮುಂತಾದ ರೂಪದ ದುಃಖದ ಸಾಲನ್ನೇರಿಕೊಂಡೇ ಇರುವನು ಎಂದರ್ಥ.

ಬಲುಮಟ್ಟಿಗೆ ಜನರು ಈ ವಿಧವಾಗಿಯೇ ಇರುತ್ತಾರೆ.[1]

1. ಇದು ಮುಂದಿನ ಮಂತ್ರಕ್ಕೆ ಸಂಬಂಧವನ್ನು ತೋರಿಸುವದಕ್ಕೆ ಬಂದಿದೆ.

(ಭಾಷ್ಯ)

೫೬. ಯಸ್ತು ಶ್ರೇಯೋಽರ್ಥೀ ಸ ಸಹಸ್ರೇಷು ಕಶ್ಚಿದೇವ ಆತ್ಮವಿದ್ ಭವತಿ ತ್ವದ್ವಿಧಃ । ಯಸ್ಮಾತ್ -

(ಭಾಷ್ಯಾರ್ಥ)

ಆದರೆ ಯಾವನು ಶ್ರೇಯಸ್ಸನ್ನೇ ಬಯಸುವನೋ ಅಂಥವನು ಸಾವಿರದಲ್ಲಿ[1] ನಿನ್ನಂಥ ಯಾವನೋ ಒಬ್ಬನೇ ಆತ್ಮಜ್ಞಾನಿಯಾಗುವನು. ಏಕೆಂದರೆ :-

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ
ಶೃಣ್ವನ್ತೋಽಪಿ ಬಹವೋ ಯಂ ನ ವಿದ್ಯುಃ ।
ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ
ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥ ೭ ॥

೭. ಬಹುಜನರಿಗೆ ಶ್ರವಣಕ್ಕೂ ಯಾವಾತನು ಸಿಕ್ಕುವಂತಿಲ್ಲವೋ, ಕೇಳಿದಮೇಲೂ ಯಾವಾತನನ್ನು ಬಹುಜನರು ಅರಿಯದೆ ಇರುವರೋ (ಅಂಥ) ಇವನನ್ನು ಹೇಳುವವನು ಆಶ್ಚರ್ಯರೂಪನು, ಪಡೆಯುವವನು ಕುಶಲನು, ಕುಶಲನಿಂದ ಹೇಳಿಸಿಕೊಂಡು ತಿಳಿದುಕೊಳ್ಳುವಾತನು ಆಶ್ಚರ್ಯರೂಪನು.

(ಭಾಷ್ಯ)

೫೭. ಶ್ರವಣಾಯಾಪಿ ಶ್ರವಣಾರ್ಥಂ ಶ್ರೋತುಮಪಿ ಯಃ ನ ಲಭ್ಯಃ ಆತ್ಮಾ ಬಹುಭಿಃ ಅನೇಕೈಃ । ಶೃಣ್ವನ್ತೋಽಪಿ ಬಹವಃ ಅನೇಕೇ ಅನ್ಯೇ ಯಮ್ ಆತ್ಮಾನಂ ನ ವಿದ್ಯುಃ ನ ವಿದನ್ತಿ ಅಭಾಗಿನಃ ಅಸಂಸ್ಕೃತಾತ್ಮಾನಃ ನ ವಿಜಾನೀಯುಃ । ಕಿಂ ಚ ಅಸ್ಯ ವಕ್ತಾಪಿ ಆಶ್ಚರ್ಯಃ ಅದ್ಭುತವದೇವ ಅನೇಕೇಷು ಕಶ್ಚಿದೇವ ಭವತಿ । ತಥಾ ಶ್ರುತ್ವಾಪಿ ಅಸ್ಯ ಆತ್ಮನಃ ಕುಶಲಃ ನಿಪುಣ ಏವ ಅನೇಕೇಷು ಲಬ್ಧಾ ಕಶ್ಚಿದೇವ ಭವತಿ । ಯಸ್ಮಾತ್ ಆಶ್ಚರ್ಯಃ ಜ್ಞಾತಾ ಕಶ್ಚಿದೇವ ಕುಶಲಾನುಶಿಷ್ಟಃ ಕುಶಲೇನ ನಿಪುಣೇನ ಆಚಾರ್ಯೇಣ ಅನುಶಿಷ್ಟಃ ಸನ್ ॥

(ಭಾಷ್ಯಾರ್ಥ)

ಶ್ರವಣಕ್ಕೆ ಕೂಡ ಎಂದರೆ ಶ್ರವಣದ ಪ್ರಯೋಜನಕ್ಕೆ, ಕೇಳುವದಕ್ಕೆ ಕೂಡ ಯಾವ (ಈ) ಆತ್ಮನು ಬಹುಜನರಿಗೆ ಅನೇಕರಿಗೆ ಸಿಕ್ಕುವಂತಿಲ್ಲ. ಕೇಳಿದಮೇಲೂ ಬಹುಜನರು ಇನ್ನೂ ಅನೇಕರು ಯಾವ (ಈ) ಆತ್ಮನನ್ನು ಅರಿಯದೆ ಇರುವರು ತಿಳಿಯಲಾರರು ; ಮಂದಭಾಗ್ಯರಾದ (ಅವರು) ಮನಸ್ಸಿನ ಸಂಸ್ಕಾರವಿಲ್ಲದವ

1. ಗೀ. ೭-೩

ರಾದ್ದರಿಂದ ಅರಿಯಲಾರದೆ ಇರುವರು. ಮತ್ತು ಈ(ಆತ್ಮನನ್ನು) ಹೇಳುವವನೂ ಆಶ್ಚರ್ಯರೂಪನು, ಅದ್ಭುತಸ್ವರೂಪನೇ ಎಂಬಂತೆ ಬಲುಮಂದಿಯಲ್ಲಿ ಯಾರೋ ಒಬ್ಬನು ಮಾತ್ರ ಇರುತ್ತಾನೆ. ಇದರಂತೆ ಕೇಳಿದಮೇಲೆಯೂ ಈ ಆತ್ಮನನ್ನು ಪಡೆಯುವವನು ಕುಶಲನು, ಜಾಣನೇ ; ಅನೇಕರಲ್ಲಿ ಯಾರೋ ಒಬ್ಬನು ಮಾತ್ರ ಇರುತ್ತಾನೆ ; ಏಕೆಂದರೆ ಕುಶಲನಾದ ಜಾಣನಾದ, ಗುರುವಿನಿಂದ ಹೇಳಿಸಿಕೊಂಡು ತಿಳಿದುಕೊಳ್ಳುವಾತನು ಯಾರೋ ಒಬ್ಬನು ಮಾತ್ರ.

ನ ನರೇಣಾವರೇಣ ಪ್ರೋಕ್ತ ಏಷ
ಸುವಿಜ್ಞೇಯೋ ಬಹುಧಾ ಚಿನ್ತ್ಯಮಾನಃ ।
ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ
ಅಣೀಯಾನ್ ಹ್ಯತರ್ಕ್ಯಮಣುಪ್ರಮಾಣಾತ್ ॥೮॥

೮. ಕಡಿಮೆಯ ನರನಿಂದ ಹೇಳಲ್ಪಟ್ಟರೆ ಬಹುವಾಗಿ ಚಿಂತಿಸಲ್ಪಡುತ್ತಿರುವ ಈತನು ಸುವಿಜ್ಞೇಯನಲ್ಲ. ಅನನ್ಯಪ್ರೋಕ್ತನಾದರೆ ಈತನಲ್ಲಿ ಗತಿ ಎಂಬುದು ಇರುವದಿಲ್ಲ. ಅಣುಪ್ರಮಾಣವಾದದ್ದಕ್ಕಿಂತ ಅಣುವಾಗಿರುವ (ಈತನು) ಅತರ್ಕ್ಯನು.

(ಭಾಷ್ಯ)

೫೮. ಕಸ್ಮಾತ್ ? ನ ಹಿ ನರೇಣ ಮನುಷ್ಯೇಣ ಅವರೇಣ ಪ್ರೋಕ್ತಃ ಅವರೇಣ ಹೀನೇನ, ಪ್ರಾಕೃತಬುದ್ಧಿನಾ ಇತ್ಯೇತತ್ । ಉಕ್ತಃ ಏಷಃ ಆತ್ಮಾ ಯಂ ತ್ವಂ ಮಾಂ ಪೃಚ್ಛಸಿ । (ಸುವಿಜ್ಞೇಯಃ) ನ ಹಿ ಸುಷ್ಠುಃ ಸಮ್ಯಕ್ ವಿಜ್ಞೇಯಃ ವಿಜ್ಞಾತುಂ ಶಕ್ಯಃ । ಯಸ್ಮಾತ್ ಬಹುಧಾ ಅಸ್ತಿ, ನಾಸ್ತಿ, ಕರ್ತಾ, ಅಕರ್ತಾ, ಶುದ್ಧಃ, ಅಶುದ್ಧಃ- ಇತ್ಯಾದ್ಯನೇಕಧಾ ಚಿನ್ತ್ಯಮಾನಃ ವಾದಿಭಿಃ । ಕಥಂ ಪುನಃ ಸುವಿಜ್ಞೇಯಃ ಇತಿ ? ಉಚ್ಯತೇ । ಅನನ್ಯಪ್ರೋಕ್ತೇ ಅನನ್ಯೇನ ಅಪೃಥಗ್ದರ್ಶಿನಾ ಆಚಾರ್ಯೇಣ ಪ್ರತಿಪಾದ್ಯಬ್ರಹ್ಮಾತ್ಮಭೂತೇನ ಪ್ರೋಕ್ತೇ ಉಕ್ತೇ ಆತ್ಮನಿ ಗತಿಃ ಅನೇಕಧಾ 'ಅಸ್ತಿ', 'ನಾಸ್ತಿ' ಇತ್ಯಾದಿಲಕ್ಷಣಾ ಚಿನ್ತಾ (ಗತಿಃ?) ಅತ್ರ ಅಸ್ಮಿನ್ನಾತ್ಮನಿ ನಾಸ್ತಿ ನ ವಿದ್ಯತೇ । ಸರ್ವವಿಕಲ್ಪ(ಗತಿ?) ಪ್ರತ್ಯಸ್ತಮಿತತ್ವಾದಾತ್ಮನಃ । ಅಥವಾ ಸ್ವಾತ್ಮಭೂತೇ ಅನನ್ಯಸ್ಮಿನ್ ಆತ್ಮನಿ ಪ್ರೋಕ್ತೇ ಅನನ್ಯಪ್ರೋಕ್ತೇ ಗತಿಃ, ಅತ್ರ ಅನ್ಯಾವಗತಿಃ ನಾಸ್ತಿ । ಜ್ಞೇಯಸ್ಯ ಅನ್ಯಸ್ಯ ಅಭಾವಾತ್ । ಜ್ಞಾನಸ್ಯ ಹ್ಯೇಷಾ ಪರಾ ನಿಷ್ಠಾ ಯದಾತ್ಮೈಕತ್ವವಿಜ್ಞಾನಮ್ ಅತಃ ಅವಗನ್ತವ್ಯಾಭಾವಾತ್ ನ ಗತಿರತ್ರ ಅವಶಿಷ್ಯತೇ । ಸಂಸಾರಗತಿರ್ವಾ ನಾಸ್ತಿ ಅನನ್ಯೇ[1] ಆತ್ಮನಿ ಪ್ರೋಕ್ತೇ । ನಾನ್ತರೀಯಕತ್ವಾತ್ ತದ್ವಿಜ್ಞಾನಫಲಸ್ಯ ಮೋಕ್ಷಸ್ಯ ಅಥವಾ ಪ್ರೋಚ್ಯಮಾನಬ್ರಹ್ಮಾತ್ಮಭೂತೇನ

1. 'ಅನನ್ಯಸ್ಮಿನ್' ಎಂದಿರಬೇಕಾದದು ಲೇಖಕರ ಪ್ರಮಾದದಿಂದ ಹೀಗೆ ಆಗಿರಬಹುದೆ?

ಆಚಾರ್ಯೇಣ ಅನನ್ಯತಯಾ[1] ಪ್ರೋಕ್ತೇ ಆತ್ಮನಿ ಅಗತಿಃ ಅನವಬೋಧಃ ಪರಿಜ್ಞಾನಮ್ ಅತ್ರ ನಾಸ್ತಿ । ಭವತ್ಯೇವ ಅವಗತಿಸ್ತದ್ವಿಷಯಾ ಶ್ರೋತುಃ 'ತದನನ್ಯೋಽಹಮ್' ಇತಿ ಆಚಾರ್ಯಸ್ಯೇವ ಇತ್ಯರ್ಥಃ । ಏವಂ ಸುವಿಜ್ಞೇಯ ಆತ್ಮಾ ಆಗಮವತಾ ಆಚಾರ್ಯೇಣ ಅನನ್ಯತಯಾ ಪ್ರೋಕ್ತಃ ॥

(ಭಾಷ್ಯಾರ್ಥ)

ಏಕೆಂದರೆ[2] : ಕಡಿಮೆಯ ನರನಿಂದ ಮನುಷ್ಯನಿಂದ - ಕಡಿಮೆಯ ಎಂದರೆ ಕೀಳುತೆರನಾದ, ಸಾಮಾನ್ಯಬುದ್ಧಿಯ ಎಂದರ್ಥ - ಹೇಳಲ್ಪಟ್ಟರೆ,[3] ನೀನು ಯಾವ (ಆತ್ಮನನ್ನು) ನನ್ನನ್ನು ಕೇಳುತ್ತಿರುವೆಯೋ ಆ ಈ ಆತ್ಮನು ಸುವಿಜ್ಞೇಯನಲ್ಲ (ಸು- ಎಂದರೆ) ಚೆನ್ನಾಗಿ ವಿಜ್ಞೇಯನಲ್ಲ, ಅರಿತುಕೊಳ್ಳುವದಕ್ಕೆ ಆಗುವವನಲ್ಲ' ಏಕೆಂದರೆ 'ಇದಾನೆ', 'ಇಲ್ಲ', 'ಕರ್ತೃ', 'ಕರ್ತೃವಲ್ಲ', 'ಶುದ್ಧನು', 'ಅಶುದ್ಧನು' - ಎಂದು ಮುಂತಾಗಿ ವಾದಿಗಳು (ಈತನನ್ನು) ಬಹುವಾಗಿ ಅನೇಕರೀತಿಯಲ್ಲಿ ಚಿಂತಿಸುತ್ತಿರುವರು.[4]

ಹಾಗಾದರೆ (ಈತನನ್ನು) ಸುಲಭವಾಗಿ ತಿಳಿಯುವದು ಹೇಗೆ ? ಎಂದರೆ ಹೇಳುತ್ತಾನೆ : (೧) ಅನನ್ಯಪ್ರೋಕ್ತನಾದರೆ, ಎಂದರೆ ಅನನ್ಯವಾದ ಎಂದರೆ ನಾನು (ಆತ್ಮನಿಗಿಂತ) ಬೇರೆಯಲ್ಲವೆಂದು ಕಂಡುಕೊಂಡಿರುವ, ಪ್ರತಿಪಾದ್ಯವಾದ ಬ್ರಹ್ಮದ ಸ್ವರೂಪವೇ ಆಗಿರುವ, ಆಚಾರ್ಯನಿಂದ ಪ್ರೋಕ್ತನಾದರೆ ಎಂದರೆ ಹೇಳಲ್ಪಟ್ಟರೆ ಇಲ್ಲಿ ಎಂದರೆ ಈ ಆತ್ಮನಲ್ಲಿ ಗತಿಯು 'ಇದಾನೆ', 'ಇಲ್ಲ'- ಮುಂತಾದ ಅನೇಕರೀತಿಯ ಚಿಂತೆಯು[5] ಇರುವದಿಲ್ಲ. ಏಕೆಂದರೆ ಎಲ್ಲಾ ವಿಕಲ್ಪಗಳೂ[6] ಅಡಗಿಹೋದ ರೂಪವೇ ಆತ್ಮನದು. (೨) ಅಥವಾ (ಅನನ್ಯಪ್ರೋಕ್ತೇ ಎಂದರೆ) ತನ್ನ ಆತ್ಮನೇ ಆಗಿರುವ ಅನನ್ಯವಾದ ಆತ್ಮನು ಪ್ರೋಕ್ತನಾದರೆ (ಹೇಳಲ್ಪಟ್ಟರೆ), ಇಲ್ಲಿ ಗತಿಯು ಎಂದರೆ

---

1. (ವಾ॥) ಪಾಠ. 2. ಶ್ರವಣಮಾಡಿದರೂ ತಿಳಿಯುವದಿಲ್ಲವೆನ್ನುವದೇಕೆ ?- ಎಂದರೆ. 3. 'ಪ್ರೋಕ್ತಃ ಉಕ್ತಃ' ಎಂದು ಭಾಷ್ಯಕಾರರು ಬರೆದಿದ್ದರೂ ಇರಬಹುದು. ಅಥವಾ ಪ್ರೋಕ್ತಃ ಎಂಬ ಮಾತು ದೂರವಾಯಿತೆಂದು ಮತ್ತೊಂದುಸಲ ಅನ್ವಯಕ್ಕಾಗಿ ಹೀಗೆ ಬರೆದು ಕೊಂಡಿದ್ದರೂ ಇರಬಹುದು.

4. ಆತ್ಮನು ಯಾವ ವಿಶೇಷವೂ ಇಲ್ಲದ ಸ್ವರೂಪದವನಾದರೂ ವಾದಿಗಳೂ ಅದನ್ನರಿಯದೆ ಹೀಗಿರುವನು, ಹೀಗಿಲ್ಲ ಎಂದು ವಿಕಲ್ಪಿಸುತ್ತಿರುವರು. ಐ. ಒಂದನೆಯ ಅಧ್ಯಾಯದ ಕೊನೆಯಲ್ಲಿರುವ ಚರ್ಚಾಭಾಷ್ಯದಲ್ಲಿ ಈ ವಿಕಲ್ಪಗಳನ್ನು ವಿವರಿಸಿದೆ.

5. ಪ್ರಶ್ನೆಯ ಚಿಹ್ನೆಯನ್ನು ಹಾಕಿರುವ ಕಡೆಯಲ್ಲಿ ಗತಿಶಬ್ದವು ಭಾಷ್ಯದಲ್ಲಿಲ್ಲದಿದ್ದರೂ ಸಾಗುತ್ತದೆ

6. ಮುಂ. ೧-೨-೮ನೋಡಿ. ಆತ್ಮಜ್ಞಾನವಾದಮೇಲೆ ಸಂಶಯಗಳು ಉಳಿಯುವದೇ ಇಲ್ಲ.

ಮತ್ತೊಂದನ್ನು ಅರಿಯುವ (ಅವಗತಿಯು) ಇರುವದಿಲ್ಲ ; ಏಕೆಂದರೆ ತಿಳಿಯಬೇಕಾದದ್ದು ಇನ್ನೊಂದು ಇರುವದಿಲ್ಲ[1]. ಆತನು ಒಬ್ಬನೇ ಎಂದು ತಿಳಿಯುವ ಇದೇ ಜ್ಞಾನದ ಕಡೆಯ ನಿಲುಗಡೆಯಲ್ಲವೆ ? ಆದ್ದರಿಂದ ತಿಳಿಯಬೇಕಾದ ಮತ್ತೊಂದು ಇರುವದಿಲ್ಲವಾದ್ದರಿಂದ ಇಲ್ಲಿ ಗತಿಯು ಉಳಿದಿರುವದಿಲ್ಲ. (೨) ಅಥವಾ ಇಲ್ಲಿ ಸಂಸಾರಗತಿಯಿರುವದಿಲ್ಲ(ವೆಂದಾದರೂ ವ್ಯಾಖ್ಯಾನಮಾಡಬಹುದು). ಅನನ್ಯನಾದ ಆತ್ಮನು ಪ್ರೋಕ್ತನಾದರೆ (ಗತಿಯಿರುವದಿಲ್ಲ). ಏಕೆಂದರೆ ಆತ್ಮನನ್ನು ತಿಳಿದದ್ದರ ಫಲವಾದ ಮೋಕ್ಷವು ಕೂಡಲೆ ಆಗಿಯೇಬಿಡುತ್ತದೆ.[2] (೪) ಅಥವಾ ಹೇಳಬೇಕಾಗಿರುವ ಬ್ರಹ್ಮದ ಸ್ವರೂಪವೇ ಆಗಿರುವ ಆಚಾರ್ಯನಿಂದ ಆತ್ಮನು ಅನನ್ಯನೆಂದು ಪ್ರೋಕ್ತನಾದರೆ ಅಗತಿಯು[3] ಎಂದರೆ ತಿಳಿಯದೆ ಇರುವದೆಂಬುದು, ಗೊತ್ತಾಗದೆ ಇರುವದೆಂಬುದು ಇಲ್ಲಿ ಇರುವದಿಲ್ಲ. ಎಂದರೆ ಆಚಾರ್ಯನಿಗೆ ಹೇಗೋ ಹಾಗೆ ಶ್ರವಣಮಾಡಿದವನಿಗೂ "ನಾನು ಅನನ್ಯನು" ಎಂದು ಅದರ ವಿಷಯವಾದ ಅರಿವು ಆಗಿಯೇತೀರುವದು ಎಂದರ್ಥ.

**ಆಗಮವುಳ್ಳ**[4] ಆಚಾರ್ಯನಿಂದ ಅನನ್ಯವಾಗಿ ಪ್ರೋಕ್ತನಾದರೆ ಆತ್ಮನು ಹೀಗೆ ಸುವಿಜ್ಞೇಯನಾಗಿರುವನು.

(ಭಾಷ್ಯ)

**೫೯. ಇತರಥಾ (ಹಿ) ಅಣೀಯಾನ್ (ಅಣುತರಃ) ಅಣುಪ್ರಮಾಣಾದಪಿ ಸಮ್ಪ್ರದ್ಯತ ಆತ್ಮಾ । ಅತರ್ಕ್ಯಮ್ ಅತರ್ಕ್ಯಃ, ಸ್ವಬುದ್ಧ್ಯಭ್ಯೂಹೇನ ಕೇವಲೇನ ತರ್ಕೇಣ । ತರ್ಕ್ಯಮಾಣೇಽಣುಪರಿಮಾಣೇ ಕೇನಚಿತ್ ಸ್ಥಾಪಿತೇ ಆತ್ಮನಿ ತತೋ ಹ್ಯಣುತರಮನ್ಯೋಽಭ್ಯೂಹತಿ, ತತೋಽಪ್ಯನ್ಯೋಽಣುತರಮ್ ಇತಿ । ನ ಹಿ ತರ್ಕಸ್ಯ ನಿಷ್ಠಾ ಕಾಚಿದ್ ವಿದ್ಯತೇ ॥**

1. ಆತ್ಮನನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುವದರಿಂದ ಇನ್ನೊಂದನ್ನು ತಿಳಿಯಬೇಕೆಂಬುದು ಉಳಿದುಕೊಳ್ಳುವದಿಲ್ಲ. ಏಕೆಂದರೆ ಆತ್ಮನೇ ಎಲ್ಲದರ ಪರಮಾರ್ಥ. ಇಲ್ಲಿ ಅನನ್ಯನಾದ ಎಂದರೆ ತನಗಿಂತ ಬೇರೆಯಾಗಿರುವ ಎರಡನೆಯದಿಲ್ಲದ ಎಂದರ್ಥ. ಮುಂ. ೧-೧-೩, ಛಾಂ. ೬-೧-೩; ಬೃ. ೧-೪-೭, ೨-೪-೫.

2. ಮೋಕ್ಷವು ಆತ್ಮಸ್ವರೂಪವಾದ ಆನಂದವಾಗಿರುವದರಿಂದ ಆತ್ಮಜ್ಞಾನಿಯು ಮೋಕ್ಷಕ್ಕಾಗಿ ಮತ್ತೊಂದು ಲೋಕಕ್ಕೆ ಹೋಗಬೇಕಾದದ್ದಿರುವದಿಲ್ಲ.

3. 'ಪ್ರೋಕ್ತೇ ಗತಿಃ' ಎಂದು ಪದಚ್ಛೇದವನ್ನು ಮಾಡಿ ಮೂರು ಅರ್ಥಗಳನ್ನು ಹೇಳಿತ್ತು ; ಈಗ 'ಪ್ರೋಕ್ತೇ ಅಗತಿಃ' ಎಂದು ಪದಚ್ಛೇದ ಮಾಡಿ ಅರ್ಥಮಾಡಿರುತ್ತದೆ.

4. ಆತ್ಮನು ತನಗಿಂತ ಬೇರೆಯಲ್ಲವೆಂಬ ಗುರುಪರಂಪರೆಯ ಉಪದೇಶವೇ **ಆಗಮವು.** ಕೇ. ಪದಭಾಷ್ಯ ಭಾ. ೨೯, ೪೪ನ್ನು ನೋಡಿರಿ. 'ಅವಗಮವತಾ' ಎಂಬ (ಗೋ ॥) ವ್ಯಾಖ್ಯಾನವನು ತಿದಿಕೊಂಡಿದೆ.

(ಭಾಷ್ಯಾರ್ಥ)

ಹಾಗಿಲ್ಲದಿದ್ದರೆ ಆತ್ಮನು ಅಣುಪ್ರಮಾಣವಾಗಿರುವದಕ್ಕಿಂತಲೂ ಅಣುವಾಗಿ ಬಿಡುತ್ತಾನೆ. (ಅವನು) 'ಅತರ್ಕ್ಯ್ಮ್' = 'ಅತರ್ಕ್ಯಃ' ತನ್ನ ಬುದ್ಧಿಯಿಂದಲೇ ಅಭಿಮಾನದಿಂದ ಊಹಿಸುವದೆಂಬ ಬರಿಯ ತರ್ಕಕ್ಕೆ[1] ತಕ್ಕವನೇ ಅಲ್ಲ. ತರ್ಕದಿಂದ ಊಹಿಸುವಾಗ (ಈ) ಆತ್ಮನು ಅಣುಪರಿಮಾಣನೆಂದು ಯಾವನಾದರೊಬ್ಬನು ನಿಶ್ಚಯಿಸಿದರೆ[2] ಅದಕ್ಕಿಂತಲೂ ಅಣುವಾಗಿರುವನೆಂದು ಮತ್ತೊಬ್ಬನು ಊಹಿಸುತ್ತಾನೆ ಮತ್ತೂ ಒಬ್ಬನು ಅದಕ್ಕಿಂತಲೂ ಅಣುವಾಗಿರುವನೆಂದು ಊಹಿಸುತ್ತಾನೆ ; ಹೀಗಿರುವದರಿಂದ ತರ್ಕಕ್ಕೆ ನಿಲುಗಡೆ ಯಾವದೂ ಇರುವದೇ ಇಲ್ಲ.[2]

ನೈಷಾ ತರ್ಕೇಣ ಮತಿರಾಪನೇಯಾ
　　ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ।
ಯಾಂ ತ್ವಮಾಪಃ ಸತ್ಯಧೃತಿರ್ಬತಾಸಿ
　　ತ್ವಾದೃಙ್ ನೋ ಭೂಯಾನ್ನಚಿಕೇತಃ ಪ್ರಷ್ಟಾ.　　॥ ೯ ॥

೯. ಈ ಮತಿಯು ತರ್ಕದಿಂದ ಹೊಂದತಕ್ಕದ್ದಲ್ಲ, ಬೇರೊಬ್ಬನಿಂದಲೇ ಹೇಳಲ್ಪಟ್ಟರೆ, ಪ್ರೇ　ಸರಿಯಾದ ಜ್ಞಾನವನ್ನುಂಟುಮಾಡುವದು. ಯಾವ (ಇದನ್ನು) ನೀನು ಪಡೆದುಕೊಂಡಿರುತ್ತೀಯೆ ಆಹ　ಸತ್ಯಧೃತಿಯಾಗಿರುವೆ. ನಚಿಕೇತನೆ, ನಿನ್ನಂಥ ಕೇಳತಕ್ಕವನು ನಮಗೆ ಉಂಟಾಗಲಿ!

(ಭಾಷ್ಯ)

೬೦. ಅತೋಽನನ್ಯಪ್ರೋಕ್ತೇ ಆತ್ಮನ್ಯುತ್ಪನ್ನಾ ಯೇಯಮ್ ಆಗಮಪ್ರತಿಪಾದ್ಯಾ ಆತ್ಮಮತಿಃ ನೈಷಾ ತರ್ಕೇಣ ಸ್ವಬುದ್ಧ್ಯಭ್ಯೂಹಮಾತ್ರೇಣ ಆಪನೇಯಾ ನ ಪ್ರಾಪಣೀಯಾ ಇತ್ಯರ್ಥಃ । ನಾಪನೇತವ್ಯಾ ವಾ, ನ ಹಾತವ್ಯಾ । ತಾರ್ಕಿಕೋ ಹ್ಯನಾಗಮಜ್ಞಃ ಸ್ವಬುದ್ಧಿಪರಿಕಲ್ಪಿತಂ ಯತ್ಕಿಞ್ಚಿದೇವ ಕಥಯತಿ। ಅತ ಏವ ಚ ಯೇಯಮ್ ಆಗಮಪ್ರಭೂತಾ ಮತಿಃ ಅನ್ಯೇನೈವ ಆಗಮಾಭಿಜ್ಞೇನ ಆಚಾರ್ಯೇಣೈವ ತಾರ್ಕಿಕಾತ್ ಪ್ರೋಕ್ತಾ ಸತೀ ಸುಜ್ಞಾನಾಯ ಭವತಿ ಹೇ ಪ್ರೇಷ್ಠ, ಪ್ರಿಯತಮ । ಕಾ ಪುನಃ ಸಾ ತರ್ಕಾಗಮ್ಯಾ ಮತಿರಿತಿ ? ಉಚ್ಯತೇ । ಯಾಂ ತ್ವಂ ಮತಿಂ ಮದ್ವರಪ್ರದಾನೇನ ಆಪಃ ಪ್ರಾಪ್ತವಾನಸಿ । (ಸತ್ಯಧೃತಿಃ) ಸತ್ಯಾ ಅವಿತಥವಿಷಯಾ ಧೃತಿಃ ಯಸ್ಯ ತವ ಸ ತ್ವಂ ಸತ್ಯಧೃತಿಃ 'ಬತ ಅಸಿ'

1. ಅನುಭವದ ಆಧಾರವಿಲ್ಲದ ತರ್ಕವು ಬರಿಯ ತರ್ಕವು.
2. ಬ್ರ. ಸೂ. ೨-೧-೧೧ ನೋಡಿ.

**ಇತ್ಯನುಕಮ್ಪಯನ್ನಾಹ ಮೃತ್ಯುಃ ನಚಿಕೇತಸಂ ವಕ್ಷ್ಯಮಾಣವಿಜ್ಞಾನಸ್ತುತಯೇ। ತ್ವಾದೃಕ್ ತ್ವತ್ತುಲ್ಯಃ ನಃ ಅಸ್ಮಭ್ಯಂ ಭೂಯಾತ್ ಭವತಾತ್ ಭವತು ಅನ್ಯಃ ಪುತ್ರಃ ಶಿಷ್ಯೋ ವಾ ಪ್ರಷ್ಟಾ। ಕೀದೃಕ್ ? ಯಾದೃಕ್ ತ್ವಮ್ । ಹೇ ನಚಿಕೇತಃ ಪ್ರಷ್ಟಾ ॥**

(ಭಾಷ್ಯಾರ್ಥ)

ಆದ್ದರಿಂದ ಅನನ್ಯಪ್ರೋಕ್ತನಾದ[1] ಆತ್ಮನ (ವಿಷಯದ)ಲ್ಲಿ ಉಂಟಾಗಿರುವ ಯಾವ ~~ಈ~~ **ಆಗಮಪ್ರತಿಪಾದ್ಯವಾದ**[2] ಆತ್ಮಜ್ಞಾನವಿದೆಯೋ ಇದು ತರ್ಕದಿಂದ ಎಂದರೆ ತನ್ನ ಬುದ್ಧಿಯ ಬರಿಯ ಅಭಿಮಾನದ ಊಹೆಯಿಂದ ಹೊಂದತಕ್ಕದ್ದಲ್ಲ, ಪಡೆಯುವದಕ್ಕೆ ಬರುವದಲ್ಲ ಎಂದರ್ಥ. ಅಥವಾ ('ನಾಪನೇಯಾ' ಎಂಬ ಮೂಲಕ್ಕೆ) ಪರಿಹರಿಸಲಾಗದ್ದು, ನಾಶಗೊಳಿಸಲಾಗದ್ದು[3] ಎಂದಾದರೂ (ಅರ್ಥ ವನ್ನು ಮಾಡಬಹುದು). ಏಕೆಂದರೆ ತಾರ್ಕಿಕನು **ಆಗಮ**ವನ್ನು ಅರಿಯದೆ ತನ್ನ ಬುದ್ಧಿಯಿಂದ ಕಲ್ಪಿಸಿಕೊಂಡ ಯಾವದೋ ಒಂದನ್ನೇ ಹೇಳುತ್ತಾನೆ. ಆದ್ದರಿಂದಲೇ, ಎಲೈ ಪ್ರೇಷ್ಠನೆ, ಪ್ರಿಯತಮ(ನಾದ ನಚಿಕೇತನೆ), ಆಗಮದಿಂದುಂಟಾಗುವ ಯಾವ ಈ ಬುದ್ಧಿಯುಂಟೋ (ಇದು) **ತಾರ್ಕಿಕನಿಗಿಂತ ಬೇರೆಯವನಾದ ಆಗಮವನ್ನು ಬಲ್ಲ ಆಚಾರ್ಯನಿಂದಲೇ ಹೇಳಲ್ಪಟ್ಟರೆ ಸರಿಯಾದ ಜ್ಞಾನವನ್ನುಂಟುಮಾಡುವದು.**

ತರ್ಕಕ್ಕೆ ನಿಲುಕದ ಆ ಜ್ಞಾನವು ಯಾವದು ? ಎಂದರೆ ಹೇಳುತ್ತಾನೆ, ಈ ಜ್ಞಾನವನ್ನು ನೀನು ನನ್ನ ವರಪ್ರದಾನದಿಂದ ಪಡೆದುಕೊಂಡಿರುತ್ತೀಯೆ, ಹೊಂದಿದವ ನಾಗಿರುತ್ತೀಯೆ. (ನೀನು) ಸತ್ಯಧೃತಿಯು - ಸತ್ಯವಾದ ಸುಳ್ಳಲ್ಲದ್ದರ ವಿಷಯವಾದ ಧೃತಿಯುಳ್ಳವನು[4] ನೀನು ; ಆದ್ದರಿಂದ ಸತ್ಯಧೃತಿಯು. ಆಹಾ ! (ಸತ್ಯಧೃತಿಯಾ) ಗಿರುವೆ ! ಎಂದು ಮೃತ್ಯುವು (ತಾನು) ಮುಂದೆ ಹೇಳುವ ಜ್ಞಾನವನ್ನು ಹೊಗಳುವದ ಕ್ಕಾಗಿ[5] ನಚಿಕೇತನನ್ನು ಮುದ್ದಿನಿಂದ (ಮೆಚ್ಚಿ) ಮಾತನಾಡಿಸುತ್ತಿದ್ದಾನೆ. ನಚಿಕೇತನೆ, ನಿನ್ನಂಥವನು · ನಿನಗೆ ಸಮಾನನಾದವನು ಮತ್ತೊಬ್ಬ ಪುತ್ರನೋ ಶಿಷ್ಯನೋ

---

1. ಹಿಂದೆ ಹೇಳಿದಂತೆ ಆತ್ಮನಿಗಿಂತ ಅನನ್ಯನಾದ ಆಚಾರ್ಯನು 'ನೀನು ಅನನ್ಯನು' ಎಂದು ಉಪದೇಶಿಸುವ.

2. ಗುರುಪರಂಪರೆಯ ಉಪದೇಶದಿಂದ ತಿಳಿಯುವ.

3. ಒಂದುಸಲ ಜ್ಞಾನವುಂಟಾದರೆ ಸರಿ, ಅದನ್ನು ಯಾವ ತರ್ಕವೂ ಹೊಡೆದು ಹಾಕಲಾರದು. 'ಏಷಾ ಮತಿಃ ತರ್ಕೇಣ ನ ಅಪನೇಯಾ' ಎಂದು ಪದಚ್ಛೇದ ; ಮೊದಲನೆಯ ಅರ್ಥಕ್ಕೆ 'ನ ಅಪನೇಯಾ' ಎಂದು ಪದಚ್ಛೇದ-

4. ಸತ್ಯವಾದ ಆತ್ಮವಿದ್ಯೆಯನ್ನೇ ಹಿಡಿದುಕೊಂಡವನು.

5. ಇಂಥ ಆಗಮಗಮ್ಯ ವಿದ್ಯೆಯನ್ನು ಪಡೆದೆಯಲ್ಲ! ಎಂದು ಹೊಗಳುವದಕ್ಕಾಗಿ.

(ತತ್ತ್ವವನ್ನು) ಕೇಳುವವನು ನಮಗೆ ಉಂಟಾಗಲಿ ! ಎಂಥವನು ? ಎಂದರೆ ನೀನು ಹೇಗಿರುವೆಯೋ ಹಾಗೆಯೇ (ಇರುವ) ಪ್ರಶ್ನೆಗಾರನು.

(ಭಾಷ್ಯ)

**೬೧. ಪುನರಪಿ ತುಷ್ಟ ಆಹ-**

(ಭಾಷ್ಯಾರ್ಥ)

ಸಂತೋಷದಿಂದ ಮತ್ತೂ (ಹೀಗೆ) ಹೇಳುತ್ತಾನೆ :-

**ಜಾನಾಮ್ಯಹಗ್ಂ ಶೇವಧಿರಿತ್ಯನಿತ್ಯಂ**
**ನ ಹ್ಯಧ್ರುವೈಃ ಪ್ರಾಪ್ಯತೇ ಹಿ ಧ್ರುವಂ ತತ್ ।**
**ತತೋ ಮಯಾ ನಾಚಿಕೇತಶ್ಚಿತೋಽಗ್ನಿ-**
**ರನಿತ್ಯೈರ್ದ್ರವ್ಯೈಃ ಪ್ರಾಪ್ತವಾನಸ್ಮಿ ನಿತ್ಯಮ್ ॥೧೦॥**

೧೦. ಶೇವಧಿಯು ಅನಿತ್ಯವೆಂದು ನಾನು ಬಲ್ಲೆನು ; ಏಕೆಂದರೆ ಅಧ್ರುವವಾದವುಗಳಿಂದ ಧ್ರುವವಾದ ಅದು ಪಡೆಯತಕ್ಕದ್ದಲ್ಲ. ಆದ್ದರಿಂದ ನಾಚಿಕೇತ ಅಗ್ನಿಯು ನನ್ನಿಂದ ಚಿತವಾಯಿತು ; ಅನಿತ್ಯವಾದ ದ್ರವ್ಯಗಳಿಂದ ನಿತ್ಯವಾದದ್ದನ್ನು ಪಡೆದುಕೊಂಡಿರುತ್ತೇನೆ.

(ಭಾಷ್ಯ)

**೬೨. ಜಾನಾಮಿ ಅಹಂ ಶೇವಧಿಃ ನಿಧಿಃ ಕರ್ಮಫಲಲಕ್ಷಣಃ ನಿಧಿರಿವ ಪ್ರಾರ್ಥ್ಯತ ಇತಿ । ಅಸೌ ಅನಿತ್ಯಮ್ ಅನಿತ್ಯಃ ಇತಿ ಜಾನಾಮಿ । ನ ಹಿ ಯಸ್ಮಾತ್ ಅನಿತ್ಯೈಃ ಅಧ್ರುವೈಃ ನಿತ್ಯಂ ಧ್ರುವಂ ತತ್ ಪ್ರಾಪ್ಯತೇ ಪರಮಾತ್ಮಾಖ್ಯಃ ಶೇವಧಿಃ । ಯಸ್ತು ಅನಿತ್ಯಸುಖಾತ್ಮಕಃ ಶೇವಧಿಃ ಸ ಏವ ಅನಿತ್ಯೈಃ ದ್ರವ್ಯೈಃ ಪ್ರಾಪ್ಯತೇ । ಹಿ ಯತಃ ತತಃ ತಸ್ಮಾತ್ ಮಯಾ ಜಾನತಾಪಿ ನಿತ್ಯಮ್ ಅನಿತ್ಯಸಾಧನೈಃ ನ ಪ್ರಾಪ್ಯತ ಇತಿ ನಾಚಿಕೇತಃ ಚಿತಃ ಅಗ್ನಿಃ । ಅನಿತ್ಯೈಃ ದ್ರವ್ಯೈಃ ಪಶ್ವಾದಿಭಿಃ ಸ್ವರ್ಗಸುಖಸಾಧನಭೂತೋಽಗ್ನಿಃ ನಿರ್ವರ್ತಿತಃ ಇತ್ಯರ್ಥಃ । ತೇನ ಅಹಮ್ ಅಧಿಕಾರಾಪನ್ನೋ ನಿತ್ಯಂ ಯಾಮ್ಯಂ ಸ್ಥಾನಂ ಸ್ವರ್ಗಾಖ್ಯಂ ನಿತ್ಯಮ್ ಆಪೇಕ್ಷಿಕಂ ಪ್ರಾಪ್ತವಾನ್ ಅಸ್ಮಿ ॥**

(ಭಾಷ್ಯಾರ್ಥ)

ಶೇವಧಿಯು ಎಂದರೆ ಕರ್ಮಫಲವೆಂಬ ನಿಧಿಯು ; ಏಕೆಂದರೆ (ಅದನ್ನು ನಿಧಿಯನ್ನು (ಬಯಸುವಂತೆ ಜನರು) ಬಯಸುತ್ತಾರೆ. ಇದು ('ಅನಿತ್ಯಮ್' = ಅನಿತ್ಯಃ) ಅನಿತ್ಯವೆಂದು ನಾನು ಬಲ್ಲೆನು. ಏಕೆಂದರೆ **ಅಧ್ರುವವಾದ ಎಂದರೆ ಅನಿತ್ಯವಾದ ವಸ್ತುಗಳಿಂದ ಆ ಧ್ರುವವಾದದ್ದು ಎಂದರೆ ನಿತ್ಯವಾದದ್ದು ಪರಮಾತ್ಮ**

ನೆಂಬ ಶೇವಧಿಯು ಪಡೆಯತಕ್ಕದ್ದೇ ಅಲ್ಲ. ಯಾವದಾದರೆ ಅನಿತ್ಯಸುಖರೂಪವಾದ ಶೇವಧಿಯುಂಟೋ ಅದೇ ಅನಿತ್ಯವಾದ ದ್ರವ್ಯಗಳಿಂದ ಪಡೆಯುವದಕ್ಕೆ ಬರುತ್ತದೆ. ಹೀಗಿರುತ್ತದೆಯಲ್ಲವೆ ? ಆದ್ದರಿಂದ ಈ ಕಾರಣದಿಂದ[1] ನಿತ್ಯವಾದದ್ದು ಅನಿತ್ಯವಾದ ಸಾಧನಗಳಿಂದ ಪಡೆಯುವದಕ್ಕಾಗಲಾರದೆಂದು[2] ನನಗೆ ತಿಳಿದುತಿಳಿದೂ ನನ್ನಿಂದ ನಾಚಿಕೇತಾಗ್ನಿಯು ಚಿತವಾಯಿತು. ಅನಿತ್ಯವಾದ ಪಶುಗಳೇ ಮುಂತಾದ ದ್ರವ್ಯಗಳಿಂದ ಸ್ವರ್ಗಸಾಧನವಾದ ಅಗ್ನಿಯ ಅನುಷ್ಠಾನ ಮಾಡಲ್ಪಟ್ಟಿತು ಎಂದರ್ಥ. ಆದ್ದರಿಂದ ನಾನು (ಈ) ಅಧಿಕಾರವನ್ನು[3] ಪಡೆದು ನಿತ್ಯವನ್ನು- ಸ್ವರ್ಗವೆಂಬ ಯಾಮ್ಯಸ್ಥಾನವನ್ನು ಆಪೇಕ್ಷಿಕನಿತ್ಯ[4] (ಪದವಿಯನ್ನು) ಪಡೆದುಕೊಂಡಿರುತ್ತೇನೆ.

ಕಾಮಸ್ಯಾಪ್ತಿಂ ಜಗತಃ ಪ್ರತಿಷ್ಠಾಂ
ಕ್ರತೋರನನ್ತ್ಯಮಭಯಸ್ಯ ಪಾರಮ್ ।
ಸ್ತೋಮಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ
ಧೃತ್ಯಾ ಧೀರೋ ನಚಿಕೇತೋಽತ್ಯಸ್ರಾಕ್ಷೀಃ ॥ ೧೧ ॥

೧೧. ಕಾಮದ ಆಪ್ತಿ, ಜಗತ್ತಿನ ಪ್ರತಿಷ್ಠೆ, ಯಜ್ಞದ ಕೊನೆಗಾಣದ (ಫಲ), ಅಭಯದ ಪಾರ, ಸ್ತೋಮವಾಗಿರುವ ದೊಡ್ಡದಾಗಿರುವ ಹೆಚ್ಚಿನ ಗತಿ, ಪ್ರತಿಷ್ಠೆ - (ಇದೆಲ್ಲವನ್ನೂ) ಕಂಡು ಧೀರನಾಗಿ, ನಚಿಕೇತನೆ, ಧೈರ್ಯದಿಂದ ಕೈಬಿಟ್ಟದ್ದೀಯೆ.

(ಭಾಷ್ಯ)

೬೩. ತ್ವಂ ತು ಕಾಮಸ್ಯ ಆಪ್ತಿಂ ಸಮಾಪ್ತಿಮ್ । ಅತ್ರ ಹಿ ಸರ್ವೇ ಕಾಮಾಃ ಪರಿಸಮಾಪ್ತಾಃ । ಜಗತಃ ಸಾಧ್ಯಾತ್ಮಾಧಿಭೂತಾಧಿದೈವಾದೇಃ ಪ್ರತಿಷ್ಠಾಮ್ ಆಶ್ರಯಮ್, ಸರ್ವಾತ್ಮಕತ್ವಾತ್ । ಕ್ರತೋಃ ಉಪಾಸನಾಯಾಃ ಫಲಂ ಹೈರಣ್ಯಗರ್ಭಂ ಪದಮ್ ಅನನ್ತ್ಯಮ್ ಆನನ್ತ್ಯಮ್ । ಅಭಯಸ್ಯ ಚ ಪಾರಂ ಪರಾಂ ನಿಷ್ಠಾಮ್ । ಸ್ತೋಮಂ ಸ್ತುತ್ಯಮ್ । ಮಹತ್ ಅಣಿಮಾ ದ್ಯೈಶ್ವರ್ಯಾದ್ಯನೇಕಗುಣಸಹಿತಮ್ । ಸ್ತೋಮಂ ಚ ತತ್ ಮಹಚ್ಚ ನಿರತಿಶಯಾತ್ ಸ್ತೋಮಮಹತ್ । ಉರುಗಾಯಂ ವಿಸ್ತೀರ್ಣಾಂ ಗತಿಮ್ । ಪ್ರತಿಷ್ಠಾಂ ಸ್ಥಿತಿಮ್

1. ಅನಿತ್ಯದಿಂದ ನಿತ್ಯವು ದೊರಕದೆಂದು ತಿಳಿದೂ ನಾನು ನಾಚಿಕೇತಾಗ್ನಿಯನ್ನು ಸೇವಿಸಿ ಈ ಯಾಮ್ಯಪದವಿಯನ್ನು ಪಡೆದೆನು. ನೀನು ನಾನು ಕೊಡುತ್ತೇನೆಂದರೂ ಇಂಥ ಪದವಿಯನ್ನು ಒಲ್ಲದೆ ಅದನ್ನು ಮೀರುವ ಆತ್ಮಜ್ಞಾನವನ್ನೇ ಕೇಳಿದೆಯಲ್ಲ ! - ಎಂದು ಮೆಚ್ಚಿ ಹೇಳಿದ ಮಾತಿದು. 2. ಮುಂ. ೨-೧-೧೨.

3. ಜ್ಞಾನಿಗಳಾಗಿ ಅಧಿಕಾರಿಪುರುಷರಾದವರ ವಿಷಯವನ್ನು ಸೂ. ಭಾ. ೩-೩-೩೨ರಲ್ಲಿ ಚರ್ಚಿಸಿದೆ. 4. ಸ್ವರ್ಗಸುಖವು ಮಿಕ್ಕ ಸುಖಗಳಿಗೆ ಹೋಲಿಸಿದರೆ ನಿತ್ಯವು.

ಆತ್ಮನೋಽನುತ್ತಮಾಮಪಿ ದೃಷ್ಟ್ವಾ ಧೃತ್ಯಾ ಧೈರ್ಯೇಣ ಧೀರಃ ಧೀಮಾನ್ ಸನ್ ನಚಿಕೇತಃ ಅತ್ಯಸ್ರಾಕ್ಷೀಃ ಪರಮೇವಾಕಾಙ್ಕ್ಷನ್ ಅತಿಸೃಷ್ಟವಾನಸಿ ಸರ್ವಮೇತತ್ ಸಂಸಾರಭೋಗಜಾತಮ್ ಅಹೋ ಬತ ಅನುತ್ತಮಗುಣೋಽಸಿ ॥

(ಭಾಷ್ಯಾರ್ಥ)

ಆದರೆ ನೀನು ಕಾಮದ ಆಪ್ತಿ ಎಂದರೆ ಸಮಾಪ್ತಿ ; ಏಕೆಂದರೆ ಈ (ಹಿರಣ್ಯಗರ್ಭಪದವಿಯಲ್ಲಿ) ಎಲ್ಲಾ ಕಾಮಗಳೂ ಪರಿಸಮಾಪ್ತವಾಗಿರುವವು. ಅಧ್ಯಾತ್ಮ, ಆಧಿಭೂತ, ಅಧಿದೈವ- ಮುಂತಾದ (?) ಜಗತ್ತಿನ ಪ್ರತಿಷ್ಠೆ ಎಂದರೆ ಆಶ್ರಯ ; ಏಕೆಂದರೆ (ಹಿರಣ್ಯಗರ್ಭನು) ಇದೆಲ್ಲದರ ರೂಪವಾಗಿಯೂ ಇರುತ್ತಾನೆ. ಕ್ರತುವಿನ ಎಂದರೆ ಉಪಾಸನೆಯ (ಅನಂತ್ಯಮ್ = ಆನನ್ತ್ಯಮ್) ಆನನ್ತ್ಯವು ಎಂದರೆ ಕೊನೆಗಾಣದ ಫಲ, ಎಂದರೆ ಹಿರಣ್ಯಗರ್ಭನ ಸ್ಥಾನ[1] ಅಭಯದ ಪಾರ, ಎಂದರೆ, ಕೊನೆಯ ನಿಲುಗಡೆ - ಸ್ತೋಮ ಎಂದರೆ ಹೊಗಳತಕ್ಕದ್ದು, ಮಹತ್ ಎಂದರೆ ಅಣಿಮಾದ್ಯೈಶ್ವರ್ಯವೇ ಮುಂತಾದ ಅನೇಕ ಗುಣಗಳಿಂದ ಕೂಡಿರುವದು ; ಸ್ತೋಮವೂ ಎಲ್ಲಕ್ಕೂ ಮಿಗಿಲಾದ್ದರಿಂದ ಮಹತ್ತೂ ಆಗಿರುವದರಿಂದ ಸ್ತೋಮಮಹತ್ತು. ಉರುಗಾಯವೆಂದರೆ ವಿಸ್ತೀರ್ಣವಾದ ಗತಿ. ಪ್ರತಿಷ್ಠೆ ಎಂದರೆ ನಿನಗೆ ಸಿಕ್ಕಬಹುದಾದ ಉತ್ತಮಸ್ಥಿತಿ. (ಇದೆಲ್ಲವನ್ನೂ) ನೋಡಿ ಧೃತಿಯಿಂದ ಧೀರನಾಗಿ ಎಂದರೆ ತಿಳಿವಳಿಕೆಯುಳ್ಳವನಾಗಿ, ನಚಿಕೇತನೆ, ಕೈಬಿಟ್ಟಿರುತ್ತೀಯೆ, ಪರತತ್ತ್ವವನ್ನೇ ಬಯಸಿ ಈ ಸಂಸಾರಭೋಗಸಮೂಹವನ್ನೆಲ್ಲ ತ್ಯಜಿಸಿರುತ್ತೀಯೆ. ಆಹಾ ! ಎಂಥ ಗುಣವುಳ್ಳವನಾಗಿರುವೆ !

ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ
　　ಗುಹಾಹಿತಂ ಗಹ್ವರೇಷ್ಠಂ ಪುರಾಣಮ್ ।
　　ಅಧ್ಯಾತ್ಮಯೋಗಾಧಿಗಮೇನ ದೇವಂ
　　ಮತ್ವಾ ಧೀರೋ ಹರ್ಷಶೋಕೌ ಜಹಾತಿ　　॥೧೨॥

1. ಹಿಂದಿನ ವಲ್ಲಿಯಲ್ಲಿ ೧೮ನೆಯ ಮಂತ್ರದಲ್ಲಿ ಹೇಳಿದ್ದನ್ನು ಇಲ್ಲಿ ಅನುವಾದ ಮಾಡಿಕೊಂಡಿದೆ. ನಾಚಿಕೇತಾಗ್ನಿಯಿಂದ ವಿರಾಟ್ಪುರುಷನ ಸ್ಥಾನವು ದೊರಕುವದೆಂದು ಹಿಂದೆ ಹೇಳಿದ್ದರೂ ಕೇವಲ ಸ್ಥೂಲೋಪಾಧಿಯಾದ ಪುರುಷನೆಂದೇ ಅರ್ಥವನ್ನು ಮಾಡಬೇಕಾದದ್ದಿಲ್ಲ. ಉಪಾಸನೆಯಿಂದ ಪಡೆಯುವ ಹಿರಣ್ಯಗರ್ಭಪದವಿಯ ಪ್ರಾಪ್ತಿಯವರೆಗೂ ಹಿಂದಿನ ವರದ ವಿಷಯವು ಹೋಗಿರುತ್ತದೆ. ಇದನ್ನು ತಿಳಿಯುವದಕ್ಕೆ ಇಲ್ಲಿ 'ಹಿರಣ್ಯಗರ್ಭ' ಎಂಬ ಮಾತನ್ನು ಪ್ರಚುರವಾಗಿ ಉಪಯೋಗಿಸಿದೆ. ನಚಿಕೇತನು ವರದ್ವಯದಿಂದ ಅಕೃತಾರ್ಥನಾಗಿ ಪರಮಾತ್ಮತತ್ತ್ವವನ್ನೇ ಕೇಳಿದ್ದರಿಂದ ಅವನಿಗೆ 'ಇಹಾಮುತ್ರಫಲಭೋಗವಿರಾಗ'ವೆಂಬ ಸಾಧನವೂ ಮುಮುಕ್ಷುತೆಯೂ ಪರಿಪೂರ್ಣವಾಗಿದ್ದವೆಂದು ಹೇಳಿದಂತೆ ಆಯಿತು.

೧೨. ಆ ದುರ್ದರ್ಶನಾದ, ಗೂಢವನ್ನು ಹೊಕ್ಕಿರುವ, ಗುಹಾಹಿತನಾದ, ಗಹ್ವರದಲ್ಲಿರುವ ಪುರಾಣನಾದ ದೇವನನ್ನು ಅಧ್ಯಾತ್ಮಯೋಗದ ಪ್ರಾಪ್ತಿಯಿಂದ ತಿಳಿದುಕೊಂಡ ಧೀರನು ಹರ್ಷಶೋಕಗಳನ್ನು ಬಿಡುತ್ತಾನೆ.

(ಭಾಷ್ಯ)

೭೪. ಯಂ ತ್ವಂ ಜ್ಞಾತುಮಿಚ್ಛಸ್ಯಾತ್ಮಾನಮ್, ತಂ ದುರ್ದರ್ಶಂ ದುಃಖೇನ ದರ್ಶನಮ್ ಅಸ್ಯ ಇತಿ ದುರ್ದರ್ಶಃ, ಅತಿಸೂಕ್ಷ್ಮತ್ವಾತ್ । ಗೂಢಂ[1] ಗಹನಮ್ ಅನುಪ್ರವಿಷ್ಟಮ್ ಪ್ರಾಕೃತವಿಷಯವಿಜ್ಞಾನೈಃ[1] ಪ್ರಚ್ಛನ್ನಮ್ ಇತ್ಯೇತತ್ । ಗುಹಾಹಿತಂ ಗುಹಾಯಾಂ ಬುದ್ಧೌ ಹಿತಂ ನಿಹಿತಂ ಸ್ಥಿತಮ್ । ತತ್ರೋಪಲಭ್ಯಮಾನತ್ವಾತ್ । ಗಹ್ವರೇಷ್ಠಂ ಗಹ್ವರೇ ವಿಷಮೇ ಅನೇಕಾನರ್ಥಸಙ್ಕಟೇ ತಿಷ್ಠತಿ ಇತಿ ಗಹ್ವರೇಷ್ಠಃ । ಅತೋ ದುರ್ದರ್ಶಃ । ತಂ ಪುರಾಣಂ ಪುರಾತನಮ್ ಅಧ್ಯಾತ್ಮಯೋಗಾಧಿಗಮೇನ । ವಿಷಯೇಭ್ಯಃ ಪ್ರತಿಸಂಹೃತ್ಯ ಚೇತಸ ಆತ್ಮನಿ ಸಮಾಧಾನಮ್ ಅಧ್ಯಾತ್ಮಯೋಗಃ । ತಸ್ಯಾಧಿಗಮಃ ಪ್ರಾಪ್ತಿಃ ತೇನ ಮತ್ವಾ ದೇವಮ್ ಆತ್ಮಾನಂ ಧೀರಃ ಧೀಮಾನ್ ಹರ್ಷಶೋಕೌ ಆತ್ಮನ ಉತ್ಕರ್ಷಾಪಕರ್ಷಯೋರಭಾವಾತ್ ಜಹಾತಿ ॥

(ಭಾಷ್ಯಾರ್ಥ)

ಯಾವ ಆತ್ಮನನ್ನು ನೀನು ಅರಿಯಲಿಚ್ಛಿಸಿರುವೆಯೋ ಅವನು ದುರ್ದರ್ಶನು-ಕಷ್ಟದಿಂದ (ಮಾತ್ರವೇ) ಅವನನ್ನು ನೋಡಲಾಗುವದು. ಆದ್ದರಿಂದ ದುರ್ದರ್ಶನು. ಏಕೆಂದರೆ (ಅವನು) ಅತಿಸೂಕ್ಷ್ಮನಾಗಿರುತ್ತಾನೆ. ಗೂಢವನ್ನು ಎಂದರೆ ಗೊತ್ತುಹಿಡಿಯುವದಕ್ಕಾಗದ ಸ್ಥಳವನ್ನು ಹೊಕ್ಕಿರುವನು ; ಪ್ರಾಕೃತವಿಷಯಗಳ ಅರಿವುಗಳಿಂದ[2] ಮುಚ್ಚಿಹೋಗಿರುತ್ತಾನೆ ಎಂದರ್ಥ. ಗುಹಾಹಿತನು ಗುಹೆಯಲ್ಲಿ ಎಂದೆ ಬುದ್ಧಿಯಲ್ಲಿ ಹಿತನು ಎಂದರೆ ಇಡಲ್ಪಟ್ಟವನು, ಇರುವವನು ; ಏಕೆಂದರೆ ಅಲ್ಲಿಯೇ ಕಾಣಬರುತ್ತಾನೆ.[3] ಗಹ್ವರೇಷ್ಠನು, ಗಹ್ವರದಲ್ಲಿ ಎಂದರೆ ಕಷ್ಟವಾದ ಅನೇಕ ಅನರ್ಥಗಳ ಗುಂಪಿನಲ್ಲಿ, ಇದ್ದುಕೊಂಡಿರುವನು. ಹೀಗೆ (ಇವನು) ಗೂಢವನ್ನು ಹೊಕ್ಕು ಗುಹಾಹಿತನಾಗಿರುವದರಿಂದ ಗಹ್ವರೇಷ್ಠನಾಗಿರುತ್ತಾನೆ, ಆದ್ದರಿಂದಲೇ ದುರ್ದರ್ಶನಾಗಿರುತ್ತಾನೆ.[4] ಆ ಪುರಾಣನಾದ ಹಳಬನಾದ ದೇವನನ್ನು ಎಂದರೆ

1. (ವಾ॥ ಪಾಠ). 2. 'ಪ್ರಾಕೃತವಿಷಯವಿಕಾರವಿಜ್ಞಾನೈಃ' ಎಂಬ (ಆ ॥) ಪಾಠದಲ್ಲಿ 'ವಿಕಾರ' ಹೆಚ್ಚು. ವಿಷಯಗಳ ಕಡೆಗೆ ತಿರುಗಿರುವದೆಂಬ ಕಾಮವೇ ಜ್ಞಾನಕ್ಕೆ ಅಡ್ಡಿ ಎಂದು ಭಾವ.

3. ತೈ. ಭಾ. ೨-೧ರಲ್ಲಿ 'ನಿಹಿತಂ ಗುಹಾಯಾಮ್' ಎಂಬುದರ ಭಾಷ್ಯವನ್ನು ನೋಡಿರಿ. 4. ಅವಿದ್ಯಾಕಾಮಗಳು ಆತ್ಮನ ದರ್ಶನಕ್ಕೆ ಅಡ್ಡಿಯಾಗಿವೆ.

ಆತ್ಮನನ್ನು 'ಅಧ್ಯಾತ್ಮಯೋಗಾಧಿಗಮೇನ' (ಅಧ್ಯಾತ್ಮಯೋಗದ ಅಧಿಗಮದಿಂದ)- ವಿಷಯಗಳಿಂದ ಈಚೆಗೆ ಮನಸ್ಸನ್ನು ಎಳೆದುಕೊಂಡು ಆತ್ಮನಲ್ಲಿಯೇ ನಿಲ್ಲಿಸುವದು ಅಧ್ಯಾತ್ಮಯೋಗವು ; ಅದರ ಅಧಿಗಮವೆಂದರೆ ಪ್ರಾಪ್ತಿಯು. ಅದರಿಂದ ದೇವನನ್ನು ಎಂದರೆ ಆತ್ಮನನ್ನು ತಿಳಿದುಕೊಂಡ ಧೀರನು ಬುದ್ಧಿವಂತನೂ ಹರ್ಷಶೋಕಗಳನ್ನು - ಆತ್ಮನಿಗೆ ಹೆಚ್ಚಾಗಲಿ ಕಡಿಮೆಯಾಗಲಿ ಇಲ್ಲದ್ದರಿಂದ (ಈ ತತ್ತ್ವವನ್ನರಿತು ಹರ್ಷಶೋಕಗಳನ್ನು)- ಬಿಡುತ್ತಾನೆ.

ಏತಚ್ಛ್ರುತ್ವಾ ಸಂಪರಿಗೃಹ್ಯ ಮರ್ತ್ಯಃ
ಪ್ರವೃಹ್ಯ ಧರ್ಮ್ಯಮಣುಮೇತಮಾಪ್ಯ ।
ಸ ಮೋದತೇ ಮೋದನೀಯಗ್ಂ ಹಿ ಲಬ್ಧ್ವಾ
ವಿವೃತಗ್ಂ ಸದ್ಮ ನಚಿಕೇತಸಂ ಮನ್ಯೇ ॥೧೩॥

೧೩. ಮರ್ತ್ಯನು ಇದನ್ನು ಕೇಳಿ ಚೆನ್ನಾಗಿ ಪರಿಗ್ರಹಿಸಿ ಮೇಲಕ್ಕೆತ್ತಿ ಧರ್ಮ್ಯನಾಗಿಯೂ ಅಣುವಾಗಿಯೂ ಇರುವ ಈತನನ್ನು ಹೊಂದಿದರೆ ಅಂಥವನು ಮೋದನೀಯವನ್ನು ಪಡೆದುಕೊಂಡು ಮೋದಪಡುತ್ತಿರುವನು. ನಚಿಕೇತನಿಗೆ ಮನೆಯು ತೆರೆದುಕೊಂಡಿರುವದೆಂದು ಎಣಿಸುವೆನು.

(ಭಾಷ್ಯ)

೭೫. ಕಿಂ ಚ ಏತದಾತ್ಮತತ್ತ್ವಂ ಯದಹಂ ವಕ್ಷ್ಯಾಮಿ ತತ್ ಶ್ರುತ್ವಾ ಆಚಾರ್ಯಸಕಾಶಾತ್[1] ಸಮ್ಯಕ್ ಆತ್ಮಭಾವೇನ ಪರಿಗೃಹ್ಯ ಉಪಾದಾಯ ಮರ್ತ್ಯಃ ಮರಣಧರ್ಮಾ ಧರ್ಮಾದನಪೇತಂ ಧರ್ಮ್ಯಂ ಪ್ರವೃಹ್ಯ ಉದ್ಯಮ್ಯ ಪೃಥಕ್ಕೃತ್ಯ ಶರೀರಾದೇಃ ಅಣುಂ ಸೂಕ್ಷ್ಮಮ್ ಏತಮ್ ಆತ್ಮಾನಮ್ ಆಪ್ಯ ಪ್ರಾಪ್ಯ ಸ ಮರ್ತ್ಯಃ ವಿದ್ವಾನ್ ಮೋದತೇ ಮೋದನೀಯಂ ಹಿ ಹರ್ಷಣೀಯಮ್ ಆತ್ಮಾನಂ ಲಬ್ಧ್ವಾ । ತದೇತತ್ ಏವಂವಿಧಂ ಬ್ರಹ್ಮ ಸದ್ಮ ಭವನಂ ನಚಿಕೇತಸಂ ತ್ವಾಂ ಪ್ರತಿ ಅಪಾವೃತದ್ವಾರಂ ವಿವೃತಮ್ ಅಭಿಮುಖೀಭೂತಂ ಮನ್ಯೇ । ಮೋಕ್ಷಾರ್ಹಂ ತ್ವಾಂ ಮನ್ಯೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಮತ್ತು ಮುಂದೆ (೧೪ನೆಯ ಮಂತ್ರದಿಂದ ಹಿಡಿದು) ನಾನು ಹೇಳುವ ಈ ತತ್ತ್ವವಿದೆಯಲ್ಲ, ಇದನ್ನು ಆಚಾರ್ಯರಿಂದ ಕೇಳಿ, 'ಸಂಪರಿಗೃಹ್ಯ' (ಸಮ್) ಚೆನ್ನಾಗಿ, ತನ್ನ ಸ್ವರೂಪದಿಂದಲೇ ಪರಿಗ್ರಹಿಸಿ ತೆಗೆದುಕೊಂಡು, ಧರ್ಮ್ಯವಾಗಿಯೂ ಎಂದರೆ

1. 'ಆಚಾರ್ಯಪ್ರಸಾದಾತ್' ಎಂಬ (ಅ ॥) ಪಾಠಕ್ಕೆ 'ಆಚಾರ್ಯರ ಅನುಗ್ರಹ ದಿಂದ' ಎಂದರ್ಥ. ಈ ಪಾಠವೇ ಮೇಲು.

ಧರ್ಮಕ್ಕೆ ಹೊಂದಿರುವದಾಗಿಯೂ ಅಣುವಾಗಿಯೂ ಎಂದರೆ ಸೂಕ್ಷ್ಮವಾಗಿಯೂ[1] ಇರುವ ಈತನನ್ನು (ಈ) ಆತ್ಮನನ್ನು ಮರ್ತ್ಯನು ಎಂದರೆ ಮರಣಸ್ವಭಾವವುಳ್ಳ (ಮನುಷ್ಯನು) ''ಪ್ರವೃಹ್ಯ'' ಮೇಲಕ್ಕೆತ್ತಿ, ಶರೀರಾದಿಗಳಿಂದ ವಿಂಗಡಿಸಿಕೊಂಡು ಹೊಂದಿದರೆ ಪಡೆದುಕೊಂಡರೆ, ಆತನು (ಆ) ಮರ್ತ್ಯನಾದ ಜ್ಞಾನಿಯು ಮೋದನೀಯವನ್ನು ಹರ್ಷವನ್ನುಂಟುಮಾಡುವ ಆತ್ಮನನ್ನು ಪಡೆದುಕೊಂಡು ಮೋದಪಡುತ್ತಿರುವನು. ಇಂಥ ಈ ವಿಧವಾದ ಬ್ರಹ್ಮವೆಂಬ ಸದ್ಮವು, ಮನೆಯು ನಚಿಕೇತನಿಗೆ, ನಿನಗೆ, ಬಾಗಿಲುತೆರೆದುಕೊಂಡು ಎದುರಿಗೆ ಇರುವದು ಎಂದು ಎಣಿಸಿರುವೆನು ; ನೀನು ಮೋಕ್ಷಕ್ಕೆ ತಕ್ಕವನೆಂದು ಎಣಿಸಿರುವೆನು- ಎಂದು ಅಭಿಪ್ರಾಯ.

## ಆತ್ಮಸ್ವರೂಪವಿಷಯದ ಪ್ರಶ್ನೆ

ಅನ್ಯತ್ರ ಧರ್ಮಾದನ್ಯತ್ರಾಧರ್ಮಾದನ್ಯತ್ರಾಸ್ಮಾತ್ ಕೃತಾಕೃತಾತ್ ।
ಅನ್ಯತ್ರ ಭೂತಾಚ್ಚ ಭವ್ಯಾಚ್ಚ ಯತ್ತತ್ಪಶ್ಯಸಿ ತದ್ವದ ॥೧೪॥

೧೪. ಧರ್ಮಕ್ಕಿಂತ ಬೇರೆಯಾಗಿ, ಅಧರ್ಮಕ್ಕಿಂತ ಬೇರೆಯಾಗಿ, ಈ ಕೃತಾಕೃತಕ್ಕಿಂತ ಬೇರೆಯಾಗಿ, ಭೂತಕ್ಕಿಂತಲೂ ಭವ್ಯಕ್ಕಿಂತಲೂ ಬೇರೆಯಾಗಿ (ಇರುವ) ಯಾವದನ್ನು ನೀನು ಕಂಡಿರುವೆಯೋ ಅದನ್ನು ಹೇಳು.

(ಭಾಷ್ಯ)

೬೬. ಏತಚ್ಛ್ರುತ್ವಾ ನಚಿಕೇತಾಃ ಪುನರಾಹ[2] । ಯದ್ಯಹಂ ಯೋಗ್ಯಃ ಪ್ರಸನ್ನಶ್ಚಾಸಿ ಭಗವನ್ ಮಾಂ ಪ್ರತಿ, ಅನ್ಯತ್ರ ಧರ್ಮಾತ್ ಶಾಸ್ತ್ರೀಯಾತ್ ಧರ್ಮಾನುಷ್ಠಾನಾತ್, ತತ್ಫಲಾತ್, ತತ್ಕಾರಕೇಭ್ಯಶ್ಚ ಪೃಥಗ್ಭೂತಮ್। ತಥಾ ಅನ್ಯತ್ರ ಅಧರ್ಮಾತ್ ವಿಹಿತಾಕರಣರೂಪಾತ್ ಪಾಪಾತ್ । ತಥಾ ಅನ್ಯತ್ರ ಅಸ್ಮಾತ್ ಕೃತಾಕೃತಾತ್ । ಕೃತಂ ಕಾರ್ಯಮ್, ಅಕೃತಂ ಕಾರಣಮ್, ಅಸ್ಮಾದನ್ಯತ್ರ । ಕಿಂ ಚ ಅನ್ಯತ್ರ ಭೂತಾಚ್ಚ ಅತಿಕ್ರಾನ್ತಾತ್ ಕಾಲಾತ್ ಭವ್ಯಾಚ್ಚ ಭವಿಷ್ಯತಶ್ಚ ತಥಾ ವರ್ತಮಾನಾತ್ । ಕಾಲತ್ರಯೇಣ ಯತ್ ನ ಪರಿಚ್ಛಿದ್ಯತೇ ಇತ್ಯರ್ಥಃ । ಯದೀದೃಶಂ ವಸ್ತು ಸರ್ವವ್ಯವಹಾರಗೋಚರಾತೀತಂ ಪಶ್ಯಸಿ ಜಾನಾಸಿ ತದ್ ವದ ಮಹ್ಯಮ್ ॥

1. ಅಣುಪರಿಮಾಣವೆಂದು ಅರ್ಥವಲ್ಲ.
2. (ಅ ॥ ವಾ ॥ ಮೈ॥) ಪಾಠಗಳಲ್ಲಿ ಮಾತ್ರ ಈ ವಾಕ್ಯವಿದೆ.

(ಭಾಷ್ಯಾರ್ಥ)

ಇದನ್ನು ಕೇಳಿ ನಚಿಕೇತನು ಮತ್ತೂ ಹೇಳುತ್ತಾನೆ : ನಾನು ಯೋಗ್ಯನಾಗಿರುವದಾದರೆ, ಪೂಜ್ಯನೆ, (ನೀನು) ನನ್ನಲ್ಲಿ ಪ್ರಸನ್ನನೂ ಆಗಿರುವೆಯಾದರೆ ನನಗೆ ಧರ್ಮಕ್ಕಿಂತ ಬೇರೆಯಾಗಿ, ಎಂದರೆ **ಶಾಸ್ತ್ರದಲ್ಲಿ ವಿಧಿಸಿರುವ ಧರ್ಮವನ್ನು ಮಾಡುವದು[1], ಅದರ ಫಲ, ಅದರ ಕಾರಕಗಳು - ಇವು(ಗಳೆಲ್ಲಕ್ಕೂ) ಬೇರೆಯಾಗಿ** ಎಂದರ್ಥ. ಮತ್ತು ಅಧರ್ಮಕ್ಕಿಂತ ಬೇರೆಯಾಗಿ, ಎಂದರೆ ವಿಹಿತವಾದದ್ದನ್ನು ಮಾಡದೆ ಇರುವ ಪಾಪಕ್ಕಿಂತ[2] (ಬೇರೆಯಾಗಿ), ಈ ಕೃತಾಕೃತಕ್ಕಿಂತ ಬೇರೆಯಾಗಿ - ಕೃತವೆಂದರೆ ಕಾರ್ಯವು, ಅಕೃತವೆಂದರೆ ಕಾರಣವು - ಈ **(ಕಾರ್ಯಕಾರಣಕ್ಕಿಂತ) ಬೇರೆಯಾಗಿ[3]** ಮತ್ತು ಭೂತ ಎಂದರೆ ಆಗಿಹೋಗಿರುವ ಕಾಲಕ್ಕಿಂತಲೂ ಭವ್ಯ ಎಂದರೆ ಮುಂದೆ ಆಗುವದಕ್ಕಿಂತಲೂ ಮತ್ತು ಈಗ ಇರುವ (ಕಾಲ)ಕ್ಕಿಂತಲೂ ಬೇರೆಯಾಗಿ ; ಎಂದರೆ **ಮೂರು ಕಾಲದಿಂದಲೂ ಯಾವದು ಕಟ್ಟುವಡೆಯದೆ ಇರುವದೋ ಎಂದರ್ಥ.[4] ಯಾವ ವಸ್ತು ಹೀಗೆ ವ್ಯವಹಾರಕ್ಕೆ ಗೋಚರವಾಗಿರುವದೆಲ್ಲವನ್ನೂ ಮೀರಿರುವದೆಂದು (ನೀನು) ಕಂಡಿರುವೆಯೋ ತಿಳಿದಿರುವೆಯೋ ಅದನ್ನು ನನಗೆ ಹೇಳು.[5]**

## ಓಂಕಾರದ ಮೂಲಕ ಬ್ರಹ್ಮದ ಉಪದೇಶ

(ಭಾಷ್ಯ)

**೬೭. ಇತ್ಯೇವಂ ಪೃಷ್ಟವತೇ ಮೃತ್ಯುರುವಾಚ ಪೃಷ್ಟಂ ವಸು ವಿಶೇಷಣಾನ್ತರಂ ಚ ವಿವಕ್ಷನ್ -**

1. ಧರ್ಮವೆಂದರೆ ಪುಣ್ಯವಲ್ಲ, ಶಾಸ್ತ್ರದಲ್ಲಿ ಹೇಳಿರುವ ಪುಣ್ಯಕರ್ಮ.

2. ನಿಷಿದ್ಧವಾದದ್ದನ್ನು ಮಾಡುವದು ಎಂದೂ ಸೇರಿಸಿಕೊಳ್ಳಬೇಕು. ಈ ವಾಕ್ಯವು (ವಾ ॥) ಪಾಠದಲ್ಲಿ ಮಾತ್ರ ಇದೆ.

3. ಕ್ರಿಯಾಕಾರಕಫಲಗಳಿಗಿಂತ ಬೇರೆಯಾಗಿರುವದು ಕಾರ್ಯವೂ ಅಲ್ಲ, ಕಾರಣವೂ ಅಲ್ಲ.

4. ಕಾರ್ಯಕಾರಣವಾದದ್ದು ಕಾಲಕ್ಕೆ ಕಟ್ಟುವಡೆದೇ ಇರುತ್ತದೆ. ಬ್ರಹ್ಮವು ಅಂಥದ್ದಲ್ಲ. ಭೂತಭವಿಷ್ಯತ್ತುಗಳೆರಡನ್ನೇ ಉಪನಿಷತ್ತಿನಲ್ಲಿ ಹೇಳಿದ್ದರೂ ವರ್ತಮಾನವನ್ನೂ ಸೇರಿಕೊಳ್ಳಬೇಕು ; ಏಕೆಂದರೆ ವರ್ತಮಾನವಿಲ್ಲದೆ ಭೂತಭವಿಷ್ಯತ್ತುಗಳೂ ಇರುವದಿಲ್ಲ.

5. ದೇಶಕಾಲವಸ್ತುಪರಿಚ್ಛೇದವಿಲ್ಲದ ವಸ್ತುವನ್ನು ಕುರಿತು ಇಲ್ಲಿ ಪ್ರಶ್ನೆ ಮಾಡಿರುತ್ತದೆ. ಇದು ಹೊಸ ಪ್ರಶ್ನೆಯಲ್ಲ ; ಹಿಂದೆ ಕೇಳಿರುವ ಪ್ರಶ್ನೆಯ ವಿಶೇಷವೇ. ಸೂ. ಭಾ. ೧-೪-೬ ನೋಡಿ.

(ಭಾಷ್ಯಾರ್ಥ)

ಇಂತೀಪರಿಯಲ್ಲಿ[1] ಕೇಳಿದ ನಚಿಕೇತನಿಗೆ (ಅವನು) ಕೇಳಿದ ವಸ್ತುವನ್ನೂ (ಅದರ) ಬೇರೆಯ ವಿಶೇಷಣಗಳನ್ನೂ[2] ಹೇಳಬೇಕೆಂದು ಯಮನು ಹೇಳುತ್ತಾನೆ:

**ಸರ್ವೇ ವೇದಾ ಯತ್ಪದಮಾಮನನ್ತಿ**
**ತಪಾಗ್ಂಸಿ ಸರ್ವಾಣಿ ಚ ಯದ್ವದನ್ತಿ ।**
**ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ**
**ತತ್ತೇ ಪದಗ್ಂ ಸಙ್ಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥೧೫॥**

೧೫. ಎಲ್ಲಾ ವೇದಗಳೂ ಯಾವ ಸ್ಥಾನವನ್ನು ತಿಳಿಸುತ್ತವೆಯೋ ಎಲ್ಲಾ ತಪಸ್ಸುಗಳೂ ಯಾವದನ್ನು ಹೇಳುತ್ತಿವೆಯೋ, ಯಾವದನ್ನು ಬಯಸಿ ಬ್ರಹ್ಮಚರ್ಯ ವನ್ನು ಮಾಡುವರೋ, ಆ ಪದವನ್ನು ನಿನಗೆ ಸಂಗ್ರಹವಾಗಿ ಹೇಳುವೆನು. ಇದೇ ಓಂ ಎಂಬುದು.

(ಭಾಷ್ಯ)

**೭೮. ಸರ್ವೇ ವೇದಾಃ ಯತ್ಪದಂ ಪದನೀಯಂ ಗಮನೀಯಮ್ ಅವಿಗಾನೇನ ಆಮನನ್ತಿ ಪ್ರತಿಪಾದಯನ್ತಿ । ತಪಾಂಸಿ ಸರ್ವಾಣಿ ಚ ಯದ್ ವದನ್ತಿ ಯತ್ಪ್ರಾಪ್ತ್ಯರ್ಥಾನಿ ಇತ್ಯರ್ಥಃ । ಯದಿಚ್ಛನ್ತೋ ಬ್ರಹ್ಮಚರ್ಯಂ ಗುರುಕುಲವಾಸ ಲಕ್ಷಣಮ್ ಅನ್ಯದ್ವಾ ಬ್ರಹ್ಮಪ್ರಾಪ್ತ್ಯರ್ಥಂ ಚರನ್ತಿ । ತತ್ ತೇ ತುಭ್ಯಂ ಪದಂ ಯಜ್ಜ್ಞಾತುಮಿಚ್ಛಸಿ ಸಙ್ಗ್ರಹೇಣ ಸಙ್ಕ್ಷೇಪತಃ ಬ್ರವೀಮಿ । ಓಮಿತ್ಯೇತತ್ । ತದೇತತ್ ಪದಂ ಯದ್ ಬುಭುತ್ಸಿತಂ ತ್ವಯಾ ಯದೇತದ್ ಓಮಿತಿ । ಓಂಶಬ್ದವಾಚ್ಯಮ್ ಓಂ ಪ್ರತೀಕಂ ಚ ॥**

(ಭಾಷ್ಯಾರ್ಥ)

ಎಲ್ಲಾ ವೇದಗಳೂ[3] ಯಾವ ಪದವನ್ನು ಪಡೆಯಬೇಕಾದ, ಹೋಗಿ ಸೇರ ಬೇಕಾದ ಸ್ಥಾನವನ್ನು ಒಕ್ಕೊರಲಿನಿಂದ[4] ಹೇಳುತ್ತಿವೆಯೋ (ತಾತ್ಪರ್ಯದಿಂದ)

1. ಇತಿ ಎಂಬುದು ಹಿಂದಿನ ಭಾಷ್ಯಕ್ಕೇ ಸೇರಿದ್ದರೂ ಇರಬಹುದು.

2. ಧರ್ಮಾಧರ್ಮಗಳನ್ನೂ ಕಾರ್ಯಕಾರಣಗಳನ್ನೂ ಕಾಲತ್ರಯವನ್ನೂ ಮೀರಿರುವದೆಂಬ ಮೂರು ವಿಶೇಷಣಗಳಲ್ಲದೆ ಬೇರೆಯ ವಿಶೇಷಣಗಳನ್ನೂ.

3. ಉಪನಿಷದ್ರೂಪವಾದ ವೇದಗಳೆಲ್ಲವೂ ಬ್ರಹ್ಮವನ್ನೇ ತಾತ್ಪರ್ಯದಿಂದ ತಿಳಿಸುತ್ತವೆ. ಮಂತ್ರಬ್ರಾಹ್ಮಣರೂಪವಾದ ವೇದಭಾಗವು ಫಲಾಂತರವನ್ನು ಕೊಡುವ ವಿಧಿ ನಿಷೇಧಗಳನ್ನು ಹೇಳಿದರೂ ನಿಷ್ಕಾಮರಿಗೆ ಚಿತ್ತಶುದ್ಧಿಯಮೂಲಕ ಬ್ರಹ್ಮಜ್ಞಾನಕ್ಕೇ ಕಾರಣವಾಗಿ ರುತ್ತದೆ. ಕೇ. ಪದಭಾಷ್ಯ. 4. 'ಅವಿಭಾಗೇನ' ಎಂಬ (ಆ) ಪಾಠಕ್ಕಿಂತ 'ಅವಿಗಾನೇನ' ಎಂಬ ವಾ॥ ಪಾಠವೇ ಮೇಲು ; (ಆ ॥) ಪಾಠದಲ್ಲಿ 'ಅವಿಭಾಗೇನ ಗಮನೀಯಮ್' ಎಂದು ಅನ್ವಯಮಾಡಬೇಕು ; ಅದು ಪ್ರಕೃತೋಪಯುಕ್ತವಲ್ಲ. (ಅವಿರೋಧೇನ) ॥ ಅ ॥

ತಿಳಿಸುತ್ತಿವೆಯೋ : ಎಲ್ಲಾ ತಪಸ್ಸುಗಳೂ ಯಾವದನ್ನು ಹೇಳುತ್ತಿವೆಯೋ ಎಂದರೆ ಯಾವದನ್ನು ಪಡೆಯುವದಕ್ಕಾಗಿ(ಮಾಡಲ್ಪಡುತ್ತಿರುವವೋ) ಎಂದರ್ಥ ; ಗುರುಕುಲ ವಾಸರೂಪವಾದ ಅಥವಾ ಬೇರೆ ಬಗೆಯ, ಬ್ರಹ್ಮವನ್ನು - ಪಡೆಯುವದಕ್ಕಾಗಿ ಮಾಡುವ ಬ್ರಹ್ಮಚರ್ಯವನ್ನು[1] ಯಾವ( ಬ್ರಹ್ಮಪ್ರಾಪ್ತಿ)ಯನ್ನು ಬಯಸಿ ಆಚರಿಸು ವರೋ ; (ಆ ಪದವನ್ನು) ನಿನಗೆ ನಿನಗಾಗಿ - ನೀನು ತಿಳಿಯಲಿಚ್ಛಿಸುತ್ತಿರುವೆಯಲ್ಲ, (ಆ ಪದವನ್ನು) ಸಂಗ್ರಹವಾಗಿ, ಸಂಕ್ಷೇಪವಾಗಿ ಹೇಳುತ್ತೇನೆ. ಇದೇ ಓಂ ಎಂಬುದು; ನೀನು ತಿಳಿದುಕೊಳ್ಳಬೇಕೆಂದು ಅಪೇಕ್ಷಿಸಿದೆಯಲ್ಲ, ಅದೇ ಈ ಓಂ ಎಂಬ ಪದವು. ಎಂದರೆ ಓಂಶಬ್ದವಾಚ್ಯವಾಗಿಯೂ[2] ಓಂಶಬ್ದವನ್ನು ಪ್ರತೀಕವಾಗಿ ಉಳ್ಳದ್ದಾಗಿಯೂ[3] ಇರುವ (ವಸ್ತು).

**ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಮ್ ।**
**ಏತದ್ಧ್ಯೇವಾಕ್ಷರಂ ಜ್ಞಾತ್ವಾ ಯೋ ಯದಿಚ್ಛತಿ ತಸ್ಯ ತತ್ ॥ ೧೬ ॥**

೧೬. ಈ ಅಕ್ಷರವೇ ಬ್ರಹ್ಮವು, ಈ ಅಕ್ಷರವೇ ಪರವು. ಈ ಅಕ್ಷರವನ್ನೇ ತಿಳಿದು ಕೊಂಡರೆ ಯಾವನು ಏನನ್ನು ಬಯಸುತ್ತಾನೋ ಅವನಿಗೆ ಅದು (ಆಗುವದು).

(ಭಾಷ್ಯ)

**೬೯. ಅತಃ ಏತತ್ ಹಿ ಏವ ಅಕ್ಷರಂ ಬ್ರಹ್ಮ ಅಪರಮ್ ಏತದ್ ಹಿ ಏವ ಅಕ್ಷರಂ ಪರಂ ಚ । ತಯೋರ್ಹಿ ಪ್ರತೀಕಮ್ ಏತದಕ್ಷರಮ್ । ಏತದ್ ಹಿ ಏವ ಅಕ್ಷರಂ ಜ್ಞಾತ್ವಾ ಉಪಾಸ್ಯ ಯೋ ಯತ್ ಇಚ್ಛತಿ ಪರಮ್ ಅಪರಂ ವಾ ತಸ್ಯ ತತ್ ಭವತಿ । ಪರಂ ಚೇತ್ ಜ್ಞಾತವ್ಯಮ್, ಅಪರಂ ಚೇತ್ ಪ್ರಾಪ್ತವ್ಯಮ್ ॥**

(ಭಾಷ್ಯಾರ್ಥ)

ಆದ್ದರಿಂದ ಈ ಅಕ್ಷರವೇ ಅಪರಬ್ರಹ್ಮವು ಮತ್ತು ಈ ಅಕ್ಷರವೇ ಪರಬ್ರಹ್ಮವೂ (ಆಗಿರುತ್ತದೆ). ಏಕೆಂದರೆ ಇವೆರಡಕ್ಕೂ ಈ ಅಕ್ಷರವು ಪ್ರತೀಕವಾಗಿರುವದು. ಈ

---

1. ನೈಷ್ಠಿಕಬ್ರಹ್ಮಚರ್ಯ, ಉಪಕುರ್ವಾಣಬ್ರಹ್ಮಚರ್ಯ- ಎಂದು ಬ್ರಹ್ಮಚರ್ಯವು ಎರಡು ಬಗೆ ; ಮೊದಲನೆಯದು ಸಾಯುವವರೆಗೂ ಗುರುಕುಲವಾಸವನ್ನು ಮಾಡುವದು, ಎರಡನೆಯದು ಅಧ್ಯಯನಕ್ಕಾಗಿ. ಛಾಂ. ಭಾ. ೨-೨೩-೧ ನೋಡಿರಿ. ಬ್ರಹ್ಮಚರ್ಯವು ಬ್ರಹ್ಮಪ್ರಾಪ್ತಿಗೂ ಅಂಗವೆಂಬುದನ್ನು ಛಾಂ. ೮-೧೨-೩ ರಿಂದ ತಿಳಿಯಬಹುದು.

2. ಓಂಕಾರವು ಬ್ರಹ್ಮದ ವಾಚಕವು ಎಂದರೆ ಅದನ್ನು ತಿಳಿಸುವ ಹೆಸರು ; ಪ್ರತೀಕವು ಎಂದರೆ ಅದರ ಸ್ಥಾನದಲ್ಲಿ ಉಪಾಸ್ಯವಾಗುವದು, ಸಾಲಗ್ರಾಮವನ್ನು ವಿಷ್ಣುವೆಂದು ಧ್ಯಾನಿಸುವಂತೆ ಓಂಕಾರವನ್ನೇ ಬ್ರಹ್ಮವೆಂದು ಧ್ಯಾನಿಸುವದು.

3. ನಿರ್ಗುಣವನ್ನೂ ಈ ಪ್ರತೀಕದ ಮೂಲಕವಾಗಿ ಧ್ಯಾನಿಸಬಹುದು. ಪ್ರ.ಭಾ. ೫-೫, ಗೀ. ಭಾ. ೮-೧೨, ಸೂ. ಭಾ. ೧-೩-೧೩. ಈ ಧ್ಯಾನಕ್ಕೆ ಕ್ರಮಮುಕ್ತಿಯು ಫಲವು.

ಅಕ್ಷರವನ್ನೇ ತಿಳಿದುಕೊಂಡರೆ ಎಂದರೆ ಉಪಾಸನೆಮಾಡಿದರೆ ಯಾವನು ಏನನ್ನು ಎಂದರೆ (ಯಾವ ಬ್ರಹ್ಮವನ್ನು) ಪರವನ್ನು ಅಥವಾ ಅಪರವನ್ನು ಬಯಸುತ್ತಾನೋ ಅವನಿಗೆ ಅದು ಆಗುತ್ತದೆ. ಪರವಾದರೆ ತಿಳಿಯತಕ್ಕದ್ದು, ಅಪರವಾದರೆ ಪಡೆಯ ತಕ್ಕದ್ದು[1]

ಏತದಾಲಮ್ಬನಗ್ಂ ಶ್ರೇಷ್ಠಮೇತದಾಲಮ್ಬನಂ ಪರಮ್ ।
ಏತದಾಲಮ್ಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ ॥೧೭॥

೧೭. ಈ ಆಲಂಬನವು ಶ್ರೇಷ್ಠವಾದದ್ದು, ಈ ಆಲಂಬನವು ಪರವು. ಈ ಆಲಂಬನವನ್ನು ತಿಳಿದುಕೊಂಡರೆ ಬ್ರಹ್ಮಲೋಕದಲ್ಲಿ ಮಹಿಮೆಯನ್ನು ಪಡೆಯುವನು.

(ಭಾಷ್ಯ)

೭೦. ಯತ ಏವಮ್ ಅತಃ ಏತತ್ ಬ್ರಹ್ಮಪ್ರಾಪ್ತ್ಯಾಲಮ್ಬನಾನಾಂ ಶ್ರೇಷ್ಠಂ ಪ್ರಶಸ್ಯತಮಮ್ । ಏತತ್ ಆಲಮ್ಬನಂ ಪರಮ್, ಅಪರಂ ಚ । ಪರಾಪರಬ್ರಹ್ಮ ವಿಷಯತ್ವಾತ್ । ಏತತ್ ಆಲಮ್ಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ, ಪರಸ್ಮಿನ್ ಬ್ರಹ್ಮಣಿ ಅಪರಸ್ಮಿಂಶ್ಚ । ಬ್ರಹ್ಮಭೂತೋ ಬ್ರಹ್ಮವದುಪಾಸ್ಯೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗಿರುವದರಿಂದ ಈ ಆಲಂಬನವು ಬ್ರಹ್ಮವನ್ನು ಪಡೆಯುವದಕ್ಕೆ (ಬೇಕಾದ) ಆಲಂಬನಗಳಲ್ಲೆಲ್ಲ[2] ಶ್ರೇಷ್ಠವಾದದ್ದು, ಅತ್ಯುತ್ತಮವಾದದ್ದು. ಈ ಆಲಂಬನವು ಪರವೂ ಅಪರವೂ (ಆಗಿರುತ್ತದೆ) ; ಏಕೆಂದರೆ ಇದು ಪರಾಪರಬ್ರಹ್ಮ ಗಳೆ(ರಡನ್ನೂ) ಕುರಿತ (ಆಲಂಬನ)ವಾಗಿರುತ್ತದೆ. ಈ ಆಲಂಬನವನ್ನು ತಿಳಿದು ಕೊಂಡರೆ[3] ಬ್ರಹ್ಮಲೋಕದಲ್ಲಿ ಎಂದರೆ ಪರಬ್ರಹ್ಮದಲ್ಲಿಯೂ ಅಪರಬ್ರಹ್ಮ[4]

1. ಅಪರಬ್ರಹ್ಮವನ್ನು ಬ್ರಹ್ಮಲೋಕಕ್ಕೆ ಹೋಗಿ ಪಡೆದುಕೊಳ್ಳಬೇಕು ; ಪರಬ್ರಹ್ಮ ವನ್ನು ಈಗಲೋ ಕಾಲಾಂತರದಲ್ಲಿಯೋ ತಿಳಿದುಕೊಂಡೇ ಪಡೆಯಬೇಕು. ಏಕೆಂದರೆ ಅದು ನಿತ್ಯಪ್ರಾಪ್ತವಾದ ಆತ್ಮನಾಗಿದೆ. ಸೂ. ಭಾ. ೪-೩-೭ ರಿಂದ ೧೪.

2. ಆಕಾಶ, ಆದಿತ್ಯ, ಮನಸ್ಸು, ನಾಮ ಮುಂತಾದ ಆಲಂಬನಗಳನ್ನು ಬ್ರಹ್ಮಕ್ಕೆ ಶಾಸ್ತ್ರದಲ್ಲಿ ಹೇಳಿರುತ್ತದೆ, ಅವುಗಳಲ್ಲೆಲ್ಲ ಇದೇ ಹೆಚ್ಚಿನದು.

3. ಉಪಾಸನೆಮಾಡಿದರೆ.

4. ಅಪರಬ್ರಹ್ಮವನ್ನು ಉಪಾಸನೆಮಾಡಿದವನು ಅದರ ಸಾಯುಜ್ಯವನ್ನು ಪಡೆದು ಕೊಳ್ಳುತ್ತಾನೆ. ಪರಬ್ರಹ್ಮವನ್ನು ಉಪಾಸನೆಮಾಡಿದವನು ಜ್ಞಾನವನ್ನು ಪಡೆದು ಕ್ರಮ ಮುಕ್ತಿಯನ್ನು ಹೊಂದುತ್ತಾನೆ.

ದಲ್ಲಿಯೂ ಮಹಿಮೆಯನ್ನು ಪಡೆಯುವವನು, ಬ್ರಹ್ಮವೇ ಆಗಿ ಬ್ರಹ್ಮದಂತೆ ಉಪಾಸ್ಯನಾಗುತ್ತಾನೆ ಎಂದರ್ಥ.

## ಬ್ರಹ್ಮದ ಸಾಕ್ಷಾಜ್ಜ್ಞಾನ

(ಭಾಷ್ಯ)

೭೧. 'ಅನ್ಯತ್ರ ಧರ್ಮಾತ್' ಇತ್ಯಾದಿನಾ ಪೃಷ್ಟಸ್ಯ ಆತ್ಮನೋಽಶೇಷವಿಶೇಷರಹಿತಸ್ಯ ಆಲಮ್ಬನತ್ವೇನ (ಪ್ರತೀಕತ್ವೇನ ?) ಚೋಂಕಾರೋ ನಿರ್ದಿಷ್ಟಃ। ಅಪರಸ್ಯ ಚ ಬ್ರಹ್ಮಣಃ, ಮನ್ದಮಧ್ಯಮಪ್ರತಿಪತ್ತ್ರೂನ್ ಪ್ರತಿ। ಅಥ ಇದಾನೀಂ ತಸ್ಯ ಓಂಕಾರಾಲಮ್ಬನಸ್ಯ ಆತ್ಮನಃ ಸಾಕ್ಷಾತ್ ಸ್ವರೂಪನಿರ್ದಿಧಾರಯಿಷಯಾ ಇದಮುಚ್ಯತೇ -

(ಭಾಷ್ಯಾರ್ಥ)

'ಧರ್ಮಕ್ಕಿಂತ ಬೇರೆಯಾಗಿ' (೧-೨-೧೪) ಎಂದು ಮುಂತಾಗಿ (ನಚಿಕೇತನು) ಕೇಳಿದ ಯಾವ ವಿಶೇಷವೂ ಇಲ್ಲದ ಆತ್ಮನಿಗೆ ಆಲಂಬನವಾಗಿ(ಯೂ ಪ್ರತೀಕವಾಗಿಯೂ ?)[1] ಓಂಕಾರವನ್ನು ತಿಳಿಸಿದ್ದಾಯಿತು. ಅಪರಬ್ರಹ್ಮಕ್ಕೂ (ಆಲಂಬನವಾಗಿ ಹೇಳಲ್ಪಟ್ಟಿತು) ; ಇದು ಕೀಳುತರದ ಮತ್ತು ನಡುತರದ[2] ಜಿಜ್ಞಾಸುಗಳಿಗಾಗಿ (ಹೇಳಿದ್ದು), ಇನ್ನು ಈಗ ಆ ಓಂಕಾರವೆಂಬ ಆಲಂಬನವುಳ್ಳ ಆತ್ಮನ ಸ್ವರೂಪವನ್ನು ನೇರಾಗಿಯೇ[3] ಗೊತ್ತುಮಾಡಿ (ತಿಳಿಸು)ವದಕ್ಕಾಗಿ ಈ (ಮಂತ್ರವನ್ನು) ಹೇಳಲಾಗುತ್ತದೆ :-

ನ ಜಾಯತೇ ಮ್ರಿಯತೇ ವಾ ವಿಪಶ್ಚಿ-
ನ್ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥೧೮॥

೧೮. ತಿಳಿದಂಥವನು ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ. ಈತನು ಏತರಿಂದಲೂ ಹುಟ್ಟಲಿಲ್ಲ, (ಈತನಿಂದ) ಯಾರೂ ಹುಟ್ಟಲಿಲ್ಲ. ಈತನು ಅಜನು,

---

1. ಇಲ್ಲಿ ಓಂಕಾರವನ್ನು ಬ್ರಹ್ಮವಾಚಿಕವೆಂದೂ ಪ್ರತೀಕವೆಂದೂ ಎರಡು ಬಗೆಯಿಂದ ಹೇಳಿ ಈ ಓಂಕಾರವು ಉತ್ತಮವಾದ ಆಲಂಬನವೆಂದು ೧೭ನೆಯ ಮಂತ್ರದಲ್ಲಿ ಹೇಳಿರುವದನ್ನು ನೋಡಿದರೆ ಆಲಂಬನವೆಂಬ ಶಬ್ದದಲ್ಲಿಯೇ ಪ್ರತೀಕವೂ ಅಡಕವಾಗಿರುವಂತೆ ಕಾಣುತ್ತದೆ. ಸೂ. ಭಾ. ೧-೩-೧೩ರಲ್ಲಿ ಪ್ರತೀಕವೆಂಬರ್ಥದಲ್ಲಿ ಈ ಶಬ್ದವನ್ನು ಪ್ರಯೋಗಮಾಡಿಯೂ ಇರುತ್ತದೆ. ಮಾಂ. ಭಾ.೧೨ನ್ನೂ ನೋಡಿ. ಆದ್ದರಿಂದ ಇಲ್ಲಿ 'ಪ್ರತೀಕ'ವೆಂಬ ಮಾತು ಹೆಚ್ಚೆಂದು ತೋರುತ್ತದೆ. 2. ಕರ್ಮದೊಡನೆ ಅಥವಾ ಅದಿಲ್ಲದೆ ಉಪಾಸನೆ ಮಾಡುವವರಿಗಾಗಿ ಮಾಂ. ಕಾ. ಭಾ. ೩-೧೬ 3. ಯಾವ ಆಲಂಬನದ ಉಪಾಧಿಯೂ ಇಲ್ಲದೆ.

ನಿತ್ಯನು. ಶಾಶ್ವತನು, ಪುರಾಣನು ; ಶರೀರವು ಕೊಲ್ಲಲ್ಪಟ್ಟರೂ ಕೊಲ್ಲಲ್ಪಡುವದಿಲ್ಲ.

(ಭಾಷ್ಯ)

೭೨. ನ ಜಾಯತೇ ನೋತ್ಪದ್ಯತೇ ಮ್ರಿಯತೇ ವಾ ನ ಮ್ರಿಯತೇ ಚ । ಉತ್ಪತ್ತಿಮತೋ ವಸ್ತುನೋಽನಿತ್ಯಸ್ಯ ಅನೇಕಾ ವಿಕ್ರಿಯಾಃ । ತಾಸಾಮ್ ಆದ್ಯನ್ತೇ ಜನ್ಮವಿನಾಶಲಕ್ಷಣೇ ವಿಕ್ರಿಯೇ ಇಹ ಆತ್ಮನಿ ಪ್ರತಿಷಿಧ್ಯೇತೇ ಪ್ರಥಮಂ ಸರ್ವವಿಕ್ರಿಯಾಪ್ರತಿಷೇಧಾರ್ಥಮ್, ''ನ ಜಾಯತೇ ಮ್ರಿಯತೇ ವಾ'' ಇತಿ । ವಿಪಶ್ಚಿತ್ ಮೇಧಾವೀ, ಅಪರಿಲುಪ್ತಚೈತನ್ಯಸ್ವಭಾವತ್ವಾತ್ । ಕಿಂ ಚ ನಾಯಮ್ ಆತ್ಮಾ ಕುತಶ್ಚಿತ್ ಕಾರಣಾನ್ತರಾದ್ ಬಭೂವ ನ ಪ್ರಭೂತಃ[1] । ಅಸ್ಮಾಚ್ಚ ಆತ್ಮನೋ ನ ಬಭೂವ ಕಶ್ಚಿತ್ ಅರ್ಥಾನ್ತರಭೂತಃ । ಅತೋಽಯಮ್ ಆತ್ಮಾ ಅಜಃ ನಿತ್ಯಃ ಶಾಶ್ವತಃ ಅಪಕ್ಷಯವರ್ಜಿತಃ । ಯೋ ಹಿ ಅಶಾಶ್ವತಃ ಸೋಽಪಕ್ಷೀಯತೇ । ಅಯಂ ತು ಶಾಶ್ವತಃ । ಅತ ಏವ ಪುರಾಣಃ ಪುರಾಪಿ ನವ ಏವೇತಿ । ಯೋ ಹಿ ಅವಯವೋಪಚಯದ್ವಾರೇಣ ಅಭಿನಿರ್ವರ್ತ್ಯತೇ ಸ ಇದಾನೀಂ ನವಃ । ಯಥಾ ಕುಮ್ಭಾದಿಃ । ತದ್ವಿಪರೀತಸ್ತ್ವಾತ್ಮಾ । ಪುರಾಣಃ ವೃದ್ಧಿ ವಿವರ್ಜಿತಃ ಇತ್ಯರ್ಥಃ । ಯತ ಏವಮ್ ಅತೋ ನ ಹನ್ಯತೇ ನ ಹಿಂಸ್ಯತೇ ಹನ್ಯಮಾನೇ ಶಸ್ತ್ರಾದಿಭಿಃ ಶರೀರೇ, ತತ್ಸ್ಥೋಽಪಿ । ಆಕಾಶವದೇವ ॥

(ಭಾಷ್ಯಾರ್ಥ)

ಹುಟ್ಟುವದಿಲ್ಲ ಉಂಟಾಗುವದಿಲ್ಲ ಸಾಯುವದಾಗಲಿ ಇಲ್ಲ, ಸಾಯುವದು ಕೂಡ ಇಲ್ಲ. ಹುಟ್ಟುವಿಕೆಯಿಂದ ಅನಿತ್ಯವಾದ ವಸ್ತುವಿಗೆ ಅನೇಕವಿಕಾರಗಳು (ಇರುತ್ತವೆ). (ಆ) ಯಾವ ವಿಕಾರಗಳೂ ಆತ್ಮನಲ್ಲಿ ಇಲ್ಲವೆನ್ನುವದಕ್ಕಾಗಿ,[2] ಅವುಗಳಲ್ಲಿ ಹುಟ್ಟು ಹೊಂದು ಎಂಬ ಮೊದಲನೆಯ ಕೊನೆಯ[3] ವಿಕಾರಗಳನ್ನು 'ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ' ಎಂದು ಅಲ್ಲಗಳೆದಿರುತ್ತದೆ. ತಿಳಿದಂಥ ಅವನು ಎಂದರೆ ಜ್ಞಾನಿಯು ; ಏಕೆಂದರೆ (ಎಂದಿಗೂ) ನಾಶವಾಗದ ಚೈತನ್ಯವೇ (ಅವನ)

1. (ವಾ॥) ಪಾಠ.

2. ಆತ್ಮನಲ್ಲಿ ಹುಟ್ಟುಹೊಂದು ಎಂಬ ವಿಕಾರಗಳು ಮಾತ್ರ ಇಲ್ಲವೆಂದು ತಾತ್ಪರ್ಯವಲ್ಲ, ಯಾವ ವಿಕಾರವೂ ಇಲ್ಲವೆನ್ನುವದೇ ತಾತ್ಪರ್ಯ. ಗೀ. ಭಾ. ೨-೨೦ ನೋಡಿ.

3. ಹುಟ್ಟು, ಇರವು, ಬೆಳವಣಿಗೆ, ಮಾರ್ಪಾಡು, ಸೊರಗುವಿಕೆ, ಹಾಳಾಗುವದು - ಎಂಬ ಆರೂ ಭಾವರೂಪವಾದ ವಸ್ತುಗಳ ವಿಕಾರಗಳೆಂದು ಯಾಸ್ಕರು ನಿರುಕ್ತದಲ್ಲಿ ಬರೆದಿರುತ್ತಾರೆ. ನಡುವಿನ ವಿಕಾರಗಳಾದ ಯೌವನ, ರೋಗ, ಮುಪ್ಪು - ಮುಂತಾದವುಗಳೂ ಇವುಗಳಲ್ಲಿ ಸೇರಿರುತ್ತವೆ. ವಿಕಾರಗಳ ಪಟ್ಟಿಯಲ್ಲಿ ಹುಟ್ಟು ಮೊದಲನೆಯದು, ಹಾಳಾಗುವದು ಕಡೆಯದು.

ಸ್ವಭಾವವಾಗಿರುತ್ತದೆ.[1] ಮತ್ತು ಈ ಆತ್ಮನು ಮತ್ತೇತರಿಂದಲೂ (ಯಾವ) ಬೇರೆಯ ಕಾರಣದಿಂದಲೂ ಹುಟ್ಟಲಿಲ್ಲ, ಉಂಟಾಗಿರುವದಿಲ್ಲ. ಈ ಆತ್ಮನಿಂದಲೂ ಮತ್ತೆ ಯಾರೂ ಬೇರೆಯಾಗಿರುವನಾಗಿ[2] ಹುಟ್ಟಿರುವದಿಲ್ಲ. ಆದ್ದರಿಂದ ಈ ಆತ್ಮನು ಅಜನು[3], ನಿತ್ಯನು, ಶಾಶ್ವತನು ಎಂದರೆ ಅಪಕ್ಷಯವಿಲ್ಲದವನು[4]. ಯಾವದು ಶಾಶ್ವತ ವಲ್ಲವೋ ಅದೇ ಸವೆಯುತ್ತಿರುವದು ; ಆದರೆ ಈ (ಆತ್ಮನು) ಶಾಶ್ವತನು. (ಆದ್ದ ರಿಂದ ಸವೆಯುವದಿಲ್ಲ). ಆದ್ದರಿಂದಲೇ ಪುರಾಣನು, ಎಂದರೆ ಹಿಂದೆಯೂ ಹೊಸಬನೇ. ಯಾವನು ಅವಯವಗಳು ಕೂಡಿಕೊಳ್ಳುವದರಿಂದ ಉಂಟಾಗಿರು ವನೋ ಅವನು ಈಗ ಹೊಸಬನಾಗಿರುತ್ತಾನೆ ; ಉದಾಹರಣೆಗೆ ಗಡಿಗೆ ಮುಂತಾದದ್ದು[5] (ಈಗ ಹೊಸದು ಎನ್ನಿಸಿಕೊಳ್ಳುವದು). ಆದರೆ ಆತ್ಮನು ಇದಕ್ಕೆ ವಿರುದ್ಧ(ಸ್ವಭಾವ)ದವನಾಗಿರುವದರಿಂದ ಪುರಾಣನು, ಎಂದರೆ ವೃದ್ಧಿಯಿಲ್ಲದವನು ಎಂದರ್ಥ. ಹೀಗಿರು ವದರಿಂದ ಶರೀರವು ಶಸ್ತ್ರಾದಿಗಳಿಂದ ಕೊಲ್ಲಲ್ಪಟ್ಟರೂ ಆ (ಶರೀರ)ದಲ್ಲಿದ್ದರೂ ಆಕಾಶದಂತೆಯೇ[6] (ಈ ಆತ್ಮನು) ಕೊಲ್ಲಲ್ಪಡದೆ ಹಿಂಸೆಮಾಡಲ್ಪಡದೆ ಇರುವನು.

**ಹನ್ತಾ ಚೇನ್ಮನ್ಯತೇ ಹನ್ತುಗ್‌ಂ ಹತಶ್ಚೇನ್ಮನ್ಯತೇ ಹತಮ್ ।**
**ಉಭೌ ತೌ ನ ವಿಜಾನೀತೋ ನಾಯಗ್‌ಂ ಹನ್ತಿ ನ ಹನ್ಯತೇ ॥೧೯॥**

೧೯. ಕೊಲ್ಲುವಾತನು ಕೊಲ್ಲುವದಕ್ಕೆ ಎಣಿಸಿದರೆ, ಕೊಲ್ಲಲ್ಪಟ್ಟವನು ಕೊಲ್ಲಲ್ಪಟ್ಟನೆಂದು ಎಣಿಸಿದರೆ, ಅವರಿಬ್ಬರೂ ಅರಿಯರು ; ಇವನು ಕೊಲ್ಲುವದಿಲ್ಲ, ಕೊಲ್ಲಲ್ಪಡುವದಿಲ್ಲ.

1. ಬೃ. ೪-೩-೨೩ರ ಸೂಚನೆ. ಚೈತನ್ಯವೇ ಎಲ್ಲವನ್ನೂ ಅರಿಯುವದಾದ್ದರಿಂದ ಅದಕ್ಕೆ ನಾಶವಿದೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ ; ಈ ಚೈತನ್ಯಸ್ವಭಾವವೇ ಇಲ್ಲಿ ವಿಪಶ್ಚಿತ್ - ತಿಳಿದವನು, ಪಂಡಿತನು ಎಂಬ ಶಬ್ದದಿಂದ ಹೇಳಲ್ಪಟ್ಟಿದೆ. ತೈ. ಭಾ. ೨-೧ರಲ್ಲಿ 'ವಿಪಶ್ಚಿತಾ' ಎಂಬುದರ ಭಾಷ್ಯವನ್ನು ನೋಡಿ.

2. ಆತ್ಮನಿಗಿಂತ ಬೇರೆಯಾದ ಕಾರಣವಾಗಲಿ ಕಾರ್ಯವಾಗಲಿ ಇಲ್ಲ ; ಏಕೆಂದರೆ ಆತ್ಮನು ಅದ್ವಿತೀಯನು.

3. ಹುಟ್ಟಿಲ್ಲದ ಸ್ವಭಾವದವನು.

4. ಸೊರಗುವಿಕೆ ಎಂಬ ವಿಕಾರವಿಲ್ಲದವನು.

5. 'ಕುಂಭಾದಿಃ' ಎಂಬ (ಆ ॥) ಪಾಠದ ಅನುವಾದವಿದು. 'ಕುಡ್ಯಾದಿಃ' ಗೋಡೆ ಮುಂತಾದದ್ದು (ವಾ ॥) ''ಅಙ್ಕುರಾದಿಃ'' ಮೊಳಕೆ ಮುಂತಾದದ್ದು - ಎಂಬ ಪಾಠಗಳೂ ಇವೆ.

6. ಗಡಿಗೆಗೆ ಯಾವ ವಿಕಾರವಾದರೂ ಯಾವ ಮಾರ್ಪಾಡೂ ಇಲ್ಲದ ಅದರೊಳಗಿನ ಆಕಾಶದಂತೆ.

(ಭಾಷ್ಯ)

೭೩. ಏವಂಭೂತಮಪ್ಯಾತ್ಮಾನಂ ಶರೀರಮಾತ್ರಾತ್ಮದೃಷ್ಟಿಃ ಹನ್ತಾ ಚೇತ್ ಯದಿ ಮನ್ಯತೇ ಚಿನ್ತಯತಿ ಹನ್ತುಂ 'ಹನಿಷ್ಯಾಮಿ ಏನಮ್' ಇತಿ, ಯೋಽಪ್ಯನ್ಯೋ ಹತಃ ಸೋಽಪಿ ಚೇತ್ ಮನ್ಯತೇ ಹತಮ್ ಆತ್ಮಾನಂ 'ಹತೋಽಹಮ್' ಇತಿ, ಉಭಾವಪಿ ತೌ ನ ವಿಜಾನೀತಃ ಸ್ವಮ್ ಆತ್ಮಾನಮ್ । ಯತಃ ನಾಯಂ ಹನ್ತಿ, ಅವಿಕ್ರಿಯತ್ವಾದಾತ್ಮನಃ । ತಥಾ ನ ಹನ್ಯತೇ, ಆಕಾಶವದವಿಕ್ರಿಯತ್ವಾದೇವ । ಅತೋಽ ನಾತ್ಮಜ್ಞವಿಷಯ ಏವ ಧರ್ಮಾಧರ್ಮಾದಿಲಕ್ಷಣಃ ಸಂಸಾರಃ ನಾತ್ಮಜ್ಞಸ್ಯ[1] ಶ್ರುತಿಪ್ರಾಮಾಣ್ಯಾತ್, ನ್ಯಾಯಾಚ್ಚ ಧರ್ಮಾಧರ್ಮಾದ್ಯನುಪಪತ್ತೇಃ ॥

(ಭಾಷ್ಯಾರ್ಥ)

ಹೀಗಿರುವ ಆತ್ಮನನ್ನು ಕೂಡ ಶರೀರವೇ ಆತ್ಮನೆಂದು[2] ತಿಳಿದಿರುವ ಕೊಲ್ಲುವಾತನು ಕೊಲ್ಲುವದಕ್ಕೆ, 'ಇವನನ್ನು ಕೊಲ್ಲುವೆನು' ಎಂದು, ಎಣಿಸಿದರೆ ಯೋಚಿಸಿದರೆ, ಮತ್ತು (ಆ) ಇನ್ನೊಬ್ಬನು ಕೊಲ್ಲಲ್ಪಟ್ಟವನು ಆತ್ಮನನ್ನು ಕೊಲ್ಲಲ್ಪಟ್ಟನೆಂದು ''ನಾನು ಕೊಲ್ಲಲ್ಪಡುತ್ತಿದ್ದೇನೆ'' ಎಂದು, ಎಣಿಸಿದರೆ ಅವರಿಬ್ಬರೂ ತಮ್ಮ ಆತ್ಮನನ್ನು[3] ಅರಿಯರು. ಏಕೆಂದರೆ ಆತ್ಮನು ವಿಕಾರವಿಲ್ಲದವನಾದ್ದರಿಂದ ಇವನು ಕೊಲ್ಲುವದಿಲ್ಲ, ಮತ್ತು ಆಕಾಶದಂತೆ ವಿಕಾರವಿಲ್ಲದವನಾಗಿರುವದರಿಂದಲೇ ಕೊಲ್ಲಲ್ಪಡುವದೂ ಇಲ್ಲ.

ಆದ್ದರಿಂದ ಧರ್ಮ, ಅಧರ್ಮ - ಮುಂತಾದ[4] ಸಂಸಾರವು[5] ಆತ್ಮನನ್ನು ಅರಿಯದವನಿಗೆ ಮಾತ್ರ ಸೇರಿರುವದೇ ಹೊರತು ಆತ್ಮಜ್ಞಾನಿಗೆ ಸೇರಿದ್ದಲ್ಲ. (ಈ) ಶ್ರುತಿಯು (ಇದಕ್ಕೆ) ಪ್ರಮಾಣವಾಗಿರುತ್ತದೆ. ಯುಕ್ತಿಯಿಂದ ನೋಡಿದರೂ[6] ಆತ್ಮನಲ್ಲಿ ಧರ್ಮಾಧರ್ಮಗಳು ಹೊಂದುವದಿಲ್ಲ.

---

1. 'ನ ಬ್ರಹ್ಮಜ್ಞಸ್ಯ' ಎಂಬ (ಅ॥) ಪಾಠಕ್ಕೂ ಇದೇ ಅರ್ಥವಾದರೂ ಈ (ವಾ॥) ಪಾಠವು ಉತ್ತಮ.

2. ತನ್ನ ಸ್ವರೂಪವೆಂದು

3. ತಮ್ಮ ನಿಜವಾದ ಸ್ವರೂಪವನ್ನು

4. ಅವುಗಳ ಫಲಗಳು ಮುಂತಾದ.

5. ಕೊಲ್ಲುವದಿಲ್ಲ ಎಂದು ಹೇಳಿರುವದು ಉಪಲಕ್ಷಣ ; ಯಾವ ಕ್ರಿಯೆಯ ಕರ್ತೃತ್ವವೂ ಕರ್ಮತ್ವವೂ ಆತ್ಮನಿಗಿಲ್ಲವಾದ್ದರಿಂದ ಆತ್ಮಜ್ಞಾನಿಗೂ ಇಲ್ಲ ಎಂದು ಭಾವ. ಗೀ. ಭಾ. ೨-೨೧ನ್ನು ನೋಡಿ.

6. ಸೂ. ಭಾ. ೧-೧-೪ 'ತತ್ಕೃತಧರ್ಮಾಧರ್ಮನಿಮಿತ್ತಂ ಸಶರೀರತ್ವಮ್' ಎಂಬ ಭಾಷ್ಯದ ಮುಂದೆ ನೋಡಿರಿ.

(ಭಾಷ್ಯ)

೭೪. ಕಥಂ ಪುನರಾತ್ಮಾನಂ ಜಾನಾತೀತಿ ? ಉಚ್ಯತೇ -

(ಭಾಷ್ಯಾರ್ಥ)

ಹಾಗಾದರೆ ಆತ್ಮನನ್ನು ಹೇಗೆ (ಸರಿಯಾಗಿ) ತಿಳಿದುಕೊಳ್ಳುವನು ? ಎಂದರೆ ಹೇಳುತ್ತಾನೆ :-

ಅಣೋರಣೀಯಾನ್ ಮಹತೋ ಮಹೀಯಾನ್

ಆತ್ಮಾಸ್ಯ ಜನ್ತೋರ್ನಿಹಿತೋ ಗುಹಾಯಾಮ್ ।

ತಮಕ್ರತುಃ ಪಶ್ಯತಿ ವೀತಶೋಕೋ

ಧಾತುಪ್ರಸಾದಾನ್ಮಹಿಮಾನಮಾತ್ಮನಃ ॥ ೨೦ ॥

೨೦. ಅಣುವಿಗಿಂತ ಅಣುವಾಗಿ, ಮಹತ್ತಿಗಿಂತ ಮಹತ್ತಾಗಿ, ಇರುವ ಆತ್ಮನು ಈ ಜಂತುವಿನ ಗುಹೆಯಲ್ಲಿ ಇಡಲ್ಪಟ್ಟಿರುವನು. ಅವನನ್ನು ಅಕ್ರತುವಾದವನು ಕಂಡುಕೊಳ್ಳುವನು. ಧಾತುಪ್ರಸಾದದಿಂದ ಆತ್ಮನ ಮಹಿಮೆಯನ್ನು (ಕಂಡುಕೊಂಡು) ಶೋಕವಿಲ್ಲದವನಾಗುವನು.

(ಭಾಷ್ಯ)

೭೫. ಅಣೋಃ ಸೂಕ್ಷ್ಮಾತ್ ಅಣೀಯಾನ್ ಶ್ಯಾಮಾಕಾದೇರಣುತರಃ । ಮಹತೋ ಮಹತ್ಪರಿಮಾಣಾತ್ ಮಹೀಯಾನ್ ಮಹತ್ತರಃ ಪೃಥಿವ್ಯಾದೇಃ ಅಣು ಮಹದ್ ವಾ ಯದಸ್ತಿ ಲೋಕೇ ವಸ್ತು, ತತ್ ತೇನೈವ ಆತ್ಮನಾ ನಿತ್ಯೇನ ಆತ್ಮವತ್ ಸಂಭವತಿ । ತದ್ ಆತ್ಮನಾ ವಿನಿರ್ಮುಕ್ತಮ್ ಅಸತ್ ಸಮ್ಪದ್ಯತೇ । ತಸ್ಮಾತ್ ಅಸಾವೇವಾತ್ಮಾ ಅಣೋರಣೀಯಾನ್ ಮಹತೋ ಮಹೀಯಾನ್, ಸರ್ವನಾಮರೂಪವಸ್ತೂಪಾಧಿಕತ್ವಾತ್ । ಸ ಚ ಆತ್ಮಾ ಅಸ್ಯ ಜನ್ತೋಃ ಬ್ರಹ್ಮಾದಿಸ್ತಮ್ಬಪರ್ಯನ್ತಸ್ಯ ಪ್ರಾಣಿಜಾತಸ್ಯ ಗುಹಾಯಾಂ ಹೃದಯೇ ನಿಹಿತಃ ಆತ್ಮಭೂತಃ ಸ್ಥಿತ ಇತ್ಯರ್ಥಃ । ತಮ್ ಆತ್ಮಾನಮ್ ದರ್ಶನಶ್ರವಣಮನನವಿಜ್ಞಾನಲಿಙ್ಗಮ್ ಅಕ್ರತುಃ ಅಕಾಮಃ, ದೃಷ್ಟಾದೃಷ್ಟಬಾಹ್ಯವಿಷಯೇಭ್ಯ । (ವಿಷಯೋಪರತ ಬುದ್ಧಿಃ) ಪರತಬುದ್ಧಿಃ ಇತ್ಯರ್ಥಃ । ಯದಾ ಚೈವಂ ತದಾ ಮನಆದೀನಿ ಕರಣಾನಿ ಧಾತವಃ ಶರೀರಸ್ಯ ಧಾರಣಾತ್ ಪ್ರಸೀದನ್ತೀತಿ ಏಷಾಂ ಧಾತೂನಾಂ ಪ್ರಸಾದಾತ್ ಆತ್ಮನೋ ಮಹಿಮಾನಂ ಕರ್ಮನಿಮಿತ್ತವೃದ್ಧಿಕ್ಷಯರಹಿತಂ ಪಶ್ಯತಿ "ಅಯಮಹಮಸ್ಮಿ" ಇತಿ ಸಾಕ್ಷಾದ್ವಿಜಾನಾತಿ ತತೋ (ವೀತಶೋಕಃ) ವಿಗತಶೋಕೋ ಭವತಿ ॥

(ಭಾಷ್ಯಾರ್ಥ)

ಅಣುವಿಗಿಂತ ಎಂದರೆ ಸಣ್ಣದಾಗಿರುವ ಸಾವೆಯಕಾಳು ಮುಂತಾದವುಗಳಿಗಿಂತ[1] ಅಣುವಾಗಿರುವನು. ಮಹತ್ತಿಗಿಂತ ಎಂದರೆ ದೊಡ್ಡ ಪರಿಮಾಣದ ಪೃಥಿವಿಯೇ ಮುಂತಾದದ್ದಕ್ಕಿಂತ ಮಹತ್ತಾಗಿರುವನು, ದೊಡ್ಡದಾಗಿರುವನು. ಲೋಕದಲ್ಲಿ ಅಣುವಾಗಲಿ, ಮಹತ್ತಾಗಲಿ, ಯಾವ ವಸ್ತುವಿದ್ದರೂ ಅದು ಆ ನಿತ್ಯನಾದ ಆತ್ಮನಿಂದಲೇ ಸ್ವರೂಪವುಳ್ಳದ್ದಾಗಿರುವದೆಂದು[2] ಹೊಂದುಗಡೆಯಾಗಿರುತ್ತದೆ ; ಅದು ಆತ್ಮನನ್ನು ಬಿಟ್ಟರೆ ಇಲ್ಲದ್ದೇ ಆಗಿಬಿಡುವದು. ಹೀಗಿರುವದರಿಂದ ಈ ಆತ್ಮನೇ ಅಣುವಿಗಿಂತ ಅಣುವೂ ಮಹತ್ತಿಗಿಂತ ಮಹತ್ತೂ ಆಗಿರುತ್ತಾನೆ ಏಕೆಂದರೆ ನಾಮರೂಪವುಳ್ಳ ಯಾವ ವಸ್ತುವಾದರೂ[3] ಇವನಿಗೆ ಉಪಾಧಿಯಾಗಿರುತ್ತದೆ. ಅಂಥ ಆತ್ಮನು ಈ ಜಂತುವಿನ ಎಂದರೆ ಬ್ರಹ್ಮನು ಮೊದಲಾಗಿ ಸ್ತಂಬದವರೆಗಿನ[4] ಪ್ರಾಣಿಸಮೂಹದ ಗುಹೆಯಲ್ಲಿ ಎಂದರೆ ಹೃದಯದಲ್ಲಿ[5] ಇಡಲ್ಪಟ್ಟಿರುವನು, (ಅದರ) ಆತ್ಮನಾಗಿ ಇರುತ್ತಿರುವನು ಎಂದರ್ಥ. **ನೋಡುವದು, ಕೇಳುವದು, ಯೋಚಿಸುವದು, ಅರಿಯುವದು - ಎಂಬ ಗುರುತುಗಳುಳ್ಳ**[6] ಆ ಆತ್ಮನನ್ನು ಅಕ್ರತುವಾದವನು ಎಂದರೆ ಕಾಮಗಳಿಲ್ಲದವನು, ಕಂಡಿರುವ (ಈ ಲೋಕದ) ಮತ್ತು ಕಾಣದೆ ಇರುವ (ಪರಲೋಕದ) ಹೊರಗಿನ ವಿಷಯಗಳಿಂದ ಹಿಂತೆಗೆದಿರುವ

1. ಛಾಂ. ೩-೧೪-೩ರ ಸೂಚನೆ. ಈ ಶ್ರುತಿಯಲ್ಲಿ ಭತ್ತ, ಜವೆ, ಸಾಸುವೆ, ಸಾವೆ - ಎಂಬ ಸಣ್ಣ ವಸ್ತುಗಳನ್ನೂ ಪೃಥ್ವಿ, ಅಂತರಿಕ್ಷ, ಸ್ವರ್ಗಲೋಕ - ಎಂಬ ದೊಡ್ಡ ವಸ್ತುಗಳನ್ನೂ ಉದಾಹರಿಸಿದೆ.

2. ಆ ವಸ್ತುವಿನ ಪರಮಾರ್ಥರೂಪವು ಆತ್ಮನೇ.

3. ವಸ್ತುವೆಂದರೆ ಕರ್ಮ ಎಂದು ಅರ್ಥಮಾಡಬೇಕೆಂತ (ಗೋ ॥) ವ್ಯಾಖ್ಯಾನಕಾರರು ಹೇಳುತ್ತಾರೆ. ಅದೇನೂ ಅವಶ್ಯವಿಲ್ಲ ; ರೂಪವೆಂಬ ಮಾತಿನಲ್ಲಿ ಕರ್ಮವನ್ನೂ ಅಡಕಮಾಡುವದು ಭಾಷ್ಯಕಾರರ ಶೈಲಿಯಾಗಿದೆ. ಅಣುವಸ್ತುವಿನ ಉಪಾಧಿಯಿಂದ ಅಣುವೆಂದೂ ಮಹಾವಸ್ತುವಿನ ಉಪಾಧಿಯಿಂದ ಮಹತ್ತೆಂದೂ ಬ್ರಹ್ಮಕ್ಕೆ ವ್ಯವಹಾರವು ಬರಬಹುದು ಎಂಬುದು ಭಾಷ್ಯದ ಭಾವ.

4. ಸ್ತಂಬವೆಂಬುದು ಒಂದು ಬಗೆಯ ಹುಲ್ಲು. ಸ್ಥಾವರಪ್ರಾಣಿಗಳಲ್ಲಿ ತೀರ ಕಡಿಮೆಯ ತರದ ಪ್ರಾಣಿಯವರೆಗಿನ ಎಂದರ್ಥ.

5. ಹಿಂದೆ ೧೨ರಲ್ಲಿ 'ಗುಹಾಹಿತಮ್' ಎಂಬುದಕ್ಕೆ ಬರೆದಿರುವ ಭಾಷ್ಯವನ್ನು ನೋಡಿ.

6. ಇಲ್ಲಿ ಲಿಂಗವೆಂಬ ಮಾತಿಗೆ ಶ್ರವಣಮನನನಿದಿಧ್ಯಾಸನರೂಪವಾದ 'ಸಾಧನ' ಎಂದು (ಗೋ ॥) ವ್ಯಾಖ್ಯಾನದಲ್ಲಿದೆ. ನಮ್ಮ ಅನುವಾದಕ್ಕೆ ಪ್ರ. ಭಾ. ೪-೯, ಐ. ೧ನೆಯ ಅಧ್ಯಾಯದ ಉಪಸಂಹಾರಭಾಷ್ಯ' ಸೂ. ಭಾ. ೧-೩-೧೯- ಮುಂತಾದ ಭಾಷ್ಯವಾಕ್ಯಗಳು ಬೆಂಬಲವಾಗಿವೆ.

ಬುದ್ಧಿಯುಳ್ಳವನು ಎಂದರ್ಥ. ಯಾವಾಗ ಹೀಗೆ (ಆಗುವನೋ) ಆಗ ಮನಸ್ಸೇ ಮುಂತಾದ ಕರಣ ಗಳೆಂಬ ಧಾತುಗಳು -(ಇವು) ಶರೀರವನ್ನು ಧರಿಸಿರುವದರಿಂದ ಧಾತುಗಳೆನಿಸಿರು ತ್ತವೆ. (ಈ ಧಾತುಗಳು) - ಪ್ರಸನ್ನವಾಗುತ್ತವೆ. **ಈ ಧಾತುಗಳ ಪ್ರಸನ್ನತೆಯಿಂದ[1] ಕರ್ಮದಿಂದ ವೃದ್ಧಿಯಾಗಲಿ ಕ್ಷಯವಾಗಲಿ ಆಗುವದಿಲ್ಲ ವೆಂಬ[2] ಆತ್ಮನ ಮಹಿಮೆಯನ್ನು ಕಂಡುಕೊಳ್ಳುವನು.** ''ಇವನೇ ನಾನಾಗಿರು ವೆನು' ಎಂದು ನೇರಾಗಿ ತಿಳಿದುಕೊಳ್ಳುವನು.[3] ಅದರಿಂದ (ಶೋಕವಿಲ್ಲದವನಾಗು ವನು) ಶೋಕ ವನ್ನು ನೀಗಿಕೊಂಡವನಾಗುವನು.[4]

(ಭಾಷ್ಯ)

**೭೬. ಅನ್ಯಥಾ ದುರ್ವಿಜ್ಞೇಯೋಽಯಮಾತ್ಮಾ ಕಾಮಿಭಿಃ ಪ್ರಾಕೃತ-ಪುರುಷೈಃ ಯಸ್ಮಾತ್ -**

(ಭಾಷ್ಯಾರ್ಥ)

ಹಾಗಿಲ್ಲದಿದ್ದರೆ ಕಾಮಿಗಳಾದ ಸಾಮಾನ್ಯಜನರಿಗೆ ಈ ಆತ್ಮನನ್ನು ತಿಳಿಯುವದು ಕಷ್ಟ. ಏಕೆಂದರೆ :-

**ಆಸೀನೋ ದೂರಂ ವ್ರಜತಿ ಶಯಾನೋ ಯಾತಿ ಸರ್ವತಃ ।**

**ಕಸ್ತಂ ಮದಾಮದಂ ದೇವಂ ಮದನ್ಯೋ ಜ್ಞಾತುಮರ್ಹತಿ ॥ ೨೧ ॥**

೨೧. ಕೂತುಕೊಂಡು ದೂರ ಹೋಗುತ್ತಿರುವನು ; ಮಲಗಿಕೊಂಡು ಎಲ್ಲಾ ಕಡೆಯಲ್ಲಿಯೂ ಹೋಗಿರುತ್ತಾನೆ. ಮದಾಮದಸ್ವರೂಪನಾದ ಆ ದೇವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು ?

(ಭಾಷ್ಯ)

**೭೭. ಆಸೀನಃ ಅವಸ್ಥಿತಃ ಅಚಲ ಏವ ಸನ್ ದೂರಂ ವ್ರಜತಿ । ಶಯಾನಃ ಯಾತಿ ಸರ್ವತಃ । ಏವಮಸೌ ಆತ್ಮಾ .ದೇವೋ ಮದಾಮದಃ ಸಮದೋ**

---

1. ಇಂದ್ರಿಯಗಳೂ ಮನಸ್ಸೂ ಪ್ರಸನ್ನವಾದವನಿಗೆ ಮಾತ್ರವೇ ಆತ್ಮನು ಧರ್ಮಾಧರ್ಮಗಳ ಸಂಬಂಧವಿಲ್ಲದವನೆಂಬ ತತ್ತ್ವವು ಮನಸ್ಸಿನಲ್ಲಿ ಮಿಂಚುವದು - ಎಂದು ಭಾವ.

2. ಆತ್ಮನು ನಿರ್ವಿಕಾರಿ, ಅವನಲ್ಲಿ ಹೆಚ್ಚುಕಡಿಮೆಗಳು ಆಗುವದಿಲ್ಲ. ತೈ. ಬ್ರಾ. ೧೨-೯-೭ ; ಬೃ. ೪-೪-೨೨, ೨೩.

3. ಜ್ಞಾನದಿಂದ ಹೀಗೆ ತಿಳಿದುಕೊಳ್ಳುವದನ್ನೇ ಆತ್ಮನ ಸಾಕ್ಷಾತ್ಕಾರವೆಂದು ತಿಳಿಯಬೇಕು. 4. ಇಲ್ಲಿ ''ವೀತಶೋಕೋ ಭವತಿ'' ಎಂದಿಷ್ಟೇ (ಆ ॥) ಪಾಠದಲ್ಲಿದೆ ; ''ವಿಗತ ಶೋಕೋ ಭವತಿ'' ಎಂಬ (ವಾ॥) ಪಾಠದ ವಾಕ್ಯವು ಅರ್ಥಮಾತ್ರವಾಗುವದರಿಂದ ''ವೀತಶೋಕಃ'' ಎಂಬ ಮಾತು ಲೇಖಕರ ಪ್ರಮಾದದಿಂದ ಬಿಟ್ಟುಹೋಗಿದೆ ಎಂದು ಕಲ್ಪಿಸಬೇಕಾಗುವದು.

ಅಮದಶ್ಚ, ಸಹರ್ಷೋಽಹರ್ಷಶ್ಚ ವಿರುದ್ಧಧರ್ಮವಾನ್ । ಅತೋಽಶಕ್ಯತ್ವಾತ್ ಜ್ಞಾತುಂ ಕಃ ತಂ ಮದಾಮದಂ ದೇವಂ ಮದನ್ಯಃ ಜ್ಞಾತುಮ್ ಅರ್ಹತಿ ? ಅಸ್ಮದಾದೇರೇವ ಸೂಕ್ಷ್ಮಬುದ್ಧೇಃ ಪಣ್ಡಿತಸ್ಯ ಸುವಿಜ್ಞೇಯೋಽಯಮಾತ್ಮಾ ಸ್ಥಿತಿಗತಿನಿತ್ಯಾನಿತ್ಯಾದಿ ವಿರುದ್ಧಾನೇಕಧರ್ಮೋಪಾಧಿಕತ್ವಾತ್ ವಿರುದ್ಧಧರ್ಮವಾನ್[1] ವಿಶ್ವರೂಪ ಇವ ಚಿನ್ತಾಮಣಿವತ್ ಅವಭಾಸತೇ । ಆತೋ ದುರ್ವಿಜ್ಞೇಯತ್ವಂ ದರ್ಶಯತಿ 'ಕಸ್ತಂ ಮದನ್ಯೋ ಜ್ಞಾತುಮರ್ಹತಿ' ಇತಿ । ಕರಣಾನಾಮುಪಶಮಃ ಶಯನಮ್ । ಕರಣಜನಿತಸ್ಯ ಏಕದೇಶವಿಜ್ಞಾನಸ್ಯ ಉಪಶಮಃ ಶಯಾನಸ್ಯ ಭವತಿ । ಯದಾ ಚೈವಂ ಕೇವಲಸಾಮಾನ್ಯವಿಜ್ಞಾನತ್ವಾತ್ ಸರ್ವತೋ ಯಾತೀವ । ಯದಾ ವಿಶೇಷವಿಜ್ಞಾನಸ್ಥಃ ಸ್ವೇನ ರೂಪೇಣ ಸ್ಥಿತ ಏವ ಸನ್ ಮನ ಆದಿಗತಿಷು ತದುಪಾಧಿಕತ್ವಾದ್ ದೂರಂ ವ್ರಜತೀವ । ಸ ಚ ಇಹೈವ ವರ್ತತೇ ॥

(ಭಾಷ್ಯಾರ್ಥ)

ಕೂತುಕೊಂಡು ಅಲುಗಾಡದೆ (ಇದ್ದಲ್ಲಿಯೇ) ಇದ್ದುಕೊಂಡು ದೂರ ಹೋಗುತ್ತಿರುವನು, ಮಲಗಿಕೊಂಡು ಎಲ್ಲಾ ಕಡೆಯಲ್ಲಿಯೂ ಹೋಗಿರುತ್ತಾನೆ. ಹೀಗೆ ಈ ಆತ್ಮನೆಂಬ ದೇವನು ಮದಾಮದಸ್ವರೂಪನು, ಎಂದರೆ ಹರ್ಷದಿಂದ ಕೂಡಿರುವವನೂ ಹರ್ಷವಿಲ್ಲದವನೂ (ಆಗಿರುತ್ತಾನೆ), ವಿರುದ್ಧವಾದ ಧರ್ಮಗಳುಳ್ಳವನಾಗಿರುತ್ತಾನೆ. ಆದ್ದರಿಂದ ತಿಳಿಯುವದಕ್ಕೆ ಅಶಕ್ಯನಾಗಿರುವದರಿಂದ ಆ ಮದಾಮದಸ್ವರೂಪನಾದ ದೇವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು ? ನನ್ನಂಥ ಸೂಕ್ಷ್ಮಬುದ್ಧಿಯ ಜ್ಞಾನಿಗೇ ಈ ಆತ್ಮನನ್ನು ಸುಲಭವಾಗಿ ತಿಳಿಯುವದಕ್ಕೆ ಆಗುತ್ತದೆ. ನಿಂತಿರುವದು (ಆಗಲೇ) ಓಡಾಡುತ್ತಿರುವದು ; ನಿತ್ಯವಾಗಿರುವದು. ಅನಿತ್ಯವಾಗಿರುವದು - ಮುಂತಾದ ಪರಸ್ಪರವಿರುದ್ಧವಾದ ಅನೇಕಧರ್ಮಗಳು (ಇವನಿಗೆ) ಉಪಾಧಿಯಾಗಿರುವದರಿಂದ ಇವನು ವಿರುದ್ಧವಾದ ಧರ್ಮಗಳುಳ್ಳವನಾಗಿ **ಚಿಂತಾಮಣಿಯ** ಹಾಗೆ ಎಲ್ಲಾ ರೂಪಗಳನ್ನೂ ಉಳ್ಳವನಂತೆ[2] ತೋರುತ್ತಿರುವನು. ಆದ್ದರಿಂದ ಇವನನ್ನು ತಿಳಿದುಕೊಳ್ಳುವದು (ಅಜ್ಞಾನಿಗಳಿಗೆ ಬಲು) ಕಷ್ಟ - (ಎಂದು) ತಿಳಿಸುವದಕ್ಕೆ 'ಅವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು ?' ಎಂದು ಹೇಳಿರುತ್ತಾನೆ.

1. (ವಾ ॥) ಪಾಠ.

2. (ಆ ॥ ಗೋ॥) ವ್ಯಾಖ್ಯಾನಕಾರರು ವಿಶ್ವರೂಪವೆಂಬುದೂ ಒಂದು ರತ್ನವೆಂದು ಬರೆದಿದ್ದಾರೆ. ಆದರೆ ಪ್ರಕರಣವನ್ನು ನೋಡಿದರೆ ಈ ಮಾತು ಆತ್ಮವಿಶೇಷಣವಾಚಕವೆಂದೇ ತೋರುತದೆ.

ಕರಣಗಳು ಉಪಶಾಂತಿಯಾಗುವದೇ ಶಯನವು. ಕರಣಗಳಿಂದ ಉಂಟಾಗುವ ಒಂದಂಶದ ವಿಜ್ಞಾನವು ಮಲಗಿದಾತನಿಗೆ ಹೋಗಿಬಿಡುತ್ತದೆ. ಹೀಗೆ (ವಿಶೇಷಜ್ಞಾನವು ಹೋಗಿ)ರುವಾಗ (ಆತ್ಮನು) ಬರಿಯ **ಸಾಮಾನ್ಯವಿಜ್ಞಾನರೂಪ**[1]ನಾಗಿರುವದರಿಂದ ಎಲ್ಲಾ ಕಡೆಯಲ್ಲಿಯೂ ಹೋಗಿರುವಂತಿರುವನು, ಯಾವಾಗ **ವಿಶೇಷವಿಜ್ಞಾನ**ದಲ್ಲಿರುವನೋ[2] (ಆಗ) ತನ್ನ ರೂಪದಲ್ಲಿ ಇದ್ದುಕೊಂಡೇ ಇದ್ದರೂ ಮನಸ್ಸೇ ಮುಂತಾದವುಗಳ ಚಲನೆಗಳಾಗುವಾಗ ಅವುಗಳೇ (ಆತ್ಮನಿಗೆ) ಉಪಾಧಿಯಾಗಿರುವದರಿಂದ[3] (ಇವನೂ) ದೂರವಾಗಿ ಹೋಗುತ್ತಿರುವಂತಿರುವನು. ಆದರೆ ಅವನು (ನಿಜವಾಗಿ) ಇಲ್ಲಿಯೇ[4] ಇರುತ್ತಾನೆ.

(ಭಾಷ್ಯ)

**೭೮. ತದ್ವಿಜ್ಞಾನಾಚ್ಚ ಶೋಕಾತ್ಯಯ ಇತ್ಯಪಿ ದರ್ಶಯತಿ -**

(ಭಾಷ್ಯಾರ್ಥ)

ಮತ್ತು ಆ (ಆತ್ಮನನ್ನು) ಅರಿಯುವದರಿಂದ ಶೋಕವನ್ನೂ ದಾಟಬಹುದು ಎಂಬುದನ್ನೂ[5] ತೋರಿಸಿಕೊಡುತ್ತಾನೆ-

**ಅಶರೀರಗ್‌ಂ ಶರೀರೇಷು ಅನವಸ್ಥೇಷ್ವವಸ್ಥಿತಮ್ ।**

**ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥ ೨೨ ॥**

೨೨. ಅನವಸ್ಥವಾದ ಶರೀರಗಳಲ್ಲಿ ಅಶರೀರನಾಗಿ ಅವಸ್ಥಿತನಾಗಿರುವವನಾಗಿಯೂ ದೊಡ್ಡವನಾಗಿಯೂ ವಿಭುವಾಗಿಯೂ ಇರುವ ಆತ್ಮನನ್ನು ತಿಳಿದುಕೊಂಡರೆ ಧೀರನು ಶೋಕಿಸುವದಿಲ್ಲ.

1. ಆತ್ಮನು ಅರಿವಿನ ರೂಪದಿಂದ ಎಲ್ಲಾ ಉಪಾಧಿಗಳಲ್ಲಿಯೂ ತೋರಿಕೊಳ್ಳುತ್ತಲೇ ಇರುವನು ; ಉಪಾಧಿಗಳಿಲ್ಲದಾಗಲೂ ಆ ರೂಪದಿಂದ ಇರುವನು. ಈ ಅರಿವಿಗೆ ಸಾಮಾನ್ಯಜ್ಞಾನವೆಂದು ಹೆಸರು.

2. ಇದು ಮನೆ, ಇದು ಬಾಗಿಲು - ಎಂದು ಆಗುವ ಬಿಡಿಯರಿವಿಗೆ ವಿಶೇಷಜ್ಞಾನವೆಂದು ಹೆಸರು. ಎಚ್ಚರಕನಸುಗಳಲ್ಲಿ ಮಾತ್ರ ಈ ಜ್ಞಾನವು ಇರುತ್ತದೆ.

3. ಆತ್ಮನಿಗೆ 'ಮನೆಯ ಜ್ಞಾನವಾಯಿತು, ಬಾಗಿಲ ಜ್ಞಾನವಾಯಿತು' ಎಂದಾಗ ಮನಸ್ಸು, ಇಂದ್ರಿಯ- ಮುಂತಾದವುಗಳಲ್ಲಿ ಆಗುವ ಮಾರ್ಪಾಡೆಂಬ ಉಪಾಧಿಯಿಂದ ಆತ್ಮನಲ್ಲಿಯೇ ಮಾರ್ಪಾಡು ಆದಂತೆ ಸಾಮಾನ್ಯರಿಗೆ ತೋರುವದು.

4. ತಾನು ಇದ್ದ ಸ್ವರೂಪದಲ್ಲಿಯೇ.

5. ಅಕಾಮನು ಮಾತ್ರ, ತಿಳಿದುಕೊಳ್ಳುತ್ತಾನೆ ಎಂಬುದೊಂದು, ತಿಳಿದವನು ಶೋಕವಿಲ್ಲದವನಾಗುತ್ತಾನೆ ಎಂಬುದೊಂದು - ಹೀಗೆ ಎರಡು ವಿಷಯಗಳನ್ನು ೨೦ನೆಯ ಮಂತ್ರದಲ್ಲಿ ಹೇಳಿತ್ತಷ್ಟೆ. ೨೧ನೆಯ ಮಂತ್ರದಲ್ಲಿ ಮೊದಲನೆಯ ವಿಷಯವನ್ನು ವಿವರಿಸಿದ್ದಾಯಿತು. ಈಗ ಎರಡನೆಯದನ್ನು ವಿವರಿಸುವನು- ಎಂದು ಭಾವ.

(ಭಾಷ್ಯ)

೭೯. ಅಶರೀರಃ ಸ್ವೇನ ರೂಪೇಣ ಆಕಾಶಕಲ್ಪಃ ಆತ್ಮಾ । ತಮ್ ಅಶರೀರಮ್ । ಶರೀರೇಷು ದೇವಪಿತೃಮನುಷ್ಯಾದಿಶರೀರೇಷು ಅನವಸ್ಥೇಷು ಅವಸ್ಥಿತಿರಹಿತೇಷು, ಅನಿತ್ಯೇಷು । ಅವಸ್ಥಿತಂ ನಿತ್ಯಮ್ ಅವಿಕೃತಮ್ ಇತ್ಯೇತತ್ । ಮಹಾನ್ತಮ್ । ಮಹತ್ತ್ವಸ್ಯ ಆಪೇಕ್ಷಿಕತ್ವಶಙ್ಕಾಯಾಮ್ ಆಹ - ವಿಭುಂ ವ್ಯಾಪಿನಮ್ । ಆತ್ಮಾನಮ್ । ಆತ್ಮಗ್ರಹಣಂ ಸ್ವತೋಽನನ್ಯತ್ವಪ್ರದರ್ಶನಾರ್ಥಮ್ । ಆತ್ಮಶಬ್ದಃ ಪ್ರತ್ಯಗಾತ್ಮವಿಷಯ ಏವ ಮುಖ್ಯಃ । ತಮ್ ಈದೃಶಮ್ ಆತ್ಮಾನಮ್ । ಮತ್ವಾ 'ಅಯಮಹಮ್' ಇತಿ । ಧೀರಃ ಧೀಮಾನ್ ನ ಶೋಚತಿ । ನ ಹ್ಯೇವಂವಿಧಸ್ಯಾತ್ಮವಿದಃ ಶೋಕೋಪಪತ್ತಿಃ ॥

(ಭಾಷ್ಯಾರ್ಥ)

ಅಶರೀರನು ಎಂದರೆ ತನ್ನ ರೂಪದಿಂದ ಆಕಾಶದಂತೆ (ಶರೀರವಿಲ್ಲದ[1]) ಆತ್ಮನು. ಹಾಗೆ ಅಶರೀರನಾಗಿರುವ ಆ (ಆತ್ಮನನ್ನು) ಅನವಸ್ಥವಾದ ಎಂದರೆ ನಿಲುಗಡೆ ಇಲ್ಲದ, ಅನಿತ್ಯವಾದ ಶರೀರಗಳಲ್ಲಿ ದೇವತೆಗಳು, ಪಿತೃಗಳು, ಮನುಷ್ಯರು- ಮೊದಲಾದವರ ಶರೀರಗಳಲ್ಲಿ[2] ಅವಸ್ಥಿತನಾಗಿರುವ ಎಂದರೆ ನಿತ್ಯನಾಗಿ ಯಾವ ವಿಕಾರವೂ ಇಲ್ಲದಿರುವ[3] ಎಂದರ್ಥ. ದೊಡ್ಡವನಾಗಿಯೂ - ದೊಡ್ಡದೆಂಬುದು ಮತ್ತೊಂದರ ಹೋಲಿಕೆಯಿಂದ ಹೇಳಿದ್ದಿರಬಹುದೆಂಬ ಶಂಕೆ (ಬಂದೀತೆಂದು)- ವಿಭುವಾಗಿಯೂ, ವ್ಯಾಪಿಯಾಗಿಯೂ[4], (ಎಂಬ ವಿಶೇಷಣವನ್ನು ಜೋಡಿಸಿರುತ್ತದೆ). ಇಂಥ ಆತ್ಮನನ್ನು- (ಇಲ್ಲಿ) ಆತ್ಮ ಎಂಬ ಮಾತನ್ನು ತೆಗೆದುಕೊಂಡಿರುವದು ತನಗಿಂತ ಬೇರೆಯಲ್ಲವೆಂದು ತಿಳಿಸುವದಕ್ಕೆ. ಆತ್ಮಶಬ್ದಕ್ಕೆ (ನಮ್ಮ) ಒಳಗಿರುವ ಆತ್ಮ ಎಂಬುದೇ

---

1. ಆತ್ಮನಿಗೆ ಶರೀರವು ಇಲ್ಲವೇ ಇಲ್ಲ, ಏಕೆಂದರೆ ಅಳತೆಗೆ ಸಿಕ್ಕಿರುವ ವಸ್ತುವಿಗೆ ಮಾತ್ರ ಶರೀರವಿರಬಹುದು.

2. ಬ್ರಹ್ಮನು ಮೊದಲುಗೊಂಡು ಸ್ಥಾವರದವರೆಗಿನ ಪ್ರಾಣಿಗಳ ಶರೀಗಳೆಲ್ಲವೂ ಇಲ್ಲಿ ವಿವಕ್ಷಿತವೆಂದು ಭಾವ.

3. ದೇವಶರೀರದಿಂದ ಹೆಚ್ಚಿಗೆಯಾಗಲಿ ಮನುಷ್ಯಾಟಶರೀರದಿಂದ ಆಗುವ ಕಡಿಮೆಯಾಗಲಿ ಆತ್ಮನಿಗೆ ಇರುವದಿಲ್ಲ. ಮಾಂ. ಕಾ. ಭಾ. ೩-೧೦ ನೋಡಿ.

4. ಆತ್ಮನು ಅಶರೀರನು, ನಿತ್ಯನು - ಎಂಬುದಕ್ಕೆ ಕಾರಣವನ್ನು ಹೇಳುವ ಮಾತಿದು.

ಮುಖ್ಯವಾದ ಅರ್ಥವು.[1] ಆ (ಇಂಥ ಆತ್ಮನನ್ನು)- ನಾನೇ ಇವನು ಎಂದು[2] ತಿಳಿದುಕೊಂಡ ಧೀರನು ಎಂದರೆ ಬುದ್ಧಿವಂತನು ಶೋಕಿಸುವದಿಲ್ಲ. ಏಕೆಂದರೆ ಈ ವಿಧವಾದ ಆತ್ಮನನ್ನು[3] ಅರಿತುಕೊಂಡವನಿಗೆ ಶೋಕವು ಉಂಟಾಗಲಾರದು.

## ಆತ್ಮಜ್ಞಾನಕ್ಕೆ ಸಾಧನ

(ಭಾಷ್ಯ)

೮೧. ಯದ್ಯಪಿ ದುರ್ವಿಜ್ಞೇಯೋಽಯಮಾತ್ಮಾ ತಥಾಪಿ ಉಪಾಯೇನ ಸುವಿಜ್ಞೇಯ ಏವ ಇತ್ಯಾಹ-

(ಭಾಷ್ಯಾರ್ಥ)

ಈ ಆತ್ಮನನ್ನು ತಿಳಿಯುವದು ಬಲುಕಷ್ಟವಾಗಿರುವದಾದರೂ (ಸರಿಯಾದ) ಸಾಧನದಿಂದ (ಇವನನ್ನು) ಸುಲಭವಾಗಿ ತಿಳಿಯಲೇಬಹುದು ಎಂದು ಹೇಳುತ್ತಾನೆ :-

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯ-
ಸ್ತಸ್ಯೈಷ ಆತ್ಮಾ ವಿವೃಣುತೇ ತನೂಗ್‌ಂ ಸ್ವಾಮ್ ॥ ೨೩ ॥

೨೩. ಈ ಆತ್ಮನು ಪ್ರವಚನದಿಂದ ದೊರೆಯತಕ್ಕವನಲ್ಲ ಮೇಧಾ (ಶಕ್ತಿ)ಯಿಂದ (ದೊರೆಯುವವ)ನಲ್ಲ, ಬಹಳವಾದ ಶ್ರವಣದಿಂದಲೂ (ದೊರೆಯುವವ)ನಲ್ಲ. ಯಾವನನ್ನೇ ಈತನು ಬೇಡುವನೋ ಅವನಿಂದ ದೊರೆಯುವವನಾಗಿರುವನು. ಅವನಿಗೆ ಈ ಆತ್ಮನು ತನ್ನ ತನುವನ್ನು ಬಿಚ್ಚಿ ತೋರಿಸುವನು.

1. ಆತ್ಮ ಎಂದರೆ ಸ್ವರೂಪವು. ತಾನು ಎಂಬ ಅರ್ಥದಲ್ಲಿ ಮುಖ್ಯವಾಗಿರುವ ಈ ಶಬ್ದವನ್ನು ತಾನಲ್ಲದ ಪ್ರಧಾನ, ತನಗಿಂತ ಬೇರೆಯಾದ ತಟಸ್ಥೇಶ್ವರ- ಮುಂತಾದವುಗಳಿಗೆ ಉಪಯೋಗಿಸಿದರೆ ಮುಖ್ಯಾರ್ಥವನ್ನು ಬಿಟ್ಟಂತೆ ಆಗುತ್ತದೆ ಎಂದು ಭಾವ.

2. ಬೃ. ೪-೪-೧೨.

3. 'ಏವಂವಿಧಸ್ಯಾತ್ಮವಿದಃ' ಎಂಬ (ವಾ ॥ ಮೈ ॥) ಪಾಠವನ್ನು ಇಟ್ಟುಕೊಂಡಿದೆ. 'ಏಮವಿಧಸ್ಯಾತ್ಮವಿದಃ' ಎಂಬ (ಆ॥) ಪಾಠದಲ್ಲಿ ಇಂಥ ಆತ್ಮಜ್ಞಾನಿಗೆ ಎಂದರ್ಥ. ಹೀಗೆ ಈ ಆತ್ಮನು ನಾನೇ ಎಂದು ತಿಳಿದುಕೊಂಡಂಥ ಅಪರೋಕ್ಷಜ್ಞಾನಿಗೆ ಎಂಬುದು ವಾಕ್ಯದ ಅಭಿಪ್ರಾಯವಾಗುವದು.

(ಭಾಷ್ಯ)

೮೧. ನಾಯಮಾತ್ಮಾ ಪ್ರವಚನೇನ ಅನೇಕವೇದಸ್ವೀಕರಣೇನ ಲಭ್ಯಃ ಜ್ಞೇಯಃ । ನಾಪಿ ಮೇಧಯಾ ಗ್ರನ್ಥಾರ್ಥಧಾರಣಶಕ್ತ್ಯಾ । ನ ಬಹುನಾ ಶ್ರುತೇನ ಕೇವಲೇನ । ಕೇನ ತರ್ಹಿ ಲಭ್ಯಃ ಇತಿ ? ಉಚ್ಯತೇ । ಯಮೇವ ಸ್ವಮಾತ್ಮಾನಮ್ ಏಷ ಸಾಧಕೋ ವೃಣುತೇ ಪ್ರಾರ್ಥಯತೇ ತೇನೈವ ಆತ್ಮನಾ ವರಿತ್ರಾ ಸ್ವಯಮ್ ಆತ್ಮಾ ಲಭ್ಯಃ ಜ್ಞಾಯತೇ ಇತ್ಯೇತತ್ । ನಿಷ್ಕಾಮಸ್ಯ[1] ಆತ್ಮಾನಮೇವ ಪ್ರಾರ್ಥಯತಃ ಆತ್ಮನೈವ ಆತ್ಮಾ ಲಭ್ಯತೇ ಇತ್ಯರ್ಥಃ । ಕಥಂ ಲಭ್ಯತ ಇತಿ ? ಉಚ್ಯತೇ । ತಸ್ಯ ಆತ್ಮಕಾಮಸ್ಯ ಏಷ ಆತ್ಮಾ ವಿವೃಣುತೇ ಪ್ರಕಾಶಯತಿ ಪಾರಮಾರ್ಥಿಕೀಂ ತನೂಂ ಸ್ವಾಂ ಸ್ವಕೀಯಾಮ್, ಸ್ವಯಾಥಾತ್ಮ್ಯಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಈ ಆತ್ಮನು ಪ್ರವಚನದಿಂದ ಎಂದರೆ ಅನೇಕವೇದಗಳನ್ನು (ಕಲಿತು) ಕೊಂಡ (ಮಾತ್ರ)ದಿಂದ ದೊರೆಯತಕ್ಕವನಲ್ಲ, ತಿಳಿಯಬರುವದಿಲ್ಲ. ಮೇಧಾಶಕ್ತಿಯಿಂದಲೂ ಎಂದರೆ ಗ್ರಂಥಗಳ ಅರ್ಥವನ್ನು ನೆನಪಿನಲ್ಲಿಡುವ ಶಕ್ತಿಯಿಂದಲೂ (ದೊರೆಯುವವ)ನಲ್ಲ. ಸುಮ್ಮನೆ[2] ಬಹಳಶ್ರವಣಮಾಡುವದರಿಂದಲೂ (ದೊರೆಯುವವ)ನಲ್ಲ. ಹಾಗಾದರೆ ಏತರಿಂದ ದೊರೆಯುವನು ? ಎಂದರೆ ಹೇಳುತ್ತಾನೆ- ಯಾವ ತನ್ನ ಆತ್ಮನನ್ನೇ ಈತನು ಎಂದರೆ (ಈ) ಸಾಧಕನು ಬೇಡುವನೋ ಬೇಕೆನ್ನುತ್ತಿರುವನೋ ಆ ಬೇಡುವವನಾದ[3] ಆತ್ಮನಿಂದಲೇ ಆತ್ಮನು ದೊರೆಯುವನು ತಿಳಿಯಬರುವನು ಎಂದರ್ಥ. ನಿಷ್ಕಾಮನಾಗಿ ಆತ್ಮನೇ ಬೇಕೆನ್ನುತ್ತಿರುವವನಿಗೆ ಆತ್ಮನಿಂದಲೇ ಆತ್ಮನು ದೊರೆಯುವನು ಎಂದರ್ಥ. ಹೇಗೆ ದೊರೆಯುವನು ? ಎಂದರೆ ಹೇಳುತ್ತಾನೆ : ಅವನಿಗೆ ಎಂದರೆ ಆತ್ಮನನ್ನೇ ಬಯಸುತ್ತಿರುವವನಿಗೆ[4] ಈ

---

1. ''ನಿಷ್ಕಾಮಶ್ಚ ಆತ್ಮಾನಮೇವ ಪ್ರಾರ್ಥಯತೇ' ಎಂಬ (ಪಾ ॥) ಪಾಠ ಅಗತ್ಯವಿಲ್ಲ.

2. ಮನನನಿದಿಧ್ಯಾಸನಗಳ ಸಹಾಯವಿಲ್ಲದೆ.

3. ಆತ್ಮನಿಗಿಂತ ಬೇರೆಯಾದದ್ದೆಲ್ಲವೂ ಅನಾತ್ಮವಾದದ್ದರಿಂದ ಅದು ನೇರಾಗಿ ಆತ್ಮಜ್ಞಾನಕ್ಕೆ ಸಾಧನವಾಗಲಾರದು ; ಅನಾತ್ಮತಿರಸ್ಕಾರದಿಂದ ಆ ಆತ್ಮನೇ ನಾನು ಎಂಬುದನ್ನು ತಿಳಿಯಬೇಕೆಂಬ ಉತ್ಕಟೇಚ್ಛೆಯಿರುವವನಿಗೆ ಮಾತ್ರವೇ ಆತ್ಮಜ್ಞಾನವುಂಟಾಗುತ್ತದೆ. ಈ ಮಂತ್ರದ 'ತೇನ' ಎಂಬ ಶಬ್ದದ ವ್ಯಾಖ್ಯಾನಾಂತರವನ್ನು ಮುಂ. ಭಾ. ೩-೨-೩ರಲ್ಲಿ ನೋಡಿ.

ಆತ್ಮನನ್ನು ಬಿಟ್ಟು ಅನಾತ್ಮಭೋಗಕ್ಕಾಗಿ ಜನ್ಮಾಂತರಲೋಕಾಂತರಗಳನ್ನು ಪಡೆಯುತ್ತಿರುವದಕ್ಕೆ ಕಾಮವಿರುವದೇ ಕಾರಣವು ಆತ್ಮನನ್ನು ಬಯಸುವವನಿಗೆ ಈ ತೊಂದರೆಯಿಲ್ಲವಾದ್ದರಿಂದ ಅವನಿಗೆ ಆತ್ಮಜ್ಞಾನದಿಂದ ಆತ್ಮಪ್ರಾಪ್ತಿಯಾಗುತ್ತದೆ. ಮುಂ. ೩-೨-೨, ಬೃ. ೪-೪-೬.

ಆತ್ಮನು ತನ್ನ, ತನಗೆ ಸೇರಿದ, ಪಾರಮಾರ್ಥಿಕವಾದ, ಶರೀರವನ್ನು ಎಂದರೆ ತನ್ನ ನಿಜವಾದ ತತ್ತ್ವವನ್ನು ಎಂದರ್ಥ ; (ಅದನ್ನು) ಬಿಚ್ಚಿ ತೋರಿಸುವನು, ಬೆಳಗಿಸುತ್ತಾನೆ.

**ನಾವಿರತೋ ದುಶ್ಚರಿತಾನ್ನಾಶಾನ್ತೋ ನಾಸಮಾಹಿತಃ ।**
**ನಾಶಾನ್ತಮಾನಸೋ ವಾಽಪಿ ಪ್ರಜ್ಞಾನೇನೈನಮಾಪ್ನುಯಾತ್ ॥ ೨೪ ॥**

೨೪. ದುರಾಚಾರವನ್ನು ಬಿಡದಿರುವವನು, ಶಾಂತನಲ್ಲದವನು, ಸಮಾಧಾನವಿಲ್ಲದವನು ; ಮನಶ್ಶಾಂತಿಯಿಲ್ಲದವನು (ಇವರು ಯಾರೂ) ಪ್ರಜ್ಞಾನದಿಂದ ಇವನನ್ನು ಪಡೆಯಲಾರರು.

(ಭಾಷ್ಯ)

೮೨. ಕಿಂಚಾನ್ಯತ್ । ನ ದುಶ್ಚರಿತಾತ್ ಪ್ರತಿಷಿದ್ಧಾತ್ ಶ್ರುತಿಸ್ಮೃತ್ಯವಿಹಿತಾತ್ ಪಾಪಕರ್ಮಣಃ ಅವಿರತಃ ಅನುಪರತಃ । ನಾಪಿ ಇನ್ದ್ರಿಯಲೌಲ್ಯಾತ್ ಅಶಾನ್ತಃ ಅನುಪರತಃ । ನಾಪಿ ಅಸಮಾಹಿತಃ ಅನೇಕಾಗ್ರಮನಾಃ ವಿಕ್ಷಿಪ್ತಚಿತ್ತಃ । ಸಮಾಹಿತಚಿತ್ತೋಽಪಿ ಸನ್ ಸಮಾಧಾನಫಲಾರ್ಥಿತ್ವಾತ್ ನಾಪಿ ಅಶಾನ್ತಮಾನಸಃ ವ್ಯಾಪೃತಚಿತ್ತಃ । ಪ್ರಜ್ಞಾನೇನ ಬ್ರಹ್ಮವಿಜ್ಞಾನೇನ ಏನಂ ಪ್ರಕೃತಮ್ ಆತ್ಮಾನಮ್ ಆಪ್ನುಯಾತ್ । ಯಸ್ತು ದುಶ್ಚರಿತಾತ್ ವಿರತಃ, ಇನ್ದ್ರಿಯಲೌಲ್ಯಾಚ್ಚ, ಸಮಾಹಿತಚಿತ್ತಃ, ಸಮಾಧಾನಫಲಾದಪಿ ಉಪಶಾನ್ತಮಾನಸಶ್ಚ, ಆಚಾರ್ಯವಾನ್ ಪ್ರಜ್ಞಾನೇನ ಯಥೋಕ್ತಮಾತ್ಮಾನಂ ಪ್ರಾಪ್ನೋತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಏನೆಂದರೆ ದುರಾಚಾರವನ್ನು ಎಂದರೆ ಶ್ರುತಿಸ್ಮೃತಿಗಳಲ್ಲಿ ವಿಧಿಸದೆ ಇರುವ ಬೇಡವೆಂದು ಹೇಳಿರುವ[1] ಪಾಪಕರ್ಮಗಳನ್ನು ಬಿಡದಿರುವವನು (ಅವನ್ನು) ಬಿಟ್ಟಿರದವನಾಗಲಿ, ಇಂದ್ರಿಯಗಳ ಲೋಲತೆಯನ್ನು (ಬಿಡದೆ) ಅಶಾಂತನಾಗಿರುವವನಾಗಲಿ ಎಂದರೆ (ಅದನ್ನು) ಬಿಟ್ಟಿರದವನಾಗಲಿ, ಸಮಾಧಾನವಿಲ್ಲದವನಾಗಲಿ ಎಂದರೆ ಏಕಾಗ್ರವಾದ ಮನಸ್ಸಿಲ್ಲದ ಚೆಲ್ಲಾಡುವ ಚಿತ್ತದವನಾಗಲಿ (ಎಂದರ್ಥ). ಸಮಾಧಾನದ ಚಿತ್ತವುಳ್ಳವನಾದರೂ (ಆ) ಸಮಾಧಾನದ ಫಲವನ್ನು ಬಯಸುವದರಿಂದ ಮನಶ್ಶಾಂತಿಯಿಲ್ಲದವನು ಎಂದರೆ ಮನಸ್ಸು ಯಾವಾಗಲೂ ವ್ಯಾಪಾರಮಾಡುತ್ತಲೇ ಇರುವವನಾಗಲಿ ಪ್ರಜ್ಞಾನದಿಂದ ಎಂದರೆ ಬ್ರಹ್ಮವಿಜ್ಞಾನದಿಂದ ಇವನನ್ನು, ಪ್ರಕೃತನಾಗಿರುವ ಆತ್ಮನನ್ನು, ಪಡೆಯಲಾರನು. ಯಾವನಾದರೆ ದುರಾಚಾರವನ್ನು ಬಿಟ್ಟು ಇಂದ್ರಿಯಲೌಲ್ಯವನ್ನೂ ಬಿಟ್ಟು, ಚಿತ್ತಸಮಾಧಾನವನ್ನು ಹೊಂದಿ,

1. 'ವಿಧಿಸದೆ ಇರುವ' ಎಂದದ್ದರಿಂದ ವಿಧಿಸಿರುವ ದುಶ್ಚರಿತಗಳೂ ಉಂಟೆಂದು ಶಂಕಿಸಿಯಾರೆಂದು ಈ ಮಾತನ್ನು ಪಯೋಗಿಸಿದೆ.

ಸಮಾಧಾನದ ಫಲದಲ್ಲಿಯೂ ಬಯಕೆಯಿಲ್ಲದೆ,[1] ಮನಶ್ಶಾಂತಿಯನ್ನು ಹೊಂದಿ (ಉತ್ತಮವಾದ) ಆಚಾರ್ಯನನ್ನುಳ್ಳವನಾಗಿರುವನೋ[2] (ಅವನು) ಪ್ರಜ್ಞಾನದಿಂದ ಮೇಲೆ ಹೇಳಿದ ಆತ್ಮನನ್ನು ಪಡೆಯುವನು ಎಂದರ್ಥ.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನಃ ।
ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾ ವೇದ ಯತ್ರ ಸಃ ॥ ೨೫ ॥

೨೫. ಯಾವನಿಗೆ ಬ್ರಹ್ಮವೂ ಕ್ಷತ್ರವೂ ಎರಡೂ ಅನ್ನವಾಗಿರುವವೋ, ಯಾವನಿಗೆ ಮೃತ್ಯುವು ಉಪ್ಪಿನಕಾಯಿಯಾಗಿರುವನೋ ಅವನು ಎಲ್ಲಿ ಎಂಬುದನ್ನು ಹೀಗೆ ಯಾವನು ಅರಿತಾನು ?

(ಭಾಷ್ಯ)

೮೩. ಯಸ್ತ್ವನೇವಂಭೂತಃ, ಯಸ್ಯ ಆತ್ಮನಃ ಬ್ರಹ್ಮ ಚ ಕ್ಷತ್ರಂ ಚ ಬ್ರಹ್ಮಕ್ಷತ್ರೇ ಸರ್ವಧರ್ಮವಿಧಾರಕೇ ಅಪಿ ಸರ್ವತ್ರಾಣಭೂತೇ ಉಭೇ ಓದನಃ ಅಶನಂ ಭವತಃ ಸ್ಯಾತಾಮ್ । ಸರ್ವಹರೋಽಪಿ ಮೃತ್ಯುಃ ಯಸ್ಯ ಉಪಸೇಚನ ಮಿವ ಓದನಸ್ಯ ಅಶನತ್ವೇಽಪ್ಯಪರ್ಯಾಪ್ತಃ ತಂ ಪ್ರಾಕೃತಬುದ್ಧಿಃ ಯಥೋಕ್ತ ಸಾಧನರಹಿತಃ ಸನ್ ಕಃ ಇತ್ಥಾ ಇತ್ಥಮ್ ಏವಮ್ । ಯಥೋಕ್ತಸಾಧನವಾನಿವ ಇತ್ಯರ್ಥಃ । ವೇದ ವಿಜಾನಾತಿ ಯತ್ರ ಸಃ ಆತ್ಮಾ ಇತಿ ॥

(ಭಾಷ್ಯಾರ್ಥ)

ಆದರೆ ಯಾವನು ಹೀಗೆ ಇರುವದಿಲ್ಲವೋ[3] ಅಂಥ ಪ್ರಾಕೃತಬುದ್ಧಿಯುಳ್ಳ, ಮೇಲೆ ಹೇಳಿದ ಸಾಧನಗಳಿಲ್ಲದ ಯಾವನುತಾನೆ (ಈ ಆತ್ಮನನ್ನು ಅರಿತು ಕೊಂಡಾನು?) ಎಲ್ಲಾ ಧರ್ಮವನ್ನೂ ನಿಲ್ಲಿಸಿಕೊಂಡಿರುವವುಗಳೂ, ಎಲ್ಲವನ್ನೂ ಕಾಪಾಡುತ್ತಿರುವವುಗಳೂ ಆದ ಬ್ರಹ್ಮ, ಕ್ಷತ್ರ - ಎಂಬೆರಡೂ[4] ಯಾವ ಆತ್ಮನಿಗೆ ಅನ್ನವಾಗಿರುವವೋ, ಊಟವಾಗಿರುವವೋ (ಅಷ್ಟುಮಾತ್ರ)ವಾದಾವೋ ಎಲ್ಲವನ್ನೂ ಅಪಹರಿಸುವ[5] ಮೃತ್ಯುವು ಕೂಡ ಯಾವನಿಗೆ ಅನ್ನಕ್ಕೆ ಉಪ್ಪಿನಕಾಯಿಯಂತೆ

1. ಮಾಂ. ಕಾ. ೩-೩೩, ೪೪. 2. ಛಾಂ. ೬-೧೪-೨

3. ಆತ್ಮನನ್ನೇ ಬಯಸುವದು, ದುರಾಚಾರವನ್ನು ಬಿಟ್ಟಿರುವದು - ಮುಂತಾದ ಗುಣಗಳಿಂದ ಕೂಡಿ ಈ ದುಶ್ಚರಿತಾದಿವಿಶೇಷಣಗಳಿಂದೊಡಗೂಡಿರುವದಿಲ್ಲವೋ.

4. ಬೃ. ೧-೪-೧೧, ಗೀ. ಭಾ. ೪-೧ ; ಇಲ್ಲಿ ಬ್ರಹ್ಮಕ್ಷತ್ರವೆಂಬುದು ಉಪಲಕ್ಷಣ; ಚರಾಚರಪ್ರಾಣಿಗಳೆಲ್ಲವೂ ಅನ್ನವೇ.

5. ಸರ್ವಹರಮೃತ್ಯುವೆಂದರೆ ಧನಧಾನ್ಯಾದಿಗಳನ್ನು ನಾಶಗೊಳಿಸುವ ಮೃತ್ಯುವಲ್ಲ, ಮರಣರೂಪವಾದ ಮೃತ್ಯು. ಗೀ. ಭಾ. ೧೦-೩೪. ಮೃತ್ಯುವನ್ನೂ ತಿನ್ನುವವನು ಎಂಬ ಗುರುತಿನಿಂದ ಇಲ್ಲಿ ಹೇಳಿದ ಆತ್ಮನು ಪರಮಾತ್ಮನೇ ಎಂದು ಬ್ರ. ಸೂ. ೧-೨-೯ರಲ್ಲಿ ನಿರ್ಣಯಿಸಿರುತ್ತದೆ.

ಅನ್ನವಾಗುವದಕ್ಕೂ ಸಾಲದೆ ಇರುವನೋ ಅಂಥ ಆತ್ಮನು ಎಲ್ಲಿ(ರುತ್ತಾನೆಂ)ಬುದನ್ನು ಹೀಗೆ ಎಂದರೆ ಮೇಲೆ ಹೇಳಿದ ಸಾಧನಗಳುಳ್ಳವನಂತೆ (ಸಾಧನರಹಿತನಾದವನು ಯಾವನುತಾನೆ)[1] ಅರಿತಾನು, ತಿಳಿದುಕೊಳ್ಳುವನು ?

1. ಅಧರ್ಮವನ್ನು ಮೀರದವನು ಧರ್ಮಕ್ಕೂ ಆಚೆ ಇರುವ ಆತ್ಮತತ್ತ್ವವನ್ನು ಎಂದಿಗೂ ತಿಳಿಯಲಾರನು ; ಮೃತ್ಯುವಿನ ಬಾಯಿಗೆ ತುತ್ತಾಗುವ ದುರಾಚಾರವುಳ್ಳವನು ಮೃತ್ಯುವಿಗೂ ಮೃತ್ಯುವಾದ ತತ್ತ್ವವನ್ನು ಅರಿತುಕೊಳ್ಳಲಾರನು- ಎಂದು ಭಾವ.

# ಒಂದನೆಯ ಅಧ್ಯಾಯ-ಮೂರನೆಯ ವಲ್ಲಿ

## ಸಂಸಾರಗತಿ, ಮೋಕ್ಷಗತಿ

(ಭಾಷ್ಯ)

೮೪. 'ಋತಂ ಪಿಬನ್ತೌ' ಇತ್ಯಸ್ಯಾ ವಲ್ಲ್ಯಾಃ ಸಮ್ಬನ್ಧಃ । ವಿದ್ಯಾವಿದ್ಯೇ ನಾನಾ ವಿರುದ್ಧಫಲೇ ಇತ್ಯುಪನ್ಯಸ್ತೇ, ನ ತು ಸಫಲೇ ತೇ ಯಥಾವನ್ನಿರ್ಣೀತೇ । ತನ್ನಿರ್ಣಯಾರ್ಥಾ ರಥರೂಪಕಕಲ್ಪನಾ । ತಥಾ ಚ ಪ್ರತಿಪತ್ತಿಸೌಕರ್ಯಮ್ । ಏವಂ ಚ ಪ್ರಾಪ್ತೃಪ್ರಾಪ್ಯಗನ್ತೃಗನ್ತವ್ಯವಿವೇಕಾರ್ಥಂ ರಥರೂಪಕದ್ವಾರಾ ದ್ವಾವಾತ್ಮಾನೌ ಉಪನ್ಯಸ್ಯೇತೇ -

(ಭಾಷ್ಯಾರ್ಥ)

'ಋತಂ ಪಿಬನ್ತೌ' ಎಂದು (ಪ್ರಾರಂಭವಾಗಿರುವ) ಈ (ಮೂರನೆಯ) ವಲ್ಲಿಯ ಸಂಬಂಧವು ಏನೆಂದರೆ : ವಿದ್ಯೆಯೂ ಅವಿದ್ಯೆಯೂ ಬೇರೆಬೇರೆಯಾಗಿ ವಿರುದ್ಧವಾದ ಫಲವುಳ್ಳವು ಎಂದು ಉಪಕ್ರಮದಲ್ಲಿ ಹೇಳಿರುತ್ತದೆ ; ಆದರೆ ಅವುಗಳೆರಡನ್ನೂ (ಅವುಗಳ) ಫಲಗಳ ಸಮೇತವಾಗಿ ಇದ್ದದ್ದು ಇದ್ದಂತೆ ನಿರ್ಣಯ ಮಾಡಿರುವದಿಲ್ಲ. ಅದನ್ನು ನಿರ್ಣಯಮಾಡುವದಕ್ಕಾಗಿ (ಈ ವಲ್ಲಿಯಲ್ಲಿ) ರಥದ ರೂಪಕವನ್ನು ಕಲ್ಪಿಸಿರುತ್ತದೆ. ಇದರಿಂದ (ವಿಷಯವನ್ನು) ತಿಳಿದುಕೊಳ್ಳುವದಕ್ಕೆ ಅನುಕೂಲವಾಗುತ್ತದೆ. ಈ ಪ್ರಕಾರದಿಂದ ಪಡೆಯುವವನು, ಪಡೆಯಲ್ಪಡತಕ್ಕವನು, ಹೋಗುವವನು, (ಅವನು) ಯಾವನಲ್ಲಿಗೆ ಹೋಗುತ್ತಾನೋ ಅವನು[1]- (ಇವರಿಬ್ಬರನ್ನೂ) ವಿಂಗಡಿಸಿ ತಿಳಿಸುವದಕ್ಕಾಗಿ ರಥದ ರೂಪಕದ ಮೂಲಕ ಇಬ್ಬರು ಆತ್ಮರನ್ನು (ಈಗ) ಹೇಳಲಾಗುವದು :-

ಋತಂ ಪಿಬನ್ತೌ ಸುಕೃತಸ್ಯ ಲೋಕೇ
ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ।
ಛಾಯಾತಪೌ ಬ್ರಹ್ಮವಿದೋ ವದನ್ತಿ
ಪಞ್ಚಾಗ್ನಯೋ ಯೇ ಚ ತ್ರಿಣಾಚಿಕೇತಾಃ ॥೧॥

೧. ಸುಕೃತದ ಋತವನ್ನು ಪಾನಮಾಡುತಾ ಲೋಕದಲ್ಲಿ ಹೆಚ್ಚಿನ

1. ಸಂಸಾರಮೋಕ್ಷಗಳನ್ನು ಪಡೆಯಬೇಕಾಗಿರುವ ಜೀವನ ಸ್ವರೂಪ, ಜ್ಞಾನಿಯು ಮುಟ್ಟಬೇಕಾದ ಪರಮಾತ್ಮನ ಸ್ವರೂಪ - ಇವುಗಳನ್ನು

ಪರಾರ್ಧದಲ್ಲಿ ಗುಹೆಯನ್ನು ಹೊಕ್ಕಿರುವ (ಇಬ್ಬರನ್ನೂ) ನೆರಳು ಬಿಸಿಲುಗಳೆಂದು ಬ್ರಹ್ಮವಿದರೂ, ಪಂಚಾಗ್ನಿಗಳೂ ತ್ರಿಣಾಚಿಕೇತರೂ ಹೇಳುವರು.

(ಭಾಷ್ಯ)

೮೫. ಋತಂ ಸತ್ಯಮ್ ಅವಶ್ಯಂಭಾವಿತ್ವಾತ್ ಕರ್ಮಫಲಂ ಪಿಬನ್ತೌ । ಏಕಸ್ತತ್ರ ಕರ್ಮಫಲಂ ಪಿಬತಿ ಭುಙ್ಕ್ತೇ ನೇತರಃ । ತಥಾಪಿ ಪಾತೃಸಮ್ಬನ್ಧಾತ್ 'ಪಿಬನ್ತೌ' ಇತ್ಯುಚ್ಯೇತೇ ಛತ್ರಿನ್ಯಾಯೇನ । ಸುಕೃತಸ್ಯ ಸ್ವಯಂಕೃತಸ್ಯ ಕರ್ಮಣಃ 'ಋತಮ್' ಇತಿ ಪೂರ್ವೇಣ ಸಮ್ಬನ್ಧಃ । ಲೋಕೇ ಅಸ್ಮಿನ್ ಶರೀರೇ । ಗುಹಾಂ ಗುಹಾಯಾಂ ಬುದ್ಧೌ ಪ್ರವಿಷ್ಟೌ । ಪರಮೇ ಪರಾರ್ಧೇ । ಬಾಹ್ಯಪುರುಷಾಕಾಶ ಸಂಸ್ಥಾನಾಪೇಕ್ಷಯಾ ಪರಮಮ್ । ಪರಸ್ಯ ಬ್ರಹ್ಮಣೋ ಅರ್ಧಃ ಸ್ಥಾನಂ ಪರಾರ್ಧಂ ಹಾರ್ದಾಕಾಶಮ್ । ತಸ್ಮಿನ್ ಹಿ ಪರಂ ಬ್ರಹ್ಮ ಉಪಲಭ್ಯತೇ । ಅತಸ್ತಸ್ಮಿನ್ ಪರಮೇ ಪರಾರ್ಧೇ ಹಾರ್ದಾಕಾಶೇ ಪ್ರವಿಷ್ಟೌ ಇತ್ಯರ್ಥಃ । ತೌ ಚ ಛಾಯಾತಪಾವಿವ ವಿಲಕ್ಷಣೌ ಸಂಸಾರಿತ್ವಾಸಂಸಾರಿತ್ವೇನ ಬ್ರಹ್ಮವಿದೋ ವದನ್ತಿ ಕಥಯನ್ತಿ । ನ ಕೇವಲಮ್ ಅಕರ್ಮಿಣ ಏವ ವದನ್ತಿ । ಪಞ್ಚಾಗ್ನಯಃ ಗೃಹಸ್ಥಾಃ । ಯೇ ಚ ತ್ರಿಣಾಚಿಕೇತಾಃ ತ್ರಿಃಕೃತ್ವೋ ನಾಚಿಕೇತೋಽಗ್ನಿಶ್ಚಿತೋ ಯೈಸ್ತೇ ತ್ರಿಣಾಚಿಕೇತಾಃ ॥

(ಭಾಷ್ಯಾರ್ಥ)

ಋತವನ್ನು ಎಂದರೆ ಅವಶ್ಯವಾಗಿ ಆಗಿಯೇ ತೀರುವದರಿಂದ ಸತ್ಯವಾದ[1] ಕರ್ಮಫಲವನ್ನು ಪಾನಮಾಡುತ್ತಾ- (ಇವರಿಬ್ಬ)ರಲ್ಲಿ ಒಬ್ಬನು ಕರ್ಮಫಲವನ್ನು ಪಾನಮಾಡುತ್ತಿರುವವನು, ಎಂದರೆ ಅನುಭವಿಸುತ್ತಿರುವನು, ಇನ್ನೊಬ್ಬನು (ಅನುಭವಿಸು)ವದಿಲ್ಲ. ಆದರೂ ಪಾನಮಾಡುವವನ ಸಂಬಂಧವು (ಪರಮಾತ್ಮ ನಿಗೂ) ಇರುವದರಿಂದ ಛತ್ರಿನ್ಯಾಯದಿಂದ[2] (ಇಬ್ಬರೂ) ಪಾನಮಾಡುತ್ತಿರುವ

1. ಫಲವು ಸತ್ಯವೆಂದರೆ ನಿಜವಾಗಿರುವ ಪರಮಾರ್ಥವೆಂದು ಅಭಿಪ್ರಾಯವಲ್ಲ ; ಕರ್ಮದಿಂದ ಅವಶ್ಯವಾಗಿ ಆಗುವದೆಂಬ ಕಾರಣದಿಂದ ಸತ್ಯವು. ಹೀಗೆಯೇ ಕರ್ಮವು ಸತ್ಯವೆಂದರೆ ಅವಶ್ಯವಾಗಿ ಫಲವನ್ನುಕೊಡುವದು ಎಂದೇ ಅರ್ಥ. ಮುಂ. ಭಾ. ೧-೨-೧ ರಲ್ಲಿ ಸತ್ಯವೆಂಬ ಮಾತಿನ ವ್ಯಾಖ್ಯಾನವನ್ನು ನೋಡಿರಿ.

2. ಒಂದು ಗುಂಪಿನಲ್ಲಿ ಒಬ್ಬನೇ ಕೊಡೆಯನ್ನು ಹಿಡಿದುಕೊಂಡಿದ್ದರೂ ''ಕೊಡೆಯವರು ಹೋಗುತ್ತಿದ್ದಾರೆ'' ಎಂದು ಹೇಳಬಹುದಲ್ಲವೆ ? ಅದರಂತೆ ಒಬ್ಬನು ಪಾನಮಾಡಿದರೂ ಇಬ್ಬರೂ ಶರೀರದಲ್ಲಿರುವದರಿಂದ ''ಪಿಬನ್ತೌ'' (ಕುಡಿಯುತ್ತಿರುವವರು) ಎಂದಿದೆ - ಎಂದು ಭಾವ.

ರೆಂದು ಹೇಳಿರುತ್ತದೆ.[1] ಸುಕೃತದ ಎಂದರೆ ತಾನೇ ಮಾಡಿರುವ 'ಋತವನ್ನು' ಎಂದು (ಮೂಲದಲ್ಲಿ) ಹಿಂದಿರುವ (ಮಾತಿಗೆ) ಸೇರಿಸಿಕೊಳ್ಳಬೇಕು.[2] ಲೋಕದಲ್ಲಿ ಎಂದರೆ ಈ ಶರೀರದಲ್ಲಿ ಗುಹೆಯನ್ನು ಎಂದರೆ ಗುಹೆಯೊಳಗೆ ಬುದ್ಧಿಯಲ್ಲಿ (ಎಂದರ್ಥ). ''ಹೆಚ್ಚಿನ'' ಹೊರಗಿನ ಮತ್ತು ಶರೀರದ ಆಕಾಶದ ಆಕಾರಕ್ಕೆ ಹೋಲಿಸಿದರೆ[3] ಹೆಚ್ಚಿನದಾಗಿರುವದು ; ಪರ (ಹೆಚ್ಚಿನ) ಎಂದರೆ ಬ್ರಹ್ಮದ ಅರ್ಧವು ಎಂದರೆ ಸ್ಥಾನವಾಗಿರುವದರಿಂದ ಪರಾರ್ಧವು. ಏಕೆಂದರೆ ಅಲ್ಲಿಯೇ ಬ್ರಹ್ಮವು ತಿಳಿಯ ಬರುವದು. ಆದ್ದರಿಂದ ಆ ಹೆಚ್ಚಿನ ಪರಾರ್ಧದಲ್ಲಿ, **ಹಾರ್ದಾಕಾಶದಲ್ಲಿ** ಹೊಕ್ಕಿರುವ (ಇಬ್ಬರನ್ನು) ಎಂದರ್ಥ. ಅವರಿಬ್ಬರೂ ನೆರಳುಬಿಸಿಲುಗಳಂತೆ,[4] ಒಬ್ಬನು ಸಂಸಾರಿ, ಇನ್ನೊಬ್ಬನು ಅಸಂಸಾರಿ - ಹೀಗೆ (ಪರಸ್ಪರ) ವಿಲಕ್ಷಣಸ್ವರೂಪರು ಎಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ತಿಳಿಸಿಕೊಡುತ್ತಾರೆ. ಅಕರ್ಮಿ(ಗಳಾದ ಜ್ಞಾನಿಗಳು) ಮಾತ್ರವೇ ಅಲ್ಲ, ಪಂಚಾಗ್ನಿಗಳಾದ ಗೃಹಸ್ಥರು,[5] ಮತ್ತು ಯಾರು ತ್ರಿಣಾಚಿಕೇತ ರಾಗಿರುವರೋ - ಮೂರು ಸಲ ನಾಚಿಕೇತನೆಂಬ ಅಗ್ನಿಯನ್ನು ಯಾರು ಚಯನ ಮಾಡಿರುವರೋ ಅವರು ತ್ರಿಣಾಚಿಕೇತರು[6]- (ಅವರೂ ಹೇಳುತ್ತಾರೆ).

1. ಇಲ್ಲಿ 'ನ ಹಿ ಕೇವಲಸ್ಯಾತ್ಮನೋ ಭೋಕ್ತೃತ್ವಮಸ್ತಿ । ಬುದ್ಧ್ಯುಪಾಧಿಕೃತಮೇವ ಭೋಕ್ತೃತ್ವಮ್ । ಏವಂ ಚ ಸತಿ ವಕ್ಷ್ಯಮಾಣರಥಕಲ್ಪನಯಾ ವೈಷ್ಣವಸ್ಯ ಪದಸ್ಯಾತ್ಮತಯಾ ಪ್ರತಿಪತ್ತಿರುಪಪದ್ಯತೇ ನಾನ್ಯಥಾ''(ಬರಿಯ ಆತ್ಮನಿಗೆ ಭೋಕ್ತೃತ್ವವಿಲ್ಲವೇ ಇಲ್ಲ ; ಬುದ್ಧಿಯೆಂಬ ಉಪಾಧಿಯಿಂದಲೇ ಭೋಕ್ತೃತ್ವವಾಗಿರುವದು. ಹೀಗಾದರೆ ಮುಂದೆ ರಥಕಲ್ಪನೆಯಿಂದ ವೈಷ್ಣವಪದವು ಆತ್ಮನು, ತನ್ನ ಸ್ವರೂಪವು, ಎಂದು ಅರಿತುಕೊಳ್ಳಬೇಕೆಂದಿರುವದು ಸರಿಯಾಗುತ್ತದೆ. ಇಲ್ಲದಿದ್ದರೆ ಇಲ್ಲ) ಎಂಬ ಹೆಚ್ಚಿಗೆಯ ವಾಕ್ಯವು ಕೆಲವು ಪುಸ್ತಕಗಳಲ್ಲಿದೆ.

2. 'ಸುಕೃತಸ್ಯ ಋತಮ್' ಎಂದು ಅನ್ವಯ ; 'ಸುಕೃತಸ್ಯ ಲೋಕೇ' ಎಂದಲ್ಲ.

3. ಛಾಂ. ३-೧೨ರ ೭, ೮, ೯ನೆಯ ಮಂತ್ರಗಳನ್ನು ನೋಡಿರಿ.

4. ಜೀವಾತ್ಮರೂಪವು ಅವಿದ್ಯಾಕಲ್ಪಿತವಾಗಿರುವದರಿಂದ ನೆರಳಿನಂತೆ ಇದೆ ; ಪರಮಾತ್ಮರೂಪವು ಪರಮಾರ್ಥವಾಗಿ ಶುದ್ಧಚೈತನ್ಯಸ್ವರೂಪವಾಗಿರುವದರಿಂದ ಬಿಸಿಲಿನಂತೆ ಇದೆ ಸೂ. ಭಾ. ೨-३-३೦.

5. ದ್ಯುಲೋಕ, ಪರ್ಜನ್ಯ, ಪೃಥಿವಿ, ಪುರುಷ, ಸ್ತ್ರೀ- ಎಂಬ ಐದನ್ನು ಅಗ್ನಿಯೆಂದು ಉಪಾಸನೆಮಾಡುವವರು. ಗೃಹಸ್ಥರಾದರೂ ಇವರಿಗೆ ದೇವಯಾನದಿಂದ ಸಗುಣಬ್ರಹ್ಮಪ್ರಾಪ್ತಿ ಯಾಗುವದೆಂದು ಛಾಂ. ೫-೯-೧, ೨ರಲ್ಲಿ ಹೇಳಿದೆ. ಅಲ್ಲಿಯ ಭಾಷ್ಯದಲ್ಲಿರುವ ಚರ್ಚೆಯನ್ನು ನೋಡಿರಿ.

6. ಈ ಶಬ್ದದ ವ್ಯಾಖ್ಯಾನವನ್ನು ಹಿಂದೆ ೨೮ರಲ್ಲಿ ಮಾಡಿದೆ. ತ್ರಿಣಾಚಿಕೇತರಿಗೆ ಅಪರಬ್ರಹ್ಮಪ್ರಾಪ್ತಿಯನ್ನೂ ಅಲ್ಲಿ ಹೇಳಿದೆ

ಯಃ ಸೇತುರೀಜಾನಾನಾಮಕ್ಷರಂ ಬ್ರಹ್ಮ ಯತ್ ಪರಮ್ ।
ಅಭಯಂ ತಿತೀರ್ಷತಾಂ ಪಾರಂ ನಾಚಿಕೇತಗ್ಂ ಶಕೇಮಹಿ ॥ ೨ ॥

೨. ಯಾವನು ಯಾಗಮಾಡುವವರಿಗೆ ಸೇತುವಾಗಿರುವನೋ (ಅಂಥ) ನಾಚಿಕೇತನನ್ನು (ಸೇವಿಸಲು) ಶಕ್ತರಾಗಿರುವೆವು. ದಾಟಲಿಚ್ಛಿಸುವವರಿಗೆ ಅಭಯ ವಾದ ಪಾರವನ್ನು (ಅರಿಯಲು ಶಕ್ತರಾಗಿರುವೆವು).

(ಭಾಷ್ಯ)

೮೬. ಯಃ ಸೇತುರಿವ ಸೇತುಃ ಈಜಾನಾನಾಂ ಯಜಮಾನಾನಾಂ ಕರ್ಮಿಣಾಮ್, ದುಃಖಸಂತರಣಾರ್ಥತ್ವಾತ್, ನಾಚಿಕೇತಂ ನಾಚಿಕೇತೋಽಗ್ನಿಃ ತಂ ವಯಂ ಜ್ಞಾತುಂ ಚೇತುಂ ಚ ಶಕೇಮಹಿ ಶಕ್ನುವನ್ತಃ । ಕಿಂ ಚ ಯಚ್ಚ ಅಭಯಂ ಭಯಶೂನ್ಯಂ ಸಂಸಾರಸ್ಯ ಪಾರಮ್ ತಿತೀರ್ಷತಾಂ ತರ್ತುಮಿಚ್ಛತಾಮ್ । ಬ್ರಹ್ಮವಿದಾಂ ಯತ್ಪರಮಾಶ್ರಯಮ್[1] ಅಕ್ಷರಮ್ ಆತ್ಮಾಖ್ಯಂ ಬ್ರಹ್ಮ ತಚ್ಚ ಜ್ಞಾತುಂ ಶಕೇಮಹಿ । ಪರಾಪರೇ ಬ್ರಹ್ಮಣೀ ಕರ್ಮಿಬ್ರಹ್ಮವಿದಾಶ್ರಯೇ ವೇದಿತವ್ಯೇ ಇತಿ ವಾಕ್ಯಾರ್ಥಃ । ತಯೋರೇವ ಹಿ ಉಪನ್ಯಾಸಃ ಕೃತಃ ''ಋತಂ ಪಿಬನ್ತೌ'' ಇತಿ ॥

(ಭಾಷ್ಯಾರ್ಥ)

ಯಾವನು (ಯಾವ) ನಾಚಿಕೇತಾಗ್ನಿಯು 'ಈಜಾನಾನಾಮ್' ಎಂದರೆ ಯಾಗ ಮಾಡುವವರಿಗೆ, ಕರ್ಮಿಗಳಿಗೆ, ಸೇತುವಾಗಿರುವನೋ, ದುಃಖವನ್ನು ದಾಟುವದೆಂಬ ಪ್ರಯೋಜನವನ್ನುಂಟುಮಾಡುವದರಿಂದ ಸೇತುವಿನಂತೆ ಇರುವನೋ ಆ (ನಾಚಿಕೇತನನ್ನು)[2] ನಾವು ತಿಳಿದುಕೊಳ್ಳುವದಕ್ಕೂ ಚಯನಮಾಡುವದಕ್ಕೂ[3] 'ಶಕೇಮಹಿ' ಶಕ್ತರಾಗಿರುವೆವು. ಮತ್ತು ಯಾವದು 'ತಿತೀರ್ಷತಾಮ್' (ಸಂಸಾರ ವನ್ನು) ದಾಟಲಿಚ್ಛಿಸುವವರಿಗೆ ಅಭಯವಾದ ಅಂಜಿಕೆಯಿಲ್ಲದಂಥ ಸಂಸಾರದ ಆಚೆಯ ದಡವಾಗಿರುವದೋ, ಯಾವದು ಬ್ರಹ್ಮಜ್ಞಾನಿಗಳಿಗೆ ಉತ್ತಮವಾದ ಆಶ್ರಯವಾಗಿರುವದೋ, ನಾಶವಿಲ್ಲದ ಆತ್ಮನೆಂಬ ಹೆಸರಿನ ಆ ಬ್ರಹ್ಮವನ್ನೂ[4] ಅರಿತುಕೊಳ್ಳುವದಕ್ಕೆ ಶಕ್ತರಾಗಿರುವೆವು.

---

1. ಆಶ್ರಯಶಬ್ದವು ಪುಲ್ಲಿಂಗವಾದರೂ ಆಚಾರ್ಯರು ಇಲ್ಲಿ ನಪುಂಸಕ ಲಿಂಗದಲ್ಲೇಕೆ ಉಪಯೋಗಿಸಿದ್ದಾರೆಂಬುದು ತಿಳಿಯುವಂತಿಲ್ಲ.

2. ನಾಚಿಕೇತಾಗ್ನಿಯೆಂದರೆ ವಿರಾಟ್ಪುರುಷನೇ.

3. ಅಗ್ನಿಯನು ಚಯನಮಾಡಿ ಉಪಾಸನೆಮಾಡುವದು ಈಗಿನವರಿಗೂ ಸಾಧ್ಯ ಎಂದರ್ಥ.

4. ಪರಬ್ರಹ್ಮವನ್ನೂ. ಇದನ್ನು ಅರಿತುಕೊಳ್ಳುವದೂ ಈಗಿನವರಿಗೆ ಸಾಧ್ಯ.

ಕರ್ಮವನ್ನು ಬಲ್ಲವರು, ಬ್ರಹ್ಮವನ್ನು ಬಲ್ಲವರು - ಇವರುಗಳಿಗೆ ಆಶ್ರಯವಾಗಿರುವ ಪರ ಮತ್ತು ಅಪರ **ಈ ಎರಡು ಬ್ರಹ್ಮಗಳನ್ನೂ ತಿಳಿದುಕೊಳ್ಳಬೇಕು** ಎಂಬುದು ವಾಕ್ಯದ (ಒಟ್ಟು) ಅರ್ಥವು, ಇವೆರಡನ್ನು ಕುರಿತೇ 'ಋತಂ ಪಿಬನ್ತೌ' ಎಂಬ (೧ನೆಯ) ಮಂತ್ರದಲ್ಲಿ ಉಪಕ್ರಮಮಾಡಿ (ಹೇಳಿ)ರುತ್ತದೆ.[1]

(ಭಾಷ್ಯ)

**೮೭. ತತ್ರ ಯ ಉಪಾಧಿಕೃತಃ ಸಂಸಾರೀ ವಿದ್ಯಾವಿದ್ಯಯೋರಧಿಕೃತಃ ಮೋಕ್ಷಗಮನಾಯ ಸಂಸಾರಗಮನಾಯ ಚ, ತಸ್ಯ ತದುಭಯಗಮನಸಾಧನೋ ರಥಃ ಕಲ್ಪ್ಯತೇ -**

(ಭಾಷ್ಯಾರ್ಥ)

ಅವರಿಬ್ಬರಲ್ಲಿ[2] **ಉಪಾಧಿಯಿಂದ** ಆಗಿ[3], ವಿದ್ಯೆ, ಅವಿದ್ಯೆ - ಈ ಎರಡಕ್ಕೂ ಮೋಕ್ಷವನ್ನು ಹೊಂದುವದು, ಸಂಸಾರವನ್ನು ಹೊಂದುವದು - ಈ ಎರಡಕ್ಕೂ ತಕ್ಕವನಾಗಿರುವ ಸಂಸಾರಿಯಿರುವನಷ್ಟೆ ಅವನಿಗೆ ಆ ಎರಡನ್ನೂ ಹೊಂದುವದಕ್ಕೆ ಸಾಧನವಾದ ರಥವನ್ನು (ಈಗ) ಕಲ್ಪಿಸಲಾಗುತ್ತದೆ :-

**ಆತ್ಮಾನಗ್ಂ ರಥಿನಂ ವಿದ್ಧಿ ಶರೀರಗ್ಂ ರಥಮೇವ ತು ।**
**ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥ ೩ ॥**

೩. ಆತ್ಮನನ್ನು ರಥಿಯೆಂದು ತಿಳಿ, ಶರೀರವನ್ನಾದರೆ ರಥವೆಂದು ತಿಳಿ ; ಬುದ್ಧಿಯನ್ನಾದರೆ ಸಾರಥಿಯೆಂದು ತಿಳಿ, ಮತ್ತು ಮನಸ್ಸನ್ನು ಹಗ್ಗವೆಂದು (ತಿಳಿ).

(ಭಾಷ್ಯ)

**೮೮. ತತ್ರ ಆತ್ಮಾನಮ್ ಋತಪಂ ಸಂಸಾರಿಣಂ ರಥಿನಂ ರಥಸ್ವಾಮಿನಂ ವಿದ್ಧಿ ಜಾನೀಹಿ । ಶರೀರಂ ರಥಮೇವ ತು । ರಥಬದ್ಧಹಯಸ್ಥಾನೀಯೈರಿನ್ದ್ರಿಯೈರಾಕೃಷ್ಯಮಾಣತ್ವಾತ್ ಶರೀರಸ್ಯ । ಬುದ್ಧಿಂ ತು ಅಧ್ಯವಸಾಯಲಕ್ಷಣಾಂ ಸಾರಥಿಂ ವಿದ್ಧಿ ।**

---

1. ಉಪಾಸನೆಗಾಗಿ ಹೇಳಿರುವದು ಅಪರಬ್ರಹ್ಮವು, ಜ್ಞಾನಕ್ಕಾಗಿ ಹೇಳಿರುವದು ಪರಬ್ರಹ್ಮವು. ಹೃದಯಗುಹೆಯಲ್ಲಿರುವದೆಂದು ಹಿಂದಿನ ಮಂತ್ರದಲ್ಲಿ ಜೀವನ ಜೊತೆಗೆ ಹೇಳಿರುವದೂ ಬ್ರಹ್ಮವೇ. ಅಪರಬ್ರಹ್ಮರೂಪದಿಂದ ಉಪಾಸನೆಮಾಡುವವರೂ ಪಂಚಾಗ್ನಿವಿದರೂ ಬ್ರಹ್ಮಲೋಕದಲ್ಲಿ ಈ ಬ್ರಹ್ಮವನ್ನು ಪಡೆಯುವರು ; ಪರಬ್ರಹ್ಮರೂಪದಿಂದ ಅರಿತುಕೊಂಡವರು ಇಲ್ಲಿಯೇ ಮುಕ್ತರಾಗುವರು. ಈ ಎರಡು ಬ್ರಹ್ಮಗಳನ್ನೂ ಉಪಕ್ರಮದಲ್ಲಿ ಹೇಳಿರುವದರಿಂದ ಇವೆರಡನ್ನೂ ತಿಳಿದುಕೊಳ್ಳಬೇಕು, ಎಂದರೆ ಉಪಾಸನೆ ಮಾಡಬೇಕು ಅಥವಾ ಅರಿತುಕೊಳ್ಳಬೇಕು ಎಂದರ್ಥ. 2. ಜೀವ, ಬ್ರಹ್ಮ - ಇಬ್ಬರಲ್ಲಿ. 3. ಸಂಸಾರಿತ್ವವು ಆತ್ಮನಿಗೆ ಸ್ವತಃ ಇಲ್ಲ. ಉಪಾಧಿಯಿಂದ ಆಗಿದೆ. ಗೀ. ಭಾ. ೧೮-೪೧

ಬುದ್ಧಿನೇತೃಪ್ರಧಾನತ್ವಾತ್ ಶರೀರಸ್ಯ । ಸಾರಥಿನೇತೃಪ್ರಧಾನ ಇವ ರಥಃ । ಸರ್ವಂ ಹಿ ದೇಹಗತಂ ಕಾರ್ಯಂ ಬುದ್ಧಿಕರ್ತವ್ಯಮೇವ ಪ್ರಾಯೇಣ । ಮನಃಸಙ್ಕಲ್ಪವಿಕಲ್ಪಾದಿ ಲಕ್ಷಣಂ ಪ್ರಗ್ರಹಂ ರಶನಾಮ್ ಏವ ಚ ವಿದ್ಧಿ । ಮನಸಾ ಹಿ ಪ್ರಗೃಹೀತಾನಿ ಶ್ರೋತ್ರಾದೀನಿ ಕರಣಾನಿ ಪ್ರವರ್ತನ್ತೇ ರಶನಯಾ ಇವಾಶ್ವಾಃ ॥

(ಭಾಷ್ಯಾರ್ಥ)

ಅವರಿಬ್ಬರಲ್ಲಿ ಆತ್ಮನನ್ನು ಎಂದರೆ ಋತವನ್ನು ಪಾನಮಾಡುತ್ತಿರುವ ಸಂಸಾರಿಯನ್ನು ರಥಿಯು ಎಂದರೆ ಗಾಡಿಯ ಒಡೆಯನು ಎಂದು ತಿಳಿ, ಅರಿತುಕೊ. ಶರೀರವನ್ನಾದರೆ ರಥವೆಂದು ತಿಳಿ. ಏಕೆಂದರೆ ಗಾಡಿಗೆ ಕಟ್ಟಿದ ಕುದುರೆಗಳಂತಿರುವ ಇಂದ್ರಿಯಗಳಿಂದ (ಅತ್ತಿತ್ತ) ಶರೀರವು ಜಗ್ಗಾಡಲ್ಪಡುತ್ತಿರುವದು. ನಿಶ್ಚಯಮಾಡುವ ರೂಪದ ಬುದ್ಧಿಯನ್ನಾದರೋ ಸಾರಥಿಯೆಂದು ತಿಳಿ, ಏಕೆಂದರೆ ಮುಖ್ಯವಾಗಿ ಸಾರಥಿಯು ಒಯ್ದಲ್ಲಿಗೇ ಗಾಡಿಯು (ಹೋಗುತ್ತಿರು)ವಂತೆ, ಶರೀರವು ಮುಖ್ಯವಾಗಿ ಬುದ್ಧಿಯು ಒಯ್ದಲ್ಲಿಗೇ ಹೋಗುತ್ತಿರುವದು. ದೇಹದಲ್ಲಿರುವ ಕಾರ್ಯವೆಲ್ಲವೂ ಬಲುಮಟ್ಟಿಗೆ[1] ಬುದ್ಧಿಯಿಂದಲೇ ಮಾಡತಕ್ಕದ್ದಾಗಿದೆ. ಸಂಕಲ್ಪ, ವಿಕಲ್ಪ- ಮುಂತಾದ ರೂಪದಲ್ಲಿರುವ ಮನಸ್ಸನ್ನು ಪಗ್ಗವೆಂದೇ, ಕಡಿವಾಣವೆಂದೇ, ತಿಳಿ. ಏಕೆಂದರೆ ಕಡಿವಾಣ ದಿಂದ ಕುದುರೆಗಳು (ಮುನ್ನಡೆಯುವ ಹಾಗೆ) ಮನಸ್ಸಿನ ಹಿಡಿತದಿಂದಲೇ ಶ್ರೋತ್ರವೇ ಮುಂತಾದ ಕರಣಗಳು ಮುಂಬರಿಯುತ್ತಿರುವು.

ಇನ್ದ್ರಿಯಾಣಿ ಹಯಾನಾಹುರ್ವಿಷಯಾಗ್‌ಂಸ್ತೇಷು ಗೋಚರಾನ್ ।
ಆತ್ಮೇನ್ದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥ ೪ ॥

೪. ಮನೀಷಿಗಳು ಇಂದ್ರಿಯಗಳನ್ನು ಕುದುರೆಗಳೆನ್ನುತ್ತಾರೆ ; ವಿಷಯಗಳನ್ನು ಅವುಗಳ ಗೋಚರ (ಎನ್ನುತ್ತಾರೆ). ಆತ್ಮ, ಇಂದ್ರಿಯ, ಮನಸ್ಸು - ಇವುಗಳಿಂದ ಕೂಡಿದಾತನನ್ನು ಭೋಕ್ತ ಎಂದು ಕರೆಯುತ್ತಾರೆ.

(ಭಾಷ್ಯ)

೮೯. ಇನ್ದ್ರಿಯಾಣಿ ಚಕ್ಷುರಾದೀನಿ ಹಯಾನ್ ಆಹುಃ ರಥಕಲ್ಪನಾ ಕುಶಲಾಃ। ಶರೀರರಥಾಕರ್ಷಣಸಾಮಾನ್ಯಾತ್ । ತೇಷು[2] ಇನ್ದ್ರಿಯೇಷು ಹಯತ್ವೇನ ಪರಿಕಲ್ಪಿತೇಷು ಗೋಚರಾನ್ ಮಾರ್ಗಾನ್ ರೂಪಾದೀನ್ ವಿಷಯಾನ್(ವಿದ್ಧಿ ?) ।

1. ಉಸಿರುಬಿಡುವದು, ರಕ್ತಚಲನೆ - ಮುಂತಾದ ಕೆಲವು ಕಾರ್ಯಗಳು ಬುದ್ಧಿಯ ನಿಶ್ಚಯವನ್ನು ಬಯಸುವದಿಲ್ಲವಾದ್ದರಿಂದ 'ಬಲುಮಟ್ಟಿಗೆ' ಎಂದು ಹೇಳಿದೆ.

2. 'ತೇಷ್ವೇವ' ಎಂದು ಪಾಠವಿದ್ದರೆ ಬೇಕಿಲ್ಲ.

ಆತ್ಮೇನ್ದ್ರಿಯಮನೋಯುಕ್ತಂ ಶರೀರೇನ್ದ್ರಿಯಮನೋಭಿಃ ಸಹಿತಮ್ ಸಂಯುಕ್ತಮ್ ಆತ್ಮಾನಂ ಭೋಕ್ತಾ ಇತಿ ಸಂಸಾರೀತಿ ಆಹುಃ ಮನೀಷಿಣಃ ವಿವೇಕಿನಃ। ನ ಹಿ ಕೇವಲಸ್ಯ ಆತ್ಮನೋ ಭೋಕ್ತೃತ್ವಮ್ ಅಸ್ತಿ। ಬುದ್ಧ್ಯಾದ್ಯುಪಾದಿಕೃತಮೇವ ತಸ್ಯ ಭೋಕ್ತೃತ್ವಮ್। ತಥಾ ಚ ಶ್ರುತ್ಯನ್ತರಂ ಕೇವಲಸ್ಯ ಅಭೋಕ್ತೃತ್ವಮೇವ ದರ್ಶಯತಿ - 'ಧ್ಯಾಯತೀವ ಲೇಲಾಯತೀವ'(ಬೃ.೪-೩-೭) ಇತ್ಯಾದಿ। ಏವಂ ಚ ಸತಿ ವಕ್ಷ್ಯಮಾಣರಥಕಲ್ಪನಯಾ (?) ವೈಷ್ಣವಸ್ಯ ಪದಸ್ಯ ಆತ್ಮತಯಾ ಪ್ರತಿಪತ್ತಿರುಪಪದ್ಯತೇ ನಾನ್ಯಥಾ। ಸ್ವಭಾವಾನತಿಕ್ರಮಾತ್ ॥

(ಭಾಷ್ಯಾರ್ಥ)

ರಥಕಲ್ಪನೆಯಲ್ಲಿ ಕುಶಲರಾದವರು ಇಂದ್ರಿಯಗಳನ್ನು ಎಂದರೆ ಚಕ್ಷುಸ್ಸು ಮುಂತಾದವುಗಳನ್ನು ಕುದುರೆಗಳೆನ್ನುತ್ತಾರೆ ; ಏಕೆಂದರೆ ಶರೀರವೆಂಬ ರಥವನ್ನು ಎಳೆಯುತ್ತವೆ ಎಂಬ ಹೋಲಿಕೆಯು (ಇರುತ್ತದೆ). ಅವುಗಳ ಎಂದರೆ ಕುದುರೆಗಳೆಂದು ಕಲ್ಪಿಸಿದ ಆ ಇಂದ್ರಿಯಗಳ ಗೋಚರಗಳುಎಂದರೆ ಮಾರ್ಗಗಳು ಎಂದು ರೂಪಾದಿವಿಷಯಗಳನ್ನು ಕರೆಯುತ್ತಾರೆ.[1] ಆತ್ಮ, ಇಂದ್ರಿಯ, ಮನಸ್ಸು - ಇವುಗಳಿಂದ ಕೂಡಿದಾತನನ್ನು ಎಂದರೆ ಶರೀರ, ಇಂದ್ರಿಯ, ಮನಸ್ಸು - ಇವುಗಳೊಡನಿರುವ, ಇವುಗಳು ಸೇರಿಕೊಂಡಿರುವ ಆತ್ಮನನ್ನು ಭೋಕ್ತನು ಎಂದು, ಸಂಸಾರಿ ಎಂದು, ಮನೀಷಿಗಳು ವಿವೇಕಿಗಳು ಕರೆಯುತ್ತಾರೆ. ಏಕೆಂದರೆ ಬರಿಯ ಆತ್ಮನಿಗೆ ಭೋಕ್ತೃತ್ವವು ಇರುವದಿಲ್ಲ; ಬುದ್ಧಿಯೇ ಮುಂತಾದ ಉಪಾಧಿಗಳಿಂದಲೇ ಅವನಿಗೆ ಭೋಕ್ತೃತ್ವವುಂಟಾಗಿರುವದು.[2] ಆದ್ದರಿಂದಲೇ ಬೇರೊಂದು ಶ್ರುತಿಯು 'ಧ್ಯಾನಮಾಡುವಂತೆ ಇರುತ್ತಾನೆ, ಚಲಿಸುವಂತೆ ಇರುತ್ತಾನೆ' (ಬೃ. ೪-೩-೭) ಎಂದು ಬರಿಯ ಆತ್ಮನು ಭೋಕ್ತೃವಲ್ಲವೆಂದೇ[3] ತಿಳಿಸುತ್ತದೆ. ಮತ್ತು ಹೀಗೆ (ಸ್ವತಃ ಭೋಕ್ತೃವಲ್ಲವೆಂಬುದು ನಿಜ)ವಾದರೇ ವಿಷ್ಣುವಿನ ಸ್ಥಾನವು ತನ್ನ ಆತ್ಮನೇ ಎಂದು

---

1. 'ವಿದ್ಧಿ' ಎಂಬ ಭಾಷ್ಯವು 'ವಿದುಃ' ಎಂದೋ 'ಆಹುಃ' ಎಂದೋ ಇರಬೇಕು. ಹಿಂದಿನ ಮಂತ್ರದಲ್ಲಿ 'ವಿದ್ಧಿ' ಎಂಬ ಮಾತನ್ನು ನೋಡಿದ ವಾಸನೆಯಿಂದ ಲೇಖಕರು ಇಲ್ಲಿ ಅದನ್ನು ತಪ್ಪಿ ಬರೆದಿರಬಹುದೆಂದು ತೋರುವದು.

2. ಅಹಂಪ್ರತ್ಯಯವಿಷಯನಾದ ಆತ್ಮನೇ ಭೋಕ್ತೃ, ಶುದ್ಧಾತ್ಮನಲ್ಲ. ಸೂ. ಭಾ. ೧-೧-೪ರಲ್ಲಿ ಆತ್ಮನು ಸಂಸ್ಕಾರ್ಯನಲ್ಲವೆಂದು ಬರೆದಿರುವ ಭಾಷ್ಯವನ್ನು ಓದಿರಿ. ಸೂ. ಭಾ. ೨-೩-೨೯.

3. ಶ್ರುತಿಯಲ್ಲಿರುವಂತೆ 'ಅಂತೆ' ಎಂಬ ಮಾತು ಬುದ್ಧಿಯ ಸಂಬಂಧದಿಂದ ಆತ್ಮನಲ್ಲಿ ತೋರುವ ಜ್ಞಾನಕ್ರಿಯಾಕರ್ತೃತ್ವವು ಪರಮಾರ್ಥವಲ್ಲವೆಂದು ಸೂಚಿಸುತ್ತದೆ ಎಂದು ಅಭಿಪ್ರಾಯ.

ತ್ತಿಳಿದುಕೊಳ್ಳುವನೆಂದು ರಥಕಲ್ಪನೆಯಿಂದ[1] ಮುಂದೆ ಹೇಳಿರುವದು ಹೊಂದುತ್ತದೆಯೇ ಹೊರತು ಬೇರೆ ರೀತಿಯಿಂದ ಹೊಂದುವದಿಲ್ಲ. ಏಕೆಂದರೆ ಸ್ವಭಾವವನ್ನು ದಾಟುವದು (ಯಾವ ವಸ್ತುವಿಗೂ) ಆಗಲಾರದು[2].

ಯಸ್ತ್ವವಿಜ್ಞಾನವಾನ್ ಭವತ್ಯಯುಕ್ತೇನ ಮನಸಾ ಸದಾ ।
ತಸ್ಯೇನ್ದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥ ೫ ॥

೫. ಯಾವನು ಯಾವಾಗಲೂ ಅಯುಕ್ತವಾದ ಮನಸ್ಸಿನಿಂದ ಕೂಡಿ, ತಿಳಿವಳಿಕೆಯಿಲ್ಲದವನಾಗಿರುವನೋ ಅವನ ಇಂದ್ರಿಯಗಳು ಸಾರಥಿಯ ತುಂಟ ಕುದುರೆಗಳ ಹಾಗೆ ವಶವಾಗದೆ ಇರುವವು.

(ಭಾಷ್ಯ)

೯೦. ತತ್ರೈವಂ ಸತಿ ಯಸ್ತು ಬುದ್ಧ್ಯಾಖ್ಯಃ ಸಾರಥಿಃ ಅವಿಜ್ಞಾನವಾನ್ ಅನಿಪುಣಃ, ಅವಿವೇಕೀ ಪ್ರವೃತ್ತೌ ನಿವೃತ್ತೌ ಚ ಭವತಿ, ಯಥಾ ಇತರೋ ರಥಚರ್ಯಾಯಾಮ್, ಅಯುಕ್ತೇನ ಅಪ್ರಗೃಹೀತೇನ ಅಸಮಾಹಿತೇನ ಮನಸಾ ಪ್ರಗ್ರಹಸ್ಥಾನೀಯೇನ ಸದಾ ಯುಕ್ತೋ ಭವತಿ, ತಸ್ಯ ಅಕುಶಲಸ್ಯ ಬುದ್ಧಿಸಾರಥೇಃ ಇನ್ದ್ರಿಯಾಣಿ ಅಶ್ವಸ್ಥಾನೀಯಾನಿ ಅವಶ್ಯಾನಿ ಅಶಕ್ಯನಿವಾರಣಾನಿ ದುಷ್ಟಾಶ್ವಾಃ ಅದಾನ್ತಾಶ್ವಾ ಇವ ಇತರಸಾರಥೇಃ ಭವನ್ತಿ ॥

(ಭಾಷ್ಯಾರ್ಥ)

ಇದು ಹೀಗಿರುವಲ್ಲಿ[3] ಯಾವನು ಎಂದರೆ ಯಾವ ಬುದ್ಧಿಯೆಂಬ ಸಾರಥಿಯು ತಿಳಿವಳಿಕೆಯಿಲ್ಲದವನಾಗಿ ಹೆಡ್ಡನಾಗಿ, ಪ್ರವೃತ್ತಿಯಲ್ಲಾಗಲಿ ನಿವೃತ್ತಿಯಲ್ಲಾಗಲಿ ವಿವೇಕವಿಲ್ಲದವನಾಗಿ[4] ಇರುವನೋ, ಗಾಡಿಯನ್ನು ನಡೆಯಿಸುವದರಲ್ಲಿ (ತಿಳಿವಳಿಕೆಯಿಲ್ಲದ ಬೇರೆಯ ದೃಷ್ಟಾಂತದ) ಸಾರಥಿ(ಯಂತೆ ಇರುವನೋ) ಅಯುಕ್ತವಾದ ಎಂದರೆ

1. 'ವಕ್ಷ್ಯಮಾಣರಥಕಲ್ಪನಯಾ' ಎಂಬ ಮಾತು ಇಲ್ಲಿಗೆ ಅಷ್ಟು ಹೊಂದುಗೆಯಾಗಿಲ್ಲ ; ಏಕೆಂದರೆ ರಥಕಲ್ಪನೆಯನ್ನು ಆಗಲೆ ಹೇಳಿದ್ದಾಗಿದೆ, ಇದನ್ನು ಬಿಟ್ಟರೂ ಸಾಗುತ್ತದೆ ; ಅಥವಾ 'ರಥಕಲ್ಪನಯಾ' ಎಂದಿದ್ದರೆ ಹೇಗೋ ಹೊಂದಿಸಿಕೊಳ್ಳಬಹುದು. ೮೫ನೆಯ ಭಾಷ್ಯಭಾಗದಲ್ಲಿ ಅಧಿಕವಾಗಿರುವ ಪಾಠಾಂತರವಾಕ್ಯವು ಇಲ್ಲಿಂದ ತೆಗೆದುಕೊಂಡದ್ದೆಂಬುದು ಸ್ಪಷ್ಟವಾಗಿದೆ. ಪುಟ. ೮೮ ಟಿಪ್ಪಣಿ ೧ ನೋಡಿ. 2. ಆತ್ಮನು ನಿಜವಾಗಿ ಭೋಕ್ತೃವಾಗಿದ್ದಿದ್ದರೆ ಅವನು ವಿಷ್ಣು (ಪರಮಾತ್ಮ) ಸ್ವರೂಪವನ್ನು ಪಡೆಯುವದಕ್ಕಾಗಿ ಭೋಕ್ತೃಸ್ವಭಾವವನ್ನು ಬಿಡಬೇಕಾಗುತ್ತಿತ್ತು. ಆದರೆ ಸ್ವಭಾವವನ್ನು ಬಿಡುವುದು ಸಾಧ್ಯವಲ್ಲ.

3. ಆತ್ಮನೇ ರಥಿ, ಶರೀರವೇ ರಥ, ಬುದ್ಧಿಯೇ ಸಾರಥಿ, ಮನಸ್ಸು ಲಗಾಮು, ಇಂದ್ರಿಯಗಳು ಕುದುರೆಗಳು, ವಿಷಯಗಳು ಹಾದಿಗಳು, ಶರೀರೇಂದ್ರಿಯಮನಸ್ಸುಗಳಿಂದೊಡಗೂಡಿದ ಆತ್ಮನು ಭೋಕ್ತೃ- ಹೀಗೆ ರಥರೂಪಕಲ್ಪನೆಯಿರುವಲ್ಲಿ. 4. ಗೀ. ೧೬-೭.

ಬಿಗಿಹಿಡಿಯದ ಸಮಾಧಾನದಲ್ಲಿಟ್ಟುಕೊಳ್ಳದ ಕಡಿವಾಣದಂತಿರುವ ಮನಸ್ಸಿನಿಂದ ಯಾವಾಗಲೂ ಕೂಡಿರುವನಾಗಿರುವನೋ, ಅವನ, (ಆ) ಕೌಶಲವಿಲ್ಲದ ಬುದ್ಧಿಯೆಂಬ ಸಾರಥಿಯ, ಇಂದ್ರಿಯಗಳು ಕುದುರೆಗಳಂತಿರುವ (ಇಂದ್ರಿಯಗಳು ದೃಷ್ಟಾಂತದ) ಬೇರೆಯ ಸಾರಥಿಯ ತುಂಟಕುದುರೆಗಳಂತೆ, ಪಳಗಿಸದ ಕುದುರೆಗಳಂತೆ ವಶವಾಗದೆ ಇರುವವು, ತಡೆಮಾಡುವದಕ್ಕೆ ಆಗದೆ (ಇರುವವು).

**ಯಸ್ತು ವಿಜ್ಞಾನವಾನ್ ಭವತಿ ಯುಕ್ತೇನ ಮನಸಾ ಸದಾ ।**
**ತಸ್ಯೇನ್ದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥ ೬ ॥**

೬. ಯಾವನಾದರೆ ಯಾವಾಗಲೂ ಯುಕ್ತವಾದ ಮನಸ್ಸಿನಿಂದ ಕೂಡಿ ತಿಳಿವಳಿಕೆಯುಳ್ಳವನಾಗಿರುವನೋ ಅವನಿಗೆ ಇಂದ್ರಿಯಗಳು ಸಾರಥಿಯ ಒಳ್ಳೆಯ ಕುದುರೆಗಳ ಹಾಗೆ ವಶವಾಗಿರುವವು.

(ಭಾಷ್ಯ)

**೯೧. ಯಸ್ತು ಪುನಃ ಪೂರ್ವೋಕ್ತವಿಪರೀತಃ ಸಾರಥಿರ್ಭವತಿ ವಿಜ್ಞಾನವಾನ್ ಪ್ರಗೃಹೀತಮನಾಃ ಸಮಾಹಿತಚಿತ್ತಃ ಸದಾ ತಸ್ಯ ಅಶ್ವಸ್ಥಾನೀಯಾನಿ ಇನ್ದ್ರಿಯಾಣಿ ಪ್ರವರ್ತಯಿತುಂ ನಿವರ್ತಯಿತುಂ ವಾ ಶಕ್ಯಾನಿ ವಶ್ಯಾನಿ ದಾನ್ತಾಃ ಸದಶ್ವಾ ಇವ ಇತರಸಾರಥೇಃ ॥**

(ಭಾಷ್ಯಾರ್ಥ)

ಆದರೆ ಯಾವನು, ಹಿಂದೆ ಹೇಳಿದ್ದಕ್ಕೆ ವಿರುದ್ಧವಾಗಿರುವ (ಯಾವ) ಸಾರಥಿಯು, ತಿಳಿವಳಿಕೆಯುಳ್ಳವನಾಗಿ ಯಾವಾಗಲೂ ಮನಸ್ಸನ್ನು ಬಿಗಿಬಿಡಿದುಕೊಂಡು ಚಿತ್ತವನ್ನು ಸಮಾಧಾನಗೊಳಿಸಿಕೊಂಡು ಇರುವನೋ ಅವನ ಕುದುರೆಗಳಂತಿರುವ ಇಂದ್ರಿಯಗಳು ಮಿಕ್ಕ (ದೃಷ್ಟಾಂತದ) ಸಾರಥಿಯ ಪಳಗಿಸಿದ ಒಳ್ಳೆಯ ಕುದುರೆಗಳಂತೆ, ಮುಂದಕ್ಕೆ ನಡೆಯಿಸುವದಕ್ಕಾಗಲಿ ಹಿಂದಕ್ಕೆಳೆಯುವದಕ್ಕಾಗಲಿ ಬರುವಂತಿರುತ್ತವೆ.

(ಭಾಷ್ಯ)

**೯೨. ತತ್ರ ಪೂರ್ವೋಕ್ತಸ್ಯ ಅವಿಜ್ಞಾನವತೋ ಬುದ್ಧಿಸಾರಥೇರಿದಂ ಫಲಮಾಹ-**

(ಭಾಷ್ಯಾರ್ಥ)

ಇವರಿಬ್ಬರಲ್ಲಿ[1] ಮೊದಲು ಹೇಳಿದ ತಿಳಿವಳಿಕೆಯಿಲ್ಲದ ಬುದ್ಧಿಸಾರಥಿಯಿಂದ[2] ಈ ಫಲವೆಂದು ಹೇಳುತ್ತಾನೆ :-

---

1. 'ತಸ್ಯ' ಎಂಬ (ಅ ॥) ಪಾಠಕ್ಕಿಂತ 'ತತ್ರ' ಎಂಬ (ಪಾ ॥ ಮೈ ॥) ಪಾಠವೇ ಮೇಲು. 2. ಇಂಥ ಸಾರಥಿಯಿಂದ ರಥಯಾದ ಆತ್ಮನಿಗೆ ಈ ಫಲವೆಂದು ಹೇಳುತ್ತಾನೆ - ಎಂದರ್ಥ.

ಯಸ್ತ್ವವಿಜ್ಞಾನವಾನ್ ಭವತ್ಯಮನಸ್ಕಃ ಸದಾಽಶುಚಿಃ ।
ನ ಸ ತತ್ಪದಮಾಪ್ನೋತಿ ಸಗ್ಂಸಾರಂ ಚಾಧಿಗಚ್ಛತಿ ॥ ೭ ॥

೭. ಯಾವನು ತಿಳಿವಳಿಕೆಯಿಲ್ಲದವನಾಗಿ, ಮನಸ್ಸಿಲ್ಲದವನಾಗಿ ಯಾವಾಗಲೂ ಅಶುಚಿಯಾಗಿ ಇರುವನೋ ಅವನು ಆ ಸ್ಥಾನವನ್ನು ಹೊಂದುವದಿಲ್ಲ, ಸಂಸಾರವನ್ನೂ ಪಡೆಯುತ್ತಾನೆ.

(ಭಾಷ್ಯ)

೯೩. ಯಸ್ತು ಅವಿಜ್ಞಾನವಾನ್ ಭವತಿ, ಅಮನಸ್ಕಃ ಅಪ್ರಗೃಹೀತ ಮನಸ್ಕಃ ಸ ತತ ಏವ ಅಶುಚಿಃ ಸದೈವ । ನ ಸಃ ರಥೀ ತತ್ ಪೂರ್ವೋಕ್ತಮ್ ಅಕ್ಷರಂ ಯತ್ ಪರಂ ಪದಮ್ ಆಪ್ನೋತಿ ತೇನ ಸಾರಥಿನಾ । ನ ಕೇವಲಂ ತನ್ನಾಪ್ನೋತಿ ಸಂಸಾರಂ ಚ ಜನ್ಮಮರಣಲಕ್ಷಣಮ್ ಅಧಿಗಚ್ಛತಿ ॥

(ಭಾಷ್ಯಾರ್ಥ)

ಯಾವನು ತಿಳಿವಳಿಕೆಯಿಲ್ಲದವನಾಗಿ, ಮನಸ್ಸಿಲ್ಲದವನಾಗಿ ಎಂದರೆ ಮನಸ್ಸನ್ನು ಬಿಗಿಹಿಡಿಯದವನಾಗಿರುವನೋ ಅವನು ಆ (ಕಾರಣ)ದಿಂದಲೇ ಯಾವಾಗಲೂ ಅಶುಚಿಯಾಗಿರುತ್ತಾನೆ. ಆ ರಥಿಕನು ಆ ಹಿಂದೆ ಹೇಳಿದ ನಾಶರಹಿತವಾದ ಪರಮಸ್ಥಾನವುಂಟಲ್ಲ, ಅದನ್ನು ಆ ಸಾರಥಿಯಿಂದ ಹೊಂದುವದಿಲ್ಲ. ಆ (ಸ್ಥಾನ)ವನ್ನು ಹೊಂದುವದಿಲ್ಲವೆಂಬುದೊಂದೇ ಅಲ್ಲ, ಹುಟ್ಟುಹೊಂದುಗಳ ರೂಪದಲ್ಲಿರುವ ಸಂಸಾರವನ್ನೂ ಪಡೆಯುತ್ತಾನೆ.

ಯಸ್ತು ವಿಜ್ಞಾನವಾನ್ ಭವತಿ ಸಮನಸ್ಕಃ ಸದಾ ಶುಚಿಃ ।
ಸ ತು ತತ್ ಪದಮಾಪ್ನೋತಿ ಯಸ್ಮಾದ್ ಭೂಯೋ ನ ಜಾಯತೇ ॥ ೮ ॥

೮. ಯಾವನಾದರೆ ತಿಳಿವಳಿಕೆಯುಳ್ಳವನಾಗಿ ಮನಸ್ಸುಳ್ಳಾತನಾಗಿ ಯಾವಾಗಲೂ ಶುಚಿಯಾಗಿರುವನೋ ಅವನು ಮಾತ್ರ ಆ ಸ್ಥಾನವನ್ನು ಹೊಂದುವನು, ಅದರಿಂದ (ಅವನು) ಮತ್ತೆ ಹುಟ್ಟುವದಿಲ್ಲ.

(ಭಾಷ್ಯ)

೯೪. ಯಸ್ತು ದ್ವಿತೀಯೋ ವಿಜ್ಞಾನವಾನ್ ಭವತಿ ವಿಜ್ಞಾನವತ್ಸಾರಥ್ಯುಪೇತೋ ರಥೀ, ವಿದ್ವಾನ್, ಇತ್ಯೇತತ್, ಯುಕ್ತಮನಾಃ ಸಮನಸ್ಕಃ ಸ ತತ ಏವ ಸದಾ ಶುಚಿಃ । ಸ ತು ತತ್ಪದಮಾಪ್ನೋತಿ ಯಸ್ಮಾದ್ ಆಪ್ತಾತ್ ಪದಾತ್ ಅಪ್ರಚ್ಯುತಃ ಸನ್ ಭೂಯಃ ಪುನಃ ನ ಜಾಯತೇ ಸಂಸಾರೇ ॥

(ಭಾಷ್ಯಾರ್ಥ)

ಆದರೆ ಇನ್ನೊಬ್ಬನು ತಿಳಿವಳಿಕೆಯುಳ್ಳವನಿದಾನಷ್ಟೆ. ತಿಳಿವಳಿಕೆಯುಳ್ಳ ಸಾರಥಿಯನ್ನುಳ್ಳ ರಥಿಕನು, ಜ್ಞಾನಿಯು (ಉಂಟಷ್ಟೆ) ಎಂದರ್ಥ. ಮನಸ್ಸುಳ್ಳಾತನಾಗಿ,

ಮನಸ್ಸನ್ನು ಬಿಗಿಹಿಡಿದುಕೊಂಡು (ಇರುವನಷ್ಟೆ) ; ಅವನು ಆ (ಕಾರಣ) ದಿಂದಲೇ ಯಾವಾಗಲೂ ಶುಚಿಯಾಗಿರುತ್ತಾನೆ. ಅವನು ಮಾತ್ರ ಆ ಸ್ಥಾನವನ್ನು ಹೊಂದು ತ್ತಾನೆ; ಆ ಹೊಂದಿದ ಸ್ಥಾನದಿಂದ (ಅವನು) ಜಾರಿ ಬೀಳದೆ ಇರುವದರಿಂದ ಮತ್ತೆ ಇನ್ನೊಂದು ಸಲ, ಸಂಸಾರದಲ್ಲಿ ಹುಟ್ಟುವದಿಲ್ಲ.

(ಭಾಷ್ಯ)

**೯೫. ಕಿಂ ತತ್ ಪದಮ್ ಇತಿ ? ಆಹ -**

(ಭಾಷ್ಯಾರ್ಥ)

ಆ ಪದವು ಯಾವದು ? ಎಂದರೆ ಹೇಳುತ್ತಾನೆ :-

**ವಿಜ್ಞಾನಸಾರಥಿರ್ಯಸ್ತು ಮನಃಪ್ರಗ್ರಹವಾನ್ ನರಃ ।**
**ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥೯॥**

೯. ಯಾವ ಮನುಷ್ಯನಾದರೆ ವಿಜ್ಞಾನವೆಂಬ ಸಾರಥಿಯುಳ್ಳವನೂ ಮನಸ್ಸೆಂಬ ಹಗ್ಗವುಳ್ಳವನೂ (ಆಗಿರುವನೋ) ಅವನು ದಾರಿಯ ಕೊನೆಯಾದ ಆ ವಿಷ್ಣುವಿನ ಪರಮಪದವನ್ನು ಹೊಂದುತ್ತಾನೆ.

(ಭಾಷ್ಯ)

**೯೬. ವಿಜ್ಞಾನಸಾರಥಿಃ ಯಸ್ತು ಯೋ ವಿವೇಕಬುದ್ಧಿಸಾರಥಿಃ ಪೂರ್ವೋಕ್ತಃ ಮನಃಪ್ರಗ್ರಹವಾನ್ ಪ್ರಗೃಹೀತಮನಾಃ ಸಮಾಹಿತಚಿತ್ತಃ ಸನ್ ಶುಚಿರ್ನರಃ ವಿದ್ವಾನ್ ಸಃ ಅಧ್ವನಃ ಸಂಸಾರಗತೇಃ ಪಾರಮ್ ಪರಮೇವ ಅಧಿಗನ್ತವ್ಯಮ್ ಇತ್ಯೇತತ್ । ಆಪ್ನೋತಿ ಮುಚ್ಯತೇ ಸರ್ವಸಂಸಾರಬನ್ಧನೈಃ । ತತ್ ವಿಷ್ಣೋಃ ವ್ಯಾಪನಶೀಲಸ್ಯ ಬ್ರಹ್ಮಣಃ ಪರಮಾತ್ಮನೋ ವಾಸುದೇವಾಖ್ಯಸ್ಯ ಪರಮಂ ಪ್ರಕೃಷ್ಟಂ ಪದಂ ಸ್ಥಾನಮ್ ಸತತ್ತ್ವಮ್ ಇತ್ಯೇತತ್ ಯದ್ ಅಸೌ ಆಪ್ನೋತಿ ವಿದ್ವಾನ್ ॥**

(ಭಾಷ್ಯಾರ್ಥ)

ಯಾವ (ಮನುಷ್ಯನಾದರೆ) ವಿಜ್ಞಾನವೆಂಬ ಸಾರಥಿಯುಳ್ಳವನಾಗಿರುವನೋ ಎಂದರೆ ಯಾವನು ಹಿಂದೆ ಹೇಳಿದ ವಿವೇಕಬುದ್ಧಿಯೆಂಬ ಸಾರಥಿಯುಳ್ಳವನಾಗಿರು ವನೋ, ಮನಸ್ಸೆಂಬ ಹಗ್ಗವುಳ್ಳವನಾಗಿರುವನೋ ಎಂದರೆ ಮನಸ್ಸನ್ನು ಬಿಗಿಹಿಡಿದು ಚಿತ್ತಸಮಾಧಾನವನ್ನು ಹೊಂದಿ ಶುಚಿಯಾಗಿರುವನೋ (ಯಾವ) ಮನುಷ್ಯನು ಎಂದರೆ ಜ್ಞಾನಿಯು[1] (ಹೀಗಿರುವನೋ) ಅವನು ದಾರಿಯ ಎಂದರೆ ಸಂಸಾರಗತಿಯ ಕೊನೆಯನ್ನು ಎಂದರೆ ಪಡೆಯಬೇಕಾದ್ದ ಪರ(ಬ್ರಹ್ಮವನ್ನೇ[2]) ಎಂದರ್ಥ, (ಅದನ್ನು)

1. ಜ್ಞಾನಿಗೆ ಮಾತ್ರ ಇಂಥ ವಿಜ್ಞಾನಾದಿಗಳು ಇರುವದರಿಂದ 'ನರಃ' ಎಂದರೆ ಜ್ಞಾನಿಯೆಂದೇ ಅರ್ಥಮಾಡಬೇಕೆಂದು ಭಾವ. 2. 'ಪರಮೇವ ಪಾರಂ' [ಆಚೆಯ ದಡವೇ] ಎಂದೂ ಬೇಕಾದರೆ ಅನ್ವಯಿಸಬಹುದು. ಪ್ರ. ೬-೮ ; ನಾವು ಮಾಡಿರುವ ಅರ್ಥವು ಪ್ರಕೃತಕ್ಕೆ ಒಪ್ಪುತ್ತದೆ.

ಹೊಂದುತ್ತಾನೆ. ಸಂಸಾರದ ಎಲ್ಲಾ ಬಂಧನಗಳಿಂದಲೂ ಬಿಡುಗಡೆ ಹೊಂದುತ್ತಾನೆ.[1] ಅದು ವಿಷ್ಣುವಿನ ಎಂದರೆ (ಎಲ್ಲೆಲ್ಲಿಯೂ) ಹಬ್ಬಿಕೊಂಡಿರುವ ಸ್ವಭಾವದ ಬ್ರಹ್ಮದ **ವಾಸುದೇವನೆಂಬ** ಹೆಸರಿನ ಪರಮಾತ್ಮನ ಪರಮವಾದ ಉತ್ತಮವಾದ ಪದವು ಎಂದರೆ ಸ್ಥಾನವು, ತತ್ತ್ವವು ಎಂದರ್ಥ. ಯಾವ (ಆ ಸ್ಥಾನವನ್ನು) ಈ ಜ್ಞಾನಿಯು ಪಡೆದುಕೊಳ್ಳುವನು.

## ಆತ್ಮನು ಎಲ್ಲಕ್ಕೂ ಸೂಕ್ಷ್ಮನು

(ಭಾಷ್ಯ)

೯೭. ಅಧುನಾ ಯತ್ ಪದಂ ಗನ್ತವ್ಯಂ ತಸ್ಯ ಇನ್ದ್ರಿಯಾಣಿ ಸ್ಥೂಲಾನ್ಯಾರಭ್ಯ ಸೂಕ್ಷ್ಮತಾರತಮ್ಯಕ್ರಮೇಣ ಪ್ರತ್ಯಗಾತ್ಮತಯಾ ಅಧಿಗಮಃ ಕರ್ತವ್ಯಃ ಇತ್ಯೇವಮರ್ಥಮ್ ಇದಮಾರಭ್ಯತೇ –

(ಭಾಷ್ಯಾರ್ಥ)

ಈಗ ಸ್ಥೂಲವಾಗಿರುವ ಇಂದ್ರಿಯಗಳನ್ನು ಮೊದಲುಮಾಡಿಕೊಂಡು ಹೆಚ್ಚು ಹೆಚ್ಚು ಸೂಕ್ಷ್ಮವಾಗಿರುವವುಗಳನ್ನು ಕ್ರಮವಾಗಿ ತಿಳಿಸಿ, ಯಾವ ಸ್ಥಾನವನ್ನು (ಮುಮುಕ್ಷುವಾದವನು) ಪಡೆಯಬೇಕಾಗಿರುವದೋ ( ಅದು ನಮ್ಮ) ಒಳಗಿನ ಆತ್ಮನೇ ಎಂದು ತಿಳಿಸುವದಕ್ಕಾಗಿ ಇದನ್ನು ಆರಂಭಿಸಿರುತ್ತದೆ :-

ಇನ್ದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥ ೧೦ ॥

೧೦. ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚಿನವು ; ಅರ್ಥಗಳಿಗಿಂತ ಮನಸ್ಸು ಹೆಚ್ಚಿನದು ಮನಸ್ಸಿಗಿಂತ ಬುದ್ಧಿ ಹೆಚ್ಚು ಬುದ್ಧಿಗಿಂತ ಮಹಾನ್ ಎಂಬ ಆತ್ಮನು ಹೆಚ್ಚು.

(ಭಾಷ್ಯ)

೯೮. ಸ್ಥೂಲಾನಿ ತಾವದಿನ್ದ್ರಿಯಾಣಿ । ತಾನಿ ಯೈರರ್ಥೈರಾತ್ಮಪ್ರಕಾಶನಾಯ ಆರಬ್ಧಾನಿ ತೇಭ್ಯಃ ಇನ್ದ್ರಿಯೇಭ್ಯಃ ಸ್ವಕಾರ್ಯೇಭ್ಯಃ ತೇ ಪರಾ ಹಿ ಅರ್ಥಾಃ, ಸೂಕ್ಷ್ಮಾ ಮಹಾನ್ತಶ್ಚ ಪ್ರತ್ಯಗಾತ್ಮಭೂತಾಶ್ಚ । ತೇಭ್ಯೋಽಪಿ ಅರ್ಥೇಭ್ಯಶ್ಚ ಪರಂ ಸೂಕ್ಷ್ಮತರಂ ಮಹತ್ ಪ್ರತ್ಯಗಾತ್ಮಭೂತಂ ಚ ಮನಃ ಮನಃಶಬ್ದವಾಚ್ಯಂ ಮನಸ ಆರಮ್ಭಕಂ ಭೂತಸೂಕ್ಷ್ಮಮ್ । ಸಙ್ಕಲ್ಪವಿಕಲ್ಪಾದ್ಯಾರಮ್ಭಕತ್ವಾತ್ । ಮನಸೋಽಪಿ ಪರಾ ಸೂಕ್ಷ್ಮತರಾ ಮಹತ್ತರಾ ಪ್ರತ್ಯಗಾತ್ಮಭೂತಾ ಚ ಬುದ್ಧಿಃ ಬುದ್ಧಿಶಬ್ದವಾಚ್ಯಮ್ ಅಧ್ಯವಸಾಯಾದ್ಯಾರಮ್ಭಕಂ ಭೂತಸೂಕ್ಷ್ಮಮ್ । ಬುದ್ಧೇಃ ಆತ್ಮಾ ಸರ್ವಪ್ರಾಣಿಬುದ್ಧೀನಾಂ

1. ಅಜ್ಞಾನಾದಿಬಂಧಗಳಿಂದ ಬಿಡುಗಡೆಯಾಗುವದೇ ಪರಮಾತ್ಮಪ್ರಾಪ್ತಿ ಎಂದು ಭಾವ.

ಪ್ರತ್ಯಗಾತ್ಮಭೂತತ್ವಾದಾತ್ಮಾ ಮಹಾನ್ ಸರ್ವಮಹತ್ತ್ವಾತ್, ಅವ್ಯಕ್ತಾದ್ ಯತ್ ಪ್ರಥಮಂ ಜಾತಂ ಹೈರಣ್ಯಗರ್ಭಂ ತತ್ತ್ವಂ ಬೋಧಾಬೋಧಾತ್ಮಕಂ ಮಹಾನ್ ಆತ್ಮಾ ಬುದ್ಧೇಃ ಪರ ಇತ್ಯುಚ್ಯತೇ ॥

(ಭಾಷ್ಯಾರ್ಥ)

ಇಂದ್ರಿಯಗಳು ಸ್ಥೂಲವಾಗಿರುವವಷ್ಟೆ. ತಮ್ಮನ್ನು ಬೆಳಗುವದಕ್ಕಾಗಿ ಇವು ಯಾವ ಅರ್ಥಗಳಿಂದ ಉಂಟುಮಾಡಲ್ಪಟ್ಟಿರುವವೋ[1] ಆ ಅರ್ಥಗಳು[2] ತಮ್ಮ ಕಾರ್ಯಗಳಾದ ಈ ಇಂದ್ರಿಯಗಳಿಗಿಂತ ಹೆಚ್ಚಿನವು ; ಎಂದರೆ ಸೂಕ್ಷ್ಮವಾಗಿಯೂ[3] ದೊಡ್ಡವಾಗಿಯೂ[4] ಒಳಗಿನ ಆತ್ಮನಾಗಿಯೂ[5] ಇರುವವು. ಆ ಅರ್ಥಗಳಿಗಿಂತಲೂ ಮನಸ್ಸು, ಎಂದರೆ ಮನಸ್ಸಿಗೆ ಕಾರಣವಾದ[6] ಮನಸ್ಸೆಂಬ ಹೆಸರಿನಿಂದ ಕರೆಯಲ್ಪಡುವ ಭೂತಸೂಕ್ಷ್ಮವು[7] ಹೆಚ್ಚಿನದು, ಎಂದರೆ ಇನ್ನೂ ಸೂಕ್ಷ್ಮವಾಗಿಯೂ ದೊಡ್ಡದಾಗಿಯೂ ಒಳಗಿನ ಆತ್ಮನಾಗಿಯೂ[8] ಇರುತ್ತದೆ ; ಏಕೆಂದರೆ ಇದು ಸಂಕಲ್ಪ, ವಿಕಲ್ಪ-

1. ಆರಬ್ಧ, ಆರಂಭಕ - ಎಂಬ ಮಾತುಗಳನ್ನು ಕಾರ್ಯ, ಕಾರಣ - ಎಂಬರ್ಥದಲ್ಲಿ ಭಾಷ್ಯಕಾರರು ಉಪಯೋಗಿಸಿರುತ್ತಾರಾದರೂ ವೈಶೇಷಿಕರ ಆರಂಭವಾದವನ್ನು ಅವರು ಒಪ್ಪಿರುವದಿಲ್ಲ. ಸೂ. ಭಾ. ೨-೨-೧೨. 2. ಶಬ್ದಸ್ಪರ್ಶಾದಿಗಳು.

3. ಅರ್ಥಶಬ್ದವಾಚ್ಯವಾದ ಭೂತಸೂಕ್ಷ್ಮಗಳು ಕಾರಣವೆಂಬ ಅಭಿಪ್ರಾಯದಿಂದ ಸೂಕ್ಷ್ಮವೆಂದು ಹೇಳಿರಬಹುದೆಂದು ತೋರುತ್ತದೆ ; ಅವುಗಳು ಸ್ಥೂಲವಾದಾಗ ಅವನ್ನು ಇಂದ್ರಿಯಗಳು ಬೆಳಗುವವು. 4. ವ್ಯಾಪಕವಾಗಿಯೂ

5. ಈ ಶಬ್ದಕ್ಕೆ 'ಸ್ಥಿರ' ಎಂಬರ್ಥವನ್ನು ವ್ಯಾಖ್ಯಾನದಲ್ಲಿ ಮಾಡಿದೆ ; ಆದರೆ ಅದಕ್ಕೆ ಭಾಷ್ಯದ ಆಧಾರವಿಲ್ಲ.

6. 'ಮನಸ ಆರಮ್ಭಕಮ್' ಎಂಬುದರ ಅನುವಾದವಿದು ; ಈ ಭಾಗವು ಇಲ್ಲದಿದ್ದರೂ ಆಗುತ್ತದೆ.

7. ಭೂತಗಳ ಸೂಕ್ಷ್ಮರೂಪವು ಮನಸ್ಸು, ಬುದ್ಧಿ - ಮುಂತಾದ ಹೆಸರನ್ನು ಪಡೆಯುವದಕ್ಕೆ ಆಯಾ ಕ್ರಿಯೆಯನ್ನುಂಟುಮಾಡುವದೇ ಕಾರಣ. ಇಂದ್ರಿಯಗಳೂ ಮನೋಬುದ್ಧಿಗಳೂ ಭೌತಿಕವೆಂಬ ಬಗ್ಗೆ ಸೂ. ಭಾ. ೨-೩-೧೫ ನೋಟ.

8. 'ಸೂಕ್ಷ್ಮ'ವೆಂದರೆ ಅವಕ್ಕೆ ಸಿಕ್ಕದೆ ಇರುವ ಸ್ವರೂಪವು ; ಇಂದ್ರಿಯಗಳೂ ವಿಷಯಗಳೂ ಮನಸ್ಸಿಗೆ ಸಿಕ್ಕಿ ವ್ಯವಹಾರಗೋಚರವಾಗುತ್ತವೆ, ಅವಕ್ಕೆ ಮನಸ್ಸು ಗೋಚರವಾಗದು. 'ದೊಡ್ಡದು' ಎಂದರೆ ವ್ಯಾಪಕವು ; ಮನಸ್ಸು ಎಲ್ಲಾ ಇಂದ್ರಿಯಗಳ ವ್ಯಾಪಾರಕ್ಕೂ ಸಹಾಯವಾಗಿದ್ದು ಅವುಗಳಿಂದಾಗದ ತನ್ನ ವ್ಯಾಪಾರವನ್ನು ಮಾಡುವದರಿಂದ ಅವಕ್ಕಿಂತ ವ್ಯಾಪಕ. 'ಆತ್ಮ'ನೆಂದರೆ ಆತ್ಮನೆಂದು ಭಾವಿಸಲ್ಪಡುವದು - ಇಂದ್ರಿಯಗಳ ಧರ್ಮವು ತಮ್ಮದಲ್ಲವೆಂದು ತಿಳಿದುಕೊಂಡವರೂ ಮನಸ್ಸನ್ನು ಆತ್ಮನೆಂದು ಭಾವಿಸಿಕೊಂಡು ಅದರ ಧರ್ಮವನ್ನು ತಮ್ಮದೆಂದೆಣಿಸುವರು. ಸೂಕ್ಷ್ಮ, ದೊಡ್ಡದು, ಆತ್ಮ - ಎಂಬ ಮಾತುಗಳನ್ನು ಮುಂದೂ ಹೀಗೆಯೇ ಅರ್ಥಮಾಡಿಕೊಳ್ಳಬೇಕು.

ಮುಂತಾದವುಗಳಿಗೆ ಕಾರಣವಾಗಿರುವದು. ಮನಸ್ಸಿಗಿಂತಲೂ ಬುದ್ಧಿಯು ಎಂದರೆ ನಿಶ್ಚಯವೇ ಮುಂತಾದದ್ದಕ್ಕೆ ಕಾರಣವಾಗಿರುವ ಬುದ್ಧಿ ಎಂಬ ಹೆಸರಿನಿಂದ ಕರೆಯಲ್ಪಡುವ ಭೂತಸೂಕ್ಷ್ಮವು ಹೆಚ್ಚಿನದು, ಇನ್ನೂ ಸೂಕ್ಷ್ಮವಾಗಿ ಇನ್ನೂ ದೊಡ್ಡದಾಗಿ ಒಳಗಿನ ಆತ್ಮನಾಗಿಯೂ ಇರುವದು. ಬುದ್ಧಿಗಿಂತ 'ಮಹಾನ್ ಆತ್ಮನು' ಹೆಚ್ಚಿನವನು. ಎಲ್ಲಾ ಪ್ರಾಣಿಗಳ ಬುದ್ಧಿಗಳಿಗೂ ಒಳಗಿನ ಆತ್ಮನಾಗಿರುವದರಿಂದ[1] ಅದು ಆತ್ಮನು, ಎಲ್ಲಕ್ಕೂ ದೊಡ್ಡದಾಗಿರುವದರಿಂದ ''ಮಹಾನ್'' ಎನ್ನಿಸಿಕೊಂಡಿದೆ. ಅವ್ಯಕ್ತದಿಂದ ಯಾವದು ಮೊದಲು ಹುಟ್ಟಿರುವದೋ (ಆ) ಜ್ಞಾನಾ ಜ್ಞಾನರೂಪ[2]ವಾಗಿರುವ ಹಿರಣ್ಯಗರ್ಭನ ಸಂಬಂಧವಾದ ತತ್ತ್ವವನ್ನೇ (ಇಲ್ಲಿ) 'ಮಹಾನ್ ಆತ್ಮನು' ಬುದ್ಧಿಗಿಂತ ಹೆಚ್ಚಿನದು ಎಂದು ಹೇಳಿರುತ್ತದೆ[3].

ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ।
ಪುರುಷಾನ್ನ ಪರಂ ಕಿಞ್ಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ॥ ೧೧ ॥

೧೧. ಮಹತ್ತಿಗಿಂತ ಅವ್ಯಕ್ತವು ಹೆಚ್ಚು ; ಅವ್ಯಕ್ತಕ್ಕಿಂತ ಪುರುಷನು ಹೆಚ್ಚು ; ಪುರುಷನಿಗಿಂತ ಹೆಚ್ಚಿನದು ಯಾವದೂ ಇಲ್ಲ ; ಇದೇ ಕೊನೆ, ಇದೇ ಹೆಚ್ಚಿನ ಗತಿ.

(ಭಾಷ್ಯ)

೯೯. ಮಹತೋಽಪಿ ಪರಂ ಸೂಕ್ಷ್ಮತರಂ ಪ್ರತ್ಯಗಾತ್ಮಭೂತಂ ಸರ್ವಮಹತ್ತರಂ ಚ ಅವ್ಯಕ್ತಂ ಸರ್ವಸ್ಯ ಜಗತೋ ಬೀಜಭೂತಮ್ ಅವ್ಯಾಕೃತನಾಮರೂಪಸತತ್ತ್ವಂ ಸರ್ವಕಾರ್ಯಕಾರಣಶಕ್ತಿಸಮಾಹಾರರೂಪಮ್ ಅವ್ಯಕ್ತಾವ್ಯಾಕೃತಾಕಾಶಾದಿನಾಮವಾಚ್ಯಂ ಪರಮಾತ್ಮನ್ಯೋತಪ್ರೋತಭಾವೇನ ಸಮಾಶ್ರಿತಂ ವಟಕಣಿಕಾಯಾಮಿವ ವಟವೃಕ್ಷಶಕ್ತಿಃ ! ತಸ್ಮಾತ್ ಅವ್ಯಕ್ತಾತ್ ಪರಃ ಸೂಕ್ಷ್ಮತರಃ ಸರ್ವಕಾರಣಕಾರಣತ್ವಾತ್ ಪ್ರತ್ಯಗಾತ್ಮತ್ವಾಚ್ಚ ಮಹಾಂಶ್ಚ । ಅತ ಏವ ಪುರುಷಃ ಸರ್ವಪೂರಣಾತ್ । ತತೋಽನ್ಯಸ್ಯ ಪರಸ್ಯ ಪ್ರಸಙ್ಗಂ ನಿವಾರಯನ್ ಆಹ- ''ಪುರುಷಾನ್ನ ಪರಂ ಕಿಂಚಿತ್'' ಇತಿ । ಯಸ್ಮಾನ್ನಾಸ್ತಿ ಪುರುಷಾತ್ ಚಿನ್ಮಾತ್ರಘನಾತ್ ಪರಂ ಕಿಂಚಿದಪಿ ವಸ್ತ್ವನ್ತರಮ್ ತಸ್ಮಾತ್ ಸೂಕ್ಷ್ಮತ್ವಮಹತ್ತ್ವಪ್ರತ್ಯಗಾತ್ಮತ್ವಾನಾಂ ಸಾ ಕಾಷ್ಠಾ

1. ಹಿರಣ್ಯಗರ್ಭನ ಬುದ್ಧಿಯಲ್ಲಿ ಎಲ್ಲಾ ಬುದ್ಧಿಗಳೂ ಅಡಕವಾಗಿವೆ.

2. ಜ್ಞಾನಕ್ರಿಯಾಶಕ್ತಿಗಳ ಒಟ್ಟು.

3. 'ಮಹಾನ್ ಆತ್ಮಾ' - ಎಂಬುದಕ್ಕೆ ಜೀವ ಎಂಬ ಮತ್ತೊಂದು ಅರ್ಥವನ್ನು ಸೂ. ಭಾ. ೧-೪-೩ರಲ್ಲಿ ಮಾಡಿದೆ.

ನಿಷ್ಠಾ ಪರ್ಯವಸಾನಮ್ । ಅತ್ರ ಹಿ ಇನ್ದ್ರಿಯೇಭ್ಯ ಆರಭ್ಯ ಸೂಕ್ಷ್ಮತ್ವಾದಿ ಪರಿಸಮಾಪ್ತಮ್ । ಅತ ಏವ ಚ ಗನ್ತೄಣಾಂ ಸರ್ವಗತಿಮತಾಂ ಸಂಸಾರಿಣಾಂ ಸಾ ಪರಾ ಪ್ರಕೃಷ್ಟಾ ಗತಿಃ । ''ಯದ್ ಗತ್ವಾ ನ ನಿವರ್ತನ್ತೇ'' (ಗೀ. ೧೫-೬) ಇತಿ ಸ್ಮೃತೇಃ ॥

(ಭಾಷ್ಯಾರ್ಥ)

ಮಹತ್ತಿಗಿಂತಲೂ ಹೆಚ್ಚಿನದು, ಎಂದರೆ ಇನ್ನೂ ಸೂಕ್ಷ್ಮವಾಗಿ (ಇನ್ನೂ) ಒಳಗಿನ ಆತ್ಮನಾಗಿ ಇನ್ನೂ ದೊಡ್ಡದಾಗಿರುವದು **ಅವ್ಯಕ್ತವು**, ಜಗತ್ತಿಗೆಲ್ಲ ಬೀಜವಾಗಿರುವ **ಅವ್ಯಾಕೃತವೆಂಬ**[1] **ನಾಮರೂಪಗಳ ತತ್ತ್ವವು ; (ಇದು) ಎಲ್ಲಾ ಕಾರ್ಯಕರಣಗಳ ಶಕ್ತಿಗಳ ಒಟ್ಟಿನ ರೂಪವಾಗಿರುತ್ತದೆ. (ಇದಕ್ಕೆ) ಅವ್ಯಕ್ತ, ಅವ್ಯಾಕೃತ, ಆಕಾಶ - ಮುಂತಾದ**[2] **ಹೆಸರುಗಳಿರುವವು. ಇದು ಆಲದಬೀಜದಲ್ಲಿ ಆಲದಮರದ ಶಕ್ತಿಯಂತೆ ಪರಮಾತ್ಮನಲ್ಲಿ ಹಾಸುಹೊಕ್ಕಾಗಿ**[3] **ಆಶ್ರಯಿಸಿಕೊಂಡಿರುವದು.** ಈ ಅವ್ಯಕ್ತಕ್ಕಿಂತ[4] (ಆತ್ಮನು) ಹೆಚ್ಚು, ಎಂದರೆ ಇನ್ನೂ ಸೂಕ್ಷ್ಮವಾಗಿರುವನು ; ಏಕೆಂದರೆ (ಅವನು) ಕಾರಣಗಳಿಗೆಲ್ಲ ಕಾರಣನಾಗಿರುತ್ತಾನೆ[5] ಮತ್ತು (ಎಲ್ಲಕ್ಕೂ) ಒಳಗಿನ ಪ್ರತ್ಯಗಾತ್ಮನಾಗಿರುತ್ತಾನೆ[6]. ಮತ್ತು (ಇವನು ಇನ್ನೂ) ದೊಡ್ಡವನು, ಆದ್ದರಿಂದಲೇ **ಪುರುಷನು** ; ಏಕೆಂದರೆ ಎಲ್ಲವನ್ನೂ ತುಂಬಿಕೊಂಡಿರುತ್ತಾನೆ[7].

ಈ (ಪುರುಷ)ನಿಗಿಂತ ಹೆಚ್ಚಾದದ್ದು ಮತ್ತೊಂದು ಇದ್ದೀತೆಂದು (ಶಂಕಿಸಿಯಾರೆಂದು ಅಂಥ ಶಂಕೆಯನ್ನು) ಪರಿಹರಿಸುವದಕ್ಕಾಗಿ 'ಪುರುಷನಿಗಿಂತ ಹೆಚ್ಚಿನದು

---

1. ನಾಮರೂಪಗಳು ವ್ಯಾಕೃತವಾಗಿದ್ದರೆ, ಬಿಡಿಯಾಗಿದ್ದರೆ, ಅದಕ್ಕೆ ಜಗತ್ತು ಎಂದು ಹೆಸರು. ಅವ್ಯಾಕೃತವಾಗಿದ್ದರೆ ಅದೇ ಅವ್ಯಕ್ತವೆನಿಸುವದು.

2. ಬೀಜ, ಶಕ್ತಿ, ಮಾಯೆ, ಪ್ರಕೃತಿ - ಮುಂತಾದ. ಸೂ. ಭಾ. ೧-೪-೩, ೧-೪-೯, ೨-೧-೧೪.

3. ಬೃ. ೩-೮-೭, ೮.

4. ಅವ್ಯಕ್ತವೆಂಬುದಕ್ಕೆ 'ಅವಿದ್ಯೆ' ಎಂಬ ಮತ್ತೊಂದು ಅರ್ಥವನ್ನು ಸೂ. ಭಾ. ೧-೪-೩ರಲ್ಲಿ ಮಾಡಿದೆ.

5. ಭೂತಗಳು ಒಂದಕ್ಕೊಂದು ಕಾರಣವೆಂದು ಶ್ರುತಿ ಹೇಳುವಾಗಲೂ ಸದ್ರೂಪನಾಗಿರುವ ಪರಮಾತ್ಮನೇ ಆ ರೂಪದಿಂದ ಕಾರಣನಾಗಿರುತ್ತಾನೆ. ಛಾಂ. ಭಾ. ೬-೨-೩, ೬-೨-೪ ನೋಡಿರಿ. ಅಥವಾ ಅವ್ಯಕ್ತವು ಪರಮಾತ್ಮನ ಅಧೀನವಾಗಿದ್ದುಕೊಂಡೇ ಮಿಕ್ಕ ಕಾರ್ಯಗಳಿಗೆ ಕಾರಣವಾಗಿರುವದರಿಂದ ಆತ್ಮನು ಎಲ್ಲಕ್ಕೂ ಕಾರಣನೆನಿಸುವನು. ಸೂ. ಭಾ. ೧-೪-೩ ನೋಡಿ.

6. ನಿಜವಾಗಿ ಅವನೇ ಪ್ರತ್ಯಗಾತ್ಮನು ; ಮಿಕ್ಕ ಆತ್ಮಾಭಾಸರು ಇವನ ಹೊರಗೆ ಇರುವ ಅನಾತ್ಮರೇ.

7. ಎಲ್ಲವನ್ನೂ ತುಂಬಿಕೊಂಡಿರುವ ವ್ಯಾಪಕನೆಂಬುದನ್ನು ''ಪುರುಷ''ನೆಂಬ ಮಾತು ಸೂಚಿಸುವದೆಂದು ಭಾವ. ಶ್ವೇ. ೩-೯.

ಯಾವದೂ ಇಲ್ಲ' ಎಂದು ಹೇಳಿರುತ್ತಾನೆ. (ಹೀಗೆ) ಬರಿಯರಿವಿನ ಗಟ್ಟಿಯಾಗಿರುವ ಪುರುಷನಿಗಿಂತ ಹೆಚ್ಚಿನದಾದ ಯಾವ ವಸ್ತುವೂ ಇಲ್ಲದಿರುವದರಿಂದ ಸೂಕ್ಷ್ಮವಾಗಿರುವಿಕೆ, ದೊಡ್ಡದಾಗಿರುವಿಕೆ, ಒಳಗಿನ ಆತ್ಮನಾಗಿರುವಿಕೆ- (ಈ ಮೂರ)ಕ್ಕೂ ಇದೇ ಕೊನೆ ಎಂದರೆ ನಿಲುಗಡೆ, ಮುಗಿಯುವದು. ಏಕೆಂದರೆ ಇಂದ್ರಿಯಗಳಿಂದ ಮೊದಲುಮಾಡಿಕೊಂಡು (ನೋಡುವಾಗ) ಸೂಕ್ಷ್ಮತ್ವವೇ ಮುಂತಾದದ್ದು ಇಲ್ಲಿಯೇ ಮುಗಿಯುತ್ತದೆ, ಆದ್ದರಿಂದಲೇ ಎಲ್ಲಾ ಬಗೆಯ ಗತಿಗಳುಳ್ಳ[1] ಸಂಸಾರಿಗಳೆಂಬ ಗಂತೃಗಳಿಗೆ ಇದೇ ಹೆಚ್ಚಿನ ಉತ್ತಮವಾದ ಗತಿಯು[2]. "ಯಾವದನ್ನು ಪಡೆದುಕೊಂಡರೆ (ಜನರು) ಹಿಂತಿರುಗುವದಿಲ್ಲವೋ" (ಅದೇ ನನ್ನ ಪರಮಧಾಮವು) (ಗೀ. ೧೫-೬) ಎಂಬ ಸ್ಮೃತಿಯು ಇದಕ್ಕೆ ಪ್ರಮಾಣವು.[3]

(ಭಾಷ್ಯ)

೧೦೦. ನನು ಗತಿಶ್ಚೇತ್ ಆಗತ್ಯಾಪಿ ಭವಿತವ್ಯಮ್, ಕಥಂ 'ಯಸ್ಮಾದ್ ಭೂಯೋ ನ ಜಾಯತೇ' (೧-೩-೮) ಇತಿ ? ನೈಷ ದೋಷಃ । ಸರ್ವಸ್ಯ ಪ್ರತ್ಯಗಾತ್ಮತ್ವಾತ್ ಅವಗತಿರೇವ ಗತಿರಿತ್ಯುಪಚರ್ಯತೇ । ಪ್ರತ್ಯಗಾತ್ಮತ್ವಂ ಚ ದರ್ಶಿತಮ್ ಇನ್ದ್ರಿಯಮನೋಬುದ್ಧಿಪರತ್ವೇನ । ಯೋ ಹಿ ಗನ್ತಾ ಸೋಽಯಮ್ ಅಪ್ರತ್ಯಗ್ರೂಪಂ ಗಚ್ಛತ್ಯನಾತ್ಮಭೂತಮ್ ನ ವಿಪರ್ಯಯೇಣ । ತಥಾ ಚ ಶ್ರುತಿಃ 'ಅನಧ್ವಗಾ ಅಧ್ವಸು ಪಾರಯಿಷ್ಣವಃ' (?) ಇತ್ಯಾದ್ಯಾ । ತಥಾ ಚ ದರ್ಶಯತಿ ಪ್ರತ್ಯಗಾತ್ಮತ್ವಂ ಸರ್ವಸ್ಯ ॥

(ಭಾಷ್ಯಾರ್ಥ)

(ಆಕ್ಷೇಪ) :- ಹೋಗುವದೆಂದಮೇಲೆ ಹಿಂತಿರುಗಿ ಬರಬೇಕು. ಹೀಗಿರುವಲ್ಲಿ 'ಅದರಿಂದ (ಅವನು) ಮತ್ತೆ ಹುಟ್ಟುವದಿಲ್ಲ' ಎಂದು (೮ನೆಯ ಮಂತ್ರದಲ್ಲಿ ಹೇಳಿರುವದು) ಹೇಗೆ (ಸರಿ) ?

(ಪರಿಹಾರ) :- ಇದರಲ್ಲೇನೂ ತಪ್ಪಿಲ್ಲ. ಏಕೆಂದರೆ (ಆತ್ಮನು) ಎಲ್ಲಕ್ಕೂ ಒಳಗಿರುವ ಆತ್ಮನಾಗಿರುವದರಿಂದ (ಅವನನ್ನು) ಅರಿಯುವದನ್ನೇ (ಇಲ್ಲಿ) ಗತಿ[4]

---

1. ಪಿತೃಯಾನ, ದೇವಯಾನ, ಅಧೋಗತಿ - ಎಂಬ ಗತಿಗಳುಳ್ಳ.

2. ಏಕೆಂದರೆ ಇದನ್ನು ಪಡೆದಮೇಲೆ ಸಂಸಾರಕ್ಕೆ ಮರಳುವದಿಲ್ಲ.

3. ಇಂಥ ಯಾನಗಳು ಒಂದಕ್ಕಿಂತ ಒಂದು ಹೆಚ್ಚೆಂದು ತಿಳಿಸುವದರಲ್ಲಿ ಶ್ರುತಿಯ ತಾತ್ಪರ್ಯವಿಲ್ಲ ; ಜ್ಞಾನದಿಂದ ಆತ್ಮನನ್ನು ಪಡೆಯುವದೇ ಉತ್ತಮಗತಿ ಎಂಬುದನ್ನು ತಿಳಿಸುವದರಲ್ಲಿಯೇ ಅದಕ್ಕೆ ತಾತ್ಪರ್ಯವೆಂಬುದನ್ನು ಸೂ. ಭಾ. ೩-೩-೧೪ರಲ್ಲಿ ನಿರ್ಣಯಿಸಿದೆ.

4. ಗತಿ ಎಂದರೆ ಹೋಗುವದು ಎಂಬರ್ಥವುಳ್ಳ ಸಂಸ್ಕೃತಧಾತುವಿಗೆ ಜ್ಞಾನವೆಂಬ ಅರ್ಥವೂ ಉಂಟು. ಆದ್ದರಿಂದ ಆತ್ಮನನ್ನು ಅರಿಯುವದೇ ಆತ್ಮಪ್ರಾಪ್ತಿ. ಆತ್ಮನಿಂದ ಮತ್ತೆ ಬರುವದೆಂದರೆ ಅರ್ಥವಿಲ್ಲ.

ಎಂದು ಉಪಚಾರಕ್ಕೆ ಕರೆದಿರುತ್ತದೆ. ಇಂದ್ರಿಯ, ಮನಸ್ಸು ಬುದ್ಧಿ - ಇವುಗಳಿಗಿಂತ ಹೆಚ್ಚಿನವನೆಂದು ತಿಳಿಸುವದರ ಮೂಲಕ (ಆತ್ಮನು ಎಲ್ಲಕ್ಕೂ) ಒಳಗಿನ ಆತ್ಮನೆಂಬುದು (ಹೇಗೆಂಬು)ದನ್ನು ತೋರಿಸಿಕೊಟ್ಟದ್ದಾಗಿದೆ. ಯಾವನು (ಎಲ್ಲಿಗಾದರೂ) ಹೋಗ ಬೇಕಾಗಿರುವದೋ ಅವನು[1] ತನ್ನ ಒಳಗಿಲ್ಲದ ರೂಪದ ಅನಾತ್ಮವಾದದ್ದನ್ನು (ಕುರಿತೇ) ಹೋಗುತ್ತಾನೆ. (ಇದಕ್ಕೆ) ವಿರುದ್ಧವಾಗಿ (ತನ್ನ ಸ್ವರೂಪಕ್ಕೇ ತಾನು ಹೋಗುವದಿಲ್ಲ). ಆದ್ದರಿಂದಲೇ 'ದಾರಿಯನ್ನು ನಡೆಯದೆ ದಾರಿಗಳನ್ನು ದಾಟುವರು' (?) ಎಂದು ಶ್ರುತಿಯು[2] ಹೇಳುತ್ತದೆ. ಆದ್ದರಿಂದಲೇ (ಆತ್ಮ ಎಲ್ಲರಿಗೂ ಒಳಗಿರುವ ಆತ್ಮನೆಂಬುದನ್ನು (ಈ ಮುಂದಿನ ಮಂತ್ರವು) ತಿಳಿಸುತ್ತದೆ.

**ಏಷ ಸರ್ವೇಷು ಭೂತೇಷು ಗೂಢೋಽತ್ಮಾ ನ ಪ್ರಕಾಶತೇ ।**

**ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥೧೨॥**

೧೨. ಎಲ್ಲಾ ಭೂತಗಳಲ್ಲಿಯೂ ಅಡಗಿರುವ ಈ ಆತ್ಮನು ಬೆಳಗುವದಿಲ್ಲ. ಆದರೆ ಸೂಕ್ಷ್ಮದರ್ಶಿಗಳಾದವರಿಗೆ ಅಗ್ರ್ಯವಾದ ಸೂಕ್ಷ್ಮವಾದ ಬುದ್ಧಿಗೆ ಕಾಣಿಸು ತಾನೆ.

(ಭಾಷ್ಯ)

೧೦೧. ಏಷ ಪುರುಷಃ ಸರ್ವೇಷು ಬ್ರಹ್ಮಾದಿಸ್ತಮ್ಬಪರ್ಯನ್ತೇಷು ಭೂತೇಷು **ಗೂಢಃ** ಸಂವೃತಃ ದರ್ಶನಶ್ರವಣಾದಿಕರ್ಮಾ ಅವಿದ್ಯಾಮಾಯಾಚ್ಛನ್ನಃ ಅತ ಏವ **ಆತ್ಮಾ ನ ಪ್ರಕಾಶತೇ** ಆತ್ಮತ್ವೇನ ಕಸ್ಯಚಿತ್ । ಅಹೋ ಅತಿಗಮ್ಭೀರಾ ದುರವಗಾಹ್ಯಾ ವಿಚಿತ್ರಾ ಚೇಯಂ ಮಾಯಾ[3] ಯದಯಂ ಸರ್ವೋ ಜನ್ತುಃ ಪರಮಾರ್ಥತಃ ಪರಮಾರ್ಥ ಸತತ್ತ್ವೋಽಪಿ ಏವಂ ಬೋಧ್ಯಮಾನಃ 'ಅಹಂ ಪರಮಾತ್ಮಾ' ಇತಿ ನ ಗೃಹ್ಣಾತಿ, ಅನಾತ್ಮಾನಂ ದೇಹೇನ್ದ್ರಿಯಾದಿಸಙ್ಘಾತಮ್ ಆತ್ಮನೋ ದೃಶ್ಯಮಾನಮಪಿ ಘಟಾದಿವತ್ ಆತ್ಮತ್ವೇನ 'ಅಹಮಮುಷ್ಯ ಪುತ್ರಃ' ಇತ್ಯನುಚ್ಯಮಾನೋಽಪಿ ಗೃಹ್ಣಾತಿ । ನೂನಂ ಪರಸ್ಯೈವ ಮಾಯಯಾ ಮೋಮುಹ್ಯಮಾನಃ ಸರ್ವೋ ಲೋಕೋಽಯಂ ಬಮ್ಭ್ರಮೀತಿ । ತಥಾ ಚ ಸ್ಮರಣಮ್ 'ನಾಹಂ ಪ್ರಕಾಶಃ ಸರ್ವಸ್ಯ ಯೋಗ ಮಾಯಾಸಮಾವೃತಃ' (ಗೀ. ೭-೨೫) ಇತ್ಯಾದಿ ॥

---

1. 'ಅಗತಮ್'(ಇನ್ನೂ ಹೋಗಿಲ್ಲದ) ಎಂಬ (ಅ ॥) ಪಾಠದ ಮಾತು ಬೇಕಿಲ್ಲ.
2. ಈ ಶ್ರುತಿಯು ಯಾವದೆಂಬುದು ತಿಳಿಯದು ಮುಂ. ಭಾ. ೩-೨-೬ ರಲ್ಲಿಯೂ ಇದು ಉದಾಹೃತವಾಗಿದೆ.
3. ವಾ ॥

(ಭಾಷ್ಯಾರ್ಥ)

ಈ ಪುರುಷನು ಬ್ರಹ್ಮನು ಮೊದಲಾಗಿ ಸ್ತಂಬದವರೆಗಿನ ಎಲ್ಲಾ ಭೂತಗಳಲ್ಲಿಯೂ[1] ಅಡಗಿರುವನು, ಮುಸುಕಿಟ್ಟುಕೊಂಡಿರುವನು ; **ನೋಡುವದು, ಕೇಳುವದು - ಮುಂತಾದ ಕೆಲಸಗಳನ್ನು ಮಾಡುತ್ತಾ**[2] **ಅವಿದ್ಯಾಮಾಯೆಯಿಂದ** ಮರೆಯಾಗಿರುವನು[3]. ಆದ್ದರಿಂದಲೇ (ಈ) ಆತ್ಮನು 'ನನ್ನ ಆತ್ಮನು' ಎಂದು ಯಾರಿಗೂ ಬೆಳಗುವದಿಲ್ಲ[4]. ಆಹಾ ! ಅತಿಗಂಭೀರವಾದ ತಿಳಿಯಲಸದಳವಾದ ಮತ್ತು ವಿಚಿತ್ರವಾದ ಮಾಯೆಯಿದು ! ಏಕೆಂದರೆ ಈ ಪ್ರತಿಯೊಬ್ಬ ಜೀವನೂ ನಿಜವಾಗಿ (ತಾನು) ಪರಮಾರ್ಥತತ್ತ್ವವೇ ಆಗಿದ್ದರೂ ಹೀಗೆಂದು ಹೇಳಿಕೊಟ್ಟರೂ 'ನಾನು ಪರಮಾತ್ಮನು' ಎಂದು ತಿಳಿಯುವದಿಲ್ಲವಲ್ಲ ! ಅನಾತ್ಮವಾದ ದೇಹ, ಇಂದ್ರಿಯಗಳು - ಮುಂತಾದವುಗಳ ಸೇರುವೆಯ ಗುಂಪನ್ನು (ಅದು) ಗಡಿಗೆಯೇ ಮುಂತಾದದ್ದರಂತೆ ತನಗೆ (ಬೇರೆಯಾಗಿ) ಕಾಣುತ್ತಿದ್ದರೂ ತಾನೆಂದು(ಕೊಂಡು) ಯಾರೂ ಹೇಳಿಕೊಡದಿದ್ದರೂ 'ನಾನು ಇಂಥವನ ಮಗನು' ಎಂದು ಗ್ರಹಿಸಿಕೊಳ್ಳುತ್ತಿರುವನಲ್ಲ ! ನಿಜವಾಗಿಯೂ ಈ ಜನರೆಲ್ಲ ಪರ(ಮಾತ್ಮ)ನ ಮಾಯೆಯಿಂದಲೇ ಮತ್ತೆಮತ್ತೆ ಮೋಹಿತರಾಗಿ (ಸಂಸಾರದಲ್ಲಿ) ತೊಳಲುತ್ತಿರುವರೆನ್ನಬೇಕು. ಆದ್ದರಿಂದಲೇ 'ಯೋಗಮಾಯೆಯಿಂದ ಮುಸುಕಿಟ್ಟುಕೊಂಡಿರುವದರಿಂದ ನಾನು ಎಲ್ಲಾ ಜನರಿಗೂ ತೋರುವಟಲ್ಲ' (ಗೀ. ೭-೨೫) ಎಂದು ಸ್ಮೃತಿಯೂ ಹೇಳುತ್ತಿದೆ.

(ಭಾಷ್ಯ)

೧೦೨. ನನು ವಿರುದ್ಧಮಿದಮುಚ್ಯತೇ 'ಮತ್ವಾ ಧೀರೋ ನ ಶೋಚತಿ' (೧-೨-೨೨), 'ನ ಪ್ರಕಾಶತೇ' (೧-೩-೧೨) ಇತಿ ಚ । ನೈತದೇವಮ್ । ಅಸಂಸ್ಕೃತಬುದ್ಧೇರವಿಜ್ಞೇಯತ್ವಾತ್ 'ನ ಪ್ರಕಾಶತೇ' ಇತ್ಯುಕ್ತಮ್ । ದೃಶ್ಯತೇ ತು ಸಂಸ್ಕೃತಯಾ ಅಗ್ರ್ಯಯಾ ಅಗ್ರಮಿವಾಗ್ರ್ಯತಯಾ । ಏಕಾಗ್ರತಯೋಪೇತಯಾ

---

1. ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗೆ ಶರೀರವು ಬೇರೆಬೇರೆಯಾದರೂ ಆತ್ಮನು ಒಬ್ಬನೇ.

2. ನೋಡುವದು - ಮುಂತಾದ ವ್ಯಾಪಾರಗಳಲ್ಲಿ ಇಂದ್ರಿಯವೃತ್ತಿಯು ಬೇರೆಬೇರೆಯಾದರೂ ಅರಿವು, ಚೈತನ್ಯವು ಒಂದೇ. ಇದನ್ನು ಮೂಢರು ಅರಿಯರು. ಗೀ. ಭಾ. ೧೫-೧೦, ಛಾ. ಭಾ. ೭-೪ರಲ್ಲಿ 'ದರ್ಶನಶ್ರವಣಮನನವಿಜ್ಞಾನಲಿಙ್ಗಮ್' ಎಂಬುದಕ್ಕೂ ಇದೇ ಅರ್ಥ. 3. ಅವಿದ್ಯೆ ಎಂದರೆ ಶರೀರ, ಇಂದ್ರಿಯ, ಮನಸ್ಸು - ಮುಂತಾದವುಗಳ ಧರ್ಮವನ್ನು ಹುಟ್ಟುಗಟ್ಟುವ ತಪ್ಪುತಿಳಿವಳಿಕೆ. ಮಾಯೆ ಎಂದರೆ ಅಧ್ಯಾಸದಿಂದ ತೋರುವ ಶರೀರಾದಿಗಳು. ಆತ್ಮನು ಶುದ್ಧಚೈತನ್ಯಸ್ವರೂಪನೇ ಆಗಿದ್ದರೂ ಅವಿದ್ಯಾಮಾಯೆಯಿಂದ ಮರೆಯಾಗಿರುವನು.

4. ಒಬ್ಬ ಆತ್ಮನೇ ನಮ್ಮಗಳೆಲ್ಲರ ಆತ್ಮನು ಎಂದು ತೋರುವದಿಲ್ಲ.

ಇತ್ಯೇತತ್ । ಸೂಕ್ಷ್ಮಯಾ ಸೂಕ್ಷ್ಮವಸ್ತುನಿರೂಪಣಪರಯಾ । ಕೈಃ ? ಸೂಕ್ಷ್ಮದರ್ಶಿಭಿಃ 'ಇನ್ದ್ರಿಯೇಭ್ಯಃ ಪರಾ ಹ್ಯರ್ಥಾಃ' ಇತ್ಯಾದಿಪ್ರಕಾರೇಣ ಸೂಕ್ಷ್ಮತಾಪಾರಮ್ಪರ್ಯದರ್ಶನೇನ ಪರಂ ಸೂಕ್ಷ್ಮಂ ದ್ರಷ್ಟುಂ ಶೀಲಂ ಯೇಷಾಂ ತೇ ಸೂಕ್ಷ್ಮದರ್ಶಿನಃ, ತೈಃ ಸೂಕ್ಷ್ಮದರ್ಶಿಭಿಃ । ಪಣ್ಡಿತೈಃ ಇತ್ಯೇತತ್ ॥

(ಭಾಷ್ಯಾರ್ಥ)

(ಆಕ್ಷೇಪ) :- 'ತಿಳಿದುಕೊಂಡರೆ ಧೀರನು ಶೋಕಿಸುವದಿಲ್ಲ'(೧-೨-೨೨) ಎಂದೂ ಹೇಳಿ (ಈಗ) '(ಇವನು) ಬೆಳಗುವದಿಲ್ಲ' ಎಂದು ಹೇಳಿರುವದು (ಒಂದಕ್ಕೊಂದು) ವಿರುದ್ಧವಲ್ಲವೆ ?

(ಪರಿಹಾರ) :- ಹಾಗಲ್ಲ. ಬುದ್ಧಿಯ ಸಂಸ್ಕಾರವಿಲ್ಲದವರಿಗೆ ತಿಳಿಯುವದಕ್ಕೆ ಬರುವದಿಲ್ಲವಾದ್ದರಿಂದ 'ಬೆಳಗುವದಿಲ್ಲ' ಎಂದು ಹೇಳಿರುತ್ತದೆ. ಆದರೆ ಅಗ್ರ್ಯವಾದ - ಮೊನೆಯಂತೆ (ಚೂಪಾಗಿರುವದು) ''ಅಗ್ರ್ಯವು ; ಅಂಥ (ಬುದ್ಧಿಯಿಂದ) - ಎಂದರೆ ಏಕಾಗ್ರತೆಯಿಂದ ಕೂಡಿರುವ ಎಂದರ್ಥ. ಸೂಕ್ಷ್ಮವಾದ ಎಂದರೆ ಸೂಕ್ಷ್ಮವಾದ ವಸ್ತುವನ್ನು ಪರೀಕ್ಷಿಸುವದರಲ್ಲಿಯೇ ಆಸಕ್ತಿಯುಳ್ಳ ಬುದ್ಧಿಗೆ[1] ಕಾಣಿಸುತ್ತಾನೆ. ಯಾರಿಗೆ (ಕಾಣಿಸುತ್ತಾನೆ) ? ಎಂದರೆ ಸೂಕ್ಷ್ಮದರ್ಶಿಗಳಾದವರಿಗೆ. 'ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚಿನವು' (೧-೩-೧೦) ಎಂದು ಮುಂತಾಗಿ (ಹೇಳಿರುವ) ರೀತಿಯಿಂದ ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವ (ವಸ್ತುಗಳನ್ನು) ನೋಡಿ ಅತ್ಯಂತಸೂಕ್ಷ್ಮವಾಗಿರುವ ವಸ್ತುವನ್ನು[2] ಕಂಡುಕೊಳ್ಳುವ ಸ್ವಭಾವವುಳ್ಳವರು ಸೂಕ್ಷ್ಮದರ್ಶಿಗಳು ; ಅಂಥ ಸೂಕ್ಷ್ಮದರ್ಶಿಗಳಾದ ಪಂಡಿತರಿಗೆ ಎಂದರ್ಥ.

## ಅಧ್ಯಾತ್ಮಯೋಗ

ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾನ ಆತ್ಮನಿ ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ ತದ್ಯಚ್ಛೇಚ್ಛಾನ್ತ ಆತ್ಮನಿ ॥೧೩॥

೧೩. ಪ್ರಾಜ್ಞನು ವಾಕ್ಕನ್ನು ಮನಸ್ಸಿನಲ್ಲಿ ಹಿಡಿಟಡಬೇಕು, ಅದನ್ನು ಜ್ಞಾನ

1. ನಿದಿಧ್ಯಾಸನದ ಅಭ್ಯಾಸಾತಿಶಯದಿಂದ ಏಕಾಗ್ರವಾದ ಅಂತಃಕರಣದ ಸಹಾಯದಿಂದ ಮಹಾವಾಕ್ಯದಿಂದುಂಟಾಗುವ ಬುದ್ಧಿವೃತ್ತಿಯಲ್ಲಿ ಅಭಿವ್ಯಕ್ತನಾಗುತ್ತಾನೆ ಎಂದು (ಆ ॥ ಗೋ ॥) ವ್ಯಾಖ್ಯಾನಗಳು. ಇಲ್ಲಿ ನಿದಿಧ್ಯಾಸನವು ಏಕಾಗ್ರತೆಗೆ ಮಾತ್ರ ಕಾರಣವೆಂದು ಇಟ್ಟುಕೊಂಡಿರುವದಕ್ಕೆ ಭಾಷ್ಯಾಧಾರವೇನೋ ತಿಳಿಯದು.

2. ಸೂಕ್ಷ್ಮನಾದ ಆತ್ಮನನ್ನು ಸೂಕ್ಷ್ಮವಾದ ಮನೋವೃತ್ತಿಯಿಂದಲೇ ಕಂಡುಕೊಳ್ಳಬೇಕೆಂದು ಭಾವ. ಗೀ. ಭಾ. ೧೮-೫೦. 'ಕಥಂ ತರ್ಹ್ಯಾತ್ಮನೋ ಜ್ಞಾನಮ್' ಎಂಬ ಭಾಷ್ಯಭಾಗವನ್ನು ನೋಡಿ.

ವೆಂಬ ಆತ್ಮನಲ್ಲಿ ಹಿಡಿದಿಡಬೇಕು. ಜ್ಞಾನವನ್ನು ಮಹಾನ್ ಎಂಬ ಆತ್ಮನಲ್ಲಿ ಹಿಡಿದಿಡಬೇಕು, ಅದನ್ನು ಶಾಂತನಾದ ಆತ್ಮನಲ್ಲಿ ಹಿಡಿದಿಡಬೇಕು.

(ಭಾಷ್ಯ)

೧೦೩. ತತ್ಪ್ರತಿಪತ್ತ್ಯುಪಾಯಮಾಹ- ಯಚ್ಛೇತ್, ನಿಯಚ್ಛೇತ್, ಉಪಸಂಹರೇತ್ ಪ್ರಾಜ್ಞಃ ವಿವೇಕೀ । ಕಿಮ್ ? ವಾಕ್ ವಾಚಮ್ । ವಾಗತ್ರ ಉಪಲಕ್ಷಣಾರ್ಥಾ ಸರ್ವೇಷಾಮಿನ್ದ್ರಿಯಾಣಾಮ್ । ಕ್ವ ? ಮನಸೀ ಮನಸಿ । ಛಾನ್ದಸಂ ದೈರ್ಘ್ಯಮ್ । ತಚ್ಚ ಮನಃ ಯಚ್ಛೇತ್ ಜ್ಞಾನೇ ಪ್ರಕಾಶಸ್ವರೂಪೇ ಬುದ್ಧಾವಾತ್ಮನಿ । ಬುದ್ಧಿರ್ಹಿ ಮನಆದಿಕರಣಾನ್ಯಾಪ್ನೋತೀತ್ಯಾತ್ಮಾ ಪ್ರತ್ಯಕ್ ತೇಷಾಮ್ । ಜ್ಞಾನಂ ಬುದ್ಧಿಮ್ ಆತ್ಮನಿ ಮಹತಿ ಪ್ರಥಮಜೇ ನಿಯಚ್ಛೇತ್ । ಪ್ರಥಮಜವತ್ ಸ್ವಚ್ಛಸ್ವಭಾವಕಮ್ ಆತ್ಮನೋ ವಿಜ್ಞಾನಮಾಪಾದಯೇತ್ ಇತ್ಯರ್ಥಃ । ತಂ ಚ ಮಹಾನ್ತಮಾತ್ಮಾನಂ ಯಚ್ಛೇತ್ ಶಾನ್ತೇ ಸರ್ವವಿಶೇಷಪ್ರತ್ಯಸ್ತಮಿತಸ್ವರೂಪೇ, ಅವಿಕ್ರಿಯೇ, ಸರ್ವಾನ್ತರೇ, ಸರ್ವಬುದ್ಧಿಪ್ರತ್ಯಯಸಾಕ್ಷಿಣಿ ಮುಖ್ಯೇ ಆತ್ಮನಿ ॥

(ಭಾಷ್ಯಾರ್ಥ)

ಅದನ್ನು ಅರಿಯುವದಕ್ಕೆ ಸಾಧನವನ್ನು ಹೇಳುತ್ತಾನೆ : ಪ್ರಾಜ್ಞನು ಎಂದರೆ ವಿವೇಕಿಯು ಹಿಡಿದಿಡಬೇಕು, ಹಿಡಿದು ನಿಲ್ಲಿಸಬೇಕು, ಉಪಸಂಹಾರ ಮಾಡಿಕೊಳ್ಳಬೇಕು.[1] [illegible] ? ವಾಕ್ (ಎಂಬ ಮೂಲವನ್ನು) ವಾಚಮ್ (ಎಂದು ಮಾರ್ಪಡಿಸಿಕೊಳ್ಳಬೇಕು). ಮಾತನ್ನು ; ಇಲ್ಲಿ ವಾಕ್ ಎಂಬುದನ್ನು ಎಲ್ಲ ಇಂದ್ರಿಯಗಳಿಗೂ ಉಪಲಕ್ಷಣವಾಗಿ (ಉಪಯೋಗಿಸಿದೆ).[2] ಎಲ್ಲಿ (ಉಪಸಂಹಾರಮಾಡಿಕೊಳ್ಳಬೇಕು)? ಮನಸ್ಸಿನಲ್ಲಿ 'ಮನಸೀ' ಎಂಬ ದೀರ್ಘವು ವೈದಿಕಪ್ರಯೋಗವು. ಆ ಮನಸ್ಸನ್ನು ಜ್ಞಾನವೆಂಬ ಆತ್ಮನಲ್ಲಿ ಎಂದರೆ ಪ್ರಕಾಶಸ್ವರೂಪನಾದ ಆತ್ಮನಲ್ಲಿ (ಉಪಸಂಹಾರಮಾಡಿಕೊಳ್ಳಬೇಕು ಎಂದರ್ಥ.) ಏಕೆಂದರೆ ಬುದ್ಧಿಯು ಮನಸ್ಸೇ ಮುಂತಾದ ಕರಣಗಳನ್ನು ವ್ಯಾಪಿಸಿಕೊಂಡಿರುವದರಿಂದ[3] ಅದು ಅವುಗಳಿಗೆ ಒಳಗಿನ ಆತ್ಮವು.[4] ಜ್ಞಾನವನ್ನು ಎಂದರೆ (ಈ) ಬುದ್ಧಿಯನ್ನು ಮಹಾನ್ ಎಂಬ ಆತ್ಮನಲ್ಲಿ

1. ಲಯಮಾಡಿಕೊಳ್ಳಬೇಕು ಎಂದರ್ಥ. ಸ್ಥೂಲವಾದದ್ದನ್ನು ಸೂಕ್ಷ್ಮವಾದ ತತ್ತ್ವದಲ್ಲಿ ಲಯಮಾಡುತ್ತಾ ಹೋದರೆ ಕೊನೆಗೆ ಅತ್ಯಂತಸೂಕ್ಷ್ಮವಾದ ಪ್ರತ್ಯಗಾತ್ಮನ ಅರಿವು ಆಗುತ್ತದೆ.

2. ಆದ್ದರಿಂದ ಇಂದ್ರಿಯಗಳೆಲ್ಲವನ್ನೂ ಮನಸ್ಸಿನಲ್ಲಿ ಲಯಮಾಡಿಕೊಳ್ಳಬೇಕು ಎಂದು ಅರ್ಥ. 3. 'ಆಪ್ನೋತೀತಿ ಆತ್ಮಾ' ಎಂದು ಆತ್ಮಶಬ್ದಕ್ಕೆ ವ್ಯುತ್ಪತ್ತಿಯನ್ನು ಮಾಡಿರುತ್ತದೆ. ಇಂದ್ರಿಯಾದಿಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವವು, ವ್ಯಾಪಕವಾಗಿರುವವು, ಒಳಗಿನ ಆತ್ಮನಾಗಿರುವವು. ಎಂದು ೧-೩-೧೦, ೧೧ರಲ್ಲಿ ಹೇಳಿದೆ. 4. 'ಪ್ರತ್ಯಕ್ಚ' ಎಂಬ (ಪಾ ॥) ಪಾಠದಲ್ಲಿ ಆತ್ಮನೂ ಒಳಗಿರುವವನೂ ಆಗಿದೆ ಎಂದು ಕನ್ನಡಿಸಬೇಕು. ಆಗ 'ಆತ್ಮಾ' ಎಂಬುದಕ್ಕೆ ವ್ಯಾಪಕವೆಂದು ಮಾತ್ರ ಅರ್ಥ.

ಮೊದಲು ಹುಟ್ಟಿದ (ಹಿರಣ್ಯಗರ್ಭಬುದ್ಧಿಯಲ್ಲಿ)[1] ಹಿಡಿದು ನಿಲ್ಲಿಸಬೇಕು ; ಎಂದರೆ ಮೊದಲು ಹುಟ್ಟಿದ (ಹಿರಣ್ಯಗರ್ಭನ ಬುದ್ಧಿಯಂತೆ) ತನ್ನ ಬುದ್ಧಿಯನ್ನು ಸ್ವಚ್ಛವಾಗಿ[2] ಮಾಡಿಕೊಳ್ಳಬೇಕು ಎಂದರ್ಥ. ಆ ಮಹಾನ್ ಎಂಬ ಆತ್ಮನನ್ನು ಶಾಂತನಾದ ಎಂದರೆ ಎಲ್ಲಾ ವಿಶೇಷಗಳೂ ಅಡಗಿರುವ ಸ್ವರೂಪವುಳ್ಳ,[3] ಮಾರ್ಪಾಡಿಲ್ಲದ ಎಲ್ಲದಕ್ಕೂ ಒಳಗಿನ, ಎಲ್ಲಾ ಬುದ್ಧಿಪ್ರತ್ಯಯಗಳಿಗೂ ಸಾಕ್ಷಿಯಾಗಿರುವ ಮುಖ್ಯನಾದ ಆತ್ಮನಲ್ಲಿ ಹಿಡಿದಿಡಬೇಕು.

(ಭಾಷ್ಯ)

೧೦೪. ಏವಂ ಪುರುಷೇ ಆತ್ಮನಿ ಸರ್ವಂ ಪ್ರವಿಲಾಪ್ಯ ನಾಮರೂಪಕರ್ಮತ್ರಯಂ ಯನ್ಮಿಥ್ಯಾಜ್ಞಾನವಿಜೃಮ್ಭಿತಂ ಕ್ರಿಯಾಕಾರಕಫಲಲಕ್ಷಣಂ ಸ್ವಾತ್ಮಯಾಥಾತ್ಮ್ಯಜ್ಞಾನೇನ ಮರೀಚ್ಯುದಕರಜ್ಜುಸರ್ಪಗಗನಮಲಾನೀವ ಮರೀಚಿರಜ್ಜುಗಗನಸ್ವರೂಪದರ್ಶನೇನೇವ ಸ್ವಸ್ಥಃ ಪ್ರಶಾನ್ತಾತ್ಮಾ ಕೃತಕೃತ್ಯೋ ಭವತಿ ಯತಃ, ಅತಃ -

(ಭಾಷ್ಯಾರ್ಥ)

ಹೀಗೆ ಮಿಥ್ಯಾಜ್ಞಾನದಿಂದ ಹಬ್ಬಿರುವ ಕ್ರಿಯೆ, ಕಾರಕ, ಫಲ - ಇವುಗಳ ರೂಪವಾದ ನಾಮರೂಪಕರ್ಮಗಳೆಂಬ ಮೂರಾಗಿರುವದೆಲ್ಲವನ್ನೂ-[4] ಬಿಸಿಲು ಕುದುರೆಯ ನೀರು, ಹಗ್ಗದ ಹಾವು, ಆಕಾಶದ ಕಶ್ಮಲ- ಇವುಗಳನ್ನು ಬಿಸಿಲು, ಹಗ್ಗ, ಆಕಾಶ - ಇವುಗಳ ಸ್ವರೂಪವನ್ನು ಕಂಡುಕೊಳ್ಳುವ (ಮಾತ್ರ)ದಿಂದಲೇ (ಲಯ ಮಾಡುವಂತೆ)-[5] ತನ್ನ ಆತ್ಮನ ನಿಜವನ್ನು ಅರಿತುಕೊಳ್ಳುವದರಿಂದ(ಲೇ) ಪುರುಷ

1. ಭೋಕ್ತೃವಿನಲ್ಲಿ ಎಂದೂ ಸೂ. ಭಾ. ೧-೪-೧ ರಲ್ಲಿ ಅರ್ಥವನ್ನು ಮಾಡಿದೆ. ಹಿರಣ್ಯಗರ್ಭನು ಮೊದಲು ಹುಟ್ಟಿದನೆಂಬುದಕ್ಕೆ 'ಮಹದ್ಯಕ್ಷಂ ಪ್ರಥಮಜಮ್' ಎಂಬ ಬೃ. ೫-೪-೧ ನ್ನು ಇಲ್ಲಿ ಪ್ರಮಾಣವಾಗಿ ಸೂಚಿಸಿದೆ.

2. ಹಿರಣ್ಯಗರ್ಭನ ಬುದ್ಧಿಯು ಶುದ್ಧಸಾತ್ತ್ವಿಕವಾಗಿರುತ್ತದೆ. ಸಾಮಾನ್ಯರ ಬುದ್ಧಿಯಲ್ಲಿ ರಜಸ್ತಮೋಗುಣಗಳ ಸಂಪರ್ಕವೂ ಇರುತ್ತದೆ.

3. ಯಾವ ವಿಶೇಷವೂ ಇಲ್ಲದ, ನಿರ್ಗುಣವಾದ ಮಹತ್ತತ್ತ್ವವನ್ನು ಅವ್ಯಕ್ತದಲ್ಲಿ ಲಯಮಾಡಿದ ಬಳಿಕ ಶುದ್ಧಾತ್ಮನಲ್ಲಿ ಲಯಮಾಡಬೇಕು ಎಂದು ಇಲ್ಲಿ ಅರ್ಥಮಾಡಿಕೊಳ್ಳಬೇಕು.

4. ಬೃ. ೧-೬-೩ ರಲ್ಲಿ ಹೇಳಿರುವಂ ಗತ್ತೆಲ್ಲವೂ ಈ ಮೂರರಲ್ಲಿ ಅಡಕ. ವ್ಯಾಕೃತಪ್ರಪಂಚದಲ್ಲಿ ಇವೇ ಕ್ರಿಯಾಕಾರಕಫಲರೂಪವಾಗಿ ಕಾಣಿಸಿಕೊಳ್ಳುವವು.

5. ತೋರಿಕೆಗಳನ್ನು ಲಯಮಾಡುವದಕ್ಕೆ ಅಧಿಷ್ಠಾನದ ಜ್ಞಾನವಲ್ಲದೆ ಮತ್ತೇನೂ ಬೇಕಿಲ್ಲವೆಂಬುದಕ್ಕೆ ಈ ದೃಷ್ಟಾಂತವನ್ನು ಕೊಟ್ಟಿದೆ.

ನೆಂಬ ಆತ್ಮನಲ್ಲಿ ಲಯಮಾಡಿಕೊಂಡು[1] ತನ್ನಲ್ಲಿ ತಾನು ನಿಂತು[2] ಅಂತಃಕರಣದಲ್ಲಿ ಹೆಚ್ಚಿನ ಶಾಂತಿಯನ್ನು ಹೊಂದಿ ಕೃತಕೃತ್ಯನಾಗುತ್ತಾನಲ್ಲವೆ ? ಆದಕಾರಣ-

ಉತ್ತಿಷ್ಠತ ಜಾಗ್ರತ
ಪ್ರಾಪ್ಯ ವರಾನ್ ನಿಬೋಧತ ।
ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ
ದುರ್ಗಂ ಪಥಸ್ತತ್ ಕವಯೋ ವದನ್ತಿ ॥ ೧೪ ॥

೧೪. ಏಳಿರಿ, ಎಚ್ಚರವಾಗಿರಿ, ಶ್ರೇಷ್ಠರನ್ನು ಸೇರಿ ತಿಳಿದುಕೊಳ್ಳಿರಿ. ಆ ಹಾದಿಯು ಕ್ಷೌರದ ಕತ್ತಿಯ ಸಾಣೆಹಿಡಿದ ಅಲುಗಿನಂತೆ ದಾಟಲಶಕ್ಯವಾದದ್ದು, ದುರ್ಗಮವಾದದ್ದು - ಎಂದು ಕವಿಗಳು ಹೇಳುತ್ತಾರೆ.

(ಭಾಷ್ಯ)

೧೦೫. ತದ್ದರ್ಶನಾರ್ಥಮ್, ಅನಾದ್ಯವಿದ್ಯಾಪ್ರಸುಪ್ತಾಃ ಉತ್ತಿಷ್ಠತ, ಹೇ ಜನ್ತವಃ ಆತ್ಮಜ್ಞಾನಾಭಿಮುಖಾ ಭವತ । ಜಾಗ್ರತ ಅಜ್ಞಾನನಿದ್ರಾಯಾಃ ಘೋರರೂಪಾಯಾಃ ಸರ್ವಾನರ್ಥಬೀಜಭೂತಾಯಾಃ ಕ್ಷಯಂ ಕುರುತ । ಕಥಮ್ ? ಪ್ರಾಪ್ಯ ಉಪಗಮ್ಯ ವರಾನ್ ಪ್ರಕೃಷ್ಟಾನಾಚಾರ್ಯಾನ್, ತತ್ತ್ವವಿದಃ ತದುಪದಿಷ್ಟಂ ಸರ್ವಾನ್ತರಮಾತ್ಮಾನಮ್ "ಅಹಮಸ್ಮಿ" ಇತಿ ನಿಬೋಧತ ಅವಗಚ್ಛತ । ನ ಹಿ ಉಪೇಕ್ಷಿತವ್ಯಮ್ - ಇತಿ ಶ್ರುತಿಃ ಅನುಕಮ್ಪಯಾ ಆಹ ಮಾತೃವತ್ । ಅತಿಸೂಕ್ಷ್ಮಬುದ್ಧಿವಿಷಯತ್ವಾಜ್ಜ್ಞೇಯಸ್ಯ । ಕಿಮಿವ ಸೂಕ್ಷ್ಮಬುದ್ಧಿರಿತಿ ? ಉಚ್ಯತೇ । ಕ್ಷುರಸ್ಯ ಧಾರಾ ಅಗ್ರಂ ನಿಶಿತಾ ತೀಕ್ಷ್ಣೀಕೃತಾ ದುರತ್ಯಯಾ ದುಃಖೇನ ಅತ್ಯಯೋ ಯಸ್ಯಾಃ ಸಾ ದುರತ್ಯಯಾ । ಯಥಾ ಸಾ ಪದ್ಭ್ಯಾಂ ದುರ್ಗಮನೀಯಾ ತಥಾ ದುರ್ಗಂ ದುಸ್ಸಮ್ಪಾದ್ಯಮ್ ಇತ್ಯೇತತ್ । ಪಥಃ ಪನ್ಥಾನಂ ತತ್ ತಂ ಜ್ಞಾನಲಕ್ಷಣಂ ಮಾರ್ಗಂ ಕವಯಃ ಮೇಧಾವಿನಃ ವದನ್ತಿ । ಜ್ಞೇಯಸ್ಯ ಅತಿಸೂಕ್ಷ್ಮತ್ವಾತ್ ತದ್ವಿಷಯಸ್ಯ ಜ್ಞಾನಮಾರ್ಗಸ್ಯ ದುಸ್ಸಂಪಾದ್ಯತ್ವಂ ವದನ್ತಿ ಇತ್ಯಭಿಪ್ರಾಯಃ ॥

1. ಪ್ರಪಂಚಲಯವೆಂಬುದು ಒಂದು ಬಗೆಯ ಧ್ಯಾನವಿಶೇಷದಿಂದ ಮಾಡುವ ಕಾರ್ಯವೆಂದು ಕೆಲವರು ಭಾವಿಸಿದ್ದಾರು. ಇದು ತಪ್ಪೆಂದೂ ಜ್ಞಾನದಿಂದಲೇ ಅವಿದ್ಯಾಕೃತ ಪ್ರಪಂಚದ ಲಯವಾಗುವದೆಂದೂ ಸೂ. ಭಾ. ೩-೨-೨೧ರಲ್ಲಿ ತೋರಿಸಿರುತ್ತದೆ.

2. ರೋಗವನ್ನು ಕಳೆದುಕೊಂಡ ಪುರುಷನು ಸ್ವಸ್ಥನಾಗುವಂತೆ ಪ್ರಪಂಚಲಯ ವಾಗುತ್ತಲೂ ಆತ್ಮಸ್ವರೂಪದಲ್ಲಿ ನಿಲ್ಲುತ್ತಾನೆ. ಮಾಂ. ಭಾ. ಅವತರಣಿಕೆಯಲ್ಲಿ ಪ್ರಯೋಜನ ಭಾಷ್ಯವನ್ನು ನೋಡಿ.

(ಭಾಷ್ಯಾರ್ಥ)

''ಎಲೈ, **ಅನಾದಿಯಾದ ಅವಿದ್ಯೆಯಿಂದ** ನಿದ್ರೆಮಾಡುತ್ತಿರುವ[1] ಜೀವರುಗಳಿರ, ಆತನನ್ನು ಕಂಡುಕೊಳ್ಳುವದಕ್ಕಾಗಿ ಏಳಿರಿ, ಆತ್ಮಜ್ಞಾನದ ಕಡೆಗೆ ತಿರುಗಿರಿ[2]. ಎಚ್ಚರಗೊಳ್ಳಿರಿ. **ಎಲ್ಲಾ ಅನರ್ಥಗಳಿಗೂ ಬೀಜವಾಗಿರುವ[3] ಭಯಂಕರವಾದ ಅಜ್ಞಾನನಿದ್ರೆಯನ್ನು ನಾಶಮಾಡಿಕೊಳ್ಳಿರಿ.** ಹೇಗೆ? (ಎಂದರೆ) ಶ್ರೇಷ್ಠರನ್ನು ಎಂದರೆ ತತ್ತ್ವವನ್ನು ಬಲ್ಲ ಉತ್ತಮರಾದ **ಆಚಾರ್ಯರನ್ನು** ಸೇರಿ ಬಳಿಸಂದು ಅವರು ಉಪದೇಶಮಾಡುವ ಸರ್ವಾಂತರನಾದ ಆತ್ಮನು '(ಆತನೇ) ನಾನಾಗಿರುವೆನು' ಎಂದು ತಿಳಿದುಕೊಳ್ಳಿರಿ, ನಿಶ್ಚಯಿಸಿಕೊಳ್ಳಿರಿ, ಉಪೇಕ್ಷೆಮಾಡಲೇಬಾರದು'' ಎಂದು ಶ್ರುತಿಯು ತಾಯಿಯಂತೆ ಮರುಕದಿಂದ ತಿಳಿಸುತ್ತಿರುವದು. ಏಕೆಂದರೆ ತಿಳಿಯಬೇಕಾಗಿರುವ (ಆತ್ಮನು) ಬಲುಸೂಕ್ಷ್ಮವಾದ ಬುದ್ಧಿಗೆ ಮಾತ್ರ ಗೋಚರನಾಗುತ್ತಾನೆ.

ಬುದ್ಧಿಯು ಏತರಂತೆ ಸೂಕ್ಷ್ಮವಾ(ಗಿರಬೇಕು)[4] ? ಎಂದರೆ ಹೇಳುತ್ತಾನೆ. ಕ್ಷೌರದ ಕತ್ತಿಯ ಅಲಗು ಎಂದರೆ ಮೊನೆಯು ಸಾಣೆಹಿಡಿದು ಹರಿತಮಾಡಿದ್ದು ; ಅದನ್ನು ದಾಟುವದು ಬಲುಕಷ್ಟವಾಗಿರುತ್ತದೆ. ಅದರಮೇಲೆ ಕಾಲುಗಳಿಂದ ನಡೆಯುವದು ಹೇಗೆ ಕಷ್ಟವಾಗಿರುವದೋ ಹಾಗೆ ದುರ್ಗಮವಾಗಿರುವದು ಎಂದರೆ ಆ ಹಾದಿಯನ್ನು (ಪಥಃ-ಪನ್ಥಾನಮ್) ಆ ಜ್ಞಾನವೆಂಬ ಮಾರ್ಗವನ್ನು (ದುರ್ಗಮವಾದದ್ದೆಂದು) ಸಂಪಾದಿಸಿಕೊಳ್ಳುವದು ಕಷ್ಟವೆಂದು ಕವಿಗಳು ಬಲ್ಲವರು ಹೇಳುತ್ತಾರೆ. ಜ್ಞೇಯನಾದ (ಆತ್ಮನು) ಬಲುಸೂಕ್ಷ್ಮನಾಗಿರುವದರಿಂದ ಅವನ ವಿಷಯವಾದ ಜ್ಞಾನಮಾರ್ಗವು ಸಂಪಾದಿಸುವದಕ್ಕೆ ಬಲುಕಷ್ಟವಾಗಿರುವದೆಂದು ಹೇಳುವರು-ಎಂದು ಅಭಿಪ್ರಾಯ.

೧೦೯. **ತತ್ ಕಥಮ್ ಅತಿಸೂಕ್ಷ್ಮತ್ವಂ ಜ್ಞೇಯಸ್ಯೇತಿ ? ಉಚ್ಯತೇ । ಸ್ಥೂಲಾ ತಾವದಿಯಂ ಮೇದಿನೀ ಶಬ್ದಸ್ಪರ್ಶರೂಪರಸಗನ್ಧೋಪಚಿತಾ ಸರ್ವೇನ್ದ್ರಿಯವಿಷಯಭೂತಾ । ತಥಾ ಶರೀರಮ್ । ತತ್ರ ಏಕೈಕಗುಣಾಪಕರ್ಷೇಣ ಗನ್ಧಾದೀನಾಂ ಸೂಕ್ಷ್ಮತ್ವಮಹತ್ತ್ವವಿಶುದ್ಧತ್ವನಿತ್ಯತ್ವಾದಿತಾರತಮ್ಯಂ ದೃಷ್ಟಮಬಾದಿಷು ಯಾವದಾಕಾಶಮ್**

1. ಮಾಂ. ಕಾ. ೧-೧೬
2. ಜ್ಞಾನಸಾಧನವನ್ನು ಕೈಕೊಳ್ಳಿರಿ.
3. ತಪ್ಪುತಿಳಿವಳಿಕೆಯಿಂದಾಗುವ ಕರ್ಮಾಕರ್ಮಫಲರೂಪವಾದ ಸಂಸಾರಕ್ಕೆ ಕಾರಣವಾಗಿರುವ.
4. ''ಸೂಕ್ಷ್ಮಬುದ್ಧಿ'' ಎಂಬುದಕ್ಕೆ ಬದಲು ''ಸೂಕ್ಷ್ಮಾ ಬುದ್ಧಿ'' ಎಂದಿದ್ದರೆ ಚೆನ್ನಾಗಿರುತ್ತಿತ್ತು.

ಇತಿ, ತೇ ಗನ್ಧಾದಯಃ ಸ್ಥೂಲತ್ವಾದಿಕಾರಣಾಃ[1] ಶಬ್ದಾನ್ತಾಃ ಯತ್ರ ನ ಸನ್ತಿ ಕಿಮು ತಸ್ಯ ಸೂಕ್ಷ್ಮತ್ವಾದಿನಿರತಿಶಯತ್ವಂ ವಕ್ತವ್ಯಮ್ ಇತ್ಯೇತದ್ ದರ್ಶಯತಿ ಶ್ರುತಿಃ -

(ಭಾಷ್ಯಾರ್ಥ)

ಹಾಗಾದರೆ ಜ್ಞೇಯವು ಬಲುಸೂಕ್ಷ್ಮವಾಗಿರುವದೆಂಬುದು ಹೇಗೆ ? ಎಂದರೆ ಹೇಳುತ್ತಾನೆ. ಈ ಪೃಥ್ವಿಯು ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಇವುಗಳ (ಸೇರುವೆಯಿಂದ) ದಪ್ಪನಾಗಿ ಎಲ್ಲಾ ಇಂದ್ರಿಯಗಳಿಗೂ ವಿಷಯವಾಗಿರುವದರಿಂದ ಸ್ಥೂಲವಾಗಿರುವವಷ್ಟೆ ; ಶರೀರವೂ ಹಾಗೆಯೇ (ಇರುವದಷ್ಟೆ)[2] ; ಹೀಗಿರುವದರಿಂದ ಗಂಧ ಮುಂತಾದವುಗಳಲ್ಲಿ ಒಂದೊಂದು ಗುಣವು ಕಡಿಮೆಯಾದ ಹಾಗೆಲ್ಲ ಅಪ್ಪು ಮೊದಲಾಗಿ ಆಕಾಶದವರೆಗೂ (ಇರುವ ವಸ್ತುಗಳು) ಒಂದಕ್ಕಿಂತ ಒಂದು ಹೆಚ್ಚು ಸೂಕ್ಷ್ಮವಾಗಿಯೂ ಹೆಚ್ಚು ವ್ಯಾಪಕವಾಗಿಯೂ ಹೆಚ್ಚು ಶುದ್ಧವಾಗಿಯೂ ಹೆಚ್ಚು ನಿತ್ಯವಾಗಿಯೂ (ಇವೇ) ಮುಂತಾದವುಗಳಲ್ಲಿ ತಾರತಮ್ಯ(ವುಳ್ಳವಾಗಿರುವದು) ಕಂಡುಬಂದಿರುತ್ತದೆ[3]. ಆದ್ದರಿಂದ ಸ್ಥೂಲತ್ವವೇ ಮುಂತಾದವುಗಳಿಗೆ ಕಾರಣವಾದ[4] ಆ ಗಂಧವು ಮೊದಲಾಗಿ ಶಬ್ದವವರೆಗಿನ (ಗುಣಗಳು ಒಂದೂ) ಯಾವ (ಆತ್ಮವಸ್ತುವಿ)ನಲ್ಲಿಲ್ಲವೋ ಅದು ಸೂಕ್ಷ್ಮತ್ವವೇ ಮುಂತಾದವುಗಳಲ್ಲಿ[5] ಮಿಗಿಲಿಲ್ಲದಿರುವದು ಎಂದು ಹೇಳುವದೇನಿದೆ ?- ಎಂಬುದನ್ನು (ಈ ಮುಂದಿನ) ಶ್ರುತಿಯು ತಿಳಿಸುತ್ತದೆ :-

ಅಶಬ್ದಮಸ್ಪರ್ಶಮರೂಪಮವ್ಯಯಂ
ತಥಾಽರಸಂ ನಿತ್ಯಮಗನ್ಧವಚ್ಚ ಯತ್ ।
ಅನಾದ್ಯನನ್ತಂ ಮಹತಃ ಪರಂ ಧ್ರುವಂ
ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ॥ ೧೫ ॥

೧೫. ಯಾವದು ಶಬ್ದವಿಲ್ಲದ, ಸ್ಪರ್ಶವಿಲ್ಲದ, ರೂಪವಿಲ್ಲದ, ಅವ್ಯಯವಾದ ಹಾಗೂ ರಸವಿಲ್ಲದ ನಿತ್ಯವಾದ ಮತ್ತು ಗಂಧವಿಲ್ಲದ ಅನಾದಿಯಾಗಿ ಅನಂತ

1. (ಗೋ ॥) ವ್ಯಾಖ್ಯಾನದ ಪಾಠ.

2. ಶರೀರವು ಅತ್ಯಂತಸ್ಥೂಲವಾಗಿದೆ, ಇಂದ್ರಿಯ, ಮನಸ್ಸು, ಬುದ್ಧಿ, ಅವ್ಯಕ್ತ - ಇವುಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿವೆ.

3. ಇದಕ್ಕೆ ಗುಣಗಳು ಬರುಬರುತ್ತಾ ಕಡಿಮೆಯಾಗುತ್ತಾ ಬಂದಿರುವದೇ ಕಾರಣ.

4. ''ಸ್ಥೂಲತ್ವಾದ್ ವಿಕಾರಾಃ'' ಎಂದೇ ಪ್ರಕಟಿತಪುಸ್ತಕದಲ್ಲಿದೆಯಾದರೂ (ಗೋ) ವ್ಯಾಖ್ಯಾನವನ್ನನುಸರಿಸಿ 'ಸ್ಥೂಲತ್ವಾದಿಕಾರಣಾಃ' ಎಂಬ ಪಾಠವನ್ನು ಇಟ್ಟುಕೊಂಡಿದ್ದೇವೆ. ಸ್ಥೂಲತ್ವ, ಅಲ್ಪತ್ವ, ಅಶುದ್ಧತ್ವ, ಅನಿತ್ಯತ್ವ- ಇವುಗಳು ಹೆಚ್ಚುವದಕ್ಕೆ ಗುಣಗಳೇ ಕಾರಣವೆಂದು ಭಾವ.

5. ಮುಂತಾದವುಗಳೆಂದರೆ ವ್ಯಾಪಕತ್ವ, ಶುದ್ಧತ್ವ, ನಿತ್ಯತ್ವ

ವಾಗಿರುವ ಮಹತ್ತಿಗಿಂತ ಪರವಾದ ಧ್ರುವವಾದ, (ವಸ್ತುವೋ) ಅದನ್ನು ಅರಿತು ಕೊಂಡರೆ ಮೃತ್ಯುಮುಖದಿಂದ ಬಿಡುಗಡೆಯಾಗುವದು.

(ಭಾಷ್ಯ)

೧೦೭. ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾಽರಸಂ ನಿತ್ಯಮಗನ್ಧವಚ್ಚ ಯತ್ ಏತದ್ವ್ಯಾಖ್ಯಾತಂ ಬ್ರಹ್ಮ । ಅವ್ಯಯಮ್ । ಯದ್ಧಿ ಶಬ್ದಾದಿಮತ್ ತದ್ ವ್ಯೇತಿ । ಇದಂ ತು ಅಶಬ್ದಾದಿಮತ್ವಾತ್ ಅವ್ಯಯಂ ನ ವ್ಯೇತಿ ನ ಕ್ಷೀಯತೇ । ಅತ ಏವ ಚ ನಿತ್ಯಮ್ । ಯದ್ಧಿ ವ್ಯೇತಿ ತದನಿತ್ಯಮ್ । ಇದಂ ತು ನ ವ್ಯೇತಿ । ಅತೋ ನಿತ್ಯಮ್ ಇತಶ್ಚ ನಿತ್ಯಮ್ । ಅನಾದಿ ಅವಿದ್ಯಮಾನಃ ಆದಿಃ ಕಾರಣಮ್ ಅಸ್ಯ ತದಿದಮ್ ಅನಾದಿ । ಯದ್ ಹಿ ಆದಿಮತ್ ತತ್ ಕಾರ್ಯತ್ವಾತ್ ಅನಿತ್ಯಮ್ ಕಾರಣೇ ಪ್ರಲೀಯತೇ ಯಥಾ ಪೃಥಿವ್ಯಾದಿ । ಇದಂ ತು ಸರ್ವಕಾರಣತ್ವಾತ್ ಅಕಾರ್ಯಮ್, ಅಕಾರ್ಯತ್ವಾನ್ನಿತ್ಯಮ್ । ನ ತಸ್ಯ ಕಾರಣಮ್ ಅಸ್ತಿ ಯಸ್ಮಿನ್ ಪ್ರಲೀಯತೇ । ತಥಾ ಅನನ್ತಮ್ ಅವಿದ್ಯಮಾನಃ ಅನ್ತಃ ಕಾರ್ಯಮ್ ಅಸ್ಯ ತದಿದಮನನ್ತಮ್ । ಯಥಾ ಕದಲ್ಯಾದೇಃ ಫಲಾದಿಕಾರ್ಯೋತ್ಪಾದನೇನಾಪಿ ಅನಿತ್ಯತ್ವಂ ದೃಷ್ಟಮ್ । ನ ಚ ತಥಾಪ್ಯನ್ತವತ್ತ್ವಂ ಬ್ರಹ್ಮಣಃ । ಅತೋಽಪಿ ನಿತ್ಯಮ್ । ಮಹತಃ ಮಹತ್ತತ್ತ್ವಾತ್ ಬುದ್ಧ್ಯಾಖ್ಯಾತ್ ಪರಂ ವಿಲಕ್ಷಣಮ್ । ನಿತ್ಯವಿಜ್ಞಪ್ತಿಸ್ವರೂಪತ್ವಾತ್ । ಸರ್ವಸಾಕ್ಷಿ ಹಿ ಸರ್ವ ಭೂತಾತ್ಮತ್ವಾತ್ ಬ್ರಹ್ಮ । ಉಕ್ತಂ ಹಿ 'ಏಷ ಸರ್ವೇಷು ಭೂತೇಷು' (೧-೩-೧೨) ಇತ್ಯಾದಿ । ಧ್ರುವಂ ಚ ಕೂಟಸ್ಥಂ ನಿತ್ಯಮ್, ನ ಪೃಥಿವ್ಯಾದಿವದಾಪೇಕ್ಷಿಕಂ ನಿತ್ಯ(ತ್ವ)ಮ್। ತತ್ ಏವಂಭೂತಂ ಬ್ರಹ್ಮ ಆತ್ಮಾನಂ ನಿಚಾಯ್ಯ ಅವಗಮ್ಯ ತಮ್ ಆತ್ಮಾನಮ್ ಮೃತ್ಯುಮುಖಾತ್ ಮೃತ್ಯುಗೋಚರಾದ್ ಅವಿದ್ಯಾಕಾಮಕರ್ಮಲಕ್ಷಣಾತ್ ಪ್ರಮುಚ್ಯತೇ ವಿಯುಜ್ಯತೇ ॥

(ಭಾಷ್ಯಾರ್ಥ)

ಯಾವದು ಎಂದರೆ ಈ ಮೇಲೆ ವಿವರಿಸಿರುವ ಬ್ರಹ್ಮವು 'ಶಬ್ದವಿಲ್ಲದ್ದು, ಸ್ಪರ್ಶವಿಲ್ಲದ್ದು, ರೂಪವಿಲ್ಲದ್ದು, ಅವ್ಯಯವಾದದ್ದು ಹಾಗೂ ರಸವಿಲ್ಲದ್ದು, ನಿತ್ಯವಾದದ್ದು ಮತ್ತು ಗಂಧವಿಲ್ಲದ್ದು'. ಅವ್ಯಯವಾದದ್ದು (ಹೇಗೆಂದರೆ) ಯಾವದು ಶಬ್ದಾದಿಗಳುಳ್ಳದ್ದೋ ಅದು ವ್ಯಯವಾಗುತ್ತದೆ, ಸವೆಯುತ್ತದೆ. ಆದರೆ ಇದರಲ್ಲಿ ಶಬ್ದಾದಿಗಳು ಇಲ್ಲದಿರುವದರಿಂದ (ಇದು) ವ್ಯಯವಾಗುವದಿಲ್ಲ. ಸವೆಯುವದಿಲ್ಲ. ಆದ್ದರಿಂದಲೇ ನಿತ್ಯವೂ (ಆಗಿರುತ್ತದೆ). ಯಾವದು ವ್ಯಯವಾಗುತ್ತದೆಯೋ ಅದು ಅನಿತ್ಯವಾಗಿರುವದು ; ಆದರೆ ಇದು ವ್ಯಯವಾಗುವದಿಲ್ಲ, ಆದ್ದರಿಂದ ನಿತ್ಯವು. ಈ ಕಾರಣದಿಂದಲೂ (ಇದು) ನಿತ್ಯವು : ಏಕೆಂದರೆ (ಇದು) ಅನಾದಿ. ಆದಿ ಎಂದರೆ

ಕಾರಣವು ಇದಕ್ಕೆ ಇರುವದಿಲ್ಲವಾದ್ದರಿಂದ ಇದು ಅನಾದಿ. ಯಾವದು ಆದಿಯುಳ್ಳದ್ದೋ ಅದು ಕಾರ್ಯವಾಗಿರುವದರಿಂದ ಅನಿತ್ಯವಾಗಿದ್ದು ತನ್ನ ಕಾರಣದಲ್ಲಿ ಲಯವಾಗುತ್ತದೆ. ಉದಾಹರಣೆಗೆ ಪೃಥ್ವಿ ಮುಂತಾದದ್ದು[1] (ಕಾರ್ಯವಾಗಿರುವದರಿಂದ ತನ್ನ ಕಾರಣದಲ್ಲಿ ಲಯವಾಗುತ್ತದೆ). ಆದರೆ ಇದು ಎಲ್ಲಕ್ಕೂ ಕಾರಣವಾಗಿರುವದರಿಂದ[2] ಕಾರ್ಯವಲ್ಲ, ಕಾರ್ಯವಲ್ಲದ್ದರಿಂದ ನಿತ್ಯವಾಗಿರುತ್ತದೆ. ಇದಕ್ಕೆ ಕಾರಣವೇ ಇಲ್ಲದ್ದರಿಂದ (ಕಾರಣ)ದಲ್ಲಿ ಲಯವಾಗುತ್ತದೆಂಬುದೂ ಇಲ್ಲ. ಹಾಗೂ ಅನಂತವು. ಬಾಳೆ ಮುಂತಾದದ್ದು ಹಣ್ಣೇ ಮುಂತಾದ ಕಾರ್ಯವನ್ನುಂಟು ಮಾಡಿದಮೇಲೆ (ನಾಶವಾಗುವದರಿಂದ)ಲೂ ಅನಿತ್ಯವಾಗಿರುವದು ಕಂಡಿದೆಯಷ್ಟೆ. ಆದರೆ ಬ್ರಹ್ಮಕ್ಕೆ ಹಾಗೂ ಅಂತವಿಲ್ಲ[3] ; ಆದ್ದರಿಂದಲೂ (ಇದು) ನಿತ್ಯವಾಗಿದೆ. ಮಹತ್ತಿಗಿಂತ ಎಂದರೆ **ಬುದ್ಧಿ ಎಂಬ ಹೆಸರಿನ ಮಹತ್ತತ್ತ್ವಕ್ಕಿಂತ**[4] ಪರವಾಗಿರುತ್ತದೆ, ಎಂದರೆ ಬೇರೆಯ ಸ್ವರೂಪದ್ದು. ಏಕೆಂದರೆ ನಿತ್ಯವಾದ ಜ್ಞಾನದ ಸ್ವರೂಪವುಳ್ಳದ್ದಾಗಿರುತ್ತದೆ. ಬ್ರಹ್ಮವು ಎಲ್ಲಾ ಭೂತಗಳಿಗೂ ಆತ್ಮನಾಗಿರುವದರಿಂದ ಎಲ್ಲಕ್ಕೂ ಸಾಕ್ಷಿಯಾಗಿರುತ್ತದೆ.[5] 'ಈ ಆತ್ಮನು ಎಲ್ಲಾ ಭೂತಗಳಲ್ಲಿಯೂ, (ಅಡಗಿರುವನು)' (೧-೩-೧೨) ಎಂದು ಹಿಂದೆ ಹೇಳಿಯೇ ಇರುತ್ತದೆ. ಮತ್ತು (ಇದು) ಧ್ರುವವಾಗಿರುತ್ತದೆ, ಎಂದರೆ **ಕೂಟಸ್ಥನಿತ್ಯವಾಗಿರುತ್ತದೆ,**[6] ಪೃಥಿವ್ಯಾದಿಗಳಂತೆ (ಮತ್ತೊಂದಕ್ಕೆ) ಹೋಲಿಸಿದರೆ ನಿತ್ಯವಾಗಿರುವದಲ್ಲ. ಅದನ್ನು ಎಂದರೆ ಈ ಪ್ರಕಾರದ ಬ್ರಹ್ಮವನ್ನು ಆತ್ಮನೆಂದು ಅರಿತುಕೊಂಡರೆ, ಅದೇ ತನ್ನ ಆತ್ಮನೆಂದು ನಿಶ್ಚಯಿಸಿಕೊಂಡರೆ **ಮೃತ್ಯುವಿನ ಮುಖದಿಂದ ಎಂದರೆ ಮೃತ್ಯುವಿಗೆ ವಿಷಯವಾಗಿರುವ ಅವಿದ್ಯೆ, ಕಾಮ, ಕರ್ಮ-** ಎಂಬ (ಮೃತ್ಯುವಿನ ಬಾಯಿಯಿಂದ) ಬಿಡುಗಡೆಯಾಗುತ್ತಾನೆ, ತಪ್ಪಿಸಿಕೊಳ್ಳುತ್ತಾನೆ.

---

1. ಪೃಥ್ವಿ ಅಪ್ಪಿನಲ್ಲಿ, ಅಪ್ಪು ಅಗ್ನಿಯಲ್ಲಿ, ಅಗ್ನಿ ವಾಯುವಿನಲ್ಲಿ, ವಾಯು ಆಕಾಶದಲ್ಲಿ.

2. ಇಲ್ಲಿ ಕಾರಣವೆಂದರೆ ಕಾರ್ಯರೂಪದಿಂದ ಪರಿಣಮಿಸುವದೆಂದು ಅರ್ಥವಲ್ಲ; ತಾನೇ ಕಾರ್ಯದಂತೆ ತೋರುವದು ಎಂದರ್ಥ.

3. ಏಕೆಂದರೆ ಅದು ನಿಜವಾಗಿ ಕಾರ್ಯವನ್ನುಂಟುಮಾಡುವದಲ್ಲ.

4. ಸಮಷ್ಟಿಬುದ್ಧಿಗೆ, ಬಿಡಿಬಿಡಿಯಾಗಿರುವ ಬುದ್ಧಿಗಳ ಒಟ್ಟಿಗೆ ಮಹತ್ತತ್ತ್ವವೆಂಬ ಹೆಸರಿದೆ.

5. ಬುದ್ಧಿಯು ವಿಷಯಾಕಾರವಾಗಿ ವೃತ್ತಿಗಳನ್ನು ತಳೆಯುತ್ತಿರುವಲ್ಲಿ ಆತ್ಮನು ಅದನ್ನು ಸಾಕ್ಷಿರೂಪದಿಂದ ನೋಡುತ್ತಾ ಒಂದೇ ಸ್ವರೂಪದಲ್ಲಿರುವನು.

6. ಮಾರ್ಪಾಡುಗಳಿಲ್ಲದೆ ನಿತ್ಯವಾಗಿರುವದು ಕೂಟಸ್ಥನಿತ್ಯವು. ಪೃಥಿವಿ ಮುಂತಾದವು ನಿತ್ಯವೆಂದು ಕೆಲವರು ಹೇಳುವರು. ಆದರೆ ಅವು ಮಾರ್ಪಡುತ್ತಲೇ ಇದ್ದರೂ ಇದೇ ಅದು ಎಂಬ ಬುದ್ಧಿಯುಂಟಾಗುವದರಿಂದ ಪರಿಣಾಮಿನಿತ್ಯವೆನಿಸುವವು. ಇವು ನಿಜವಾಗಿ ನಿತ್ಯವಲ್ಲ, ಆಪೇಕ್ಷಿಕನಿತ್ಯ; ಅನಿತ್ಯವಾದ ಇತರವಸ್ತುಗಳಿಗೆ ಹೋಲಿಸಿದರೆ ನಿತ್ಯ.

## ಆತ್ಮಜ್ಞಾನದ ಪ್ರಶಂಸೆ

ನಾಚಿಕೇತಮುಪಾಖ್ಯಾನಂ
ಮೃತ್ಯುಪ್ರೋಕ್ತಗ್ಂ ಸನಾತನಮ್ ।
ಉಕ್ತ್ವಾ ಶ್ರುತ್ವಾ ಚ ಮೇಧಾವೀ
ಬ್ರಹ್ಮಲೋಕೇ ಮಹೀಯತೇ ॥ ೧೬ ॥

೧೬. ಮೃತ್ಯುವು ಹೇಳಿದ ಸನಾತನ ನಾಚಿಕೇತೋಪಾಖ್ಯಾನವನ್ನು ಹೇಳಿದ ಮತ್ತು ಕೇಳಿದ ಪಂಡಿತನು ಬ್ರಹ್ಮಲೋಕದಲ್ಲಿ ದೊಡ್ಡವನೆನಿಸುವನು.

(ಭಾಷ್ಯ)

೧೦೮. ಪ್ರಸ್ತುತವಿಜ್ಞಾನಸ್ತುತ್ಯರ್ಥಮ್ ಆಹ ಶ್ರುತಿಃ । ನಾಚಿಕೇತಂ ನಚಿಕೇತಸಾ ಪ್ರಾಪ್ತಮ್ ನಾಚಿಕೇತಮ್ ಮೃತ್ಯುನಾ ಪ್ರೋಕ್ತಂ ಮೃತ್ಯುಪ್ರೋಕ್ತಮ್ ಇದಮ್ ಆಖ್ಯಾನಮ್ ಉಪಾಖ್ಯಾನಂ ವಲ್ಲೀತ್ರಯಲಕ್ಷಣಂ ಸನಾತನಂ ಚಿರನ್ತನಂ ವೈದಿಕತ್ವಾತ್ ಉಕ್ತ್ವಾ ಬ್ರಾಹ್ಮಣೇಭ್ಯಃ ಶ್ರುತ್ವಾ ಚ ಆಚಾರ್ಯೇಭ್ಯೋ ಮೇಧಾವೀ (ಬ್ರಹ್ಮಲೋಕೇ) ಬ್ರಹ್ಮೈವ ಲೋಕೋ ಬ್ರಹ್ಮ ಲೋಕಃ ತಸ್ಮಿನ್ ಮಹೀಯತೇ ಆತ್ಮಭೂತಃ ಉಪಾಸ್ಯೋ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಾರಂಭಮಾಡಿರುವ ವಿಜ್ಞಾನವನ್ನು ಹೊಗಳುವದಕ್ಕಾಗಿ ಶ್ರುತಿಯು (ಹೀಗೆಂದು) ಹೇಳುತ್ತದೆ: ನಾಚಿಕೇತವೆಂದರೆ ನಚಿಕೇತನು ಪಡೆದುಕೊಂಡದ್ದು ; ಮೃತ್ಯುಪ್ರೋಕ್ತವೆಂದರೆ ಮೃತ್ಯುವು ಹೇಳಿದ್ದು. (ಸಂವಾದರೂಪದಲ್ಲಿರುವ) ಈ ಕಥೆಯು (ಈವರೆಗಿನ) ಮೂರು ವಲ್ಲಿಗಳ ರೂಪವಾಗಿರುವ ಉಪಾಖ್ಯಾನವು ಸನಾತನವು, ವೈದಿಕವಾದದ್ದರಿಂದ[1] ಬಲು ಪುರಾತನವಾದದ್ದು. (ಇದನ್ನು ಬ್ರಾಹ್ಮಣರಿಗೆ[2] ಹೇಳಿದ ಮತ್ತು ಆಚಾರ್ಯರಿಂದ ಕೇಳಿದ ಪಂಡಿತನು ಬ್ರಹ್ಮಲೋಕದಲ್ಲಿ - ಬ್ರಹ್ಮವೆಂಬ ಲೋಕವು[3] ಬ್ರಹ್ಮಲೋಕವು ಅದರಲ್ಲಿ - ದೊಡ್ಡವನೆನಿಸುವನು ಎಂದರೆ ಆತ್ಮನಾಗಿ ಉಪಾಸ್ಯನಾಗುವನು.

---

1. ವೇದವು ಅಪೌರುಷೇಯವಾದದರಿಂದ ಅನಾದಿ ಎಂದು ವೈದಿಕರ ನಂಬಿಕೆ.

2. ಬ್ರಾಹ್ಮಣರಿಗೇ ವೇದದ ಮೂಲಕ ತತ್ತ್ವವನ್ನು ಶ್ರವಣಮಾಡುವ ಮುಖ್ಯಾಧಿಕಾರವಿರುವದು ; ದ್ವಿಜರೆಲ್ಲರಿಗೂ ಈ ಅಧಿಕಾರವುಂಟು. ಶೂದ್ರರಿಗೆ ಇತಿಹಾಸಪುರಾಣಾದಿಗಳ ಮೂಲಕ ಅಧಿಕಾರವಿದೆ ಎಂದು ಸೂ. ಭಾ. ೧-೩-೩೮ರಲ್ಲಿ ಹೇಳಿರುತ್ತದೆ.

3. ತಾನು ಶ್ರವಣಮನನಗಳನ್ನು ಮಾಡಿ ತಿಳಿದುಕೊಂಡು ಮತ್ತೊಬ್ಬರಿಗೆ ತಿಳಿಸಿದರೆ ಜ್ಞಾನದಿಂದ ಬ್ರಹ್ಮಸ್ವರೂಪನೇ ಆಗಿಬಿಡುತ್ತಾನೆ.

ಯ ಇಮಂ ಪರಮಂ ಗುಹ್ಯಂ ಶ್ರಾವಯೇದ್ ಬ್ರಹ್ಮಸಂಸದಿ ।
ಪ್ರಯತಃ ಶ್ರಾದ್ಧಕಾಲೇ ವಾ ತದಾನನ್ತ್ಯಾಯ ಕಲ್ಪತೇ ತದಾನನ್ತ್ಯಾಯ
ಕಲ್ಪತ ಇತಿ ॥ ೧೭ ॥

೧೭. ಯಾವನು ಈ ಪರಮಗುಹ್ಯವನ್ನು ಬ್ರಹ್ಮಸಭೆಯಲ್ಲಿ ಅಥವಾ ಶ್ರಾದ್ಧಕಾಲದಲ್ಲಿ ಯತನಾಗಿ ಶ್ರವಣಮಾಡಿಸುತ್ತಾನೋ ಅದು ಅನಂತವಾಗುವದು, ಅದು ಅನಂತವಾಗುವದು.

(ಭಾಷ್ಯ)

೧೧೯. ಯಃ ಕಶ್ಚಿದಿಮಂ ಗ್ರನ್ಥಂ ಪರಮಂ ಪ್ರಕೃಷ್ಟಂ ಗುಹ್ಯಂ ಗೋಪ್ಯಂ ಶ್ರಾವಯೇತ್ ಗ್ರನ್ಥತೋಽರ್ಥತಶ್ಚ ಬ್ರಾಹ್ಮಣಾನಾಂ ಸಂಸದಿ ಬ್ರಹ್ಮಸಂಸದಿ ಪ್ರಯತಃ ಶುಚಿರ್ಭೂತ್ವಾ ಶ್ರಾದ್ಧಕಾಲೇ ವಾ ಶ್ರಾವಯೇತ್ ಭುಞ್ಜಾನಾನ್ ತತ್ ಶ್ರಾದ್ಧಮ್ ಅಸ್ಯ ಆನನ್ತ್ಯಾಯ ಅನನ್ತಫಲಾಯ ಕಲ್ಪತೇ ಸಮ್ಪದ್ಯತೇ । ದ್ವಿರ್ವಚನಮ್ ಅಧ್ಯಾಯ ಪರಿಸಮಾಪ್ತ್ಯರ್ಥಮ್ ॥

(ಭಾಷ್ಯಾರ್ಥ)

ಯಾವನೇ ಆಗಲಿ, ಪರಮವಾದ ಉತ್ತಮ ಗುಹ್ಯವನ್ನು ಎಂದರೆ ಗೋಪ್ಯವಾದ ಈ ಗ್ರಂಥವನ್ನು ಬ್ರಹ್ಮಸಂಸತ್ತಿನಲ್ಲಿ ಅಂದರೆ ಬ್ರಾಹ್ಮಣರ ಸಭೆಯಲ್ಲಿ ಪ್ರಯತನಾಗಿ ಎಂದರೆ ಶುಚಿಯಾಗಿ, ಅಥವಾ ಶ್ರಾದ್ಧಕಾಲದಲ್ಲಿ ಭೋಜನ ಮಾಡುತ್ತಿರುವ ಬ್ರಾಹ್ಮಣರನ್ನು, ಗ್ರಂಥರೂಪದಿಂದಲೂ ಅರ್ಥರೂಪದಿಂದಲೂ ಶ್ರವಣಮಾಡಿಸುವನೋ (ಅವನು ಮಾಡಿದ) ಆ ಶ್ರಾದ್ಧವು ಅನಂತವಾಗುವದು, ಎಂದರೆ ಅನಂತಫಲವನ್ನು ಕೊಡುವದಕ್ಕೆ ಸಮರ್ಥವಾಗುತ್ತದೆ[1]. 'ತದಾನನ್ತ್ಯಾಯ ಕಲ್ಪತೇ' ಎಂಬುದನ್ನು ಎರಡುಸಲ ಹೇಳಿರುವದು ಅಧ್ಯಾಯವು ಮುಗಿಯಿತೆಂಬುದನ್ನು ತಿಳಿಸುವದಕ್ಕೆ.

1. ಬ್ರಾಹ್ಮಣರು ಮುಖ್ಯಾಧಿಕಾರಿಗಳಾದ್ದರಿಂದ ಅವರ ಸಭೆಯಲ್ಲಿ ಇದನ್ನು ಅಧ್ಯಯನಮಾಡಿದ್ದು, ಮತ್ತು ಅರ್ಥವನ್ನು ಹೇಳಿದ್ದು ಉತ್ತಮಫಲವನ್ನು ಕೊಡುವದು. ಶ್ರಾದ್ಧಕಾಲದಲ್ಲಿ ಹೇಳಿದ್ದು ಶ್ರಾದ್ಧಕರ್ಮಕ್ಕೆ ಸಾದ್ಗುಣ್ಯವನ್ನುಂಟುಮಾಡುವದು.

# ಎರಡನೆಯ ಅಧ್ಯಾಯ - ಒಂದನೆಯ ವಲ್ಲಿ

## ವಿಷಯಗಳ ಆಸೆಯೇ ಆತ್ಮದರ್ಶನಕ್ಕೆ ಅಡ್ಡಿ

(ಭಾಷ್ಯ)

೧೧೦. ''ಏಷ ಸರ್ವೇಷು ಭೂತೇಷು ಗೂಢೋऽತ್ಮಾ ನ ಪ್ರಕಾಶತೇ । ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ'' (೧-೩-೧೨) ಇತ್ಯುಕ್ತಮ್ । ಕಃ ಪುನಃ ಪ್ರತಿಬನ್ಧೋ ಅಗ್ರ್ಯಯಾ ಬುದ್ಧೇಃ, ಯೇನ ತದಭಿ ಭವಾತ್ ಆತ್ಮಾ ನ ದೃಶ್ಯತ ಇತಿ । ತದದರ್ಶನ ಕಾರಣಪ್ರದರ್ಶನಾರ್ಥಾ ವಲ್ಲೀ ಆರಭ್ಯತೇ । ವಿಜ್ಞಾತೇ ಹಿ ಶ್ರೇಯಃಪ್ರತಿಬನ್ಧ ಕಾರಣೇ ತದಪನಯನಾಯ ಯತ್ನ ಆರಬ್ಧುಂ ಶಕ್ಯತೇ ನಾನ್ಯಥಾ ಇತಿ ॥

(ಭಾಷ್ಯಾರ್ಥ)

'ಈ ಆತ್ಮನು ಸರ್ವಭೂತಗಳಲ್ಲಿಯೂ ಗೂಢನಾಗಿರುವದರಿಂದ ಬೆಳಗುವದಿಲ್ಲ, ಆದರೆ ಅಗ್ರ್ಯವಾದ ಬುದ್ಧಿಗೆ ಕಾಣಿಸುತ್ತಾನೆ' (೧-೩-೧೨) ಎಂದು ಹೇಳಿದೆಯಷ್ಟೆ. ಈ ಅಗ್ರ್ಯವಾದ ಬುದ್ಧಿಯುಂಟಾಗುವದಕ್ಕೆ ಯಾವ ಅಡ್ಡಿ[1] ಇರುವದರಿಂದ ಈ ಬುದ್ಧಿಯು ಮುಚ್ಚಲ್ಪಟ್ಟು ಆತ್ಮನು ಕಾಣಿಸದೆ ಇರುವನು ? ಎಂದು (ಕೇಳಬಹುದು. ಆದ್ದರಿಂದ) ಅವನು ಕಾಣದಿರುವದಕ್ಕೆ ಕಾರಣವನ್ನು ತೋರಿಸುವದಕ್ಕಾಗಿ (ಈ) ವಲ್ಲಿಯನ್ನು ಪ್ರಾರಂಭಿಸಿರುತ್ತದೆ. ಏಕೆಂದರೆ ಶ್ರೇಯಸ್ಸಿಗೆ ಅಡ್ಡಿಯಾದ ಕಾರಣವನ್ನು ತಿಳಿದಿದ್ದರೆ ಅದನ್ನು ಹೋಗಲಾಡಿಸುವದಕ್ಕೆ ಪ್ರಯತ್ನವನ್ನು ಮಾಡಬಹುದೇ ಹೊರತು ಇಲ್ಲದಿದ್ದರೆ ಆಗುವದಿಲ್ಲ.

**ಪರಾಞ್ಚಿ ಖಾನಿ ವ್ಯತೃಣತ್ ಸ್ವಯಮ್ಭೂ-**
**ಸ್ತಸ್ಮಾತ್ ಪರಾಙ್ ಪಶ್ಯತಿ ನಾನ್ತರಾತ್ಮನ್ ।**
**ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷ-**
**ದಾವೃತ್ತಚಕ್ಷುರಮೃತತ್ವಮಿಚ್ಛನ್ ॥ ೧ ॥**

೧. ಸ್ವಯಂಭುವು ಇಂದ್ರಿಯಗಳನ್ನು ಹೊರಗಡೆ ಕೊರೆದಿರುವನು. ಆದ್ದರಿಂದ (ಮನುಷ್ಯನು) ಹೊರಕ್ಕೆ ನೋಡುತ್ತಾನೆ, ಅಂತರಾತ್ಮನನ್ನು ನೋಡುವದಿಲ್ಲ. ಯಾವನೋ ಒಬ್ಬ ಧೀರನು ಅಮೃತತ್ವವನ್ನು ಬಯಸಿದವನಾಗಿ ಚಕ್ಷುಸ್ಸನ್ನು ಹಿಂತಿರುಗಿಸಿಕೊಂಡು ಪ್ರತ್ಯಗಾತ್ಮನನ್ನು ನೋಡುತ್ತಾನೆ.

---

1. ಹಿಂದೆ ಹೇಳಿದ್ದು ಅನಾದ್ಯವಿದ್ಯೆ ಎಂಬ ಅಡ್ಡಿ, ಈಗ ಹೇಳುವದು ಆಗಂತುಕ ಪ್ರತಿಬಂಧ ಎಂದು (ಆ ॥ ಗೋ ॥) ವ್ಯಾಖ್ಯೆಯಲ್ಲಿದೆ.

(ಭಾಷ್ಯ)

೧೧. ಪರಾಞ್ಚಿ ಪರಾಕ್ ಅಞ್ಚನ್ತಿ ಗಚ್ಛನ್ತೀತಿ । ಖಾನಿ ಖೋಪಲಕ್ಷಿತಾನಿ[1] ಶ್ರೋತ್ರಾದೀನೀನ್ದ್ರಿಯಾಣಿ ಖಾನಿ ಇತ್ಯುಚ್ಯನ್ತೇ । ತಾನಿ ಪರಾಞ್ಚ್ಯೇವ ಶಬ್ದಾದಿವಿಷಯಪ್ರಕಾಶನಾಯ ಪ್ರವರ್ತನ್ತೇ । ಯಸ್ಮಾತ್ ಏವಂಸ್ವಭಾವಕಾನಿ ತಾನಿ ವ್ಯತೃಣತ್ ಹಿಂಸಿತವಾನ್ ಹನನಂ ಕೃತವಾನ್ ಇತ್ಯರ್ಥಃ । ಕೋಽಸೌ ? ಸ್ವಯಮ್ಭೂಃ ಪರಮೇಶ್ವರಃ । ಸ್ವಯಮೇವ ಸ್ವತನ್ತ್ರೋ ಭವತಿ ಸರ್ವದಾ ನ ಪರತನ್ತ್ರ ಇತಿ । ತಸ್ಮಾತ್ ಪರಾಙ್ ಪರಾಗ್ರೂಪಾನ್ ಅನಾತ್ಮಭೂತಾನ್ ಶಬ್ದಾದೀನ್ ಪಶ್ಯತಿ ಉಪಲಭತೇ ಉಪಲಬ್ಧಾ ನಾನ್ತರಾತ್ಮನ್ ನಾನ್ತರಾತ್ಮಾನಮ್ ಇತ್ಯರ್ಥಃ । ಏವಂಸ್ವಭಾವೇಽಪಿ ಸತಿ ಲೋಕಸ್ಯ ಕಶ್ಚಿತ್ ನದ್ಯಾಃ ಪ್ರತಿಸ್ರೋತಃಪ್ರವರ್ತನಮಿವ ಧೀರಃ ಧೀಮಾನ್ ವಿವೇಕೀ ಪ್ರತ್ಯಗಾತ್ಮಾನಂ ಪ್ರತ್ಯಕ್ ಚ ಅಸೌ ಆತ್ಮಾ ಚೇತಿ ಪ್ರತ್ಯಗಾತ್ಮಾ । ಪ್ರತೀಚ್ಯೇವ ಆತ್ಮಶಬ್ದೋ ರೂಢೋ ಲೋಕೇ ನಾನ್ಯಸ್ಮಿನ್ । ವ್ಯುತ್ಪತ್ತಿಪಕ್ಷೇಽಪಿ ತತ್ರೈವ ಆತ್ಮಶಬ್ದೋ ವರ್ತತೇ । 'ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ ॥' (?) ಇತ್ಯಾತ್ಮಶಬ್ದವ್ಯುತ್ಪತ್ತಿಸ್ಮರಣಾತ್ । ತಂ ಪ್ರತ್ಯಗಾತ್ಮಾನಂ ಸ್ವಂ ಸ್ವಭಾವಮ್ ಐಕ್ಷತ್ ಅಪಶ್ಯತ್ ಪಶ್ಯತಿ ಇತ್ಯರ್ಥಃ । ಛನ್ದಸಿ ಕಾಲಾನಿಯಮಾತ್ । ಕಥಂ ಪಶ್ಯತೀತಿ ? ಉಚ್ಯತೇ । ಆವೃತ್ತಚಕ್ಷುಃ ಆವೃತ್ತಂ ವ್ಯಾವೃತ್ತಂ ಚಕ್ಷುಃ ಶ್ರೋತ್ರಾದಿಕಮ್ ಇನ್ದ್ರಿಯಜಾತಮ್ ಅಶೇಷವಿಷಯಾತ್, ಯಸ್ಯ ಸ ಆವೃತ್ತಚಕ್ಷುಃ । ಸ ಏವಂ ಸಂಸ್ಕೃತಃ ಪ್ರತ್ಯಗಾತ್ಮಾನಂ ಪಶ್ಯತಿ । ನ ಹಿ ಬಾಹ್ಯವಿಷಯಾಲೋಚನಪರತ್ವಂ ಪ್ರತ್ಯಗಾತ್ಮೇಕ್ಷಣಂ ಚ ಏಕಸ್ಯ ಸಮ್ಭವತಿ । ಕಿಮರ್ಥಂ ಪುನರಿತ್ಥಂ ಮಹತಾ ಪ್ರಯಾಸೇನ ಸ್ವಭಾವಪ್ರವೃತ್ತಿನಿರೋಧಂ ಕೃತ್ವಾ ಧೀರಃ ಪ್ರತ್ಯಗಾತ್ಮಾನಂ ಪಶ್ಯತೀತಿ ? ಉಚ್ಯತೇ । ಅಮೃತತ್ವಮ್ ಅಮರಣಧರ್ಮತ್ವಂ ನಿತ್ಯಸ್ವಭಾವತಾಮ್ ಇಚ್ಛನ್ ಆತ್ಮನಃ ಇತ್ಯರ್ಥಃ ॥

(ಭಾಷ್ಯಾರ್ಥ)

'ಪರಾಞ್ಚಿ' ಎಂದರೆ ಹೊರಕ್ಕೆ ಚಲಿಸುವವು ಹೋಗುವಂಥವು. 'ಖಾನಿ' ಆಕಾಶವೆಂಬ ಉಪಲಕ್ಷಣದಿಂದ[2] ತಿಳಿಯಬೇಕಾದ ಶ್ರೋತ್ರವೇ ಮುಂತಾದ ಇಂದ್ರಿಯಗಳು 'ಖ' ಎನಿಸುವವು ; ಆ (ಇಂದ್ರಿಯ)ಗಳು ಶಬ್ದವೇ ಮುಂತಾದ

1. (ಪಾ॥) ಪಾಠ

2. ಉಪಲಕ್ಷಣವೆಂದರೆ ಗುರುತು, ಬಿಲ್ಲುಗಾರರು ಎಂಬಲ್ಲಿ ಬಾಣವೇ ಮುಂತಾದವುಗಳಿಗೂ ಗುರುತಾಗಿರುವಂತೆ ಖ (ಆಕಾಶವೆಂಬುದು) ಆಕಾಶದಿಂದಾಗಿರುವ ಶ್ರೋತ್ರೇಂದ್ರಿಯವೇ ಅಲ್ಲದೆ ಮಿಕ್ಕ ಇಂದ್ರಿಯಗಳನ್ನೂ ತಿಳಿಸುವದು ಎಂದು ಭಾವ.

ವಿಷಯಗಳನ್ನು ಬೆಳಗುವದಕ್ಕೇ ಹೊರಕ್ಕೇ ಹೊರಡುತ್ತಿರುವವು. ಏಕೆಂದರೆ ಅವುಗಳನ್ನು ಈ ಸ್ವಭಾವವುಳ್ಳವಾಗಿಯೇ ಕೊರೆದಿರುತ್ತಾನೆ, ಹಿಂಸೆಮಾಡಿರುತ್ತಾನೆ, ಹಾಳುಮಾಡಿರುತ್ತಾನೆ. ಯಾರು ? ಸ್ವಯಂಭು ಎಂದರೆ ಪರಮೇಶ್ವರನು. ಯಾವಾಗಲೂ ತಾನೇ (ಸ್ವಯಂ)ಸ್ವತಂತ್ರನಾಗಿರುತ್ತಾನೆಯೇ ಹೊರತು, ಪರತಂತ್ರ ನಾಗಿರುವದಿಲ್ಲವಾದ್ದರಿಂದ (ಪರಮೇಶ್ವರನಿಗೆ 'ಸ್ವಯಂಭು'[1] ಎಂದು ಹೆಸರು). ಆದ್ದರಿಂದ ಅರಿಯುವಾತನು ಹೊರಕ್ಕೆ ಎಂದರೆ ಹೊರಗೆ ಇರುವಂಥ ಅನಾತ್ಮವಾಗಿ ರುವ ಶಬ್ದಾದಿಗಳನ್ನು ನೋಡುತ್ತಾನೆ, ಅರಿಯುತ್ತಾನೆ. 'ನಾನ್ತರಾತ್ಮನ್' - 'ನಾನ್ತರಾತ್ಮಾನಮ್' ಅಂತರಾತ್ಮನನ್ನು ಅರಿಯುವದಿಲ್ಲ ಎಂದರ್ಥ.

ಜನರದು ಇದೇ ಸ್ವಭಾವವಾಗಿದ್ದರೂ ನದಿಯ ಪ್ರವಾಹವನ್ನು ಹಿಂತಿರುಗಿ ಸುವ[2] ಹಾಗೆ ಯಾವನೋ ಒಬ್ಬ ಧೀರನು ಎಂದರೆ ಬುದ್ಧಿವಂತನು ವಿವೇಕಿಯು ಪ್ರತ್ಯಗಾತ್ಮನನ್ನು - **ಒಳಗೆ ಇರುವ ಆತ್ಮನಾದ್ದರಿಂದ ಪ್ರತ್ಯಗಾತ್ಮನೆಂದು (ಹೆಸರು. ಆತ್ಮಶಬ್ದವು) ಒಳಗಿನ ಆತ್ಮನಲ್ಲಿಯೇ ರೂಢವಾಗಿರುತ್ತದೆಯೇ ಹೊರತು ಮತ್ತೊಂದರಲ್ಲಲ್ಲ. ವ್ಯುತ್ಪನ್ನಶಬ್ದವೆಂಬ ಪಕ್ಷದಲ್ಲಿಯೂ ಆತ್ಮಶಬ್ದವು ಈ (ಆತ್ಮ) ನಲ್ಲಿಯೇ ವೃತ್ತಿಯುಳ್ಳದ್ದಾಗಿರುವದು ;** ಏಕೆಂದರೆ 'ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ ॥'[3] (ಇಲ್ಲಿರುವ ವಿಷಯಗಳನ್ನು ವ್ಯಾಪಿಸಿಕೊಂಡಿರುವದರಿಂದಲೂ ತೆಗೆದುಕೊಳ್ಳುವದ ರಿಂದಲೂ ಅವುಗಳನ್ನು ತಿನ್ನುತ್ತಿರುವದರಿಂದಲೂ ಇವನ ಸ್ವರೂಪವು ಕಡಿವಡೆಯದೆ ಇರುವದರಿಂದಲೂ ಆತ್ಮನೆನಿಸಿಕೊಂಡಿರುತ್ತಾನೆ) ಎಂದು ಆತ್ಮಶಬ್ದದ ವ್ಯುತ್ಪತ್ತಿಯನ್ನು ಹೇಳುವ **ಸ್ಮೃತಿ**ಯಿರುತ್ತದೆ. ಆ ಪ್ರತ್ಯಗಾತ್ಮನನ್ನು ಎಂದರೆ ತನ್ನ ಸ್ವಭಾವವನ್ನು[4] ಐಕ್ಷತ್- ಅಪಶ್ಯತ್, ನೋಡುತ್ತಾನೆ ಎಂದರ್ಥ. (ಐಕ್ಷತ್ ಎಂಬುದಕ್ಕೆ ನೋಡಿದ ನೆಂದು ಅರ್ಥವಾದರೂ ವೇದದಲ್ಲಿ ಕಾಲದ ನಿಯಮವಿಲ್ಲವಾದ್ದರಿಂದ (ನೋಡು ತ್ತಾನೆ ಎಂದೇ ಅರ್ಥ). ಹೇಗೆ ನೋಡುತ್ತಾನೆ ? ಎಂದರೆ ಹೇಳುತ್ತಾನೆ. 'ಆವೃತ್ತ ಚಕ್ಷುಃ' ಆವೃತ್ತ ಎಂದರೆ ವಿಷಯಗಳೆಲ್ಲದರಿಂದಲೂ ಇಂದ್ರಿಯಸಮೂಹವನ್ನು ಹಿಂತಿ ರುಗಿಸಿದ ಚಕ್ಷು ಎಂದರೆ ಶ್ರೋತ್ರವೇ ಮುಂತಾದ ಇಂದ್ರಿಯಸಮೂಹವುಳ್ಳವನಾಗಿ (ಎಂದರ್ಥ). **ಹೀಗೆ ಸಂಸ್ಕಾರವನ್ನು ಹೊಂದಿ ಪ್ರತ್ಯಗಾತ್ಮನನ್ನು ನೋಡುತ್ತಾನೆ.**

---

1. ಈ. ಭಾ. ಭಾ. ೧೯ಕ್ಕೆ ಹೋಲಿಸಿ.
2. 'ನದಿಗೆ ಎದುರಾಗಿ ಹೋಗುವ' ಎಂದೂ ಕನ್ನಡಿಸಬಹುದು
3. ಇದು ಯಾವ ಸ್ಮೃತಿಯೋ ತಿಳಿಯದು. ಬೃ. ವಾ. ೧-೪-೭೩೭ರ ವ್ಯಾಖ್ಯಾನದಲ್ಲಿ ಇದನ್ನು ವ್ಯಾಸವಾಕ್ಯವೆಂದಿದೆ. 'ಕಥ್ಯತೇ' ಎಂದು ಅಲ್ಲಿಯ ಪಾಠ.
4. ಪರಮಾತ್ಮನು ತನ್ನ ಸ್ವರೂಪಕ್ಕಿಂತ ಬೇರೆ ಅಲ್ಲ.

ಏಕೆಂದರೆ ಹೊರಗಿನ ವಿಷಯಗಳನ್ನು ನೋಡುತ್ತಿರುವದೂ ಒಳಗಿನ ಆತ್ಮನನ್ನು ಕಾಣುವದೂ ಒಬ್ಬನಿಗೇ ಆಗುವಹಾಗಿಲ್ಲ. ಹೀಗೆ ಬಹಳಕಷ್ಟದಿಂದ ಸ್ವಭಾವದ ಪ್ರವೃತ್ತಿಯನ್ನು ತಡೆದುಕೊಂಡು ಧೀರನಾದವನು ಏತಕ್ಕೆ ಪ್ರತ್ಯಗಾತ್ಮನನ್ನು ನೋಡುತ್ತಾನೆ ? ಎಂದರೆ ಹೇಳುತ್ತಾನೆ : **ಅಮೃತತ್ವವನ್ನು ಬಯಸಿ ಎಂದರೆ ಮರಣವಿಲ್ಲದ್ದೆಂಬ ಧರ್ಮವಾದ ತನ್ನ ಸ್ವಭಾವವನ್ನು**[1] **ತನಗೆ (ಆಗಬೇಕೆಂದು) ಬಯಸಿ** (ಹೀಗೆ ಮಾಡುತ್ತಾನೆ)- ಎಂದರ್ಥ.

(ಭಾಷ್ಯ)

**೧೧೨. ಯತ್ ತಾವತ್ ಸ್ವಾಭಾವಿಕಂ ಪರಾಗೇವಾನಾತ್ಮದರ್ಶನಮ್ ತದಾತ್ಮದರ್ಶನಸ್ಯ ಪ್ರತಿಬನ್ಧಕಾರಣಮವಿದ್ಯಾ, ತತ್ಪ್ರತಿಕೂಲತ್ವಾತ್ ಯಾ ಚ ಪರಾಕ್ಷ್ವೇವ ಅವಿದ್ಯೋಪಪ್ರದರ್ಶಿತೇಷು ದೃಷ್ಟಾದೃಷ್ಟೇಷು ಭೋಗೇಷು ತೃಷ್ಣಾ । ತಾಭ್ಯಾಮ್ ಅವಿದ್ಯಾತೃಷ್ಣಾಭ್ಯಾಂ ಪ್ರತಿಬದ್ಧಾತ್ಮದರ್ಶನಾಃ -**

(ಭಾಷ್ಯಾರ್ಥ)

**ಹೊರಗೇ ಇರುವ ಅನಾತ್ಮವನ್ನು ಸ್ವಭಾವದಿಂದ ಕಾಣುತ್ತಿರುವದುಂಟಷ್ಟೆ, (ಆ) ಅವಿದ್ಯೆಯೂ**[2] **ಮತ್ತು (ಆ) ಅವಿದ್ಯೆಯಿಂದ ತೋರುವ ದೃಷ್ಟವಾದ ಮತ್ತು ಅದೃಷ್ಟವಾದ**[3] **ಹೊರಗೇ ಇರುವ ಭೋಗಗಳಲ್ಲಿರುವ ಬಯಕೆಯುಂಟಷ್ಟೆ. ಅದೇ ಆತ್ಮದರ್ಶನಕ್ಕೆ ಅಡ್ಡಿಯಾಗಿರುವ ಕಾರಣವು.** ಆ ಅವಿದ್ಯೆ, ಬಯಕೆ - ಎಂಬಿವೆರಡ ರಿಂದ ಆತ್ಮದರ್ಶನಕ್ಕೆ ಅಡ್ಡಿಯನ್ನುಂಟುಮಾಡಿಕೊಂಡಿರುವವರು-

**ಪರಾಚಃ ಕಾಮಾನನುಯನ್ತಿ ಬಾಲಾ-**
**ಸ್ತೇ ಮೃತ್ಯೋರ್ಯನ್ತಿ ವಿತತಸ್ಯ ಪಾಶಮ್ ।**
**ಅಥ ಧೀರಾ ಅಮೃತತ್ವಂ ವಿದಿತ್ವಾ**
**ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯನ್ತೇ ॥ ೨ ॥**

೨. ಪರಾಕ್ಕಾಗಿರುವ ಕಾಮಗಳನ್ನು ಬಾಲರು ಅನುಸರಿಸುತ್ತಿರುವರು. ಅವರು ಹರಡಿಕೊಂಡಿರುವ ಮೃತ್ಯುವಿನ ಪಾಶವನ್ನು ಪಡೆಯುತ್ತಾರೆ. ಇನ್ನು ಧೀರ ರಾದವರು ಅಮೃತತ್ವವನ್ನು ಅರಿತುಕೊಂಡು ಅಧ್ರುವವಾದವುಗಳಲ್ಲಿ ಧ್ರುವವೆಂದು ತಿಳಿದುಕೊಂಡು, ಬಯಸದೆ ಇರುತ್ತಾರೆ.

---

1. ಅಮೃತತ್ವವು ತನ್ನ ಸ್ವಭಾವವು, ಎಂದರೆ ಸ್ವರೂಪವೇ.
2. ವಿಚಾರಮಾಡದೆ ಇರುವ ಸ್ವಭಾವದಿಂದ ಆತ್ಮವಸ್ತುವಿಗಿಂತ ಬೇರೆಯಾಗಿ ಅನಾತ್ಮವನ್ನು ಕಾಣುವದೇ ಅವಿದ್ಯೆ.
3. ಈ ಲೋಕದ ಮತ್ತು ಪರಲೋಕದ.

(ಭಾಷ್ಯ)

೧೧೩. ಪರಾಚಃ ಬಹಿರ್ಗತಾನೇವ ಕಾಮಾನ್ ಕಾಮ್ಯಾನ್ ವಿಷಯಾನ್ ಅನುಯನ್ತಿ ಅನುಗಚ್ಛನ್ತಿ ಬಾಲಾಃ ಅಲ್ಪಪ್ರಜ್ಞಾಃ ತೇ ತೇನ ಕಾರಣೇನ ಮೃತ್ಯೋಃ ಅವಿದ್ಯಾಕಾಮಕರ್ಮಸಮುದಾಯಸ್ಯ ಯನ್ತಿ ಗಚ್ಛನ್ತಿ ವಿತತಸ್ಯ ವಿಸ್ತೀರ್ಣಸ್ಯ ಸರ್ವತೋ ವ್ಯಾಪ್ತಸ್ಯ ಪಾಶಂ ಪಾಶ್ಯತೇ ಬಧ್ಯತೇ ಯೇನ ತಂ ಪಾಶಂ ದೇಹೇನ್ದ್ರಿಯಾದಿ ಸಂಯೋಗವಿಯೋಗಲಕ್ಷಣಮ್ । ಅನವರತಂ ಜನ್ಮಮರಣಜರಾರೋಗಾದ್ಯ-ನೇಕಾನರ್ಥವ್ರಾತಂ ಪ್ರತಿಪದ್ಯನ್ತೇ ಇತ್ಯರ್ಥಃ । ಯತ ಏವಮ್ ಅಥ ತಸ್ಮಾತ್ ಧೀರಾಃ ವಿವೇಕಿನಃ ಪ್ರತ್ಯಗಾತ್ಮಸ್ವರೂಪಾವಸ್ಥಾನಲಕ್ಷಣಮ್ ಅಮೃತತ್ವಂ ಧ್ರುವಂ ವಿದಿತ್ವಾ । ದೇವಾದ್ಯಮೃತತ್ವಂ ಹಿ ಅಧ್ರುವಮ್ । ಇದಂ ತು ಪ್ರತ್ಯಗಾತ್ಮಸ್ವರೂಪಾವಸ್ಥಾನಲಕ್ಷಣಂ 'ನ ಕರ್ಮಣಾ ವರ್ಧತೇ ನೋ ಕನೀಯಾನ್' ಇತಿ (ಶ್ರುತೇಃ) ಧ್ರುವಮ್ । ತದೇವಂಭೂತಂ ಕೂಟಸ್ಥಮವಿಚಾಲ್ಯಮಮೃತತ್ವಂ ವಿದಿತ್ವಾ ಅಧ್ರುವೇಷು ಸರ್ವ ಪದಾರ್ಥೇಷು ಅನಿತ್ಯೇಷು ನಿರ್ಧಾರ್ಯ ಬ್ರಾಹ್ಮಣಾ ಇಹ ಸಂಸಾರೇ ಅನರ್ಥ ಪ್ರಾಯೇ ನ ಪ್ರಾರ್ಥಯನ್ತೇ ಕಿಂಚಿದಪಿ । ಪ್ರತ್ಯಗಾತ್ಮದರ್ಶನಪ್ರತಿಕೂಲತ್ವಾತ್। ಪುತ್ರವಿತ್ತ ಲೋಕೈಷಣಾಭ್ಯೋ ವ್ಯುತ್ತಿಷ್ಠನ್ತ್ಯೇವ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಪರಾಕ್ಕಾಗಿರುವ ಎಂದರೆ ಹೊರಗೇ ಇರುವ ಕಾಮಗಳನ್ನು ಎಂದರೆ ಕಾಮಿಸುವ ವಿಷಯಗಳನ್ನು ಬಾಲರು ಎಂದರೆ ಅಲ್ಪಬುದ್ಧಿಯುಳ್ಳ (ಜನ)ರು ಅನುಸರಿಸುತ್ತಿರುವರು, ಹಿಂಬಾಲಿಸುತ್ತಿರುವರು. ಅವರು ಈ ಕಾರಣದಿಂದ ಹರಡಿಕೊಂಡಿರುವ ಎಂದರೆ ವಿಸ್ತಾರವಾಗಿರುವ, ಎಲ್ಲೆಲ್ಲಿಯೂ ಹಬ್ಬಿಕೊಂಡಿರುವ **ಮೃತ್ಯುವಿನ ಪಾಶವನ್ನು ಎಂದರೆ ಅವಿದ್ಯೆ, ಕಾಮ, ಕರ್ಮ- ಇವುಗಳ ಸಮುದಾಯದ[1] ಪಾಶವನ್ನು - 'ಯೇನ ಪಾಶ್ಯತೇ' ಎಂದರೆ ಯಾವದರಿಂದ ಕಟ್ಟುಬೀಳುವರೋ ಅದು ಪಾಶವು ; ಆ ದೇಹೇಂದ್ರಿಯಾದಿಗಳನ್ನು ಕೂಡುವದು, (ಅವುಗಳನ್ನು) ಬಿಟ್ಟಗಲು ವದು ಎಂಬ ಆ ಪಾಶವನ್ನು ಪಡೆಯುತ್ತಾರೆ.** ಎಡೆಬಿಡದೆ ಹುಟ್ಟುವದು, ಸಾಯುವದು, ಮುಪ್ಪು, ಬೇನೆ- ಮುಂತಾದ ಅನೇಕ ಅನರ್ಥಗಳ ಸಮೂಹವನ್ನು ಹೊಂದುತ್ತಾರೆ[2] ಎಂದರ್ಥ.

1. ಅವಿದ್ಯಾಕಾಮಕರ್ಮಗಳಿಂದ - ದೇಹೇಂದ್ರಿಯಗಳನ್ನು ಪಡೆಯುವ ಜನ್ಮ, ಅವನ್ನು ಬಿಟ್ಟಗಲುವ ಮರಣ - ಇವುಗಳಾಗುತ್ತಿರುವದರಿಂದ ಅವಿದ್ಯಾದಿಗಳ ಸಮುದಾಯವೇ ಮೃತ್ಯು.

2. ಜನ್ಮಮರಣಗಳನ್ನು ಮತ್ತೆ ಮತ್ತೆ ಉಂಟುಮಾಡುತ್ತಿರುವ ಅವಿದ್ಯಾಕಾಮಕರ್ಮ ಗಳೆಂಬ ಮೃತ್ಯುವಿನ ಬಲೆಗೆ ಬೀಳುತ್ತಿರುವರು.

ಹೀಗಿದೆಯಷ್ಟೆ. ಇನ್ನು ಆ ಕಾರಣದಿಂದ ಧೀರರಾದವರು ವಿವೇಕಿಗಳು ಪ್ರತ್ಯಗಾತ್ಮನ ಸ್ವರೂಪದಿಂದ ನೆಲೆನಿಲ್ಲುವದೆಂಬ **ಅಮೃತತ್ವವನ್ನು** ನಿತ್ಯವೆಂದು **ತಿಳಿದುಕೊಂಡು**- ದೇವತೆಗಳ (ಸ್ಥಾನವೇ) ಮುಂತಾದ **ಅಮೃತವು** ಅನಿತ್ಯವಾಗಿರುತ್ತದೆ[1]. ಪ್ರತ್ಯಗಾತ್ಮಸ್ವರೂಪದಿಂದ ನೆಲೆನಿಲ್ಲುವದೆಂಬ ಇದಾದರೋ 'ಕರ್ಮದಿಂದ ಬೆಳೆಯುವದಿಲ್ಲ, ಸಣ್ಣಗಾಗುವದೂ ಇಲ್ಲ'[2]ವಾದ್ದರಿಂದ ನಿತ್ಯವು. ಹೀಗೆ ಇರುವ **ಕೂಟಸ್ಥವಾದ ಚಲಿಸದ ಅಮೃತತ್ವವನ್ನು**[3] ಅಧ್ರುವವಾದ ಎಂದರೆ ಅನಿತ್ಯವಾದ ಪದಾರ್ಥಗಳಲ್ಲೆಲ್ಲ (ನಿತ್ಯವೆಂದು)[4] ತಿಳಿದುಕೊಂಡು ನಿಶ್ಚಯಿಸಿಕೊಂಡು ಬ್ರಾಹ್ಮಣರು ಈ ಅನರ್ಥಬಹುಲವಾದ ಸಂಸಾರದಲ್ಲಿ ಯಾವದೊಂದನ್ನೂ ಬೇಡುವದಿಲ್ಲ ; ಏಕೆಂದರೆ (ಅಂಥ ಬಯಕೆಯು) ಪ್ರತ್ಯಗಾತ್ಮನನ್ನು ಕಾಣುವದಕ್ಕೆ ಪ್ರತಿಕೂಲವಾಗಿರುತ್ತದೆ. ಮಕ್ಕಳು, ವಿತ್ತ, ಲೋಕ ಎಂಬಿವುಗಳ ಬಯಕೆಗಳನ್ನು ಬಿಟ್ಟುಹೋಗಿಯೇ ತೀರುತ್ತಾರೆ[5] ಎಂದರ್ಥ.

## ಆತ್ಮನನ್ನು ಅರಿಯುವ ರೀತಿ

(ಭಾಷ್ಯ)

**೧೧೪. ಯದ್ವಿಜ್ಞಾನಾನ್ನ ಕಿಂಚಿದನ್ಯತ್ ಪ್ರಾರ್ಥಯನ್ತೇ ಬ್ರಾಹ್ಮಣಾ ಕಥಂ ತದಧಿಗಮ ಇತಿ ? ಉಚ್ಯತೇ -**

(ಭಾಷ್ಯಾರ್ಥ)

ಯಾವ (ಆತ್ಮನನ್ನು) ಅರಿತುಕೊಂಡಿರುವದರಿಂದ ಬ್ರಾಹ್ಮಣರು ಮತ್ತೊಂದನ್ನು ಬಯಸದೆ ಇರುವರೋ ಅವನನ್ನು ಹೇಗೆ ಅರಿಯಬೇಕು ?- ಎಂಬುದನ್ನು ಹೇಳುತ್ತಾರೆ :-

**ಯೇನ ರೂಪಂ ರಸಂ ಗನ್ಧಂ**
**ಶಬ್ದಾನ್ ಸ್ಪರ್ಶಾಗ್ಂಶ್ಚ ಮೈಥುನಾನ್ ।**
**ಏತೇನೈವ ವಿಜಾನಾತಿ**
**ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್** ॥ ೩ ॥

---

1. ಕಲ್ಪವು ಮುಗಿಯುತ್ತಲೂ ಈ ಸ್ಥಾನಗಳು ಲಯವಾಗುವವು. ಆದ್ದರಿಂದ ಅನಿತ್ಯ. 2. ಬೃ. ೪-೪-೨೩, ತೈ. ಬ್ರಾ. ೧೨-೯-೭.

3. ಯಾವಾಗಲೂ ಒಂದೇ ರೂಪವಾಗಿರುವ, ಕಾಲದ ಹೊಡೆತವಿಲ್ಲದೆ, ಮಾರ್ಪಡದೆ ಇರುವದು ಕೂಟಸ್ಥ, ಸ್ಥಲದಿಂದ ಸ್ಥಲಕ್ಕೆ ಹೋಗದೆ ಇರುವದು ಅವಿಚಾಲಿ.

4. ಗೀ. ೧೩-೨೭, ಶ್ವೇ. ೬-೧೩.

5. ಬೃ. ೪-೪-೨೨. ಏಷಣಾತ್ರಯವನ್ನು ಬಿಡುವದಕ್ಕೆ ಆತ್ಮಪ್ರಾಪ್ತಿಯು ನಿತ್ಯವೆಂಬ ಜ್ಞಾನವು ಕಾರಣವಾಗುವದೆಂದು ಭಾವ. ಏಷಣಾತ್ರಯತ್ಯಾಗವು ಜ್ಞಾನಕ್ಕೆ ಸಾಧನವು, ಜ್ಞಾನದಿಂದ ಅದು ನಿತ್ಯಸಿದ್ಧವಾಗುವದು. ಬೃ. ೩-೫-೧, ಗೀ. ಭಾ. ೧೮-೫೫.

೩. ಯಾವ ಇದರಿಂದಲೇ ರೂಪವನ್ನೂ ರಸವನ್ನೂ ಗಂಧವನ್ನೂ ಶಬ್ದಗಳನ್ನೂ ಸ್ಪರ್ಶಗಳನ್ನೂ ಮೈಥುನಗಳನ್ನೂ ಚೆನ್ನಾಗಿ ಅರಿತುಕೊಳ್ಳುತ್ತಿರುವನೋ (ಆ ಆತ್ಮನಿಗೆ) ಇಲ್ಲಿ ಏನು ಉಳಿದಿರುವದು ? ಇದೇ ಅದು.

(ಭಾಷ್ಯ)

೧೧೫. ಯೇನ ವಿಜ್ಞಾನಸ್ವಭಾವೇನ ಆತ್ಮನಾ ರೂಪಂ ರಸಂ ಗನ್ಧಂ ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ಮೈಥುನನಿಮಿತ್ತಾನ್ ಸುಖಪ್ರತ್ಯಯಾನ್ ವಿಜಾನಾತಿ ವಿಸ್ಪಷ್ಟಂ ಜಾನಾತಿ ಸರ್ವೋಽ ಲೋಕಃ । ನನು ನೈವಂಪ್ರಸಿದ್ಧಿರ್ಲೋಕಸ್ಯ 'ಆತ್ಮನಾ ದೇಹಾದಿವಿಲಕ್ಷಣೇನ ಅಹಂ ವಿಜಾನಾಮಿ' ಇತಿ । 'ದೇಹಾದಿಸಙ್ಘಾತೋಽಹಂ ವಿಜಾನಾಮಿ' ಇತಿ ತು ಸರ್ವೋಽ ಲೋಕೋಽವಗಚ್ಛತಿ । ನ ತ್ವೇವಮ್ । ದೇಹಾದಿಸಙ್ಘಾತಸ್ಯಾಪಿ ಶಬ್ದಾದಿಸ್ವರೂಪತ್ವಾವಿಶೇಷಾತ್ ವಿಜ್ಞೇಯತ್ವಾವಿಶೇಷಾಚ್ಚ ನ ಯುಕ್ತಂ ವಿಜ್ಞಾತೃತ್ವಮ್ । ಯದಿ ಹಿ ದೇಹಾದಿಸಙ್ಘಾತೋ ರೂಪಾದ್ಯಾತ್ಮಕಃ ಸನ್ ರೂಪಾದೀನ್ ವಿಜಾನೀಯಾತ್, ತರ್ಹಿ ಬಾಹ್ಯಾ ಅಪಿ ರೂಪಾದಯೋಽನ್ಯೋನ್ಯಂ ಸ್ವಂ ಸ್ವಂ ರೂಪಂ ಚ ವಿಜಾನೀಯುಃ । ನ ಚೈತದಸ್ತಿ । ತಸ್ಮಾತ್, ದೇಹಾದಿಲಕ್ಷಣಾಂಶ್ಚ ರೂಪಾದೀನ್ ಏತೇನೈವ ದೇಹಾದಿವ್ಯತಿರಿಕ್ತೇನೈವ ವಿಜ್ಞಾನಸ್ವಭಾವೇನಾತ್ಮನಾ ವಿಜಾನಾತಿ ಲೋಕಃ । ಯಥಾ 'ಯೇನ ಲೋಹೋ ದಹತಿ ಸೋಽಗ್ನಿಃ' ಇತಿ ತದ್ವತ್ । ಆತ್ಮನೋ ಅವಿಜ್ಞೇಯಂ ಕಿಮ್ ಅತ್ರ ಅಸ್ಮಿನ್ ಲೋಕೇ ಪರಿಶಿಷ್ಯತೇ ನ ಕಿಂಚಿತ್ ಪರಿಶಿಷ್ಯತೇ । ಸರ್ವಮೇವತ್ವಾತ್ಮನಾ ವಿಜ್ಞೇಯಮ್ । ಯಸ್ಯಾತ್ಮನೋಽವಿಜ್ಞೇಯಂ ನ ಕಿಂಚಿತ್ ಪರಿಶಿಷ್ಯತೇ ಸ ಆತ್ಮಾ ಸರ್ವಜ್ಞಃ । ಏತದ್ವೈ ತತ್ । ಕಿಂ ತತ್ ? ಯನ್ನಚಿಕೇತಸಾ ಪೃಷ್ಟಂ ದೇವಾದಿಭಿರಪಿ ವಿಚಿಕಿತ್ಸಿತಂ, ಧರ್ಮಾದಿಭ್ಯೋಽನ್ಯತ್, ವಿಷ್ಣೋಃ ಪರಮಂ ಪದಂ ಯಸ್ಮಾತ್ಪರಂ ನಾಸ್ತಿ ತದ್ವೈ ಏತತ್ ಅಧಿಗತಮ್ ಇತ್ಯರ್ಥಃ ॥

(ಭಾಷ್ಯಾರ್ಥ)

ಅರಿವಿನ ಸ್ವಭಾವವೇ ಆಗಿರುವ ಯಾವ ಆತ್ಮನಿಂದ ರೂಪವನ್ನೂ ರಸವನ್ನೂ ಗಂಧವನ್ನೂ ಶಬ್ದಗಳನ್ನೂ ಸ್ಪರ್ಶಗಳನ್ನೂ ಮೈಥುನಗಳನ್ನೂ ಎಂದರೆ ಮೈಥುನದಿಂದ ಆಗುವ ಸುಖದ ಅರಿವುಗಳನ್ನೂ ಪ್ರತಿಯೊಬ್ಬ ಮನುಷ್ಯನೂ 'ವಿಜಾನಾತಿ' ವಿಸ್ಪಷ್ಟವಾಗಿ ಅರಿಯುವನೋ-

(ಆಕ್ಷೇಪ) :- 'ದೇಹವೇ ಮುಂತಾದವುಗಳಿಂದ ಬೇರೆಯ ಸ್ವಭಾವದವನಾದ ಆತ್ಮನಿಂದ ನಾನು ಅರಿಯುತ್ತಿದೇನೆ' ಎಂಬೀಪರಿಯಲ್ಲಿ ಜನರಿಗೆ ಗೊತ್ತಿರುವದಿಲ್ಲ ವಲ್ಲ ! 'ದೇಹವೇ ಮುಂತಾದವುಗಳ ಗುಂಪೇ ಆಗಿರುವ ನಾನು ಅರಿಯುತ್ತಿದೇನೆ' ಎಂದೇ ಪ್ರತಿಯೊಬ್ಬನೂ ತಿಳಿದುಕೊಂಡಿರುತ್ತಾನಲ್ಲವೆ ?

(ಪರಿಹಾರ) :- ಹಾಗಲ್ಲ. (ಏಕೆಂದರೆ) ದೇಹವೇ ಮುಂತಾದವುಗಳ ಗುಂಪುಕೂಡ ಶಬ್ದಾದಿಗಳ ಸ್ವರೂಪವೇ ಆಗಿರುವದರಿಂದಲೂ ಅದು ವಿಜ್ಞೇಯವೇ ಎಂಬುದು ಸಮಾನವಾಗಿರುವದರಿಂದಲೂ ಅದು (ಮತ್ತೊಂದನ್ನು) ಅರಿಯುವ ದೆಂಬುದು ಸರಿಯಲ್ಲ. ದೇಹಾದಿಗಳ ಗುಂಪು ರೂಪಾದಿಗಳ ಸ್ವರೂಪವೇ ಆಗಿದ್ದರೂ ರೂಪಾದಿಗಳನ್ನು ಅರಿಯಬಹುದಾದರೆ[1] ಹೊರಗಿನ ರೂಪಾದಿಗಳೂ ಒಂದ ನ್ನೊಂದು (ಅರಿಯಬಹುದು), ತಮ್ಮತಮ್ಮ ರೂಪವನ್ನೂ ಅರಿತುಕೊಳ್ಳಬಹು ದೆಂದಾಗುವದು.[2] ಆದರೆ ಹೀಗಿಲ್ಲ. ಆದ್ದರಿಂದ ದೇಹವೇ ಮುಂತಾದ ರೂಪ ದಲ್ಲಿರುವ ರೂಪಾದಿಗಳನ್ನೂ ದೇಹಾದಿಗಳಿಗಿಂತ ಬೇರೆಯೇ ಆಗಿರುವ ಈ ಚೈತನ್ಯ ಸ್ವರೂಪನಾದ ಆತ್ಮನಿಂದಲೇ ಜನರು ಅರಿತುಕೊಳ್ಳುತ್ತಿರುವರು (ಎಂದಾಯಿತು). ಹೇಗೆ 'ಯಾವದರಿಂದ ಕಬ್ಬಿಣವು ಸುಡುತ್ತದೆಯೋ ಅದೇ ಬೆಂಕಿಯು' ಎನ್ನುವೆವೋ[3] ಹಾಗೆಯೇ (ಇದು). ಆತ್ಮನ ಅರಿವಿಗೆ ವಿಷಯವಾಗದೆ ಇರುವದು ಇಲ್ಲಿ ಎಂದರೆ ಈ ಲೋಕದಲ್ಲಿ ಯಾವದು ಉಳಿದಿರುವದು ? ಯಾವದೊಂದೂ ಉಳಿದಿರುವದಿಲ್ಲ. ಎಲ್ಲವೂ ಆತ್ಮನ ಅರಿವಿಗೆ ವಿಷಯವೇ ಆಗಿರುತ್ತದೆ. ಯಾವ ಆತ್ಮನ ಅರಿವಿಗೆ ವಿಷಯವಾಗದೆ ಇರುವದು ಮತ್ತೆ ಯಾವದೊಂದೂ ಉಳಿದಿರುವದಿಲ್ಲವೋ ಆ **ಸರ್ವಜ್ಞನೇ**[4] ಆತ್ಮನು. ಇದೇ ಅದು. ಅದು ಎಂದರೆ ಯಾವದು ? ಎಂದರೆ ದೇವತೆಗಳೇ ಮುಂತಾದವರಿಗೂ ಸಂಶಯವನ್ನುಂಟುಮಾಡಿರುವದಾಗಿಯೂ ಧರ್ಮವೇ ಮುಂತಾದವುಗಳನ್ನು[5] ಮೀರಿರುವದಾಗಿಯೂ ತನಗಿಂತ ಹೆಚ್ಚಿನದು ಇನ್ನೊಂದಿಲ್ಲದ ವಿಷ್ಣುವಿನ ಪರಮಪದವಾಗಿಯೂ[6] ಇರುವ ಯಾವದನ್ನು ನಚಿಕೇತನು ಕೇಳಿದ್ದನೋ ಅದು ಇದು, (ಈಗ) ತಿಳಿದದ್ದು[7] ಎಂದರ್ಥ.

---

1. ಜಡವಾಗಿರುವ ರೂಪಾದಿಗಳ ಗುಂಪು ರೂಪಾದಿಗಳನ್ನು ನೋಡಬಹು ದೆಂದರೆ.

2. ರೂಪವು ಶಬ್ದಾದಿಗಳನ್ನೂ ತನ್ನ ಸ್ವರೂಪವೇ ಆದ ರೂಪವನ್ನೂ ಅರಿಯಬಹು ದೆಂದಾಗುವದು ; ಹೀಗೆಯೇ ರಸವೇ ಮುಂತಾದವುಗಳೂ ಮಿಕ್ಕ ಜಡವಿಷಯಗಳನ್ನೂ ತಮ್ಮತಮ್ಮ ಸ್ವರೂಪವನ್ನೂ ಅರಿಯಬಹುದೆಂದಾಗುವದು.

3. ಬೆಂಕಿಯಲ್ಲಿ ಸ್ವಭಾವವಾಗಿ ಬಿಸಿಯಿದೆ, ಕಬ್ಬಿಣದಲ್ಲಿ ತೋರುತ್ತದೆ ; ಇದರಂತೆ ಆತ್ಮನ ಸ್ವಭಾವವಾದ ಜ್ಞಾನವು ಅನಾತ್ಮದಲ್ಲಿರುವಂತೆ ಅಜ್ಞರಿಗೆ ತೋರುತ್ತದೆ.

4. ಎಲ್ಲವನ್ನೂ ಸ್ವಭಾವವಾದ ಚೈತನ್ಯದಿಂದ ಬೆಳಗುತ್ತಿರುವ ಸಾಕ್ಷಿಯೇ ಆತ್ಮನು.

5. ಧರ್ಮ ಅಧರ್ಮ, ಕೃತ ಅಕೃತ, ಭೂತ ಭವ್ಯ - ಇವುಗಳನ್ನು (೧-೨-೧೪).

6. ೧-೩-೯. 7. ಯಾವದರಿಂದ ಹೊರಗಿನ ಶಬ್ದಸ್ಪರ್ಶರೂಪರಸಗಂಧಗಳನ್ನೂ ಅವುಗಳ ಸಂಘಾತವಾದ ಒಳಗಿನ ದೇಹಾದಿಗಳನ್ನೂ ನೋಡುತ್ತಾನೋ ಆ ಸಾಕ್ಷಿಚೈತನ್ಯವೇ ಬ್ರಹ್ಮವು ಎಂದರ್ಥ.

(ಭಾಷ್ಯ)

**೧೧೬. ಅತಿಸೂಕ್ಷ್ಮತ್ವಾದ್ದುರ್ವಿಜ್ಞೇಯಮ್ ಇತಿ ಮತ್ವಾ ಏತಮೇವಾರ್ಥಂ ಪುನಃ ಪುನರಾಹ-**

(ಭಾಷ್ಯಾರ್ಥ)

ಬಹುಸೂಕ್ಷ್ಮವಾಗಿರುವದರಿಂದ (ಇದನ್ನು) ತಿಳಿಯುವದು ಬಲುಕಷ್ಟ ಎಂಬ ಅಭಿಪ್ರಾಯದಿಂದ ಇದೇ ವಿಷಯವನ್ನೇ ಮತ್ತೆಮತ್ತೆ ಹೇಳುತ್ತಾನೆ :-

**ಸ್ವಪ್ನಾನ್ತಂ ಜಾಗರಿತಾನ್ತಂ ಚೋಭೌ ಯೇನಾನುಪಶ್ಯತಿ ।**
**ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥ ೪ ॥**

೪. ಸ್ವಪ್ನಾಂತವನ್ನೂ ಜಾಗರಿತಾಂತವನ್ನೂ ಎರಡನ್ನೂ ಯಾವನಿಂದ ಕಂಡುಕೊಳ್ಳುತ್ತಾನೋ ದೊಡ್ಡವನಾದ ವಿಭುವಾದ (ಆ) ಆತ್ಮನನ್ನು ತಿಳಿದುಕೊಂಡ ಧೀರನು ಶೋಕಿಸುವದಿಲ್ಲ.

(ಭಾಷ್ಯ)

**೧೧೭. ಸ್ವಪ್ನಾನ್ತಂ ಸ್ವಪ್ನಮಧ್ಯಮ್ । ಸ್ವಪ್ನವಿಜ್ಞೇಯಮ್ ಇತ್ಯೇತತ್ । ತಥಾ ಜಾಗರಿತಾನ್ತಂ ಜಾಗರಿತಮಧ್ಯಂ ಜಾಗರಿತವಿಜ್ಞೇಯಂ ಚ । ಉಭೌ ಸ್ವಪ್ನಜಾಗರಿತಾನ್ತೌ । ಯೇನ ಆತ್ಮನಾ ಅನುಪಶ್ಯತಿ ಲೋಕಃ ಇತಿ ಸರ್ವಂ ಪೂರ್ವವತ್ । ತಂ ಮಹಾನ್ತಂ ವಿಭುಮ್ ಆತ್ಮಾನಂ ಮತ್ವಾ ಅವಗಮ್ಯ ಆತ್ಮಭಾವೇನ ಸಾಕ್ಷಾತ್ 'ಅಹಮಸ್ಮಿ ಪರಮಾತ್ಮಾ' ಇತಿ ಧೀರಃ ನ ಶೋಚತಿ ॥**

(ಭಾಷ್ಯಾರ್ಥ)

ಸ್ವಪ್ನಾಂತವನ್ನು ಎಂದರೆ ಸ್ವಪ್ನದಲ್ಲಿರುವದನ್ನು. ಕನಸಿನಲ್ಲಿ ಜ್ಞಾನಕ್ಕೆ ವಿಷಯವಾಗಿರುವದನ್ನು ಎಂದರ್ಥ. ಹಾಗೂ ಜಾಗರಿತಾಂತವನ್ನು ಎಂದರೆ ಜಾಗರಿತದಲ್ಲಿರುವದನ್ನೂ, ಎಚ್ಚರದಲ್ಲಿ ಜ್ಞಾನಕ್ಕೆ ವಿಷಯವಾಗಿರುವದನ್ನೂ (ಎಂದರ್ಥ). ಸ್ವಪ್ನಾಂತ, ಜಾಗರಿತಾಂತ- (ಈ) ಎರಡನ್ನೂ 'ಯಾವ ಆತ್ಮನಿಂದ ಮನುಷ್ಯನು ಕಂಡುಕೊಳ್ಳುತ್ತಾನೋ' ಎಂಬುದನ್ನೆಲ್ಲ ಹಿಂದಿನ ಮಂತ್ರದಂತೆಯೇ[1] ತಿಳಿಯಬೇಕು. ಆ ದೊಡ್ಡ ವಿಭುವಾದ[2] ಆತ್ಮನನ್ನು ತಿಳಿದುಕೊಂಡ, **ನೇರಾಗಿ 'ನಾನು ಪರಮಾತ್ಮ**

---

1. ಎಚ್ಚರವನ್ನೂ ಕನಸನ್ನೂ ವಿಷಯವಾಗಿ ಮಾಡಿಕೊಂಡು ಅರಿಯುವದು ಜಡವಾದ ಅಂತಃಕರಣವಲ್ಲ, ಸಾಕ್ಷಿಚೈತನ್ಯವೇ - ಎಂದು ಅರ್ಥಮಾಡಿಕೊಳ್ಳಬೇಕು ಎಂದು ಭಾವ.

2. ಅವಸ್ಥೆಗಳ ವಿಷಯಗಳು ಆಯಾ ಅವಸ್ಥೆಗೆ ಕಟ್ಟುಬಿದ್ದಿರುವದರಿಂದ ಅಲ್ಪವಾಗಿರುವವು. ಎರಡನ್ನೂ ನೋಡುವ ಆತ್ಮನು ಮಹಾನ್, ಎಲ್ಲವನ್ನೂ ಅರಿಯುವ ಚೈತನ್ಯರೂಪನಾದ್ದರಿಂದ ವ್ಯಾಪಿಯು.

ನಾಗಿರುವೆನು' ಎಂದು ತನ್ನ ಸ್ವರೂಪದಿಂದಲೇ ನಿಶ್ಚಯಿಸಿಕೊಂಡ[1] ಧೀರನು ಶೋಕಿಸುವದಿಲ್ಲ.

## ಆತ್ಮನೂ ಹಿರಣ್ಯಗರ್ಭನೂ ಅದ್ವಿತೀಯವಾದ ಬ್ರಹ್ಮವೇ

**ಯ ಇಮಂ ಮಧ್ವದಂ ವೇದ ಆತ್ಮಾನಂ ಜೀವಮನ್ತಿಕಾತ್ ।**

**ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ । ಏತದ್ವೈ ತತ್ ॥೫॥**

೫. ಯಾವನು ಈ ಜೇನುತುಪ್ಪವನ್ನು ತಿನ್ನುವ ಜೀವನನ್ನು ಹತ್ತಿರವಿರುವ ಹಿಂದುಮುಂದಿನ ಒಡೆಯನಾದ ಆತ್ಮನೆಂದು ಅರಿತುಕೊಳ್ಳುವನೋ (ಅವನು) ಆಮೇಲೆ ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ. ಇದೇ ಅದು.

(ಭಾಷ್ಯ)

**೧೧೮. ಕಿಂ ಚ ಯಃ ಕಶ್ಚಿತ್ ಇಮಂ ಮಧ್ವದಂ ಕರ್ಮಫಲಭುಜಂ ಜೀವಂ ಪ್ರಾಣಾದಿಕಲಾಪಸ್ಯ ಧಾರಯಿತಾರಮ್ ಆತ್ಮಾನಂ ವೇದ ವಿಜಾನಾತಿ ಅನ್ತಿಕಾತ್ ಅನ್ತಿಕೇ ಸಮೀಪೇ ಈಶಾನಮ್ ಈಶಿತಾರಂ ಭೂತಭವ್ಯಸ್ಯ ಕಾಲತ್ರಯಸ್ಯ । ತತಃ ತದ್ವಿಜ್ಞಾನಾದೂರ್ಧ್ವಮ್ ಆತ್ಮಾನಂ ನ ವಿಜುಗುಪ್ಸತೇ ನ ಗೋಪಾಯಿತುಮಿಚ್ಛತಿ । ಅಭಯಪ್ರಾಪ್ತತ್ವಾತ್ । ಯಾವದ್ ಹಿ ಭಯಮಧ್ಯಸ್ಥೋಽನಿತ್ಯಮಾತ್ಮಾನಂ ಮನ್ಯತೇ ತಾವದ್ ಗೋಪಾಯಿತುಮಿಚ್ಛತ್ಯಾತ್ಮಾನಮ್ । ಯದಾ ತು ನಿತ್ಯಮದ್ವೈತಮಾತ್ಮಾನಂ ವಿಜಾನಾತಿ ತದಾ ಕಃ ಕಿಂ ಕುತೋ ವಾ ಗೋಪಾಯಿತುಮಿಚ್ಛೇತ್ ? ಏತದ್ವೈ ತದಿತಿ ಪೂರ್ವವತ್ ॥**

(ಭಾಷ್ಯಾರ್ಥ)

ಮತ್ತು ಯಾವನೇ ಆಗಲಿ ಈ ಜೇನುತುಪ್ಪವನ್ನು ತಿನ್ನುವ ಎಂದರೆ ಕರ್ಮಫಲವನ್ನು[2] ಅನುಭವಿಸುತ್ತಿರುವ ಜೀವನನ್ನು ಎಂದರೆ ಪ್ರಾಣಾದಿಗಳ ಸಮೂಹವನ್ನು ಧರಿಸಿರುವ (ಜೀವನನ್ನು) ಅನ್ತಿಕಾತ್ = ಅನ್ತಿಕೇ ಹತ್ತಿರದಲ್ಲಿ ಬಳಿಯಲ್ಲಿರುವ ಹಿಂದುಮುಂದಿನ ಎಂದರೆ ಮೂರುಕಾಲಕ್ಕೂ ಒಡೆಯನಾದ[3] (ಅದನ್ನು) ಆಳುತ್ತಿರುವ ಆತ್ಮನೆಂದು ಅರಿತುಕೊಳ್ಳವನೋ (ಅವನು) ಆಮೇಲೆ ಎಂದರೆ ಅರಿವು

---

1. ತನ್ನ ಸಂಸಾರಿಸ್ವರೂಪವು ಮಿಥ್ಯೆಯೆಂದೂ ಪರಮಾತ್ಮನೇ ತಾನೆಂದೂ ನಿಶ್ಚಯಿಸಿಕೊಂಡ.

2. ''ಮಧು'' ಎಂಬ ಶಬ್ದಕ್ಕೆ ಕರ್ಮಫಲವೆಂಬ ಅರ್ಥವನ್ನು ಮಾಡುವದಕ್ಕೆ ಆಧಾರ ಋ. ವೇ. ೧-೨೨-೧೬೪-೨೨.

3. ಭೂತಭವ್ಯಗಳಿಗೆ ಹೊರತಾಗಿರುವವನು ಎಂದು ಕೇಳಿದ್ದಕ್ಕೆ ಉತ್ತರವಿದು.

ಉಂಟಾದ ಬಳಿಕ ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ ; ಏಕೆಂದರೆ (ಅವನು) ಅಭಯವನ್ನು ಹೊಂದಿರುತ್ತಾನೆ. ಎಲ್ಲಿಯವರೆಗೆ ತಾನು ಹೆದರಿಕೆಯಲ್ಲಿದ್ದುಕೊಂಡು[1] ತಾನು ಅನಿತ್ಯನೆಂದುಕೊಂಡಿರುವನೋ ಅಲ್ಲಿಯವರೆಗೆ ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುತ್ತಾನೆ. ಆದರೆ ಯಾವಾಗ ತಾನು ನಿತ್ಯವಾಗಿರುವ ಅದ್ವೈತನೆಂದು ಅರಿತುಕೊಳ್ಳುವನೋ ಆಗ ಯಾವನು ಏನನ್ನು ಏತರಿಂದ ಕಾಪಾಡಿಕೊಳ್ಳಲೆಳಸಬೇಕು ?[2] ''ಏತದ್ವೈ ತದ್'' ಎಂಬ ವಾಕ್ಯಕ್ಕೆ ಹಿಂದಿನ (ಮಂತ್ರ)ದಂತೆ (ವ್ಯಾಖ್ಯಾನಮಾಡಿಕೊಳ್ಳಬೇಕು).

(ಭಾಷ್ಯ)

**೧೧೯. ಯಃ ಪ್ರತ್ಯಗಾತ್ಮಾ ಈಶ್ವರಭಾವೇನ ನಿರ್ದಿಷ್ಟಃ ಸ ಸರ್ವಾತ್ಮಾ ಇತ್ಯೇತದ್ ದರ್ಶಯತಿ -**

(ಭಾಷ್ಯಾರ್ಥ)

ಯಾವ ಪ್ರತ್ಯಗಾತ್ಮನನ್ನು ಈಶ್ವರರೂಪನೆಂದು ತಿಳಿಸಲಾಯಿತೋ ಅವನು ಸರ್ವಾತ್ಮನು ಎಂಬುದನ್ನು ತಿಳಿಸುತ್ತಾನೆ :-

**ಯಃ ಪೂರ್ವಂ ತಪಸೋ ಜಾತಮದ್ಭ್ಯಃ ಪೂರ್ವಮಜಾಯತ ।**

**ಗುಹಾ ಪ್ರವಿಶ್ಯ ತಿಷ್ಠನ್ತಂ ಯೋ ಭೂತೇಭಿರ್ವ್ಯಪಶ್ಯತ ।**

**ಏತದ್ವೈ ತತ್ ॥ ೬ ॥**

೬. ಯಾವನು ನೀರಿಗಿಂತ ಮೊದಲು ಹುಟ್ಟಿದನೋ ಆ (ಬ್ರಹ್ಮದ) ತಪಸ್ಸಿನಿಂದ ಹುಟ್ಟಿರುವವನನ್ನು ಗುಹೆಯನ್ನು ಹೊಕ್ಕು ಭೂತಗಳೊಡನೆ ಇರುವವನನ್ನಾಯಾವನು ಕಾಣುತ್ತಾನೋ (ಅವನಿಗೆ) ಇದೇ ಅದು.

(ಭಾಷ್ಯ)

**೧೨೦. ಯಃ ಕಶ್ಚಿನ್ಮುಮುಕ್ಷುಃ ಪೂರ್ವಂ ಪ್ರಥಮಂ ತಪಸಃ ಜ್ಞಾನಾದಿಲಕ್ಷಣಾತ್ ಬ್ರಹ್ಮಣ ಇತ್ಯೇತತ್ । ಜಾತಮ್ ಉತ್ಪನ್ನಂ ಹಿರಣ್ಯಗರ್ಭಮ್ । ಕಿಮಪೇಕ್ಷ್ಯ ಪೂರ್ವಮಿತಿ ? ಆಹ- ಅದ್ಭ್ಯಃ ಪೂರ್ವಮ್ ಅಪ್ಸಹಿತೇಭ್ಯಃ ಪಞ್ಚಭೂತೇಭ್ಯಃ- ನ ಕೇವಲಾಭ್ಯೋಽದ್ಭ್ಯ ಇತ್ಯಭಿಪ್ರಾಯಃ । ಅಜಾಯತ ಉತ್ಪನ್ನಃ ಯಃ ತಂ ಪ್ರಥಮಜಂ ದೇವಾದಿಶರೀರಾಣ್ಯುತ್ಪಾದ್ಯ ಸರ್ವಪ್ರಾಣಿಗುಹಾಂ**

1. ಛಾಂ. ೬-೮-೬ ''ತೇಜಃ ಪರಸ್ಯಾಂ ದೇವತಾಯಾಮ್'' ಎಂಬುದರ ಭಾಷ್ಯವನ್ನು ನೋಡಿ. ತೈ. ಭಾ. ೨-೭. ಜನನಮರಣವೆಂಬುದೇ ಭಯವು. ಛಾಂ. ಭಾ. ೧-೩-೧.

2. ಈ ೬, ಬೃ. ೪-೪-೧೫.

**ಹೃದಯಾಕಾಶಂ ಪ್ರವಿಶ್ಯ ತಿಷ್ಠನ್ತಂ ಶಬ್ದಾದೀನುಪಲಭಮಾನಂ ಭೂತೇಭಿಃ ಭೂತೈಃ ಕಾರ್ಯಕರಣಲಕ್ಷಣೈಃ ಸಹ ತಿಷ್ಠನ್ತಂ ಯೋ ವ್ಯಪಶ್ಯತ ಯಃ ಪಶ್ಯತಿ ಇತ್ಯೇತತ್ । ಯ ಏವಂ ಪಶ್ಯತಿ ಸ ಏತದೇವ ಪಶ್ಯತಿ ಯತ್ ತತ್ ಪ್ರಕೃತಂ ಬ್ರಹ್ಮ ॥**

(ಭಾಷ್ಯಾರ್ಥ)

ಯಾವ ಮುಮುಕ್ಷುವೇ ಆಗಲಿ, ತಪಸ್ಸಿನಿಂದ ಎಂದರೆ ಬ್ರಹ್ಮದ ಜ್ಞಾನವೇ ಮುಂತಾದ ರೂಪದ (ತಪಸ್ಸಿನಿಂದ) ಎಂದರ್ಥ. ಮೊದಲು ಹುಟ್ಟಿದ - ಯಾವದಕ್ಕಿಂತ ಮೊದಲು ? ಎಂದರೆ ಹೇಳುತ್ತಾನೆ. ನೀರಿಗಿಂತ ಮೊದಲು. ನೀರಿನೊಡನೆ ಇರುವ ಪಂಚಭೂತಗಳಿಗಿಂತ[1] (ಎಂದರ್ಥ). ಬರಿಯ ನೀರಿಗಿಂತ ಎಂದಭಿಪ್ರಾಯವಲ್ಲ. (ಹೀಗೆ ನೀರಿಗಿಂತ ಮೊದಲು) ಹುಟ್ಟಿದವನು ಯಾವನೇ ಆ **ಪ್ರಥಮಜನಾದ ಹಿರಣ್ಯಗರ್ಭನನ್ನು** ದೇವಾದಿಶರೀರಗಳನ್ನು ಉಂಟುಮಾಡಿ ಎಲ್ಲಾ ಪ್ರಾಣಿಗಳ ಗುಹೆಯನ್ನು ಎಂದರೆ ಹೃದಯಾಕಾಶವನ್ನು ಹೊಕ್ಕು [2] ಇರುವವನನ್ನಾಗಿ ಶಬ್ದವೇ ಮುಂತಾದವುಗಳನ್ನು ಅರಿಯುವವನನ್ನಾಗಿಯೂ[3] ಭೂತೇಭಿಃ = ಭೂತೈಃ **ಕಾರ್ಯಕರಣಗಳ ರೂಪವಾದ ಭೂತಗಳೊಡನೆ** ಇರುವವನನ್ನಾಗಿ ಯಾವನು ವ್ಯಪಶ್ಯತ = ಪಶ್ಯತಿ ಕಾಣುತ್ತಾನೋ ಎಂದರ್ಥ. ಯಾವನು ಹೀಗೆ ಕಾಣುತ್ತಾನೋ ಅವನು ಇದನ್ನೇ, ಎಂದರೆ ಯಾವದು ಆ ಪ್ರಕೃತವಾದ ಬ್ರಹ್ಮವೋ (ಇದನ್ನೇ) ಕಾಣುತ್ತಾನೆ.

**ಯಾ ಪ್ರಾಣೇನ ಸಮ್ಭವತ್ಯದಿತಿರ್ದೇವತಾಮಯೀ । ಗುಹಾಂ ಪ್ರವಿಶ್ಯ**
**ತಿಷ್ಠನ್ತೀಂ ಯಾ ಭೂತೇಭಿರ್ವ್ಯಜಾಯತ । ಏತದ್ವೈ ತತ್　　॥ ೭ ॥**

೭. ದೇವತಾಮಯವಾದ ಯಾವ ಅದಿತಿಯು ಪ್ರಾಣ(ರೂಪ)ದಿಂದ ಉಂಟಾಗುವದೋ, (ಯಾವದು) ಗುಹೆಯನ್ನು ಹೊಕ್ಕು ಇರುವದೋ, ಯಾವದು ಭೂತಗಳೊಡನೆ ಹುಟ್ಟಿರುವದೋ ಇದೇ ಅದು.

(ಭಾಷ್ಯ)

**೧೨೧. ಕಿಂ ಚ ಯಾ (ಸರ್ವ)ದೇವತಾಮಯೀ ಸರ್ವದೇವತಾತ್ಮಿಕಾ ಪ್ರಾಣೇನ ಹಿರಣ್ಯಗರ್ಭರೂಪೇಣ ಪರಸ್ಮಾದ್ ಬ್ರಹ್ಮಣಃ ಸಮ್ಭವತಿ ಶಬ್ದಾದೀನಾಮ್ ಅದನಾತ್**

---

1. ಐ. ಭಾ. ೧-೧-೩, ಬೃ. ಭಾ. ೫-೫-೧, ಸೂ. ಭಾ. ೩-೧-೨ - ಇವುಗಳಲ್ಲಿ 'ಅಪ್' ಶಬ್ದದ ಅರ್ಥವನ್ನು ನೋಡಿರಿ.

2. ತೈ. ಭಾ. ೨-೬

3. ಜೀವನು ಶಬ್ದಾದಿಗಳನ್ನು ಅರಿಯುತ್ತಾನಷ್ಟೆ : ಇವನ ಆತ್ಮನಾದ ಚೈತನ್ಯಕ್ಕೂ ಹಿರಣ್ಯಗರ್ಭನಾದ ಆತ್ಮನ ಚೈತನ್ಯಕ್ಕೂ ಯಾವ ಭೇದವೂ ಇಲ್ಲ.

**ಅದಿತಿಃ । ತಾಂ ಪೂರ್ವವದ್ ಗುಹಾಂ ಪ್ರವಿಶ್ಯ ತಿಷ್ಠನ್ತೀಂ ಅದಿತಿಮ್ । ತಾಮೇವ ವಿಶಿನಷ್ಟಿ - ಯಾ ಭೂತೇಭಿಃ ಭೂತೈಃ ಸಮನ್ವಿತಾ ವ್ಯಜಾಯತ ಉತ್ಪನ್ನಾ ಇತ್ಯೇತತ್ ॥**

(ಭಾಷ್ಯಾರ್ಥ)

ಮತ್ತು ಯಾವ (ಸರ್ವ)[1] ದೇವತಾಮಯವಾದ ಸರ್ವದೇವತಾರೂಪವಾದ ಅದಿತಿಯು - ಶಬ್ದಾದಿಗಳನ್ನು ತಿನ್ನುವದರಿಂದ 'ಅದಿತಿ'ಯು - ಪರಬ್ರಹ್ಮದಿಂದ ಪ್ರಾಣ(ರೂಪ)ದಿಂದ ಎಂದರೆ ಹಿರಣ್ಯಗರ್ಭರೂಪದಿಂದ ಉಂಟಾಗುವದೋ ಆ ಹಿಂದೆ (೬ನೆಯ ಮಂತ್ರದಲ್ಲಿ) ಹೇಳಿದಂತೆ ಗುಹೆಯನ್ನು ಹೊಕ್ಕು ಇರುವದೋ (ಆ) ಅದಿತಿಯನ್ನು, ಆ ಅದಿತಿಗೇ ವಿಶೇಷಣವನ್ನು ಹೇಳುತ್ತಾನೆ ; ಯಾವ (ಅದಿತಿಯು) ಭೂತೇಭಿಃ = ಭೂತೈಃ ಭೂತಗಳೊಡನೆ ಕೂಡಿಕೊಂಡು ಹುಟ್ಟಿರುವದೋ ಉಂಟಾಗಿರುವದೋ ಎಂದರ್ಥ[2].

**ಅರಣ್ಯೋರ್ನಿಹಿತೋ ಜಾತವೇದಾ**
**ಗರ್ಭ ಇವ ಸುಭೃತೋ ಗರ್ಭಿಣೀಭಿಃ ।**
**ದಿವೇ ದಿವ ಈಡ್ಯೋ ಜಾಗೃವದ್ಭಿ-**
**ರ್ಹವಿಷ್ಮದ್ಭಿರ್ಮನುಷ್ಯೇಭಿರಗ್ನಿಃ । ಏತದ್ವೈ ತತ್ ॥ ೮ ॥**

೮. ಗರ್ಭಿಣಿಯರಿಂದ ಗರ್ಭವು ಹೇಗೋ ಹಾಗೆ ಅರಣಿಗಳೆರಡರಲ್ಲಿಯೂ ಇಡಲ್ಪಟ್ಟು ಚೆನ್ನಾಗಿ ಧರಿಸಲ್ಪಟ್ಟಿರುವ ಜಾತವೇದನು, ಎಚ್ಚರವಾಗಿರುವ ಹವಿಷ್ಮಂತರಾದ ಮನುಷ್ಯರಿಂದ ದಿನದಿನವೂ ಸ್ತೋತ್ರಮಾಡಲ್ಪಡುವ ಅಗ್ನಿಯು, ಇದೇ ಅದು.

(ಭಾಷ್ಯ)

**೧೨೨. ಕಿಂ ಚ ಯಃ ಅಧಿಯಜ್ಞಂ ಉತ್ತರಾಧರಾರಣ್ಯೋಃ ನಿಹಿತಃ ಸ್ಥಿತಃ ಜಾತವೇದಾ ಅಗ್ನಿಃ ಪುನಃ ಸರ್ವಹವಿಷಾಂ ಭೋಕ್ತಾ ಅಧ್ಯಾತ್ಮಂ ಚ ಯೋಗಿಭಿಃ ಗರ್ಭ ಇವ ಗರ್ಭಿಣೀಭಿಃ ಅನ್ತರ್ವತ್ನೀಭಿಃ ಅಗರ್ಹಿತಾನ್ನ ಭೋಜನಾದಿನಾ ಯಥಾ ಗರ್ಭಃ ಸುಭೃತಃ ಸುಷ್ಠು ಸಮ್ಯಕ್ ಭೃತೋ ಲೋಕೇ ಇವ ಇತ್ಥಮೇವ ಋತ್ವಿಗ್ಭಿಃ ಯೋಗಿಭಿಶ್ಚ ಸುಭೃತಃ ಇತ್ಯೇತತ್ । ಕಿಂ ಚ ದಿವೇ ದಿವೇ ಅಹನ್ಯಹನಿ ಈಡ್ಯಃ ಸ್ತುತ್ಯೋ ವನ್ದ್ಯಶ್ಚ ಕರ್ಮಿಭಿರ್ಯೋಗಿಭಿಶ್ಚ ಅಧ್ವರೇ ಹೃದಯೇ ಚ ಜಾಗೃವದ್ಭಿಃ ಜಾಗರಣಶೀಲೈಃ**

1. 'ಸರ್ವ' ಎಂಬ ಮಾತು ಭಾಷ್ಯದಲ್ಲಿ ಬರೆದವರು ಸೇರಿಸಿದ್ದೆಂದು ತೋರುತ್ತದೆ.
2. ಇದೇ ಅದು ಎಂಬ ವಾಕ್ಯದ ಅರ್ಥವನ್ನು ಇದಕ್ಕೆ ಸೇರಿಸಿಕೊಂಡು ಅನ್ವಯ ಮಾಡಿಕೊಳ್ಳಬೇಕು.

**ಅಪ್ರಮತ್ತೈಃ ಇತ್ಯೇತತ್ । ಹವಿಷ್ಮದ್ಭಿಃ ಆಜ್ಯಾದಿಮದ್ಭಿಃ ಧ್ಯಾನಭಾವನಾವದ್ಭಿಶ್ಚ ಮನುಷ್ಯೇಭಿಃ ಮನುಷ್ಯೈಃ ಅಗ್ನಿಃ । ಏತದ್ವೈ ತತ್ ತದೇವ ಪ್ರಕೃತಂ ಬ್ರಹ್ಮ ॥**

(ಭಾಷ್ಯಾರ್ಥ)

ಇದೂ ಅಲ್ಲದೆ ಅಧಿಯಜ್ಞದಲ್ಲಿ ಯಾವ ಜಾತವೇದನು ಎಂದರೆ ಅಗ್ನಿಯು ಮೇಲಿನ ಅರಣಿ, ಕೆಳಗಿನ ಅರಣಿ-ಇವೆರಡರಲ್ಲಿಯೂ ಇಡಲ್ಪಟ್ಟು ಎಂದರೆ ಇದ್ದುಕೊಂಡು ಆಮೇಲೆ ಎಲ್ಲಾ ಹವಿಸ್ಸುಗಳನ್ನೂ ಭೋಗಿಸುವನೋ, ಅಧ್ಯಾತ್ಮವಾಗಿ ಯೋಗಿಗಳಿಂದಲೂ- ಗರ್ಭಿಣಿಯರಿಂದ ಗರ್ಭವು ಹೇಗೋ ಹಾಗೆ, ಲೋಕದಲ್ಲಿ ಬಸುರಿಯರಾದವರಿಂದ ಶುದ್ಧವಾದ ಅನ್ನವನ್ನುಣ್ಣುವದೇ - ಮುಂತಾದವುಗಳಿಂದ ಹೇಗೆ ಗರ್ಭವು ಚೆನ್ನಾಗಿ ಧರಿಸಲ್ಪಟ್ಟಿರುವದೋ, ಸರಿಯಾಗಿ ಉತ್ತಮರೀತಿಯಲ್ಲಿ ಪೋಷಿಸಲ್ಪಡುವದೋ, ಹಾಗೆಯೇ - ಋತ್ವಿಜರುಗಳಿಂದಲೂ ಯೋಗಿಗಳಿಂದಲೂ[1] (ಯಾವ ಅಗ್ನಿಯು) ಚೆನ್ನಾಗಿ ಪೋಷಿಸಲ್ಪಡುವನೋ ಎಂದರ್ಥ. ಮತ್ತು ದಿನದಿನವೂ ಪ್ರತಿದಿನವೂ ಎಚ್ಚರವಾಗಿರುವ ಎಚ್ಚರದಿಂದಿರುವ ಸ್ವಭಾವದವರಾದ, ಅವಧಾನ ತಪ್ಪದೆ ಇರುವ ಎಂದರ್ಥ : ಹವಿಷ್ಮಂತರಾದ ಆಜ್ಯವೇ ಮುಂತಾದವುಗಳನ್ನು ತೆಗೆದುಕೊಂಡುಬಂದಿರುವ ಮತ್ತು ಧ್ಯಾನ, ಭಾವನೆ - ಇವುಗಳಿಂದ ಕೂಡಿರುವ ಮನುಷ್ಯೇಭಿಃ = ಮನುಷ್ಯೈಃ ಮನುಷ್ಯರಿಂದ ಎಂದರೆ ಕರ್ಮಿಗಳಿಂದಲೂ ಯೋಗಿಗಳಿಂದಲೂ ಯಜ್ಞದಲ್ಲಿಯೂ ಹೃದಯದಲ್ಲಿಯೂ ಈಡ್ಯನಾಗಿರುವ ಎಂದರೆ ಸ್ತೋತ್ರಮಾಡುತ್ತಲೂ ನಮಸ್ಕರಿಸಲ್ಪಡುತ್ತಲೂ ಇರುವ (ಯಾವ) ಅಗ್ನಿಯು (ಇರುವನೋ) ಅದು ಇದೇ, (ಅವನು) ಪ್ರಕೃತವಾದ ಬ್ರಹ್ಮವೇ.[2]

**ಯತಶ್ಚೋದೇತಿ ಸೂರ್ಯೋಽಸ್ತಂ**
**ಯತ್ರ ಚ ಗಚ್ಛತಿ ।**
**ತಂ ದೇವಾಃ ಸರ್ವೇ ಅರ್ಪಿತಾ-**
**ಸ್ತದು ನಾತ್ಯೇತಿ ಕಶ್ಚನ । ಏತದ್ವೈ ತತ್　　॥೯॥**

---

1. ಮೂಲದಲ್ಲಿ ಅಧಿಯಜ್ಞವನ್ನು ಮಾತ್ರ ಕೊಟ್ಟಿದ್ದರೂ ಅದು ಉಪಲಕ್ಷಣವು. ಆದ್ದರಿಂದ ಅಗ್ನಿಯನ್ನು ಯಜ್ಞದಲ್ಲಿಯೂ ಹೃದಯದಲ್ಲಿಯೂ ಆರಾಧಿಸುವ ಕರ್ಮಿಗಳೂ ಉಪಾಸಕರೂ ನಿಜವಾಗಿ ಬ್ರಹ್ಮವನ್ನೇ ಉಪಾಸನೆಮಾಡುತ್ತಾರೆ - ಎಂದರ್ಥ. ವಿರಾಡ್ರೂಪನಾದ ಅಗ್ನಿಯ ಚಯನವೂ ಉಪಾಸನೆಯೂ ಬ್ರಹ್ಮಜ್ಞಾನದಲ್ಲಿ ಅಡಕವಾಗಿದೆ ಎಂದು ಭಾವ.

2. ಋ. ೩-೨-೨೯-೨ರಲ್ಲಿ ಈ ಮಂತ್ರವಿದೆ. ಆದರೆ ಅಲ್ಲಿ ಕೇವಲ ಅಗ್ನಿಸ್ತೋತ್ರವಿದೆ.

೯. ಯಾವನಿಂದ ಸೂರ್ಯನು ಉದಯಿಸುವನೋ ಮತ್ತು ಯಾವನಲ್ಲಿ ಅಸ್ತವನ್ನು ಹೊಂದುವನೋ ಅವನನ್ನು ಎಲ್ಲಾ ದೇವತೆಗಳೂ ಸೇರಿಕೊಂಡಿರುವರು. ಅದನ್ನು ಯಾರೂ ಮಿೀರಲರಿಯರು. ಇದೇ ಅದು.

(ಭಾಷ್ಯ)

**೧೨೩. ಕಿಂ ಚ ಯತಶ್ಚ ಯಸ್ಮಾತ್ ಪ್ರಾಣಾತ್ ಉದೇತಿ ಉತ್ತಿಷ್ಠತಿ ಸೂರ್ಯಃ । ಅಸ್ತಂ ನಿಮ್ಲೋಚನಂ ತಿರೋಧಾನಂ[1] ಯತ್ರ ಯಸ್ಮಿನ್ನೇವ ಚ ಪ್ರಾಣೇ ಅಹನ್ಯಹನಿ ಗಚ್ಛತಿ ತಂ ಪ್ರಾಣಮಾತ್ಮಾನಂ ದೇವಾಃ ಸರ್ವೇ[2] ಅಗ್ನ್ಯಾದಯಃ ಅಧಿದೈವಂ ವಾಗಾದಯಶ್ಚ ಅಧ್ಯಾತ್ಮಂ ಸರ್ವೇ ವಿಶ್ವೇ ಅರಾ ಇವ ರಥನಾಭೌ ಅರ್ಪಿತಾಃ ಸಂಪ್ರವೇಶಿತಾಃ ಸ್ಥಿತಿಕಾಲೇ । ಸೋಽಪಿ ಬ್ರಹ್ಮೈವ । ತತ್ ಏತತ್ ಸರ್ವಾತ್ಮಕಂ ಬ್ರಹ್ಮ ಉ ನಾತ್ಯೇತಿ ನಾತೀತ್ಯ ತದಾತ್ಮಕತಾಂ ತದನ್ಯತ್ವಂ ಗಚ್ಛತಿ ಕಶ್ಚನ ಕಶ್ಚಿದಪಿ । ಏತದ್ವೈ ತತ್॥**

(ಭಾಷ್ಯಾರ್ಥ)

ಮತ್ತು ಯಾವನಿಂದ, ಯಾವ ಪ್ರಾಣನಿಂದ[3] ಸೂರ್ಯನು ಉದಯಿಸುವನೋ ಹೊರಕ್ಕೆ ಬರುವನೋ, ಮತ್ತು ಯಾವನಲ್ಲಿ ಎಂದರೆ ಯಾವ ಪ್ರಾಣನಲ್ಲಿಯೇ ಅಸ್ತವನ್ನು ಎಂದರೆ ಮುಳುಗುವಿಕೆಯನ್ನು ದಿನದಿನವೂ ಹೊಂದುತ್ತಿರುವನೋ ಅಂಥ ಪ್ರಾಣನೆಂಬ ಆತ್ಮನನ್ನು ಅಗ್ನಿಯೇ ಮುಂತಾದ ಅಧಿದೈವ(ದೇವತೆಗಳು), ವಾಕ್ಕು[4] ಮುಂತಾದ ಅಧ್ಯಾತ್ಮ (ದೇವತೆಗಳು) ಎಲ್ಲಾ (ದೇವತೆಗಳೂ) ಹಾರೆಕೋಲುಗಳು[5] ಗುಂಬದಲ್ಲಿ ಹೇಗೋ ಹಾಗೆ ಸ್ಥಿತಿಕಾಲದಲ್ಲಿ ಸೇರಿಕೊಂಡಿರುವರು ; ಒಳಸೇರಿ ಕೊಂಡಿರುವರು. ಆ (ಪ್ರಾಣನೂ) ಬ್ರಹ್ಮವೇ, ಆ ಸರ್ವಾತ್ಮಕವಾದ ಬ್ರಹ್ಮವನ್ನು ಯಾರೂ ಯಾರೊಬ್ಬರೂ ಮಿೀರಲರಿಯರು. ಅದರ ಸ್ವರೂಪವನ್ನು ಮಿೀರಿ[6] ಅದಕ್ಕಿಂತ ಬೇರೆಯ ಸ್ವರೂಪವನ್ನು ಯಾರೂ ಪಡೆಯಲಾರರು.[7] ಇದೇ ಅದು.[8]

---

1-2. (ಪಾ ||) 3. ಹಿರಣ್ಯಗರ್ಭನಿಂದ.

4. ವಾಕ್ಕೇ ಮುಂತಾದ ಇಂದ್ರಿಯಗಳು ಅಧ್ಯಾತ್ಮದೇವತೆಗಳು ; ಈ ಇಂದ್ರಿಯಗಳ ಅಭಿಮಾನದೇವತೆಗಳಾದ ಅಗ್ನಿಯೇ ಮುಂತಾದವರು ಅಧಿದೈವದೇವತೆಗಳು. ಬೃ. ಭಾ. ೧-೫-೨೩. 5. ಮುಂ. ಭಾ. ೨-೨-೬.

6. ಸುಷುಪ್ತಿಯಲ್ಲಿ ಆತ್ಮಸ್ವರೂಪವನ್ನೂ ಜಾಗ್ರತ್ಸ್ವಪ್ನಗಳಲ್ಲಿ ತತ್ಸಂಬಂಧವನ್ನೂ ಹೊಂದುತ್ತಾರೆ ಎಂದು (ಗೋ ||) ವ್ಯಾಖ್ಯಾನದಲ್ಲಿದೆ. ಬ್ರಹ್ಮವನ್ನು ಬಿಟ್ಟು ಹಿರಣ್ಯಗರ್ಭನು ಮುಂತಾಗಿ ಯಾವದೊಂದೂ ಬೇರೆ ಇರುವದಿಲ್ಲ ಎಂಬುದು ಪ್ರಕೃತ.

7. ಅಥರ್ವವೇದ ೧೦-೮-೧೬ರಲ್ಲಿ ಈ ಮಂತ್ರವಿದೆ ; ಅಲ್ಲಿ ಸ್ವಲ್ಪರೂಪಭೇದದಿಂದ ಕಾಣಬರುತ್ತದೆ. ಬೃ. ೧-೫-೨೩ರಲ್ಲಿ ಈ ಮಂತ್ರದ ಅರ್ಥವನ್ನು ಕೊಟ್ಟಿದೆ.

8. ಆ ಬ್ರಹ್ಮವೇ ಈ ಪ್ರಾಣವಾಗಿ ಕಾಣುತ್ತಿರುವದು.

## ಬ್ರಹ್ಮದಲ್ಲಿ ಯಾವ ಭೇದವೂ ಇಲ್ಲ

(ಭಾಷ್ಯ)

೧೨೪. ಯದ್ ಬ್ರಹ್ಮಾದಿಸ್ಥಾವರಾನ್ತೇಷು ವರ್ತಮಾನಂ ತತ್ತದುಪಾಧಿತ್ವಾದ-ಬ್ರಹ್ಮವದವಭಾಸಮಾನಂ ಸಂಸಾರಿ ಅನ್ಯತ್ ಪರಸ್ಮಾದ್ ಬ್ರಹ್ಮಣ ಇತಿ ಮಾ ಭೂತ್ ಕಸ್ಯಚಿದಾಶಙ್ಕಾ ಇತೀದಮಾಹ-

(ಭಾಷ್ಯಾರ್ಥ)

ಯಾವದು ಬ್ರಹ್ಮನು ಮೊದಲಾಗಿ ಸ್ಥಾವರ(ಪ್ರಾಣಿಗಳ)ವರೆಗೂ ಇದ್ದು ಕೊಂಡು ಆಯಾ ಉಪಾಧಿಯಿಂದ ಬ್ರಹ್ಮವಲ್ಲದಂತೆ ತೋರಿಕೊಳ್ಳುತ್ತಿರುವನೋ[1] (ಆ) ಸಂಸಾರಿಯು ಪರಬ್ರಹ್ಮಕ್ಕಿಂತ ಬೇರೆಯೇ (ಆಗಿರಬೇಕು)- ಎಂದು ಯಾರಿಗೂ ಶಂಕೆ ಬರದೆ ಇರಲೆಂದು ಈ (ಮಾತನ್ನು) ಹೇಳುತ್ತಾನೆ :-

**ಯದೇವೇಹ ತದಮುತ್ರ ಯದಮುತ್ರ ತದನ್ವಿಹ ।**
**ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥೧೦॥**

೧೦. ಯಾವದು ಇಲ್ಲಿ (ರುವ)ದೋ ಅದೇ ಅಲ್ಲಿ, ಯಾವದು ಅಲ್ಲಿ (ರುವ)ದೋ ಅದೇ ಇಲ್ಲಿಯೂ ಅನುಸರಿಸಿರುವದು. ಇಲ್ಲಿ ಬೇರೆಬೇರೆಯಾಗಿ ರುವಂತೆ ಯಾವನು ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಪಡೆಯುವನು.

(ಭಾಷ್ಯ)

೧೨೫. ಯದೇವೇಹ ಕಾರ್ಯಕರಣೋಪಾಧಿಸಮನ್ವಿತಂ ಸಂಸಾರ ಧರ್ಮವದವಭಾಸಮಾನಮ್ ಅವಿವೇಕಿನಾಮ್, ತದೇವ ಸ್ವಾತ್ಮಸ್ಥಮ್ ಅಮುತ್ರ ನಿತ್ಯವಿಜ್ಞಾನಘನಸ್ವಭಾವಂ ಸರ್ವಸಂಸಾರಧರ್ಮವರ್ಜಿತಂ ಬ್ರಹ್ಮ । ಯಚ್ಚ ಅಮುತ್ರ ಅಮುಷ್ಮಿನ್ನಾತ್ಮನಿ ಸ್ಥಿತಮ್ ತದನು ಇಹ ತದೇವ ಇಹ ಕಾರ್ಯಕರಣನಾಮ ರೂಪೋಪಾಧಿಕಮ್ ಅನು ವಿಭಾವ್ಯಮಾನಂ ನಾನ್ಯತ್ । ತತ್ರೈವಂ ಸತಿ ಉಪಾಧಿಸ್ವಭಾವಭೇದದೃಷ್ಟಿಲಕ್ಷಣಯಾ ಅವಿದ್ಯಯಾ ಮೋಹಿತಃ ಸನ್ ಯ ಇಹ ಬ್ರಹ್ಮಣಿ ಅನಾನಾಭೂತೇ 'ಪರಸ್ಮಾದನ್ಯೋಽಹಮ್, ಮತ್ತೋಽನ್ಯತ್ ಪರಂ ಬ್ರಹ್ಮ'ಇತಿ ನಾನೇವ ಭಿನ್ನಮಿವ ಪಶ್ಯತಿ ಉಪಲಭತೇ ಸಃ ಮೃತ್ಯೋಃ ಮರಣಾತ್ ಮೃತ್ಯುಂ ಮರಣಂ ಪುನಃಪುನಃ ಜನನಮರಣಭಾವಮ್ ಆಪ್ನೋತಿ ಪ್ರತಿಪದ್ಯತೇ ।

---

1. ಉಪಾಧಿವಶದಿಂದ ಅಬ್ರಹ್ಮವಾಗಿ ತೋರಿದರೂ ಅದು ನಿಜವಾಗಿ ಬ್ರಹ್ಮವೇ. ಇದನ್ನು ಅರಿತುಕೊಳ್ಳಬೇಕು, ಅಷ್ಟೆ. ಬೃ. ಭಾ. ೧-೪-೧೦.

**ತಸ್ಮಾತ್ ತಥಾ ನ ಪಶ್ಯೇತ್ । 'ವಿಜ್ಞಾನೈಕರಸಂ ನೈರನ್ತರ್ಯೇಣ ಆಕಾಶವತ್ ಪರಿಪೂರ್ಣಂ ಬ್ರಹ್ಮೈವಾಹಮಸ್ಮಿ' ಇತಿ ಪಶ್ಯೇತ್ ಇತಿ ವಾಕ್ಯಾರ್ಥಃ ॥**

(ಭಾಷ್ಯಾರ್ಥ)

ಇಲ್ಲಿ ಕಾರ್ಯಕರಣಗಳೆಂಬ[1] ಉಪಾಧಿಯಿಂದ ಕೂಡಿಕೊಂಡು ಸಂಸಾರ ಧರ್ಮಗಳನ್ನುಳ್ಳ (ಜೀವ)ನಂತೆ ಅವಿವೇಕಿಗಳಿಗೆ ಯಾವದು ತೋರುತ್ತಿರುವದೋ ಅದೇ ನನ್ನ ಸ್ವರೂಪದಲ್ಲಿದ್ದುಕೊಂಡು ಅಲ್ಲಿ ನಿತ್ಯವಿಜ್ಞಾನದ ಗಟ್ಟಿಯ ಸ್ವಭಾವದ್ದಾಗಿ ಯಾವ ಸಂಸಾರದ ಧರ್ಮವೂ ಇಲ್ಲದ ಬ್ರಹ್ಮ(ವಾಗಿರುವದು). ಮತ್ತು ಯಾವದು ಅಲ್ಲಿ ಎಂದರೆ ಆ ಆತ್ಮನಲ್ಲಿ ಇರುವದೋ ಅದೇ ಇಲ್ಲಿ ಕಾರ್ಯಕರಣಗಳೆಂಬ ನಾಮರೂಪಗಳ ಉಪಾಧಿಯನ್ನು ಅನುಸರಿಸಿಕೊಂಡು ತೋರುತ್ತಿರುವದೇ ಹೊರತು[2] ಬೇರೆಯಲ್ಲ.

**ಇದು ಹೀಗಿರುವದರಿಂದ ಉಪಾಧಿಯ ಸ್ವಭಾವದಿಂದ ಭೇದದೃಷ್ಟಿಯ ಸ್ವರೂಪವಾದ ಅವಿದ್ಯೆಯಿಂದ ಮೋಹಿತನಾಗಿ** ಯಾವನು ಇಲ್ಲಿ ಬೇರೆಬೇರೆಯಾಗಿರದ ಈ ಬ್ರಹ್ಮದಲ್ಲಿ 'ಪರಮಾತ್ಮನಿಗಿಂತ ನಾನು ಬೇರೆ, ನನಗಿಂತ ಪರಬ್ರಹ್ಮವೆಂಬುದು ಬೇರೆ' ಎಂದು ಬೇರೆಬೇರೆಯಾಗಿರುವಂತೆ ಭಿನ್ನವಾಗಿರುವಂತೆ ಕಾಣುವನೋ ಅವನು ಮೃತ್ಯುವಿನಿಂದ ಎಂದರೆ ಮರಣದ ಬಳಿಕ ಮೃತ್ಯುವನ್ನು ಎಂದರೆ ಮರಣವನ್ನು, ಮತ್ತೆ ಮತ್ತೆ ಹುಟ್ಟುವದು ಸಾಯುವದು ಎಂಬ ಧರ್ಮವನ್ನು, ಹೊಂದುತ್ತಿರುವನು. ಆದ್ದರಿಂದ ಹಾಗೆಂದು ತಿಳಿಯಬಾರದು. ಒಂದೇ ರೂಪವಾದ ಬರಿಯ ವಿಜ್ಞಾನವು, ಕಡಿವಡೆಯದೆ ಆಕಾಶದಂತೆ[3] (ಎಲ್ಲೆಲ್ಲಿಯೂ) ತುಂಬಿಕೊಂಡಿರುವ ಬ್ರಹ್ಮವೇ ನಾನಾಗಿರುವೆನು' ಎಂದು ತಿಳಿಯಬೇಕು ಎಂಬುದು (ಈ) ವಾಕ್ಯದ (ಒಟ್ಟು) ಅರ್ಥವು.

**ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಞ್ಚನ ।**
**ಮೃತ್ಯೋಃ ಸ ಮೃತ್ಯುಂ ಗಚ್ಛತಿ ಯ ಇಹ ನಾನೇವ ಪಶ್ಯತಿ ॥೧೧॥**

೧೧. ಇದು ಮನಸ್ಸಿನಿಂದಲೇ ಪಡೆಯಲ್ಪಡತಕ್ಕದ್ದು, ಇಲ್ಲಿ ಸ್ವಲ್ಪವೂ ಭೇದವಿರುವದಿಲ್ಲ. ಯಾವನು ಇಲ್ಲಿ ಬೇರೆಬೇರೆಯಾಗಿದ್ದಂತೆ ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಪಡೆಯುತ್ತಾನೆ.

1. ಕಾರ್ಯಕರಣವೆಂಬ ಪಾಠವೇ ಉತ್ತಮವೆಂಬುದು ಬೇರೆಕಡೆಯ ಭಾಷ್ಯವಾಕ್ಯಗಳಿಂದ ಗೊತ್ತಾಗುವದು.

2. ಸಂಸಾರಿಯಾಗಿ ತೋರುತ್ತಿರುವದು, ಆದರೆ ಆಗಲೂ ನಿಜವಾಗಿ ಬ್ರಹ್ಮವೇ.

3. ಗಡಿಗೆ, ಮಡಕೆ, ಕುಡಿಕೆ - ಮುಂತಾದ ಉಪಾಧಿಗಳಿಂದ ಬೇರೆಬೇರೆಯಾಗಿ ತೋರಿದರೂ ಅಖಂಡವಾಗಿರುವ ಆಕಾಶದಂತೆ. ಮಾಂ. ಕಾ. ೩-೩, ೩-೬

(ಭಾಷ್ಯ)

೧೨೬. ಪ್ರಾಗೇಕತ್ವವಿಜ್ಞಾನಾತ್ ಆಚಾರ್ಯಾಗಮಸಂಸ್ಕೃತೇನ ಮನಸೈವ ಇದಂ ಬ್ರಹ್ಮ ಏಕರಸಮ್ ಆಪ್ತವ್ಯಮ್ ''ಆತ್ಮೈವ ನಾನ್ಯದಸ್ತಿ''ಇತಿ । ಆಪ್ತೇ ಚ ನಾನಾತ್ವಪ್ರತ್ಯುಪಸ್ಥಾಪಿಕಾಯಾ ಅವಿದ್ಯಾಯಾ ನಿವೃತ್ತತ್ವಾತ್ ಇಹ ಬ್ರಹ್ಮಣಿ ನಾನಾ ನಾಸ್ತಿ ಕಿಞ್ಚನ ಅಣುಮಾತ್ರಮಪಿ । ಯಸ್ತು ಪುನರವಿದ್ಯಾತಿಮಿರದೃಷ್ಟಿಂ ನಮುಞ್ಚತಿ ಇಹ ಬ್ರಹ್ಮಣಿ ನಾನಾ ಇವ ಪಶ್ಯತಿ ಸಃ ಮೃತ್ಯೋಃ ಮೃತ್ಯುಂ ಗಚ್ಛತ್ಯೇವ ಸ್ವಲ್ಪಮಪಿ ಭೇದಮಧ್ಯಾರೋಪಯನ್ ಇತ್ಯರ್ಥಃ ॥

(ಭಾಷ್ಯಾರ್ಥ)

(ಇದು) ಒಂದೇ ಎಂದು ಅರಿತುಕೊಳ್ಳುವದಕ್ಕೆ ಮುಂಚೆ[1] **ಆಚಾರ್ಯ, ಶಾಸ್ತ್ರ- ಇವುಗಳಿಂದ ಸಂಸ್ಕಾರವನ್ನು ಹೊಂದಿದ**[2] **ಮನಸ್ಸಿನಿಂದಲೇ** ಒಂದೇ ರೂಪವಾಗಿರುವ ಈ ಬ್ರಹ್ಮವು ''(ಇದು) ಆತ್ಮನೇ, (ಇದಕ್ಕಿಂತ) ಬೇರೊಂದಿಲ್ಲ'' ಎಂದು ಪಡೆಯಲ್ಪಡಬೇಕು. **ಹಾಗೆ ಪಡೆದುಕೊಂಡಮೇಲೆ ಭೇದವನ್ನು ಕಲ್ಪಿಸುವ ಅವಿದ್ಯೆಯು ಹೋಗಿಬಿಟ್ಟಿರುವದರಿಂದ ಈ ಬ್ರಹ್ಮದಲ್ಲಿ ಸ್ವಲ್ಪವೂ ಅಣುಮಾತ್ರವೂ ಭೇದವಿರುವದಿಲ್ಲ.**[3]

ಆದರೆ ಯಾವನು ಅವಿದ್ಯೆಯೆಂಬ ಕಣ್ಣುಪರೆಯ ದೃಷ್ಟಿಯನ್ನು ಬಿಟ್ಟುಬಿಡದೆ ಬ್ರಹ್ಮದಲ್ಲಿ ಭೇದವಿದ್ದಂತೆ ಕಾಣುತ್ತಿರುವನೋ ಅವನು ಮೃತ್ಯುವಿನ ಮೇಲೆ ಮೃತ್ಯುವನ್ನು ಹೊಂದುತ್ತಲೇ ಇರುವನು ; ಒಂದಿಷ್ಟು ಭೇದವನ್ನು ಕಲ್ಪಿಸಿಕೊಂಡರೂ (ಅಷ್ಟುಮಾತ್ರದಿಂದಲೇ ಸಾವಿನಮೇಲೆ ಸಾವನ್ನು ಪಡೆಯುತ್ತಿರುವನು) ಎಂದರ್ಥ.

(ಭಾಷ್ಯ)

**೧೨೭. ಪುನರಪಿ ತದೇವ ಪ್ರಕೃತಂ ಬ್ರಹ್ಮ ಆಹ-**

---

1. ಬ್ರಹ್ಮವನ್ನು ಅರಿಯುವ ಮುಂಚೆ ಅರಿಯುವವನು, ಅರಿಯುವ ಸಾಧನ, ಅರಿಯಲ್ಪಡಬೇಕಾದ ಬ್ರಹ್ಮ ಎಂಬ ಭೇದವಿರುತ್ತದೆ. ಇದು ವ್ಯಾವಹಾರಿಕಭೇದ, ಪರಮಾರ್ಥವಲ್ಲ.

2. ಇಲ್ಲಿ ಆಗಮವೆಂದರೆ ಶಾಸ್ತ್ರವೇ. 'ಮನಸೈವಾನುದ್ರಷ್ಟವ್ಯಮ್' ಎಂಬ ವಾಕ್ಯಕ್ಕೆ ಗೀ. ಭಾ. ೨-೨೧, ಬೃ. ಭಾ. ೪-೪-೧೯ರಲ್ಲಿ ಕೊಟ್ಟಿರುವ ವಿವರವನ್ನು ನೋಲಿಸಿ.

3. ಅವಿದ್ಯೆಯಿಂದ ತೋರುತ್ತಿದ್ದ ಭೇದವು ಹೋಗಿಬಿಟ್ಟಿರುತ್ತದೆ ; ಪಡೆಯತಕ್ಕವನೂ ಪಡೆಯಲ್ಪಡತಕ್ಕದ್ದೂ ಒಂದಾಗಿರುತ್ತವೆ. ಸೂ. ಭಾ. ೧-೧-೪ರ ಕೊನೆಯಲ್ಲಿರುವ ಶ್ಲೋಕವನ್ನು ನೋಡಿ.

(ಭಾಷ್ಯಾರ್ಥ)

ಮತ್ತೂ ಅದೇ ಪ್ರಕೃತವಾದ[1] ಬ್ರಹ್ಮವನ್ನು ಹೇಳುತ್ತಾನೆ :-

**ಅಙ್ಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ।**

**ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ । ಏತದ್ವೈ ತತ್ ॥೧೨॥**

೧೨. ಅಂಗುಷ್ಠಮಾತ್ರನಾದ ಪುರುಷನು ಆತ್ಮದ ಮಧ್ಯದಲ್ಲಿರುತ್ತಿರುವನು. ಭೂತಕ್ಕೂ ಭವಿಷ್ಯತ್ತಿಗೂ ಇವನು ಒಡೆಯನು (ಎಂದು ತಿಳಿದರೆ) ಆಮೇಲೆ ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವದಿಲ್ಲ. ಇದೇ ಅದು.

(ಭಾಷ್ಯ)

**೧೨೮. ಅಙ್ಗುಷ್ಠಮಾತ್ರಃ ಅಙ್ಗುಷ್ಠಪರಿಮಾಣಃ । ಅಙ್ಗುಷ್ಠಪರಿಮಾಣಂ ಹೃದಯಪುಣ್ಡರೀಕಮ್ । ತಚ್ಛಿದ್ರವರ್ತ್ಯನ್ತಃಕರಣೋಪಾಧಿರಙ್ಗುಷ್ಠಮಾತ್ರಃ ಅಙ್ಗುಷ್ಠಮಾತ್ರವಂಶಪರ್ವಮಧ್ಯವರ್ತ್ಯಮ್ಬರವತ್ । ಪುರುಷಃ ಪೂರ್ಣಮನೇನ ಸರ್ವಮಿತಿ । ಮಧ್ಯೇ ಆತ್ಮನಿ ಶರೀರೇ ತಿಷ್ಠತಿ ಯಃ ತಮ್ ಆತ್ಮಾನಂ ಈಶಾನಂ ಭೂತಭವ್ಯಸ್ಯ ವಿದಿತ್ವಾ 'ನ ತತಃ' ಇತ್ಯಾದಿ ಪೂರ್ವವತ್ ॥**

(ಭಾಷ್ಯಾರ್ಥ)

ಅಂಗುಷ್ಠಮಾತ್ರನು ಎಂದರೆ ಹೆಬ್ಬೆರಳಿನ ಗಾತ್ರದವನು. ಹೃದಯಕಮಲವು ಹೆಬ್ಬೆರಳಿನ ಗಾತ್ರವಾಗಿರುವದು ; ಅದರ ಪೊಳ್ಳಿನಲ್ಲಿರುವ ಅಂತಃಕರಣವೆಂಬ ಉಪಾಧಿಯುಳ್ಳ ಆತ್ಮನು ಅಂಗುಷ್ಠಮಾತ್ರದವನು. ಹೆಬ್ಬೆರಳಿನ ಪರಿಮಾಣದ ಬಿದಿರಿನ ಗೆಣ್ಣಿನ ಒಳಗಿರುವ ಆಕಾಶವು ಹೇಗೆ (ಅಷ್ಟೇ ಪರಿಮಾಣದ್ದೆಂದು ಭಾವಿಸಲ್ಪಡುವನೋ ಅದ)ರಂತೆಯೇ[2] (ಇದು). ಎಲ್ಲವನ್ನೂ ತುಂಬಿಕೊಂಡಿರುವದರಿಂದ (ಇವನು) ಪುರುಷ(ನೆನಿಸುವ)ನು. ಆತ್ಮದ ಎಂದರೆ ಶರೀರದ ಮಧ್ಯದಲ್ಲಿ ಇರುತ್ತಿರುವನಲ್ಲ, ಆ ಆತ್ಮನನ್ನು ಭೂತಭವಿಷ್ಯತ್ತುಗಳ ಒಡೆಯನು ಎಂದು ತಿಳಿದುಕೊಂಡರೆ 'ಆಮೇಲೆ (ಕಾಪಾಡಿಕೊಳ್ಳುವದಕ್ಕೆ ಇಚ್ಛಿಸುವ)ದಿಲ್ಲ' ಎಂಬುದೇ ಮುಂತಾದ ವಾಕ್ಯದ ಅಭಿಪ್ರಾಯವನ್ನು ಹಿಂದಿನಂತೆಯೇ[3] (ಅರಿಯಬೇಕು).

---

1. ಇಲ್ಲಿ ೧೨ ಮತ್ತು ೧೩ನೆಯ ಮಂತ್ರಗಳಲ್ಲಿ ಆತ್ಮನನ್ನು ಅಂಗುಷ್ಠಮಾತ್ರನೆಂದು ಹೇಳಿದ್ದರೂ ಆತ್ಮನ ಗಾತ್ರವನ್ನು ಹೇಳುವದಕ್ಕೆ ಬಂದ ಶ್ರುತಿಯಿದಲ್ಲ ; ಪ್ರಕೃತವಾದ ಬ್ರಹ್ಮವನ್ನು ತಿಳಿಸುವದಕ್ಕೆಂದೇ ಬಂದಿದೆ. ನಮ್ಮ ಆತ್ಮನು ಉಪಾಧಿಯಿಂದ ಚಿಕ್ಕವನಾಗಿ ತೋರಿದರೂ ಪರಮಾರ್ಥವಾಗಿ ತ್ರಿಕಾಲಾತೀತನಾದ ಪರಮಾತ್ಮನೇ ಎಂಬುದನ್ನು ತಿಳಿಸುವದೇ ವಾಕ್ಯದ ಅರ್ಥ. ಸೂ. ಭಾ. ೧-೩-೨೪, ೨೫ನ್ನು ನೋಡಿರಿ.

2. ಉಪಾಧಿಯಿಂದ ಪರಿಮಾಣವುಳ್ಳದ್ದಾಗಿ ತೋರಿದರೂ ಅನಂತವಾಗಿರುವಂತೆಯೇ

3. ೨-೧-೫೮ರ ಭಾಷ್ಯದಲ್ಲಿ ವಿವರಿಸಿರುವಂತೆಯೇ.

ಅಙ್ಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮಕಃ ।
ಈಶಾನೋ ಭೂತಭವ್ಯಸ್ಯ ಸ ಏವಾದ್ಯ ಸ ಉ ಶ್ವಃ । ಏತದ್ವೈ ತತ್ ॥ ೧೩ ॥

೧೩. ಅಂಗುಷ್ಠಮಾತ್ರನಾದ ಪುರುಷನು ಹೊಗೆಯಿಲ್ಲದ ಜ್ಯೋತಿಯಂತೆ (ಇರುವನು). ಭೂತಕ್ಕೂ ಭವಿಷ್ಯತ್ತಿಗೂ ಒಡೆಯನು. ಈಗಲೂ ಆತನೇ, ನಾಳೆಯೂ ಆತನೇ. ಇದೇ ಅದು.

(ಭಾಷ್ಯ)

೧೨೯. ಕಿಂ ಚ ಅಙ್ಗುಷ್ಠಮಾತ್ರಃ ಪುರುಷಃ ಜ್ಯೋತಿರಿವ ಅಧೂಮಕಃ ಅಧೂಮಕಮ್ ಇತಿ ಯುಕ್ತಂ ಜ್ಯೋತಿಃಪರತ್ವಾತ್ । ಯಸ್ತ್ವೇವಂ ಲಕ್ಷಿತೋ ಯೋಗಿಭಿರ್ಹೃದಯೇ ಈಶಾನಃ ಭೂತಭವ್ಯಸ್ಯ ಸ ಏವ ನಿತ್ಯಃ ಕೂಟಸ್ಥಃ ಅದ್ಯ ಇದಾನೀಂ ಪ್ರಾಣಿಷು ವರ್ತಮಾನಃ ಸ ಉ ಶ್ವೋಽಪಿ ವರ್ತಿಷ್ಯತೇ ನಾನ್ಯಸ್ತತ್ಸಮೋಽನ್ಯಶ್ಚ ಜನಿಷ್ಯತೇ ಇತ್ಯರ್ಥಃ । ಅನೇನ ''ನಾಯಮಸ್ತೀತಿ ಚೈಕೇ''(೧-೧-೨೦) ಇತ್ಯಯಂ ಪಕ್ಷೋ ನ್ಯಾಯತೋಽಪ್ರಾಪ್ತೋಽಪಿ ಸ್ವವಚನೇನ ಶ್ರುತ್ಯಾ ಪ್ರತ್ಯುಕ್ತಃ । ತಥಾ ಕ್ಷಣಭಙ್ಗವಾದಶ್ಚ ॥

(ಭಾಷ್ಯಾರ್ಥ)

ಮತ್ತು ಅಂಗುಷ್ಠಮಾತ್ರನಾದ (ಈ) ಪುರುಷನು ಹೊಗೆಯಿಲ್ಲದ ಜ್ಯೋತಿಯಂತೆ (ಇರುವನು). 'ಅಧೂಮಕಃ' ಎಂಬುದು 'ಅಧೂಮಕಮ್' ಎಂದಿರಬೇಕು: ಏಕೆಂದರೆ (ಇದು) ಜ್ಯೋತಿ (ಎಂಬ ನಪುಂಸಕಲಿಂಗದ ಶಬ್ದಕ್ಕೆ) ವಿಶೇಷಣವಾಗಿರುತ್ತದೆ. ಯಾವನು ಈ ರೂಪದಲ್ಲಿ ಯೋಗಿಗಳಿಗೆ ಹೃದಯದಲ್ಲಿ ಕಾಣಿಸಿಕೊಳ್ಳುತ್ತಾನೋ, ಆತನೇ ಭೂತಭವಿಷ್ಯತ್ತಿಗೂ ಒಡೆಯನು, ಕೂಟಸ್ಥನಿತ್ಯನಾದ ಅವನೇ ಈಗಲೂ ಇಂದೂ ಪ್ರಾಣಿಗಳಲ್ಲಿ ಇರುವವನು : ಅವನೇ ನಾಳೆಯೂ ಇರುವನೇ ಹೊರತು ಅವನಂಥವನು ಮತ್ತೊಬ್ಬನು ಹುಟ್ಟುವದಿಲ್ಲ ಎಂದರ್ಥ.[1]

ಈ (ಮಂತ್ರ)ದಿಂದ ''ಇವನು ಇರುವದಿಲ್ಲವೆಂದು ಕೆಲವರು (ಹೇಳುತ್ತಾರೆ)'' (೧-೧-೨೦) ಎಂಬ ಪಕ್ಷವು ಯುಕ್ತಿಗೆ ಹೊಂದುವದಿಲ್ಲವಾದರೂ[2]

1. ಅವನೇ ಇಂದು, ಅವನೇ ನಾಳೆ- ಎಂದು ಅವಧಾರಣೆಮಾಡಿದ್ದರಿಂದ ನಿನ್ನೆ ಇದ್ದ ಆತ್ಮನು ಬೇರೆ ಇಂದು ಇರುವವನು ಬೇರೆ - ಎಂಬ ಮತವು ಅಯುಕ್ತವೆಂದು ಹೇಳಿದಂತಾಯಿತು - ಎಂದು ಭಾವ.

2. ಆತ್ಮನು ಇರುವದಿಲ್ಲ ಎಂಬ ಪಕ್ಷದಲ್ಲಿ ಶರೀರಕ್ಕಿಂತ ಬೇರೆ ಆತ್ಮನಿಲ್ಲವೆಂಬ ಚಾರ್ವಾಕವಾದ, ಯಾವದೊಂದಕ್ಕೂ ಹುರುಳಿಲ್ಲವೆಂಬ ಶೂನ್ಯವಾದ, ಕ್ಷಣಕ್ಕೊಂದು ವಿಜ್ಞಾನವು ಹುಟ್ಟುತ್ತದೆ ಎಂಬ ಬೌದ್ಧವಾದ - ಈ ಮೂರೂ ಸೇರಿಕೊಂಡಿವೆ. ನಿಸ್ಸಾಕ್ಷಿಕವಾಗಿ ಯಾವದೊಂದೂ ಸಿದ್ಧವಾಗುವದಿಲ್ಲವಾದ್ದರಿಂದಲೂ ಅವನೇ ನಾನು ಎಂಬ ಪ್ರತ್ಯಭಿಜ್ಞೆ ಇರುವದರಿಂದಲೂ ಇವುಗಳೆಲ್ಲವೂ ಯುಕ್ತಿ ವಿರುದ್ಧವಾಗಿವೆ.

ಅದನ್ನು ಶ್ರುತಿಯು ತನ್ನ ಮಾತಿನಿಂದಲೇ ತಿರಸ್ಕಾರಮಾಡಿದಂತಾಯಿತು. ಹೀಗೆಯೇ ಕ್ಷಣಭಂಗವಾದವನ್ನೂ (ತಿರಸ್ಕಾರಮಾಡಿದಂತಾಯಿತು).[1]

## ಜ್ಞಾನಾಜ್ಞಾನಗಳಿಗೆ ಫಲ

**ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ ।**

**ಏವಂ ಧರ್ಮಾನ್ ಪೃಥಕ್ಪಶ್ಯಂಸ್ತಾನೇವಾನುವಿಧಾವತಿ ॥೧೪॥**

೧೪. ದುರ್ಗದಲ್ಲಿ ಮಳೆ ಹುಯ್ದು ನೀರು ಪರ್ವತಗಳಲ್ಲಿಯೇ ಹೇಗೆ ಹರಿದುಹೋಗುತ್ತದೆಯೋ ಇದರಂತೆ ಧರ್ಮರುಗಳನ್ನು ಬೇರೆಯೆಂದು ಕಾಣುವಾತನು ಅವರನ್ನೇ ಅನುಸರಿಸಿ ಓಡುತ್ತಿರುವನು.

(ಭಾಷ್ಯ)

**೧೩೦. ಪುನರಪಿ ಭೇದದರ್ಶನಾಪವಾದಂ ಬ್ರಹ್ಮಣ ಆಹ - ಯಥಾ ಉದಕೇ ದುರ್ಗೇ ದುರ್ಗಮೇ ದೇಶೇ ಉಚ್ಛ್ರಿತೇ ವೃಷ್ಟಂ ಸಿಕ್ತಂ ಪರ್ವತೇಷು ಪರ್ವವತ್ಸು ನಿಮ್ನ ಪ್ರದೇಶೇಷು ವಿಧಾವತಿ ವಿಕೀರ್ಣಂ ಸದ್ ವಿನಶ್ಯತಿ ಏವಂ ಧರ್ಮಾನ್ ಆತ್ಮನಃ ಭಿನ್ನಾನ್ ಪೃಥಕ್ ಪಶ್ಯನ್‌ಪೃಥಗೇವ ಪ್ರತಿಶರೀರಂ ಪಶ್ಯನ್ ತಾನೇವ ಶರೀರ ಭೇದಾನುವರ್ತಿನಃ ಅನುವಿಧಾವತಿ । ಶರೀರಭೇದಮೇವ ಪೃಥಕ್ ಪುನಃ ಪುನಃ ಪ್ರತಿಪದ್ಯತೇ ಇತ್ಯರ್ಥಃ ॥**

(ಭಾಷ್ಯಾರ್ಥ)

ಬ್ರಹ್ಮದಲ್ಲಿ ಭೇದವನ್ನು ಕಾಣಬಾರದೆಂಬುದನ್ನು ಮತ್ತೂ ಹೇಳುತ್ತಿದಾನೆ. ಹೇಗೆ ದುರ್ಗದಲ್ಲಿ ಎಂದರೆ ದುರ್ಗಮವಾದ ಎತ್ತರವಾದ ಸ್ಥಳದಲ್ಲಿ ಮಳೆ ಹುಯ್ದು, ಸುರಿದ ನೀರು ಪರ್ವತದಲ್ಲಿ ಎಂದರೆ ಪರ್ವತಗಳಿರುವ ತಗ್ಗಾದ ತಪ್ಪಲುಗಳಲ್ಲಿ ಹರಿದುಹೋಗುತ್ತದೆಯೋ ಎಂದರೆ ಚದರಿ ನಾಶವಾಗುತ್ತದೆಯೋ ಇದರಂತೆ **ಧರ್ಮರುಗಳನ್ನು** ಎಂದರೆ ಆತ್ಮರುಗಳನ್ನು ಬೇರೆ ಎಂದು[2] ಪೃಥಕ್ಕಾಗಿ ಕಾಣುವವನು ಒಂದೊಂದು ಶರೀರಕ್ಕೂ ಬೇರೆಬೇರೆಯಾಗಿರುವವರು ಎಂದು ತಿಳಿದವನು ಅವರನ್ನೇ

---

1. ಯುಕ್ತಿವಿರುದ್ಧವಾದದ್ದನ್ನು ಶ್ರುತಿಯು ತಾನು ಸ್ಪಷ್ಟವಾಗಿ ತಿರಸ್ಕರಿಸಿದೆ ಎಂದು ಭಾವ.

2. 'ಆತ್ಮನೋಽಭಿನ್ನಾನ್' ಎಂದರೆ ತನಗಿಂತ ಬೇರೆಯಲ್ಲದವರು ಎಂದರ್ಥವಾಗುವದು. ಈ (ವಾ॥) ಪಾಠಕ್ಕಿಂತ ನಾವು ಇಟ್ಟುಕೊಂಡಿರುವ (ಆ ॥) ಪಾಠದಲ್ಲಿ 'ಆತ್ಮರುಗಳು ಒಬ್ಬರಿಗಿಂತ ಒಬ್ಬರು ಬೇರೆಯಾಗಿಯೂ ಬೇರೆಬೇರೆ ಸ್ವಭಾವದವರೂ ಆಗಿರುವರೆಂದು ತಿಳಿದವನು' ಎಂಬ ವಿಶೇಷಾರ್ಥವು ಹೊರಡುತ್ತದೆ.

ಎಂದರೆ ಬೇರೆಬೇರೆಯು ಶರೀರವನ್ನನುಸರಿಸಿರುವವರನ್ನೇ ಅನುಸರಿಸಿ ಓಡುತ್ತಿರುವನು. ಮತ್ತೂ ಮತ್ತೂ ಬೇರೆಬೇರೆಯ ಶರೀರವನ್ನೇ[1] ಹೊಂದುತ್ತಿರುವನು ಎಂದರ್ಥ.

(ಭಾಷ್ಯ)

೧೩೧. ಅಸ್ಯ ಪುನರ್ವಿದ್ಯಾವತೋ ವಿಧ್ವಸ್ತೋಪಾಧಿಕೃತಭೇದದರ್ಶನಸ್ಯ ವಿಶುದ್ಧವಿಜ್ಞಾನಘನೈಕರಸಮದ್ವಯಮಾತ್ಮಾನಂ ಪಶ್ಯತೋ ವಿಜಾನತೋ ಮುನೇರ್ಮನನ ಶೀಲಸ್ಯ ಆತ್ಮಸ್ವರೂಪಂ ಕಥಂ ಸಂಭವತೀತಿ ? ಉಚ್ಯತೇ -

(ಭಾಷ್ಯಾರ್ಥ)

ಆದರೆ ಉಪಾಧಿಯಿಂದಾಗಿರುವ ಭೇದಗಳ ಜ್ಞಾನವನ್ನು ನಾಶಪಡಿಸಿಕೊಂಡು ಅತಿಶುದ್ಧವಾದ ಬರಿಯ ವಿಜ್ಞಾನವೆಂಬ ಒಂದೇ ರೂಪದಲ್ಲಿರುವ ತನಗೆರಡನೆಯದಿಲ್ಲದ ಆತ್ಮನನ್ನು ಕಂಡು ಅರಿತುಕೊಂಡು ಮುನಿಯಾಗಿ ಎಂದರೆ ಮನನಶೀಲನಾಗಿರುವ ಈ ಜ್ಞಾನಿಗೆ[2] ಆತ್ಮಸ್ವರೂಪವು ಹೇಗಾಗುವದು[3] ? ಎಂದರೆ ಹೇಳುತ್ತಾನೆ :

ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ।
ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ ॥ ೧೫ ॥

೧೫. ಹೇಗೆ ಶುದ್ಧವಾದ (ನೀರಿನಲ್ಲಿ) ಚೆಲ್ಲಿದ ಶುದ್ಧವಾದ ನೀರು ಅದರಂತೆಯೇ ಆಗುವದೋ ಇದರಂತೆಯೇ, ಎಲೈ ಗೌತಮನೆ, ತಿಳಿದ ಮುನಿಯ ಆತ್ಮನೂ ಆಗುವನು.

(ಭಾಷ್ಯ)

೧೩೨. ಯಥಾ ಉದಕಂ ಶುದ್ಧೇ ಪ್ರಸನ್ನೇ ಶುದ್ಧಂ ಪ್ರಸನ್ನಂ ಆಸಿಕ್ತಂ ಪ್ರಕ್ಷಿಪ್ತಂ ಏಕರಸಮೇವ ನಾನ್ಯಥಾ ತಾದೃಗೇವ ಭವತಿ । ಆತ್ಮಾಪ್ಯೇವಮೇವ ಭವತಿ ಏಕತ್ವಂ ವಿಜಾನತೋ ಮುನೇಃ ಮನನಶೀಲಸ್ಯ ಹೇ ಗೌತಮ । ತಸ್ಮಾತ್ ಕುತಾರ್ಕಿಕಭೇದ ದೃಷ್ಟಿಂ ನಾಸ್ತಿಕಕುದೃಷ್ಟಿಂ ಚೋಜ್ಝಿತ್ವಾ ಮಾತೃಪಿತೃಸಹಸ್ರೇಭ್ಯೋಽಪಿ ಹಿತೈಷಿಣಾ ವೇದೇನೋಪದಿಷ್ಟಮ್ ಆತ್ಮೈಕತ್ವಂ ಶಾಂತದರ್ಪೈರಾದರಣೀಯಮಿತ್ಯರ್ಥಃ ॥

---

1. ಶರೀರಗಳೆಂಬ ಉಪಾಧಿಯ ಕಡೆಗೆ ಹೆಚ್ಚಿನ ಲಕ್ಷ್ಯವನ್ನಿಟ್ಟಿದ್ದರ ಫಲವಾಗಿ ಬೇರೆಬೇರೆಯ ಶರೀರಗಳನ್ನೇ ಪಡೆಯುತ್ತಿರುವನು ಎಂದು ಭಾವ.

2. 'ಅಸ್ಯ' ಎಂಬುದರ ಬದಲು 'ಯಸ್ಯ' ಎಂಬ (ಆ ॥) ಪಾಠವಿರುವಾಗ 'ಯಾವ ಜ್ಞಾನಿಯು ಮನನಶೀಲನಾಗಿರುವನೋ' ಅವನಿಗೆ ತಕ್ಕ (ತಸ್ಯ) ಎಂದು ಕನ್ನಡಿಸಬೇಕು.

3. ಜ್ಞಾನದಿಂದ ನೋಡಿದಾಗ ಹೇಗೆ ಕಾಣುವದು ? ಎಂದು ಅರ್ಥ.

(ಭಾಷ್ಯಾರ್ಥ)

ಹೇಗೆ ಶುದ್ಧವಾದ ತಿಳಿಯಾದ (ನೀರಿನಲ್ಲಿ) ಶುದ್ಧವಾದ ತಿಳಿಯಾದ ನೀರನ್ನು ಚೆಲ್ಲಿದರೆ ಹಾಕಿದರೆ ಒಂದೇ ರೂಪವಾಗಿರುವದೋ ಬೇರೆಯಾಗದೆ ಇರುವದೋ ಅದರಂತೆಯೇ ಆಗಿಬಿಡುವದೋ, ಎಲೈ ಗೌತಮನೆ, ಏಕತ್ವವನ್ನು ಅರಿತು ಮನನ ಮಾಡುತ್ತಿರುವ[1] ಮುನಿಯ ಆತ್ಮನೂ ಇದರಂತೆಯೇ ಆಗಿರುವನು.

ಆದ್ದರಿಂದ ಕೆಟ್ಟ ತಾರ್ಕಿಕರ[2] ಭೇದದೃಷ್ಟಿಯನ್ನೂ ನಾಸ್ತಿಕರ ಕುದೃಷ್ಟಿಯನ್ನೂ[3] ಬಿಟ್ಟು ಸಾವಿರ ತಂದೆತಾಯಿಗಳಿಗಿಂತಲೂ ಹೆಚ್ಚಾಗಿ ನಮಗೆ ಹಿತವನ್ನು ಬಯಸುತ್ತಿರುವ ವೇದವು ಉಪದೇಶಮಾಡುತ್ತಿರುವ ಆತ್ಮೈಕತ್ವದರ್ಶನವನ್ನೇ ಶಾಂತದರ್ಪರಾಗಿ ಆದರಿಸಬೇಕು ಎಂದು ಅರ್ಥ.[4]

1. ನೀರಿನಲ್ಲಿ ನೀರನ್ನು ಸುರಿಯುವಂತೆ ಜೀವಾತ್ಮನನ್ನು ಪರಮಾತ್ಮನಲ್ಲಿ ಸೇರಿಸಬೇಕಾದದ್ದೇನೂ ಇರುವದಿಲ್ಲ. ಸಂಸಾರಿಯಾಗಿ ತೋರುತ್ತಿರುವ ಈಗಿನ ರೂಪವು ಮಿಥ್ಯೆಯೆಂತಲೂ ನಿಜವಾಗಿರುವ ರೂಪವು ಬ್ರಹ್ಮವೇ ಎಂತಲೂ ತಿಳಿದುಕೊಳ್ಳುವದೇ ಸಾಯುಜ್ಯವು. ಭೇದವಿರುವದಿಲ್ಲವೆಂದು ತಿಳಿಸುವಮಟ್ಟಿಗೆ ದೃಷ್ಟಾಂತವನ್ನು ಅನ್ವಯಿಸಿಕೊಳ್ಳಬೇಕು.

2. ಒಂದೊಂದು ಶರೀರಕ್ಕೂ ಒಬ್ಬೊಬ್ಬ ಆತ್ಮನು ಬೇರೆಬೇರೆಯಾಗಿರಬೇಕೆಂದು ಊಹಿಸುವದು ಕೆಟ್ಟತರ್ಕವು. ಏಕೆಂದರೆ ಆತ್ಮನಿಗೆ ಶರೀರಸಂಬಂಧವಿರುವದೆಂಬುದಕ್ಕೆ ಪ್ರಮಾಣವಿಲ್ಲ.

3. ಚಾರ್ವಾಕರ, ಕ್ಷಣಿಕವಾದಿಗಳ ಮತ್ತು ಶೂನ್ಯವಾದಿಗಳ ಮತವು ವೇದವಿರುದ್ಧವಾದ್ದರಿಂದಲೂ ಕುದೃಷ್ಟಿ. ಮನು ೧೨-೯೫.

4. ದರ್ಪವು ಆತ್ಮದರ್ಶನಕ್ಕೆ ಅಡ್ಡಿ.

# ಎರಡನೆಯ ಅಧ್ಯಾಯ-ಎರಡನೆಯ ವಲ್ಲಿ

(ಭಾಷ್ಯ)

೧೩೩. ಪುನರಪಿ ಪ್ರಕಾರಾನ್ತರೇಣ ಬ್ರಹ್ಮತತ್ತ್ವನಿರ್ಧಾರಣಾ

ರ್ಥೋಽಯಮಾರಮ್ಭಃ । ದುರ್ವಿಜ್ಞೇಯತ್ವಾದ್ ಬ್ರಹ್ಮಣಃ ॥

(ಭಾಷ್ಯಾರ್ಥ)

ಬ್ರಹ್ಮವಸ್ತು ಅರಿತುಕೊಳ್ಳುವದು ಕಷ್ಟವಾದ್ದರಿಂದ ಮತ್ತೂ ಬೇರೊಂದು ಪ್ರಕಾರದಿಂದ ಬ್ರಹ್ಮತತ್ತ್ವವನ್ನು ಗೊತ್ತುಪಡಿಸಬೇಕೆಂದು (ಈ ವಲ್ಲಿಯನ್ನು) ಆರಂಭಿಸಿರುತ್ತದೆ.

## ಶಾರೀರಾತ್ಮನ ನಿಜವನ್ನು ಅರಿತರೆ ಮುಕ್ತಿ

ಪುರಮೇಕಾದಶದ್ವಾರಮಜಸ್ಯಾವಕ್ರಚೇತಸಃ ।

ಅನುಷ್ಠಾಯ ನ ಶೋಚತಿ ವಿಮುಕ್ತಶ್ಚ ವಿಮುಚ್ಯತೇ । ಏತದ್ವೈ ತತ್ ॥೧॥

೧. ಹನ್ನೊಂದು ಬಾಗಿಲಿನ ಪುರವು ಅಜನೂ ವಕ್ರವಲ್ಲದ ಚೇತಸ್ಸುಳ್ಳವನೂ (ಆದ ಆತ್ಮನ)ದು. ಅನುಷ್ಠಾನಮಾಡಿದರೆ ಶೋಕಿಸುವದಿಲ್ಲ. ವಿಮುಕ್ತನಾಗಿ ವಿಮುಕ್ತನಾಗುವನು. ಇದೇ ಅದು.

(ಭಾಷ್ಯ)

೧೩೪. ಪುರಂ ಪುರಮಿವ ಪುರಮ್ । ದ್ವಾರದ್ವಾರಪಾಲಾಧಿಷ್ಠಾತ್ರಾದ್ಯನೇಕ ಪುರೋಪಕರಣಸಮ್ಪತ್ತಿದರ್ಶನಾತ್ ಶರೀರಂ ಪುರಮ್ । ಪುರಂ ಚ ಸೋಪಕರಣಂ ಸ್ವಾತ್ಮನಾಸಂಹತಸ್ವತನ್ತ್ರಸ್ವಾಮ್ಯರ್ಥಂ ದೃಷ್ಟಮ್ । ತಥೇದಂ ಪುರಸಾಮಾನ್ಯಾತ್ ಅನೇಕೋಪಕರಣಸಂಹತಂ ಶರೀರಂ ಸ್ವಾತ್ಮನಾ ಅಸಂಹತರಾಜಸ್ಥಾನೀಯಸ್ವಾಮ್ಯರ್ಥಂ ಭವಿತುಮರ್ಹತಿ । ತಚ್ಚೇದಂ ಶರೀರಾಖ್ಯಂ ಪುರಮ್ ಏಕಾದಶದ್ವಾರಮ್ ಏಕಾದಶ ದ್ವಾರಾಣ್ಯಸ್ಯ ಸಪ್ತ ಶೀರ್ಷಣ್ಯಾನಿ, ನಾಭ್ಯಾ ಸಹಾರ್ವಾಞ್ಚಿ ತ್ರೀಣಿ ಶಿರಸ್ಯೇಕಮ್ । ತೈರೇಕಾದಶದ್ವಾರಂ ಪುರಮ್ । ಕಸ್ಯ ? ಅಜಸ್ಯ ಜನ್ಮಾದಿವಿಕ್ರಿಯಾರಹಿತಸ್ಯ ಆತ್ಮನೋ ರಾಜಸ್ಥಾನೀಯಸ್ಯ ಪುರಧರ್ಮವಿಲಕ್ಷಣಸ್ಯ । ಅವಕ್ರಚೇತಸಃ ಅವಕ್ರಮ್ ಅಕುಟಿಲಮ್ ಆದಿತ್ಯಪ್ರಕಾಶವನ್ನಿತ್ಯಮೇವಾವಸ್ಥಿತಮ್ ಏಕರೂಪಂ ಚೇತೋ ವಿಜ್ಞಾನಮ್ ಅಸ್ಯ ಇತ್ಯವಕ್ರಚೇತಾಃ । ತಸ್ಯ ಅವಕ್ರಚೇತಸಃ ರಾಜಸ್ಥಾನೀಯಸ್ಯ ಬ್ರಹ್ಮಣಃ ಯಸ್ಯೇದಂ ಪುರಂ ತಂ ಪರಮೇಶ್ವರಂ ಪುರಸ್ವಾಮಿನಮ್ । ಅನುಷ್ಠಾಯ ಧ್ಯಾತ್ವಾ । ಧ್ಯಾನಂ ಹಿ ತಸ್ಯಾನುಷ್ಠಾನಮ್ ಸಮ್ಯಗ್ವಿಜ್ಞಾನಪೂರ್ವಕಮ್ । ತಂ ಸರ್ವೈಷಣಾವಿನಿರ್ಮುಕ್ತಃ ಸನ್

ಸಮಂ ಸರ್ವಭೂತಸ್ಥಂ ಧ್ಯಾತ್ವಾ ನ ಶೋಚತಿ । ತದ್ವಿಜ್ಞಾನಾದಭಯಪ್ರಾಪ್ತೇಃ ಶೋಕಾವಸರಾಭಾವಾತ್ ಕುತೋ ಭಯೇಕ್ಷಾ ? ಇಹೈವಾವಿದ್ಯಾಕೃತಕಾಮಕರ್ಮಬನ್ಧನೈರ್ವಿಮುಕ್ತೋ ಭವತಿ । ವಿಮುಕ್ತಶ್ಚ ಸನ್ ವಿಮುಚ್ಯತೇ ಪುನಃ ಶರೀರಂ ನ [illegible]ರ್ಥಃ ॥

(ಭಾಷ್ಯಾರ್ಥ)

ಪುರದಂತಿರುವದರಿಂದ ಪುರವು ; ಬಾಗಿಲುಗಳು, ಬಾಗಿಲುಕಾಯುವವರು, ಅವರ ಮೇಲಿನ ದಣಿಗಳು ಮುಂತಾದ[1] ಪುರಕ್ಕೆ ಬೇಕಾದ ಅನೇಕ ಉಪಕರಣಗಳು ಸೇರಿರುವದು ಕಂಡುಬರುವದರಿಂದ ಶರೀರವು ಪುರವು. ಉಪಕರಣಗಳಿಂದೊಡಗೂಡಿದ ಪುರವು ತನ್ನೊಡನೆ ಸೇರಿಕೊಳ್ಳದೆ ಇರುವ ಸ್ವತಂತ್ರನಾದ ಸ್ವಾಮಿಗೋಸ್ಕರವಾಗಿರುವದೆಂದು[2] ಕಂಡಿದೆಯಷ್ಟೆ, ಅದರಂತೆ ಪುರದ ಹಾಗೆ ಅನೇಕ ಉಪಕರಣಗಳಿಂದ[3] ಕೂಡಿಕೊಂಡಿರುವ ಈ ಶರೀರವು ತನ್ನೊಡನೆ ಸೇರಿಕೊಳ್ಳದೆ (ತನಗೆ) ರಾಜನಂತಿರುವ (ಒಬ್ಬ) ಒಡೆಯನಿಗೋಸ್ಕರ ಇರಬೇಕು. ಅಂಥ ಈ ಶರೀರವೆಂಬ ಪುರವು ಹನ್ನೊಂದು ಬಾಗಿಲುಗಳುಳ್ಳದ್ದೂ, ತಲೆಯಲ್ಲಿ ಏಳು, ಹೊಕ್ಕುಳೂ ಸೇರಿ ಕೆಳಗಿರುವವು ಮೂರು, ತಲೆಯ ಮೇಲೆ ಒಂದು- ಹೀಗೆ ಇದಕ್ಕೆ ಹನ್ನೊಂದು ಬಾಗಿಲುಗಳಿರುವವು. ಈ ಹನ್ನೊಂದು ಬಾಗಿಲುಗಳ ಪುರವು ಯಾರದು ? ಎಂದರೆ, ಅಜನಾಗಿರುವ ಎಂದರೆ ಹುಟ್ಟು ಮುಂತಾದ ಮಾರ್ಪಾಡುಗಳಿಲ್ಲದ[4] (ದೃಷ್ಟಾಂತದ) ರಾಜನಂತೆ ಪುರದ ಧರ್ಮಗಳಿಗಿಂತ ಬೇರೆಯ ಸ್ವಭಾವದವನಾದ ವಕ್ರವಲ್ಲದ ಚೇತಸ್ಸುಳ್ಳ. ವಕ್ರವಲ್ಲದ್ದೆಂದರೆ ಕೊಂಕಿಲ್ಲದ್ದು, ಸೂರ್ಯನ ಬೆಳಕಿನಂತೆ ಯಾವಾಗಲೂ ಇರುವ ಏಕರೂಪವಾಗಿರುವ ಚೇತಸ್ಸು ಎಂದರೆ ಚೈತನ್ಯವು ಇವನಿಗಿರುವದರಿಂದ (ಇವನು) ವಕ್ರವಲ್ಲದ ಚೇತಸ್ಸುಳ್ಳವನು. ಹೀಗೆ ವಕ್ರವಲ್ಲದ ಚೇತಸ್ಸುಳ್ಳ-ರಾಜನಂತಿರುವ ಬ್ರಹ್ಮದ್ದು (ಈ ಪುರವು).

1. ಮುಂತಾದ ಎಂದರೆ ಮಂತ್ರಿ, ಹೊಗಳುಭಟ್ಟರು - ಮುಂತಾದವರು ; ಯಂತ್ರಗಳು, ಕೋಟೆಕೊತ್ತಲು ಮುಂತಾದದ್ದು - ಇವುಗಳನ್ನೂ ಗ್ರಹಿಸಬೇಕು (ಗೋ ॥)

2. ಸಂಹತವಾದದ್ದು ಅಸಂಹತನಾದ ಬೇರೊಬ್ಬನಿಗೋಸ್ಕರವಿರುವದೆಂಬ ಸಾಂಖ್ಯಯುಕ್ತಿಯು ಭಾಷ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಪ್ರ. ಭಾ. ೨-೧; ೪-೧, ಐ. ಭಾ. ೧-೩, ಕೇ. ಭಾ. ೧-೨.

3. ನೆತ್ತಿ, ಬಾಯಿ, ಕಣ್ಣು, ಕಿವಿ, ಮೂಗು, ಹೊಕ್ಕಳು, ಕೆಳಗಿನ ರಂಧ್ರಗಳು - ಇವು ದ್ವಾರಗಳು ; ಇಂದ್ರಿಯಗಳು ದ್ವಾರಪಾಲಕರು ; ಒಗ್ದೇವತೆಗಳು ಮೇಲಿನ ಧಣಿಗಳು. ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜ, ಅಸ್ಥಿ, ನರಗಳು - ಎಂಬ ಕೋಟೆಯ ಸುತ್ತುಗಳನ್ನೂ ಮೂಲಾಧಾರದಿಂದ ಹಿಡಿದು ಆಜ್ಞಾಚಕ್ರದವರೆಗಿನ ಕೊತ್ತಲುಗಳನ್ನೂ ಕೀಲುಗಳೆಂಬ ಯಂತ್ರಗಳನ್ನೂ ಕೂದಲುಗಳೆಂಬ ಗೋಪುರಗಳನ್ನೂ ಗ್ರಹಿಸಬೇಕು. (ಗೋ.)

4. ಚೈತನ್ಯವು ವೃತ್ತಿಜ್ಞಾನದಂತೆ ನಾನಾರೂಪವಾಗಿ ಅನಿತ್ಯವಾಗಿರುವದಿಲ್ಲ.

ಇದು ಯಾವಾತನ ಪುರವೋ ಆ ಪುರದೊಡೆಯನಾದ ಪರಮೇಶ್ವರನನ್ನು ಅನುಷ್ಠಾನಮಾಡಿದರೆ ಎಂದರೆ ಧ್ಯಾನಮಾಡಿದರೆ - **ಚೆನ್ನಾಗಿ ಅರಿತುಕೊಂಡು ಧ್ಯಾನಮಾಡುವದಲ್ಲವೆ, ಆತನ ಅನುಷ್ಠಾನವು** [1]? ಆ ಸಮನೂ ಸರ್ವಭೂತಗಳಲ್ಲಿರುವವನೂ[2] ಆದ (ಪರಮಾತ್ಮನನ್ನು) ಎಲ್ಲಾ ಏಷಣೆಗಳನ್ನೂ ಬಿಟ್ಟು ಧ್ಯಾನಿಸಿದರೆ- ಶೋಕಿಸುವದಿಲ್ಲ. ಏಕೆಂದರೆ ಆತನನ್ನು ಅರಿತುಕೊಳ್ಳುವದರಿಂದ ಅಭಯವು ಸಿಕ್ಕುವದರಿಂದ[3] ಶೋಕಕ್ಕೆ ಅವಕಾಶವಿರುವದಿಲ್ಲ. (ಹೀಗಿರುವಲ್ಲಿ ಹೆದರಿಕೆಯನ್ನು ಕಾಣುವದೆಲ್ಲಿ ಬಂತು)[4] ? **ಅವಿದ್ಯೆಯಿಂದಾಗಿರುವ ಕಾಮಕರ್ಮಗಳೆಂಬ ಬಂಧನಗಳಿಂದ ಇಲ್ಲಿಯೇ ಬಿಡುಗಡೆ ಹೊಂದುತ್ತಾನೆ.** ಹಾಗೆ ಬಿಡುಗಡೆಹೊಂದಿದವನಾಗಿ ವಿಮುಕ್ತನಾಗುತ್ತಾನೆ ಎಂದರೆ ಬಿಡುಗಡೆ ಹೊಂದುತ್ತಾನೆ, ಮತ್ತೆ ಶರೀರವನ್ನು ಧರಿಸುವದಿಲ್ಲ ಎಂದರ್ಥ.[5]

(ಭಾಷ್ಯ)

**೧೩೫. ಸ ತು ನೈಕಪುರವರ್ತ್ಯೇವಾತ್ಮಾ, ಕಿಂ ತರ್ಹಿ ಸರ್ವಪುರವರ್ತೀ । ಕಥಮ್ ?**

(ಭಾಷ್ಯಾರ್ಥ)

ಆದರೆ ಆ ಆತ್ಮನು, ಒಂದೇ ಪುರದಲ್ಲಿರುವವನಲ್ಲ, ಮತ್ತೇನೆಂದರೆ ಎಲ್ಲಾ ಪುರಗಳಲ್ಲಿಯೂ ಇರುವವನು, ಹೇಗೆಂದರೆ :-

**ಹಗ್ಂಸಃ ಶುಚಿಷದ್ವಸುರನ್ತರಿಕ್ಷಸದ್**
**ಹೋತಾ ವೇದಿಷದತಿಥಿರ್ದುರೋಣಸತ್ ।**
**ನೃಷದ್ವರಸದೃತಸದ್ವ್ಯೋಮ-**
**ಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥ ೨ ॥**

1. ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಧ್ಯಾನಮಾಡುವದು ಎಂಬ (ಗೋ ॥) ವ್ಯಾಖ್ಯಾನವು ಭಾಷ್ಯಕ್ಕೆ ಸ್ವರಸವಲ್ಲ ; ಜ್ಞಾನಿಯು ಆತ್ಮಚಿಂತನೆಯಲ್ಲಿಯೇ ಇರುವನು ಎಂಬುದು ಸರಳವಾದ ಅರ್ಥ. 2. ಗೀ. ೧೩-೨೭.

3. ಅಜ್ಞಾನದಿಂದ ಉಂಟಾಗಿರುವ ಸಂಸಾರಭಯವು ಜ್ಞಾನವುಂಟಾದಮೇಲೆ ಇರಲಾರದು.

4. "ಕುತೋ ಭಯೇಕ್ಷಾ?" ಎಂಬ ವಾಕ್ಯದ ಅನುವಾದವಿದು. ಶೋಕಿಸುವದಿಲ್ಲ ಎಂದಿಷ್ಟೇ ಮೂಲದಲ್ಲಿರುವದರಿಂದ ಭಾಷ್ಯದಲ್ಲಿ ಈ ವಾಕ್ಯವು ಹೆಚ್ಚಾಗಿರುವಂತೆ ತೋರುತ್ತದೆ. ಆದರೆ ಮುದ್ರಿತಪುಸ್ತಕಗಳಲ್ಲೆಲ್ಲ ಇದು ಇದೆ.

5. ಮತ್ತೆ ಶರೀರಧಾರಣೆಯಿಲ್ಲವೆಂಬುದು ಗೌಣಮುಕ್ತಿ ಎಂಬ ವಿಷಯಕ್ಕೆ ಬೃ. ಭಾ. ೪-೪-೬ರಲ್ಲಿ "ಬ್ರಹ್ಮಾಪ್ಯೇತಿ" ಎಂಬುದರ ವ್ಯಾಖ್ಯಾನವನ್ನು ನೋಡಿ.

೨. ಹಂಸನು, ಶುಚಿಸದನು ; ವಸು, ಅಂತರಿಕ್ಷಸದನು , ಹೋತೃ, ವೇದಿಷದನು ; ಅತಿಥಿ, ದುರೋಣಸದನು ; ನೃಷದನು, ವರಸದನು, ಋತಸದನು, ವ್ಯೋಮಸದನು, ಅಬ್ಜನು, ಗೋಜನು, ಋತಜನು, ಅದ್ರಿಜನು ; ಋತವು, ದೊಡ್ಡದು.

(ಭಾಷ್ಯ)

೧೩೬. ಹಂಸಃ ಹನ್ತಿ ಗಚ್ಛತೀತಿ । ಶುಚಿಷತ್ ಶುಚೌ ದಿವಿ ಆದಿತ್ಯಾತ್ಮನಾ ಸೀದತೀತಿ । ವಸುಃ ವಾಸಯತಿ ಸರ್ವಾನ್ ಇತಿ । ವಾಯ್ವಾತ್ಮನಾ ಅನ್ತರಿಕ್ಷೇ ಸೀದತೀತಿ ಅನ್ತರಿಕ್ಷಸತ್ । ಹೋತಾ ಅಗ್ನಿಃ । "ಅಗ್ನಿರ್ವೈ ಹೋತಾ" (?) ಇತಿ ಶ್ರುತೇಃ । ವೇದ್ಯಾಂ ಪೃಥಿವ್ಯಾಂ ಸೀದತೀತಿ ವೇದಿಷತ್ । 'ಇಯಂ ವೇದಿಃ ಪರೋಽನ್ತಃ ಪೃಥಿವ್ಯಾಃ' (ಋ. ಮಂ. ೧-೨೨-೧೬೪-೩೫) ಇತಿ ಮನ್ತ್ರವರ್ಣಾತ್ । ಅತಿಥಿಃ ಸೋಮಃ ಸನ್ ದುರೋಣೇ ಕಲಶೇ ಸೀದತೀತಿ ದುರೋಣಸತ್ । ಬ್ರಾಹ್ಮಣೋಽತಿಥಿರೂಪೇಣ ವಾ ದುರೋಣೇಷು ಗೃಹೇಷು ಸೀದತೀತಿ ದುರೋಣಸತ್ । ನೃಷತ್ ನೃಷು ಮನುಷ್ಯೇಷು ಸೀದತೀತಿ 'ನೃಷತ್' । ವರಸತ್ ವರೇಷು ದೇವೇಷು ಸೀದತೀತಿ । ಋತಸತ್ । ಋತಂ ಸತ್ಯಂ ಯಜ್ಞೋ ವಾ । ತಸ್ಮಿನ್ ಸೀದತೀತಿ ಋತಸತ್ । ವ್ಯೋಮಸತ್ ವ್ಯೋಮ್ನಿ ಆಕಾಶೇ ಸೀದತೀತಿ । ಅಬ್ಜಾಃ ಅಪ್ಸು ಶಙ್ಖಶುಕ್ತಿಮಕರಾದಿರೂಪೇಣ ಜಾಯತ ಇತಿ । ಗೋಜಾಃ ಗವಿ ಪೃಥಿವ್ಯಾಂ ವ್ರೀಹಿಯವಾದಿರೂಪೇಣ ಜಾಯತ ಇತಿ । ಋತಜಾಃ ಯಜ್ಞಾಙ್ಗರೂಪೇಣ ಜಾಯತ ಇತಿ । ಅದ್ರಿಜಾಃ ಪರ್ವತೇಭ್ಯೋ ನದ್ಯಾದಿರೂಪೇಣ ಜಾಯತ ಇತಿ । ಸರ್ವಾತ್ಮಾಪಿ ಸನ್ ಋತಮ್ ಅವಿತಥಸ್ವಭಾವ ಏವ । ಬೃಹತ್ ಮಹಾನ್ । ಸರ್ವಕಾರಣತ್ವಾತ್ । ಯದಾಪ್ಯಾದಿತ್ಯ ಏವ ಮನ್ತ್ರೇಣೋಚ್ಯತೇ ತದಾಪ್ಯಾತ್ಮಸ್ವರೂಪತ್ವಮಾದಿತ್ಯಸ್ಯಾಙ್ಗೀಕೃತಮ್ ಇತಿ ಬ್ರಾಹ್ಮಣವ್ಯಾಖ್ಯಾನೇಽಪ್ಯ ವಿರೋಧಃ । ಸರ್ವ ವ್ಯಾಪ್ಯೇಕ ಏವಾತ್ಮಾ ಜಗತೋ ನಾತ್ಮಭೇದಃ ಇತಿ ಮನ್ತ್ರಾರ್ಥಃ ॥

(ಭಾಷ್ಯಾರ್ಥ)

(ಅವನು) ಹಂಸನು, ಹನ್ತಿ - ಹೋಗುತ್ತಾನೆ ; ಆದ್ದರಿಂದ (ಹಂಸನೆನಿಸಿ) **ಶುಚಿಸದನು**, ಶುಚಿಯಲ್ಲಿ ಎಂದರೆ ಆಕಾಶದಲ್ಲಿ ಆದಿತ್ಯರೂಪದಿಂದ ಇರುವನು. **ವಸು**ವಾಗಿ ಎಂದರೆ ಎಲ್ಲವನ್ನೂ ಮುಚ್ಚಿಕೊಂಡಿರುವವನಾಗಿ ವಾಯುರೂಪದಿಂದ ಅಂತರಿಕ್ಷದಲ್ಲಿರುವನು ; ಆದ್ದರಿಂದ **ಅಂತರಿಕ್ಷಸದನು**. ಹೋತೃವಾಗಿ ಎಂದರೆ **'ಅಗ್ನಿಯೇ ಹೋತೃವು'** (?) ಎಂಬ ಶ್ರುತಿಪ್ರಮಾಣದಿಂದ ಅಗ್ನಿಯ ರೂಪದಲ್ಲಿ ವೇದಿಯಲ್ಲಿ ಎಂದರೆ ಪೃಥಿವಿಯಲ್ಲಿರುವನು ; ಆದ್ದರಿಂದ **ವೇದಿಷದನು**. 'ಪೃಥ್ವಿಯ ಉತ್ಕೃಷ್ಟವಾದ ಸ್ವಭಾವವೇ ಈ ವೇದಿಯು' (ಋ. ಮಂ. ೧-೨೨-೧೬೪-೩೫) ಎಂಬ

ಮಂತ್ರವರ್ಣದ ಪ್ರಮಾಣವಿರುವದರಿಂದ (ವೇದಿಯೆಂದರೆ ಪೃಥಿವಿಯು). **ಅತಿಥಿ** ಯಾಗಿ ಎಂದರೆ ಸೋಮನಾಗಿ ಕಲಶದಲ್ಲಿರುವನಾದ್ದರಿಂದ **ದುರೋಣಸದನು** ; ಅಥವಾ ಬ್ರಾಹ್ಮಣನಾದ ಅತಿಥಿಯ ರೂಪದಿಂದ ದುರೋಣಗಳಲ್ಲಿ ಎಂದರೆ ಮನೆಗಳಲ್ಲಿ ಇರುವನಾದ್ದರಿಂದ **ದುರೋಣಸದನು.** ನರರಲ್ಲಿ ಎಂದರೆ ಮನುಷ್ಯರಲ್ಲಿ ಇರುವನಾದ್ದರಿಂದ **ನೃಷದನು,** ವರರಾದವರಲ್ಲಿ ಎಂದರೆ (ಶ್ರೇಷ್ಠರಾದ) ದೇವತೆ ಗಳಲ್ಲಿ ಇರುವನಾದ್ದರಿಂದ **ವರಸದನು.** ಋತಸದನು : ಋತವೆಂದರೆ ಸತ್ಯವು ಅಥವಾ ಯಜ್ಞವು ; ಅದರಲ್ಲಿರುವನಾದ್ದರಿಂದ **ಋತಸದನು.** ವ್ಯೋಮದಲ್ಲಿ ಎಂದರೆ ಆಕಾಶ ದಲ್ಲಿ ಇರುವನಾದ್ದರಿಂದ **ವ್ಯೋಮಸದನು.** ನೀರಿನಲ್ಲಿ ಶಂಖ, ಚಿಪ್ಪು, ಮೊಸಳೆ - ಮುಂತಾದ ರೂಪದಿಂದ ಹುಟ್ಟುವದರಿಂದ ಅಬ್ಜನು. ಗೋವಿನಲ್ಲಿ ಎಂದರೆ ಭೂಮಿಯಲ್ಲಿ[1] ಭತ್ರ, - ಮುಂತಾದ ರೂಪದಿಂದ ಹುಟ್ಟುವದರಿಂದ **ಗೋಜನು.** ಯಜ್ಞದ ಅಂಗಗಳ ರೂಪದಿಂದ ಹುಟ್ಟುವದರಿಂದ ಋತಜನು. ಪರ್ವತ ಗಳಿಂದ ನದಿಯೇ ಮುಂತಾದ ರೂಪದಿಂದ ಹುಟ್ಟುವದರಿಂದ **ಅದ್ರಿಜನು.** (ಹೀಗೆ) ಎಲ್ಲಾ ರೂಪಗಳಿಂದಲೂ ಇರುತ್ತಿದ್ದರೂ **ಋತವು** ಎಂದರೆ ಸತ್ಯರೂಪನೇ ಆಗಿರುತ್ತಾನೆ. **ದೊಡ್ಡದು** ಎಂದರೆ ವ್ಯಾಪಕನು ; ಏಕೆಂದರೆ (ಅವನು) ಎಲ್ಲಕ್ಕೂ ಕಾರಣವಾಗಿರುವದರಿಂದ ದೊಡ್ಡವನು. (ಈ) ಮಂತ್ರವು ಆದಿತ್ಯನನ್ನೇ ಹೇಳುತ್ತದೆ ಎಂಬ ಪಕ್ಷದಲ್ಲಿಯೂ ಆದಿತ್ಯನೂ ಆತ್ಮಸ್ವರೂಪನೇ ಎಂದು ಅಂಗೀಕರಿಸಿರುವದರಿಂದ **ಬ್ರಾಹ್ಮಣರೀತಿಯಿಂದ**[2] ವ್ಯಾಖ್ಯಾನಮಾಡಿದರೂ ವಿರೋಧವಿಲ್ಲ. ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಈತನೊ ಈ ಜಗತ್ತಿಗೆಲ್ಲ ಆತ್ಮನು, ಆತ್ಮರು ಬೇರೆಬೇರೆಯಲ್ಲ ಎಂಬುದು ಮಂತ್ರದ (ಒಟ್ಟು) ಅರ್ಥವು.

## ಆತ್ಮನನ್ನು ಕಂಡುಹಿಡಿಯುವದಕ್ಕೆ ಹೆಗ್ಗುರುತುಗಳು

(ಭಾಷ್ಯ)

**೧೩೭. ಆತ್ಮನಃ ಸ್ವರೂಪಾಧಿಗಮೇ ಲಿಙ್ಗಮುಚ್ಯತೇ -**

1. ಗೋ ಎಂಬ ಮಾತಿಗೆ ಸ್ವರ್ಗ, ಬಾಣ - ಮುಂತಾದ ಅನೇಕ ಅರ್ಥಗಳುಂಟು ; ಇಲ್ಲಿ ಭೂಮಿ ಎಂದು ಅರ್ಥ.

2. ಬ್ರಾಹ್ಮಣದಲ್ಲಿ 'ಅಸೌ ವಾ ಆದಿತ್ಯೋ ಹಂಸಃ ಶುಚಿಷತ್' ಎಂದು ಇದೇ ಮಂತ್ರವನ್ನು ಆದಿತ್ಯನ ಪರವಾಗಿ ವ್ಯಾಖ್ಯಾನಮಾಡಿರುತ್ತಿಗೆ. (ಅ II) ಅಲ್ಲಿ ಸೂರ್ಯನೇ ಸ್ಥಾವರಜಂಗಮಗಳಿಗೆ ಆತ್ಮನು ಎಂದಿರುವದರಿಂದ ಆತನು ಸರ್ವವ್ಯಾಪಿ ಎಂಬ ವ್ಯಾಖ್ಯಾನಕ್ಕೆ ಅಡ್ಡಿಯಿಲ್ಲ. ಏಕೆಂದರೆ ಆತ್ಮರೂಪದಿಂದಲೇ ಆದಿತ್ಯನನ್ನು ಸರ್ವರೂಪನಾಗಿರುವನೆಂದು ಬ್ರಾಹ್ಮಣದಲ್ಲಿಯೂ ವರ್ಣಿಸಿರುತ್ತದೆ.

(ಭಾಷ್ಯಾರ್ಥ)

ಆತ್ಮನ ಸ್ವರೂಪವನ್ನು ಅರಿತುಕೊಳ್ಳುವದಕ್ಕೆ ಗುರುತನ್ನು[1] ಹೇಳುತ್ತಾನೆ :-

**ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ ।**
**ಮಧ್ಯೇ ವಾಮನಮಾಸೀನಂ ವಿಶ್ವೇ ದೇವಾ ಉಪಾಸತೇ ॥ ೩ ॥**

೩. ಪ್ರಾಣವನ್ನು ಮೇಲಕ್ಕೆ ಎತ್ತುವನು, ಅಪಾನವನ್ನು ಕೆಳಕ್ಕೆ ಎಸೆಯುವನು. ನಡುವೆ ಕುಳಿತಿರುವ ವಾಮನನನ್ನು ಎಲ್ಲಾ ದೇವತೆಗಳೂ ಉಪಾಸನೆಮಾಡುತ್ತಿರುವರು.

(ಭಾಷ್ಯ)

೧೩೮. ಊರ್ಧ್ವಂ ಹೃದಯಾತ್ ಪ್ರಾಣಂ ಪ್ರಾಣವೃತ್ತಿಂ ವಾಯುಮ್ ಉನ್ನಯತಿ ಊರ್ಧ್ವಂ ಗಮಯತಿ । ತಥಾ ಅಪಾನಂ ಪ್ರತ್ಯಕ್ ಅಧಃ ಅಸ್ಯತಿ ಕ್ಷಿಪತಿ । ಯಃ ಇತಿ ವಾಕ್ಯಶೇಷಃ । ತಂ ಮಧ್ಯೇ ಹೃದಯಪುಣ್ಡರೀಕಾಕಾಶೇ ಆಸೀನಂ ಬುದ್ಧಾವಭಿವ್ಯಕ್ತಂ ವಿಜ್ಞಾನಪ್ರಕಾಶಂ ವಾಮನಂ ವನನೀಯಂ ಸಮ್ಭಜನೀಯಂ ವಿಶ್ವೇ ಸರ್ವೇ ದೇವಾಃ ಚಕ್ಷುರಾದಯಃ ಪ್ರಾಣಾಃ ರೂಪಾದಿವಿಜ್ಞಾನಂ ಬಲಿಮ್ ಉಪಹರನ್ತೋ ವಿಶ ಇವ ರಾಜಾನಮ್ ಉಪಾಸತೇ ತಾದರ್ಥ್ಯೇನ ಅನುಪರತ ವ್ಯಾಪಾರಾ ಭವನ್ತಿ ಇತ್ಯರ್ಥಃ । ಯದರ್ಥಾ ಯತ್ಪ್ರಯುಕ್ತಾಶ್ಚ ಸರ್ವೇ ವಾಯುಕರಣ ವ್ಯಾಪಾರಾಃ ಸೋಽನ್ಯಃ ಸಿದ್ಧಃ ಇತಿ ವಾಕ್ಯಾರ್ಥಃ ॥

(ಭಾಷ್ಯಾರ್ಥ)

ಹೃದಯದಿಂದ ಮೇಲಕ್ಕೆ ಪ್ರಾಣವನ್ನು ಎಂದರೆ ಪ್ರಾಣವೃತ್ತಿಯ ವಾಯುವನ್ನು ಎತ್ತುವನು, ಮೇಲಕ್ಕೆ ಹೋಗುವಂತೆ ಮಾಡುವನು. ಹಾಗೂ ಅಪಾನವನ್ನು ಕೆಳಕ್ಕೆ ಎಸೆಯುವನು. (ಹೀಗಿರುವನು) ಯಾವನೋ ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. ನಡುವೆ ಎಂದರೆ ಹೃದಯಪುಂಡರೀಕದ ಆಕಾಶದಲ್ಲಿ ಕುಳಿತಿರುವ ಎಂದರೆ ಬುದ್ಧಿಯಲ್ಲಿ ಹೊರತೋರಿಕೊಳ್ಳುವ[2] ಚೈತನ್ಯಪ್ರಕಾಶನಾದ ಆ ವಾಮನನನ್ನು ಪ್ರಾರ್ಥಿಸುವದಕ್ಕೆ ತಕ್ಕ, ಭಜಿಸುವದಕ್ಕೆ ತಕ್ಕ (ಆತ್ಮನನ್ನು), ಎಲ್ಲಾ ದೇವತೆಗಳೂ ಎಂದರೆ ಎಲ್ಲಾ ಚಕ್ಷುರಾದಿಪ್ರಾಣಗಳೂ[3] ರೂಪಾದಿಗಳ ಅರಿವೆಂಬ ಕಾಣಿಕೆಯನ್ನು[4] ತಂದೊಪ್ಪಿಸುತ್ತಾ ಪ್ರಜೆಗಳು ಅರಸನನ್ನು ಸೇವಿಸುವಂತೆ ಉಪಾಸನೆಮಾಡುತ್ತಿರುವರು, ಎಂದರೆ

1. ಹೊಗೆಯು ಬೆಂಕಿಗೆ ಗುರುತಾಗಿರುವಂತೆ ಆತ್ಮನನ್ನು ಅರಿಯುವದಕ್ಕೆ ಗುರುತು.
2. ತೈ. ೨-೧ 'ಪರಮೇ ವ್ಯೋಮನ್' ಎಂಬುದರ ವ್ಯಾಖ್ಯಾನವನ್ನು ನೋಡಿ.
3. ತೈ. ೨-೫ರಲ್ಲಿ 'ದೇವಾ' ಎಂಬುದರ ವ್ಯಾಖ್ಯಾನವನ್ನು ನೋಡಿ.
4. ಒಂದೊಂದು ಕರಣದ ಅರಿವೂ ಆತ್ಮನಿಗೇ ಸಲ್ಲತಕ್ಕದ್ದು

ಆತನಿಗಾಗಿಯೇ ಎಡೆಬಿಡದೆ ಕೆಲಸಮಾಡುತ್ತಿರುವವು ಎಂದರ್ಥ. ಪ್ರಾಣಕರಣಗಳ ವ್ಯಾಪಾರಗಳೆಲ್ಲವೂ ಯಾರಿಗೋಸ್ಕರವೋ[1] ಯಾರಿಂದ ಪ್ರೇರಿತವಾಗಿರುವವೋ[2] ಆ (ಇವುಗಳಿಂದ) ಬೇರೆಯಾದ (ಆತ್ಮನು ಇದಾನೆಂದು) ಸಿದ್ಧವಾದಂತೆ (ಆಯಿತು) ಎಂಬುದು (ಈ) ವಾಕ್ಯದ ಒಟ್ಟು ಅರ್ಥವು.

ಅಸ್ಯ ವಿಸ್ರಂಸಮಾನಸ್ಯ ಶರೀರಸ್ಥಸ್ಯ ದೇಹಿನಃ ।

ದೇಹಾದ್ ವಿಮುಚ್ಯಮಾನಸ್ಯ ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್ ॥ ೪ ॥

೪. ಶರೀರದಲ್ಲಿರುವ ಈ ದೇಹಿಯು ಸಡಿಲವಾಗಿ ದೇಹದಿಂದ ಕಳಚು ವಾಗ ಇಲ್ಲಿ ಏನು ಉಳಿಯುತ್ತದೆ? ಇದೇ ಅದು.

(ಭಾಷ್ಯ)

೧೩೯. ಕಿಂ ಚ ಅಸ್ಯ ಶರೀರಸ್ಥಸ್ಯ ಆತ್ಮನಃ ವಿಸ್ರಂಸಮಾನಸ್ಯ ಭ್ರಶ್ಯಮಾನಸ್ಯ ದೇಹಿನಃ ದೇಹವತಃ । ವಿಸ್ರಂಸನಶಬ್ದಾರ್ಥಮಾಹ - ದೇಹಾದ್ ವಿಮುಚ್ಯಮಾನಸ್ಯ ಇತಿ । ಕಿಮತ್ರ ಪರಿಶಿಷ್ಯತೇ ? ಪ್ರಾಣಾದಿಕಲಾಪೇ ನ ಕಿಂಚನ ಪರಿಶಿಷ್ಯತೇ ಅತ್ರ ದೇಹೇ । ಪುರಸ್ವಾಮಿವಿದ್ರವಣೇ ಇವ ಪುರವಾಸಿನಾಂ ಯಸ್ಯಾತ್ಮನೋಽಪಗಮೇ ಕ್ಷಣಮಾತ್ರಾತ್ ಕಾರ್ಯಕರಣಕಲಾಪರೂಪಂ ಸರ್ವಮಿದಂ ಹತಬಲಂ ವಿಧ್ವಸ್ತಂ ಭವತಿ ವಿನಷ್ಟಂ ಭವತಿ ಸೋಽನ್ಯಃ ಸಿದ್ಧಃ ॥

(ಭಾಷ್ಯಾರ್ಥ)

ಮತ್ತು ಈ ಶರೀರದಲ್ಲಿದ್ದು ಸಡಿಲವಾಗುವ ಎಂದರೆ ಬಿಟ್ಟುಹೋಗುವ ದೇಹಿಯು ದೇಹವಂತನಾದ (ಆತ್ಮನ); ಸಡಿಲವಾಗಿ ಎಂಬ ಮಾತಿಗೆ ಅರ್ಥವನ್ನು (ಶ್ರುತಿಯು) 'ದೇಹದಿಂದ ಕಳಚುವಾಗ' ಎಂದು (ತಾನೇ) ಹೇಳಿರುತ್ತದೆ. (ಆಗ) ಇಲ್ಲಿ ಏನು ಉಳಿಯುತ್ತದೆ ? ಇಲ್ಲಿ ಎಂದರೆ (ಈ) ಪ್ರಾಣಾದಿಗಳ ಸಮೂಹವಾದ (ದೇಹದಲ್ಲಿ)[3] ಏನೇನೂ ಉಳಿಯುವದಿಲ್ಲ. ಪುರದ ಸ್ವಾಮಿಯು ಓಡಿಹೋದರೆ ಪುರದಲ್ಲಿ ವಾಸವಾಗಿರುವವರು ಹೇಗೆ (ಬಲಗುಂದುವರೋ) ಹಾಗೆ ಯಾವ ಆತ್ಮನು ಬಿಟ್ಟು ಹೋಗುತ್ತಲೂ ಕ್ಷಣಮಾತ್ರದಿಂದ ಕಾರ್ಯಕರಣಗಳ ಗುಂಪಿನ ರೂಪದಲ್ಲಿರುವ ಇದೆಲ್ಲವೂ ಬಲಗುಂದಿ ಧ್ವಂಸವಾಗಿಹೋಗುವದೋ ನಾಶವಾಗಿಬಿಡುವದೋ ಅಂಥ ಆತ್ಮನು ಬೇರೊಬ್ಬನು (ಇದಾನೆಂದು) ಸಿದ್ಧವಾಯಿತು.

1. ಸಂಹತವಾದದ್ದು ಅಸಂಹತನಾದ ಆತ್ಮನಿಗಾಗಿರುವದು ಎಂದರ್ಥ. ೨-೨-೧೮ ಭಾಷ್ಯವನ್ನು ನೋಡಿ. ಗೀ. ೧೩-೧೮. 2. ಕೇ. ಭಾ. ೧೮ ಸೂಚನೆ.

3. 'ಪ್ರಾಣಾದಿಕಲಾಪೇ' ಎಂಬ ಪಾಠದಲ್ಲಿ ಪ್ರಾಣಾದಿಗಳ ಸಮೂಹವು ಯಾವದು ಉಳಿಯುತ್ತದೆ ?- ಎಂದು ಕನ್ನಡಿಸಬೇಕಾಗುವದು.

(ಭಾಷ್ಯ)

೧೪೦. ಸ್ಯಾನ್ಮತಮ್ - ಪ್ರಾಣಾಪಾನಾದ್ಯಪಗಮಾದೇವೇದಂ ವಿಧ್ವಸ್ತಂ ಭವತಿ ನ ತು ತದ್ವ್ಯತಿರಿಕ್ತಾತ್ಮಾಪಗಮಾತ್ । ಪ್ರಾಣಾದಿಭಿರೇವ ಹಿ ಮರ್ತ್ಯೋ ಜೀವತೀತಿ । ನೈತದಸ್ತಿ -

(ಭಾಷ್ಯಾರ್ಥ)

ಪ್ರಾಣ, ಅಪಾನ- ಮುಂತಾದದ್ದು ಬಿಟ್ಟುಹೋಗುವದರಿಂದ ಈ (ಶರೀರವು) ಧ್ವಂಸವಾಗುವದೇ ಹೊರತು ಅದಕ್ಕಿಂತ ಬೇರೆಯಾಗಿರುವ ಆತ್ಮನು ಬಿಟ್ಟು ಹೋಗುವದರಿಂದಲ್ಲ, ಪ್ರಾಣವೇ ಮುಂತಾದವುಗಳಿಂದಲೇ ಅಲ್ಲವೆ, ಮನುಷ್ಯನು ಜೀವಿಸಿರುತ್ತಾನೆ ? ಎಂದು (ಯಾರಾದರೂ) ಅಭಿಪ್ರಾಯಪಡಬಹುದು. ಆದರೆ ಇದು (ಹೀಗಿ)ಲ್ಲ. ಏಕೆಂದರೆ :

ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ ।
ಇತರೇಣ ತು ಜೀವನ್ತಿ ಯಸ್ಮಿನ್ನೇತಾವುಪಾಶ್ರಿತೌ ॥ ೫ ॥

೫. ಪ್ರಾಣದಿಂದಲಾಗಲಿ ಅಪಾನದಿಂದಲಾಗಲಿ ಯಾವ ಮರ್ತ್ಯನೂ ಜೀವಿಸಿರುವದಿಲ್ಲ. ಯಾವನಲ್ಲಿ ಇವೆರಡೂ ಆಶ್ರಯಿಸಿಕೊಂಡಿರುವವೋ ಅಂಥ ಇನ್ನೊಬ್ಬನಿಂದಲೇ ಜೀವಿಸಿರುತ್ತಾರೆ.

(ಭಾಷ್ಯ)

೧೪೧. ನ ಪ್ರಾಣೇನ ನಾಪಾನೇನ ಚಕ್ಷುರಾದಿನಾ ವಾ ಮರ್ತ್ಯಃ ಮನುಷ್ಯೋ ದೇಹವಾನ್ ಕಶ್ಚನ ಜೀವತಿ । ನ ಕೋಽಪಿ ಜೀವತಿ । ನ ಹ್ಯೇಷಾಂ ಪರಾರ್ಥಾನಾಂ ಸಂಹತ್ಯಕಾರಿತ್ವಾತ್ ಜೀವನಹೇತುತ್ವಮುಪಪದ್ಯತೇ । ಸ್ವಾರ್ಥೇನ ಅಸಂಹತೇನ ಪರೇಣ ಕೇನಚಿದಪ್ರಯುಕ್ತಂ ಸಂಹತಾನಾಮವಸ್ಥಾನಂ ನ ದೃಷ್ಟಂ ಗೃಹಾದೀನಾಂ ಲೋಕೇ । ತಥಾ ಪ್ರಾಣಾದೀನಾಮಪಿ ಸಂಹತತ್ವಾದ್ ಭವಿತುಮರ್ಹತಿ । ಅತ ಇತರೇಣೈವ ಸಂಹತಪ್ರಾಣಾದಿವಿಲಕ್ಷಣೇನ ತು ಸರ್ವೇ ಸಂಹತಾಃ ಸನ್ತೋ ಜೀವನ್ತಿ ಪ್ರಾಣಾನ್ ಧಾರಯನ್ತಿ । ಯಸ್ಮಿನ್ ಸಂಹತವಿಲಕ್ಷಣೇ ಆತ್ಮನಿ ಸತಿ ಪರಸ್ಮಿನ್ ಏತೌ ಪ್ರಾಣಾಪಾನೌ ಚಕ್ಷುರಾದಿಭಿಃ ಸಂಹತೌ ಉಪಾಶ್ರಿತೌ, ಯಸ್ಯ ಅಸಂಹತಸ್ಯಾರ್ಥೇ ಪ್ರಾಣಾಪಾನಾದಿಃ ಸ್ವವ್ಯಾಪಾರಂ ಕುರ್ವನ್ ವರ್ತತೇ ಸಂಹತಃ ಸನ್ ಸ ತತೋಽನ್ಯಃ ಸಿದ್ಧಃ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಪ್ರಾಣದಿಂದಲಾಗಲಿ ಅಪಾನದಿಂದಲಾಗಲಿ ಚಕ್ಷುಸ್ಸೇ ಮುಂತಾದ (ಇಂದ್ರಿಯ)ದಿಂದಲಾಗಲಿ ಯಾವ ಮರ್ತ್ಯನೂ ಬದುಕಿರುವದಿಲ್ಲ, ಯಾವ ದೇಹಿಯಾದ ಮನುಷ್ಯನೂ ಬದುಕಿರುವದಿಲ್ಲ. ಏಕೆಂದರೆ (ಒಂದಕ್ಕೊಂದು)

ಸೇರಿಕೊಂಡು ಕೆಲಸಮಾಡುತ್ತಿರುವ ಇವು ಪರಾರ್ಥವಾಗಿರುವದರಿಂದ[1] ಬದುಕಿರುವದಕ್ಕೆ (ಇವು) ಕಾರಣವೆಂಬುದು ಹೊಂದುವದಿಲ್ಲ.[2] ಒಂದಕ್ಕೊಂದು ಸೇರಿಕೊಂಡಿರುವ ಮನೆಯೇ ಮುಂತಾದವು ತನಗಾಗಿ ತಾನು ಇದ್ದುಕೊಂಡಿರುವ ಯಾವದೊಂದರೊಡನೆಯೂ ಸೇರಿಕೊಳ್ಳದೆ ಇರುವ, ಬೇರೊಬ್ಬನಿಂದ ಪ್ರೇರಿತವಾಗದೆ ಇರುವದು[3] ಲೋಕದಲ್ಲಿ ಕಂಡುಬರುವದಿಲ್ಲ. ಅದರಂತೆ ಪ್ರಾಣಾದಿಗಳೂ ಒಂದಕ್ಕೊಂದು ಸೇರಿಕೊಂಡಿರುವದರಿಂದ (ಮತ್ತೊಬ್ಬನಿಂದ ಪ್ರೇರಿತವಾಗಿ ಆತ್ಮನಿಗಾಗಿರ) ಬೇಕೆಂದು (ನಿಶ್ಚಯವಾಗುತ್ತದೆ). ಆದ್ದರಿಂದ ಒಂದಕ್ಕೊಂದು ಸೇರಿಕೊಂಡಿರುವ ಪ್ರಾಣವೇ ಮುಂತಾದವುಗಳಿಗಿಂತ ಬೇರೆಯಾದ ಇನ್ನೊಬ್ಬನಿಂದಲೇ ಎಲ್ಲರೂ ಸೇರಿಸಲ್ಪಟ್ಟು ಜೀವಿಸಿರುತ್ತಾರೆ, ಪ್ರಾಣವನ್ನು ಧರಿಸಿರುತ್ತಾರೆ. ಸೇರಿಕೊಂಡಿರುವ (ವಸ್ತುಗಳಿ) ಗಿಂತ ಬೇರೆಯಾದ ಇನ್ನೊಬ್ಬ ಯಾವ ಆತ್ಮನಿರುವದರಿಂದ ಈ ಪ್ರಾಣಾಪಾನಾದಿಗಳು ಚಕ್ಷುಸ್ಸು ಮುಂತಾದ ಇಂದ್ರಿಯಗಳೊಡನೆ ಸೇರಿಕೊಂಡು ಆಶ್ರಯಿಸಿಕೊಂಡಿರುವವೋ, ಯಾವದರೊಡನೆಯೂ ಸೇರಿಕೊಳ್ಳದಿರುವ ಯಾವನಿಗೋಸ್ಕರ ಪ್ರಾಣಾಪಾನಾದಿಗಳು ತಮ್ಮತಮ್ಮ ಕೆಲಸವನ್ನು ಒಂದಕ್ಕೊಂದು ಸೇರಿಕೊಂಡು ಮಾಡುತ್ತಿರುವವೋ ಅಂಥ ಅವುಗಳಿಂದ ಬೇರೆಯಾದ (ಆತ್ಮನು) ಇದಾನೆಂದು ಸಿದ್ಧವಾಯಿತು ಎಂದಭಿಪ್ರಾಯ.

## ಬ್ರಹ್ಮಾತ್ಮೈಕತ್ವ

ಹನ್ತ ತ ಇದಂ ಪ್ರವಕ್ಷ್ಯಾಮಿ ಗುಹ್ಯಂ ಬ್ರಹ್ಮ ಸನಾತನಮ್
ಯಥಾ ಚ ಮರಣಂ ಪ್ರಾಪ್ಯ ಆತ್ಮಾ ಭವತಿ ಗೌತಮ ॥ ೬ ॥

೬. ಗೌತಮನೆ, ಇಗೋ ಈ ಗುಹ್ಯವಾದ ಸನಾತನಬ್ರಹ್ಮವನ್ನು ಹೇಳುವೆನು. ಮರಣವನ್ನು ಹೊಂದಿ ಆತ್ಮನು ಹೇಗೆ ಆಗುವನೋ (ಅದನ್ನೂ ಹೇಳುವೆನು, ಕೇಳು).

(ಭಾಷ್ಯ)

೧೪೨. ಹನ್ತ ಇದಾನೀಂ ಪುನರಪಿ ತೇ ತುಭ್ಯಮ್ ಇದಂ ಗುಹ್ಯಂ ಗೋಪ್ಯಂ ಬ್ರಹ್ಮ ಸನಾತನಂ ಚಿರನ್ತನಂ ಪ್ರವಕ್ಷ್ಯಾಮಿ । ಯದ್ವಿಜ್ಞಾನಾತ್ ಸರ್ವಸಂಸಾರೋ-

1. ಮತ್ತೊಂದರ ಉಪಯೋಗಕ್ಕಾಗಿರುವದರಿಂದ. ೧೩೮ನೆಯ ಪುಟದ ೨ನೆಯ ಟಿಪ್ಪಣಿಯನ್ನು ನೋಡಿ. 2. ಶರೀರವೂ ಪ್ರಾಣವೂ ಸೇರಿಕೊಂಡಿರುವದೆಂಬ ಕಾರ್ಯವು ಸ್ವಭಾವದಿಂದ ಆಗಬಾರದು. ಇವೆರಡಕ್ಕಿಂತ ಬೇರೆಯಾಗಿರುವ ಚೇತನದಿಂದಲೇ ಈ ಕಾರ್ಯವಾಗಬೇಕು - ಎಂದು ಭಾವ. 3. ಬೇರೊಬ್ಬನ ಪ್ರಯೋಜನಕ್ಕಾಗಿಯಲ್ಲದೆ ತನಗೋಸ್ಕರವಾಗಿಯೇ ಇದ್ದುಕೊಂಡಿರುವದು.

ಪರಮೋ ಭವತಿ ಅವಿಜ್ಞಾನಾಚ್ಚ ಯಸ್ಯ ಮರಣಂ ಪ್ರಾಪ್ಯ ಯಥಾ ಆತ್ಮಾ ಭವತಿ ಯಥಾ ಸಂಸರತಿ ತಥಾ ಶೃಣು ಹೇ ಗೌತಮ ॥

(ಭಾಷ್ಯಾರ್ಥ)

ಅಯ್ಯಾ (ಗೌತಮ) ಇಗೋ, ಈಗ ಮತ್ತೊಂದು ಸಲವೂ ನಿನಗೆ ನಿನಗೋಸ್ಕರ ಈ ಗುಹ್ಯವಾದ ಗುಟ್ಟಾದ ಸನಾತನವಾದ ಬಹುಕಾಲದಿಂದಿರುವ ಬ್ರಹ್ಮವನ್ನು ತಿಳಿಸುವೆನು. ಯಾವ ಇದನ್ನು ಅರಿತುಕೊಂಡರೆ ಸಂಸಾರವೆಲ್ಲವೂ ನಾಶವಾಗು ವದೋ, ಅರಿತುಕೊಳ್ಳದೆ ಇರುವದರಿಂದ ಮರಣವನ್ನು ಹೊಂದಿ ಹೇಗೆ ಆಗುವನೋ ಎಂದರೆ (ಹೇಗೆ) ಸಂಸಾರದಲ್ಲಿ ತೊಳಲುವನೋ ಅದನ್ನು ಕೇಳು.

ಯೋನಿಮನ್ಯೇ ಪ್ರಪದ್ಯನ್ತೇ ಶರೀರತ್ವಾಯ ದೇಹಿನಃ ।
ಸ್ಥಾಣುಮನ್ಯೇಽನುಸಂಯನ್ತಿ ಯಥಾಕರ್ಮ ಯಥಾಶ್ರುತಮ್ ॥ ೭ ॥

೭. ಕೆಲವರು ದೇಹಿಗಳು ಶರೀರಕ್ಕಾಗಿ ಯೋನಿಯನ್ನು ಸೇರುವರು. ಮತ್ತೆ ಕೆಲವರು ಕರ್ಮಕ್ಕನುಸಾರವಾಗಿಯೂ ಶ್ರುತಕ್ಕೆ ಅನುಸಾರವಾಗಿಯೂ ಸ್ಥಾಣುವನ್ನು ಹೊಂದುವರು.

(ಭಾಷ್ಯ)

೧೪೩. ಯೋನಿಂ ಯೋನಿದ್ವಾರಂ ಶುಕ್ರಬೀಜಸಮನ್ವಿತಾಃ ಸನ್ತಃ ಅನ್ಯೇ ಕೇಚಿತ್ ಅವಿದ್ಯಾವನ್ತೋ ಮೂಢಾಃ ಪ್ರಪದ್ಯನ್ತೇ ಶರೀರತ್ವಾಯ ಶರೀರಗ್ರಹಣಾರ್ಥಂ ದೇಹಿನಃ ದೇಹವನ್ತಃ । ಯೋನಿಂ ಪ್ರವಿಶನ್ತಿ ಇತ್ಯರ್ಥಃ । ಸ್ಥಾಣುಂ ವೃಕ್ಷಾದಿಸ್ಥಾವರ ಭಾವಮ್ ಅನ್ಯೇ ಅತ್ಯನ್ತಾಧಮಾಃ ಮರಣಂ ಪ್ರಾಪ್ಯ ಅನುಸಂಯನ್ತಿ ಅನುಗಚ್ಛನ್ತಿ । ಯಥಾಕರ್ಮ ಯದ್ಯಸ್ಯ ಕರ್ಮ ತದ್ ಯಥಾ ಕರ್ಮ । ಯೈಃ ಯಾದೃಶಂ ಕರ್ಮ ಇಹ ಜನ್ಮನಿ ಕೃತಂ ತದ್ವಶೇನ ಇತ್ಯೇತತ್ । ತಥಾ ಯಥಾಶ್ರುತಮ್ । ಯಾದೃಶಂ ಚ ವಿಜ್ಞಾನಮ್ ಉಪಾರ್ಜಿತಂ ತದನುರೂಪಮೇವ ಶರೀರಂ ಪ್ರತಿಪದ್ಯನ್ತೇ ಇತ್ಯರ್ಥಃ । 'ಯಥಾ ಪ್ರಜ್ಞಂ ಹಿ ಸಮ್ಭವಾಃ' (ಐ. ಆ. ೨-೩-೨) ಇತಿ ಶ್ರುತ್ಯನ್ತರಾತ್ ॥

(ಭಾಷ್ಯಾರ್ಥ)

ಕೆಲವರು ದೇಹಿಗಳು ದೇಹವಂತರಾದ, ಅಜ್ಞಾನಿಗಳಾದ ಮೂಢರು[1] ಶರೀರಕ್ಕಾಗಿ ಎಂದರೆ ಶರೀರವನ್ನು ಧರಿಸುವದಕ್ಕಾಗಿ ಶುಕ್ರದ ಬೀಜದೊಡನೆ ಯೋನಿ ಯನ್ನು ಸೇರುವರು. ಯೋನಿದ್ವಾರವನ್ನು ಹೋಗುತ್ತಾರೆ ಎಂದರ್ಥ. ಅತ್ಯಂತ ಅಧಮರಾದ ಇನ್ನೂ ಕೆಲವರು ಸ್ಥಾಣುವನ್ನು ಎಂದರೆ ಮರವೇ ಮುಂತಾದ

1. ಪರಮಾರ್ಥದೃಷ್ಟಿಯಿಂದ ಯಾರಿಗೂ ಶರೀರವಿಲ್ಲವಾದರೂ ಅಜ್ಞಾನಿಗಳ ದೃಷ್ಟಿಯಿಂದ ಶರೀರಪ್ರಾಪ್ತಿಯೆಂಬ ಸಂಸಾರವು ಇದ್ದೇ ಇರುವುದು.

ಸ್ಥಾವರಜನ್ಮವನ್ನು ಸತ್ತಮೇಲೆ ಹೊಂದುತ್ತಾರೆ. ಯಾವನಿಗೆ ಯಾವದು ಕರ್ಮವೋ ಅದು ಯಥಾಕರ್ಮವು : ಕರ್ಮಕ್ಕನುಸಾರವಾಗಿ, ಎಂದರೆ ಈ ಜನ್ಮದಲ್ಲಿ ಎಂಥ ಕರ್ಮವನ್ನು ಮಾಡಿರುತ್ತಾನೋ ಅದಕ್ಕೆ ವಶರಾಗಿ ಎಂದರ್ಥ. ಮತ್ತು ಯಥಾಶ್ರುತವಾಗಿ ಶ್ರುತಕ್ಕೆ ಅನುಸಾರವಾಗಿ ಎಂದರೆ ಎಂಥ ತಿಳಿವಳಿಕೆಯನ್ನು[1] (ಇಲ್ಲಿ) ಸಂಪಾದಿಸಿರುವರೋ ಅದಕ್ಕನುಗುಣವಾಗಿಯೇ ಶರೀರವನ್ನು ಹೊಂದುವರು ಎಂದರ್ಥ. 'ತಿಳಿವಳಿಕೆಗೆ ಅನುಸಾರವಾಗಿಯೇ ಜನ್ಮಗಳು ಆಗುವವು' (ಐ. ಆ. ೨-೩-೨) ಎಂಬ ಬೇರೊಂದು ಶ್ರುತಿಯೂ (ಇದನ್ನು ಹೇಳುತ್ತದೆ).

(ಭಾಷ್ಯ)

೧೪೪. ಯತ್ ಪ್ರತಿಜ್ಞಾತಂ 'ಗುಹ್ಯಂ ಬ್ರಹ್ಮ ಪ್ರವಕ್ಷ್ಯಾಮಿ' ಇತಿ ತದಾಹ-

(ಭಾಷ್ಯಾರ್ಥ)

ಗುಹ್ಯವಾದ ಬ್ರಹ್ಮವನ್ನು ಹೇಳುತ್ತೇನೆ ಎಂದು ಮೊದಲು ಹೇಳಿದನಷ್ಟೆ, (ಈಗ) ಅದನ್ನು ಹೇಳುತ್ತಾನೆ :-

ಯ ಏಷು ಸುಪ್ತೇಷು ಜಾಗರ್ತಿ

ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ ।

ತದೇವ ಶುಕ್ರಂ ತದ್ಬ್ರಹ್ಮ

ತದೇವಾಮೃತಮುಚ್ಯತೇ ।

ತಸ್ಮಿಲ್ಲೋಕಾಃ ಶ್ರಿತಾಃ ಸರ್ವೇ

ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥ ೮ ॥

೮. ಇವು ನಿದ್ರಿಸುತ್ತಿರುವಾಗ ಬೇರೆಬೇರೆ ಕಾಮವನ್ನು ನಿರ್ಮಿಸುತ್ತಾ ಯಾವ ಈ ಪುರುಷನು ಎಚ್ಚತ್ತಿರುವನೋ ಅದೇ ಶುಕ್ರವು, ಅದು ಬ್ರಹ್ಮವು, ಅದೇ ಅಮೃತವೆನಿಸುತ್ತದೆ. ಅದರಲ್ಲಿ ಲೋಕಗಳೆಲ್ಲವೂ ಆಶ್ರಯಿಸಿಕೊಂಡಿರುವವು, ಮತ್ತು ಅದನ್ನು ಯಾರೂ ಮೀರಲಾರರು. ಇದೇ ಅದು.

(ಭಾಷ್ಯ)

೧೪೫. ಯ ಏಷ ಸುಪ್ತೇಷು ಪ್ರಾಣಾದಿಷು ಜಾಗರ್ತಿ ನ ಸ್ವಪಿತಿ ! ಕಥಮ್ ? ಕಾಮಂ ಕಾಮಂ ತಂ ತಮಭಿಪ್ರೇತಂ ಸ್ತ್ರ್ಯಾದ್ಯರ್ಥಮ್ ಅವಿದ್ಯಯಾ ನಿರ್ಮಿಮಾಣಃ

1. ಇಲ್ಲಿ ತಿಳಿವಳಿಕೆ ಎಂದರೆ ಶಾಸ್ತ್ರೀಯವಾದ ಅಥವಾ ಲೌಕಿಕವಾದ ಜ್ಞಾನ, ಮನಸ್ಸಿನ ಭಾವನೆ. ಬೃ. ೪-೪-೨ರಲ್ಲಿ ಪೂರ್ವಪ್ರಜ್ಞೆ ಎಂದು ಹೇಳಿರುವದು ಇದನ್ನೇ.

ನಿಷ್ಪಾದಯನ್ ಜಾಗರ್ತಿ ಪುರುಷಃ ಯಃ, ತದೇವ ಶುಕ್ರಂ ಶುಭ್ರಂ ಶುದ್ಧಮ್ ತದ್ ಬ್ರಹ್ಮ ನಾನ್ಯದ್ ಗುಹ್ಯಂ ಬ್ರಹ್ಮಾಸ್ತಿ । ತದೇವ ಅಮೃತಮ್ ಅವಿನಾಶಿ ಉಚ್ಯತೇ ಸರ್ವಶಾಸ್ತ್ರೇಷು । ಕಿಂ ಚ ಪೃಥಿವ್ಯಾದಯೋ ಲೋಕಾಃ ತಸ್ಮಿನ್ನೇವ ಸರ್ವೇ ಬ್ರಹ್ಮಣಿ ಶ್ರಿತಾಃ ಆಶ್ರಿತಾಃ ಸರ್ವಲೋಕಕಾರಣತ್ವಾತ್ ತಸ್ಯ । 'ತದು ನಾತ್ಯೇತಿ ಕಶ್ಚನ' ಇತ್ಯಾದಿ ಪೂರ್ವವದೇವ ॥

(ಭಾಷ್ಯಾರ್ಥ)

ಪ್ರಾಣಗಳೇ ಮುಂತಾದವು[1] ನಿದ್ರಿಸುತ್ತಿರುವಾಗ ಯಾವ ಈ ಪುರುಷನು ಎಚ್ಚತ್ತಿರುವನೋ ನಿದ್ರಿಸದೆ ಇರುವನೋ ಹೇಗೆ (ಎಚ್ಚರದಿಂದಿರುವನು) ? ಎಂದರೆ (ಹೇಳುತ್ತಾನೆ). ಬೇರೆಬೇರೆ ಕಾಮವನ್ನು ಎಂದರೆ (ತನಗೆ) ಬೇಕಾಗಿರುವ ಹೆಂಗಸರು ಮುಂತಾದ ಆಯಾ ಪದಾರ್ಥಗಳನ್ನು 'ಅವಿದ್ಯೆಯಿಂದ ನಿರ್ಮಿಸಿಕೊಳ್ಳುತ್ತಾ ಉಂಟು ಮಾಡಿಕೊಳ್ಳುತ್ತಾ (ಯಾವ ಪುರುಷನು ಎಚ್ಚರವಾಗಿರುವನೋ) ಅವನೇ ಶುಕ್ರವು, ಶುಭ್ರವು ಶುದ್ಧವಾದ (ತತ್ತ್ವವು). ಅದೇ ಬ್ರಹ್ಮವು. ಗುಹ್ಯವಾದ ಬ್ರಹ್ಮವೆಂಬುದು ಬೇರೆಯಿಲ್ಲ.[2] ಶಾಸ್ತ್ರಗಳಲ್ಲೆಲ್ಲ ಅದೇ ಅಮೃತವು ಎಂದರೆ ನಾಶವಿಲ್ಲದ್ದು ಎಂದು ಹೇಳಲ್ಪಟ್ಟಿರುತ್ತದೆ. ಮತ್ತು ಪೃಥಿವಿಯೇ ಮುಂತಾದ ಲೋಕಗಳೆಲ್ಲ ಆ ಬ್ರಹ್ಮದಲ್ಲಿಯೇ ಆಶ್ರಯಿಸಿಕೊಂಡಿರುವವು ; ಏಕೆಂದರೆ ಅದು ಎಲ್ಲಾ ಲೋಕಗಳಿಗೂ ಕಾರಣವಾಗಿ ರುತ್ತದೆ. 'ಅದನ್ನು ಯಾರೂ ಮೀರಲಾರರು' ಮುಂತಾದದ್ದಕ್ಕೆ ಹಿಂದಿನಂತೆಯೇ[3] ಅರ್ಥಮಾಡಿಕೊಳ್ಳಬೇಕು.

(ಭಾಷ್ಯ)

೧೬೬. ಅನೇಕತಾರ್ಕಿಕಕುಬುದ್ಧಿವಿಚಾಲಿತಾನ್ತಃಕರಣಾನಾಂ ಪ್ರಮಾಣೋಪ ಪನ್ನಮಪಿ ಆತ್ಮೈಕತ್ವವಿಜ್ಞಾನಮ್ ಅಸಕೃದುಚ್ಯಮಾನಮಪಿ ಅನೃಜುಬುದ್ಧೀನಾಂ ಬ್ರಾಹ್ಮಣಾನಾಂ ಚೇತಸಿ ನಾಧೀಯತ ಇತಿ ತತ್ಪ್ರತಿಪಾದನೇ ಆದರವತೀ ಪುನಃ ಪುನರಾಹ ಶ್ರುತಿಃ :-

(ಭಾಷ್ಯಾರ್ಥ)

ಆತ್ಮನು ಒಬ್ಬನೇ ಎಂಬ ಜ್ಞಾನವು ಪ್ರಮಾಣಕ್ಕೆ ಹೊಂದುಗಡೆಯಾಗಿದ್ದರೂ (ಇನ್ನೂ) ಸರಿಯಾದ ಬುದ್ಧಿಯುಂಟಾಗದೆ ಇರುವ ಬ್ರಾಹ್ಮಣರಿಗೆ[4] ಅನೇಕ ತಾರ್ಕಿಕರ

1. ಇಂದ್ರಿಯವೇ ಮುಂತಾದವುಗಳು. ಆದರೆ ಅಂತಃಕರಣವು ಆಯಾ ಕಾಮ್ಯ ವಸ್ತುಗಳನ್ನು ಕಾಣುತಿರುವದು. 2. ಕನಸಿನಲ್ಲಿ ಅವಿದ್ಯೆಯಿಂದ ಬೇರೆಬೇರೆಯ ಕಾಮ್ಯವಸ್ತುಗಳನ್ನು ಕಾಣುತ್ತಿರುವ ಜೀವನ ಪರಮಾರ್ಥರೂಪವೇ ಬ್ರಹ್ಮವು. ಈ ಪರಮಾರ್ಥವಾದ ಸಾಕ್ಷಿರೂಪದಿಂದ ಎಲ್ಲವನ್ನೂ ಅವನು ಬೆಳಗುತ್ತಿರುತ್ತಾನೆ.

3. ಹಿಂದಿನ ವಲ್ಲಿಯ ೯ನೆಯ ಮಂತ್ರದಂತೆ. 4. ಅಧಿಕಾರಿಗಳಿಗೆ.

ಕುಬುದ್ಧಿಯಿಂದ ಅಂತಃಕರಣವು ಕಪಟ ಹೋಗಿರುವದರಿಂದ ಎಷ್ಟು ಸಲ ಹೇಳಿದರೂ ಮನಸ್ಸಿನಲ್ಲಿ ನಿಲ್ಲದೆ ಇರುವದು. ಆದ್ದರಿಂದ ಇದನ್ನು ತಿಳಿಸುವದರಲ್ಲಿ (ಹೆಚ್ಚಿನ) ಆದರವುಳ್ಳ ಶ್ರುತಿಯು ಮತ್ತೆ ಮತ್ತೆ (ದೃಷ್ಟಾಂತಗಳ ಮೂಲಕ ಇದನ್ನೇ) ಹೇಳುತ್ತದೆ:-

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾನ್ತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ ೯ ॥

೯. ಒಂದೇ ಬೆಂಕಿಯು ಹೇಗೆ ಭುವನವನ್ನು ಹೊಕ್ಕು ರೂಪರೂಪಕ್ಕೂ ಪ್ರತಿರೂಪವಾಗಿರುವದೋ ಹಾಗೆ ಸರ್ವಭೂತಾಂತರಾತ್ಮನಾದ ಒಬ್ಬನೇ (ಆತ್ಮನು) ರೂಪರೂಪಕ್ಕೂ ಪ್ರತಿರೂಪನಾಗಿರುವನು, ಹೊರಗೂ ಇರುವನು.

(ಭಾಷ್ಯ)

೧೪೭. ಅಗ್ನಿಃ ಯಥಾ ಏಕ ಏವ ಪ್ರಕಾಶಾತ್ಮಾ ಸನ್ ಭುವನಮ್, ಭವನ್ತಿ ಅಸ್ಮಿನ್ ಭೂತಾನಿ ಇತಿ ಭುವನಮ್ ಅಯಂ ಲೋಕಃ ತಮಿಮಂ ಪ್ರವಿಷ್ಟಃ ಅನುಪ್ರವಿಷ್ಟಃ । ರೂಪಂ ರೂಪಂ ಪ್ರತಿ ದಾರ್ವಾದಿದಾಹ್ಯಭೇದಂ ಪ್ರತಿ ಇತ್ಯರ್ಥಃ । ಪ್ರತಿರೂಪಃ ತತ್ರ ತತ್ರ ಪ್ರತಿರೂಪವಾನ್ ದಾಹ್ಯಭೇದೇನ ಬಹುವಿಧೋ ಬಭೂವ । ಏಕ ಏವ ತಥಾ ಸರ್ವಭೂತಾನ್ತರಾತ್ಮಾ ಸರ್ವೇಷಾಂ ಭೂತಾನಾಮಭ್ಯನ್ತರ ಆತ್ಮಾ ಅತಿಸೂಕ್ಷ್ಮತ್ವಾತ್ ದಾರ್ವಾದಿಷ್ವಿವ ರೂಪಂ ರೂಪಂ ಸರ್ವದೇಹಂ ಪ್ರತಿ ಪ್ರವಿಷ್ಟತ್ವಾತ್ ಪ್ರತಿರೂಪೋ ಬಭೂವ । ಬಹಿಶ್ಚ ಸ್ವೇನ ಅವಿಕೃತೇನ ರೂಪೇಣ ಆಕಾಶವತ್ ॥

(ಭಾಷ್ಯಾರ್ಥ)

ಬೆಂಕಿಯು ಹೇಗೆ ಒಂದೇ ಬೆಳಕಿನ ರೂಪವಾಗಿದ್ದುಕೊಂಡು ಭುವನವನ್ನು - ಇದರಲ್ಲಿ ಪ್ರಾಣಿಗಳು ಉಂಟಾಗುತ್ತಿರುವದರಿಂದ ಈ ಲೋಕವು ಭುವನವೆನಿಸುವದು. ಆ ಈ (ಭುವನವನ್ನು) - ಹೊಕ್ಕು ರೂಪರೂಪಕ್ಕೂ ಎಂದರೆ (ತಾನು) ಸುಡುವ ಕಟ್ಟಿಗೆಯೇ ಮುಂತಾದ ಬೇರೆಬೇರೆಯ ವಸ್ತುವಿಗೂ ಎಂದರ್ಥ. (ಒಂದೊಂದಕ್ಕೂ) ಪ್ರತಿರೂಪವಾಗಿ ಅಲ್ಲಲ್ಲಿ ಪ್ರತಿರೂಪವುಳ್ಳದ್ದಾಗಿ[1] ಸುಡತಕ್ಕ (ವಸ್ತುಗಳ) ಭೇದವನ್ನು ಅನುಸರಿಸಿ (ತಾನೂ) ಹೇಗೆ ಬಹುವಿಧವಾಗಿರುವದೋ ಹಾಗೆಯೇ ಸರ್ವಭೂತಾಂತರಾತ್ಮನಾದ ಎಂದರೆ ಎಲ್ಲಾ ಭೂತಗಳಿಗೂ ಒಳಗಿರುವ

1. ಆಯಾ ವಸ್ತುವಿನ ಆಕಾರಕ್ಕೆ ತಕ್ಕ ರೂಪವನ್ನು ತಳೆದಂತೆ ಆಗಿ.

ಆತ್ಮನು ಒಬ್ಬನೇ ಬಲುಸೂಕ್ಷ್ಮನಾಗಿರುವದರಿಂದ[1] ಕಟ್ಟಿಗೆಯೇ ಮುಂತಾದವುಗಳಲ್ಲಿ (ಬೆಂಕಿಯು ಹೊಕ್ಕಿರುವ) ಹಾಗೆ ರೂಪರೂಪಕ್ಕೂ ಎಲ್ಲ ದೇಹಗಳಲ್ಲಿಯೂ ಹೊಕ್ಕಿರುವದರಿಂದ (ಅವುಗಳಿಗೆ) ಪ್ರತಿರೂಪನಾಗಿರುವನು, ಹೊರಗೂ[2] ತನ್ನದಾದ, ಆಕಾಶದಂತೆ ವಿಕಾರವಿಲ್ಲದ ರೂಪದಿಂದ ಇರುವನು.

**ವಾಯುರ್ಯಥೈಕೋ ಭುವನಂ ಪ್ರವಿಷ್ಟೋ**
**ರೂಪಂ ರೂಪಂ ಪ್ರತಿರೂಪೋ ಬಭೂವ ।**
**ಏಕಸ್ತಥಾ ಸರ್ವಭೂತಾನ್ತರಾತ್ಮಾ**
**ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೧೦॥**

೧೦. ವಾಯುವು ಒಂದೇ ಹೇಗೆ ಭುವನವನ್ನು ಹೊಕ್ಕು ರೂಪ ರೂಪಕ್ಕೂ ಪ್ರತಿರೂಪವಾಗಿರುವದೋ ಹಾಗೆ ಸರ್ವಭೂತಾಂತರಾತ್ಮನಾದ ಒಬ್ಬನೇ ರೂಪ ರೂಪಕ್ಕೂ ಪ್ರತಿರೂಪನಾಗಿರುವನು, ಹೊರಗೂ ಇರುವನು.

(ಭಾಷ್ಯ)

**೧೪೮. ತಥಾನ್ಯೋ ದೃಷ್ಟಾನ್ತಃ । 'ವಾಯುರ್ಯಥೈಕಃ' ಇತ್ಯಾದಿ । ಪ್ರಾಣಾತ್ಮನಾ ದೇಹೇಷ್ವನುಪ್ರವಿಷ್ಟಃ । 'ರೂಪಂ ರೂಪಂ ಪ್ರತಿರೂಪೋ ಬಭೂವ' ಇತ್ಯಾದಿ ಸಮಾನಮ್ ॥**

(ಭಾಷ್ಯಾರ್ಥ)

ಮತ್ತೂ ಒಂದು ದೃಷ್ಟಾಂತ : 'ವಾಯು ಒಂದೇ ಹೇಗೆ' ಇತ್ಯಾದಿ. (ವಾಯು) ಪ್ರಾಣರೂಪದಿಂದ ದೇಹಗಳಲ್ಲಿ ಹೊಕ್ಕಿರುತ್ತದೆ. 'ರೂಪರೂಪಕ್ಕೂ ಪ್ರತಿರೂಪ ವಾಗಿರುವದು' ಎಂದು ಮುಂತಾಗಿರುವದು (ಹಿಂದಿನ ಮಂತ್ರಕ್ಕೂ ಇದಕ್ಕೂ) ಸಮಾನವಾಗಿರುತ್ತದೆ.

(ಭಾಷ್ಯ)

**೧೪೯. ಏಕಸ್ಯ ಸರ್ವಾತ್ಮತ್ವೇ ಸಂಸಾರದುಃಖಿತ್ವಂ ಪರಸ್ಯೈವ ಸ್ಯಾತ್ ಇತಿ ಪ್ರಾಪ್ತಮ್ । ಅತ ಇದಮುಚ್ಯತೇ-**

1. ಸೂಕ್ಷ್ಮವಾದದ್ದು ಸ್ಥೂಲವಾದದ್ದನ್ನು ವ್ಯಾಪಿಸಿಕೊಳ್ಳುವದು.

2. ಉಪಾಧಿಯಿಂದ ತೋರುವ ಕಲ್ಪಿತರೂಪವಾದ ಜೀವರೂಪದಿಂದಲ್ಲದೆ ಉಪಾಧಿಗೆ ಅಧೀನವಾಗದ ಸ್ವತಂತ್ರವಾದ ಶುದ್ಧಚಿನ್ಮಾತ್ರವಾದ ತನ್ನ ರೂಪದಿಂದಲೂ ಇರುತ್ತಾನೆಂದು ಅರ್ಥ.

(ಭಾಷ್ಯಾರ್ಥ)

ಒಬ್ಬನೇ ಎಲ್ಲರಿಗೂ ಆತ್ಮನಾದರೆ ಸಂಸಾರದ ದುಃಖವನ್ನು ಅನುಭವಿಸುವ ದೆಂಬುದು ಪರಮಾತ್ಮನಿಗೇ[1] ಎಂದಾಯಿತು. ಆದ್ದರಿಂದ ಈ (ವಾಕ್ಯವನ್ನು) ಹೇಳಲಾಗುವದು :-

ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷು-
ರ್ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ।
ಏಕಸ್ತಥಾ ಸರ್ವಭೂತಾನ್ತರಾತ್ಮಾ
ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥೧೧॥

೧೧. ಸೂರ್ಯನು ಎಲ್ಲಾ ಜನರಿಗೂ ಕಣ್ಣಾದರೂ ಹೇಗೆ ಕಣ್ಣಿನ (ಮತ್ತು) ಹೊರಗಿನ ದೋಷಗಳಿಂದ ಲಿಪ್ತನಾಗದೆ ಇರುವನೋ ಹಾಗೆ ಸರ್ವಭೂತಾಂತರಾತ್ಮನಾದ ಒಬ್ಬನೇ (ಆತ್ಮನು) ಜನರ ದುಃಖದಿಂದ ಲಿಪ್ತನಾಗದೆ ಹೊರಗೆ ಇರುತ್ತಾನೆ.

೧೫೦. ಸೂರ್ಯೋ ಯಥಾ ಚಕ್ಷುಷ ಆಲೋಕೇನೋಪಕಾರಂ ಕುರ್ವನ್ ಮೂತ್ರಪುರೀಷಾದ್ಯಶುಚಿಪ್ರಕಾಶನೇನ ತದ್ದರ್ಶಿನಃ ಸರ್ವಲೋಕಸ್ಯ ಚಕ್ಷುರಪಿ ಸನ್ ನ ಲಿಪ್ಯತೇ ಚಾಕ್ಷುಷೈಃ ಅಶುಚ್ಯಾದಿದರ್ಶನನಿಮಿತ್ತೈಃ ಆಧ್ಯಾತ್ಮಿಕೈಃ ಪಾಪದೋಷೈಃ ಬಾಹ್ಯೈಶ್ಚಾಶುಚ್ಯಾದಿಸಂಸರ್ಗದೋಷೈಃ । ಏಕಃ ಸನ್ ತಥಾ ಸರ್ವಭೂತಾನ್ತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥

(ಭಾಷ್ಯಾರ್ಥ)

ಸೂರ್ಯನು ಹೇಗೆ ಬೆಳಕಿನಿಂದ ಕಣ್ಣಿಗೆ ಸಹಾಯಮಾಡುತ್ತಾ ಮೂತ್ರ, ಮಲ- ಮುಂತಾದ ಅಶುಚಿಯಾದ (ಪದಾರ್ಥಗಳನ್ನು) ತೋರಿಸುವದರಿಂದ ಅದನ್ನು ಕಾಣುವ ಜನರಿಗೆಲ್ಲಾ ಕಣ್ಣಾಗಿದ್ದರೂ ಅಶುಚಿಯಾದ (ಪದಾರ್ಥ)ವೇ ಮುಂತಾದದ್ದನ್ನು ನೋಡಿದ್ದರಿಂದ ಉಂಟಾಗಬಹುದಾದ ಒಳಗಿನ ದೋಷಗಳಿಂದಲೂ ಹೊರಗಿನ ಅಶುಚಿ(ಪದಾರ್ಥ)ಗಳ ಸಂಬಂಧದಿಂದ ಉಂಟಾಗುವ ದೋಷಗಳಿಂದಲೂ ಲಿಪ್ತನಾಗದೆ ಇರುವನೋ, ಅದರಂತೆ ಎಲ್ಲಾ ಪ್ರಾಣಿಗಳ ಅಂತರಾತ್ಮನಾದ (ಆತ್ಮನು) ಒಬ್ಬನೇ ಆದರೂ ಜನರ ದುಃಖದಿಂದ ಲಿಪ್ತನಾಗದೆ (ಅದಕ್ಕೆ) ಹೊರಚ್ಚಾಗಿರುವನು.

1. ಗೀ. ಭಾ. ೧೩-೨ ; ಸೂ. ಭಾ. ೧-೨-೮, ೨-೩-೪೬ರಲ್ಲಿ ಈ ವಿಷಯವನ್ನು ಚರ್ಚಿಸಿದೆ.

(ಭಾಷ್ಯ)

೧೫೧. ಲೋಕೋ ಹಿ ಅವಿದ್ಯಯಾ ಸ್ವಾತ್ಮನ್ಯಧ್ಯಸ್ತಯಾ ಕಾಮ ಕರ್ಮೋದ್ಭವಂ ದುಃಖಮ್ ಅನುಭವತಿ । ನ ತು ಸಾ ಪರಮಾರ್ಥತಃ ಸ್ವಾತ್ಮನಿ । ಯಥಾ ರಜ್ಜುಶುಕ್ತಿಕೋಷರಗಗನೇಷು ಸರ್ಪರಜತೋದಕಮಲಾನಿ ನ ರಜ್ಜ್ವಾದೀನಾಂ ಸ್ವತೋ ದೋಷರೂಪಾಣಿ ಸನ್ತಿ ಸಂಸರ್ಗಿಣಿ ವಿಪರೀತಬುದ್ಧ್ಯಧ್ಯಾಸನಿಮಿತ್ತಾತ್ತು ತದ್ದೋಷವದ್ ವಿಭಾವ್ಯನ್ತೇ । ನ ತದ್ದೋಷೈಸ್ತೇಷಾಂ ಲೇಪಃ ವಿಪರೀತಬುದ್ಧ್ಯಧ್ಯಾಸಬಾಹ್ಯಾ ಹಿ ತೇ । ತಥಾ ಆತ್ಮನಿ ಸರ್ವೋ ಲೋಕಃ ಕ್ರಿಯಾಕಾರಕಫಲಾತ್ಮಕಂ ವಿಜ್ಞಾನಂ ಸರ್ಪಾದಿಸ್ಥಾನೀಯಂ ವಿಪರೀತಮ್ ಅಧ್ಯಸ್ಯ ತನ್ನಿಮಿತ್ತಂ ಜನ್ಮಜರಾಮರಣಾದಿದುಃಖಮನುಭವತಿ । ನ ತ್ವಾತ್ಮಾ ಸರ್ವಲೋಕಾತ್ಮಾಪಿ ಸನ್ ವಿಪರೀತಾಧ್ಯಾರೋಪ ನಿಮಿತ್ತೇನ ಲಿಪ್ಯತೇ ಲೋಕದುಃಖೇನ । ಕುತಃ ? ಬಾಹ್ಯಃ । ರಜ್ಜ್ವಾದಿವದೇವ ವಿಪರೀತ ಬುದ್ಧ್ಯಧ್ಯಾಸಬಾಹ್ಯೋ ಹಿ ಸ ಇತಿ ॥

(ಭಾಷ್ಯಾರ್ಥ)

ಇದು ಹೇಗೆಂದರೆ ಜನರು ತಮ್ಮ ಸ್ವರೂಪದಲ್ಲಿ ಆರೋಪಿಸಿಕೊಂಡಿರುವ ಅವಿದ್ಯೆ[1]ಯಿಂದ ಕಾಮಕರ್ಮಗಳಿಂದುಂಟಾಗುವ ದುಃಖವನ್ನು ಅನುಭವಿಸುವರು. ಆದರೆ (ಅವಿದ್ಯೆಯು) ನಿಜವಾಗಿಯೂ ಅವರ ಆತ್ಮನಲ್ಲಿರುವದಿಲ್ಲ.[2] ಹೇಗೆ ಹಗ್ಗ, ಕಪ್ಪೆಯಚಿಪ್ಪು, ಮರುಭೂಮಿ, ಆಕಾಶ- ಇವುಗಳಲ್ಲಿ ಹಾವು, ಬೆಳ್ಳಿ, ನೀರು, ಮಸುಕು - ಇವು ಹಗ್ಗ - ಮುಂತಾದವುಗಳಿಗೆ ಸ್ವಭಾವದಿಂದಲೇ (ಅವುಗಳ) ದೋಷವಾಗಿರುವದಿಲ್ಲವೋ (ಆಯಾ) ಸಂಬಂಧವುಳ್ಳ (ಪದಾರ್ಥದಲ್ಲಿ) ಅದಕ್ಕೆ ವಿರುದ್ಧವಾದ ಬುದ್ಧಿಯನ್ನು ಆರೋಪಮಾಡುವ ಕಾರಣದಿಂದ ಮಾತ್ರ, ಅವರ ದೋಷವೆಂದು ಎಣಿಸಲ್ಪಡುವವೋ, (ಆದರೆ) ವಿರುದ್ಧವಾದ ಬುದ್ಧಿಯ ಆರೋಪಕ್ಕೆ ಅವು ಹೊರಚ್ಚಾಗಿಯೇ ಇರುವದರಿಂದ ಆ (ಹುಟ್ಟುಗಟ್ಟಿದ) ದೋಷಗಳಿಂದ ಅವುಗಳಿಗೆ ಹೇಗೆ ಲೇಪವಿರುವದಿಲ್ಲವೋ, ಆದರಂತೆ ಜನರೆಲ್ಲರೂ ಹಗ್ಗದ ಹಾವೇ ಮುಂತಾದವುಗಳಂತೆ (ಆತ್ಮಸ್ವಭಾವಕ್ಕೆ) ವಿರುದ್ಧವಾದ ಕ್ರಿಯೆ, ಕಾರಕ, ಫಲ- ಎಂಬ ತಿಳಿವಳಿಕೆಯನ್ನು ಆತ್ಮನಲ್ಲಿ ಹುಟ್ಟುಗಟ್ಟಿಕೊಂಡು ಆ ಕಾರಣದಿಂದ ಹುಟ್ಟು, ಹೊಂದು-

1. ಅವಿದ್ಯೆ ಎಂದರೆ ತಪ್ಪುತಿಳಿವಳಿಕೆ. ಇದು ಪರಮಾರ್ಥವಾಗಿ ಆತ್ಮನಲ್ಲಿಲ್ಲ; ಜನರು ಹುಟ್ಟುಗಟ್ಟಿಕೊಂಡಿರುತ್ತಾರೆ.

2. ಗೀ. ಭಾ. ೧೩-೨ 'ಅವಿದ್ಯಾವತ್ತ್ವಾತ್ ಕ್ಷೇತ್ರಜ್ಞಸ್ಯ ಸಂಸಾರಿತ್ವಮ್' ತೈ. ಭಾ. ೨-೮ 'ವಿದ್ಯಾವಿದ್ಯಯೋಸ್ತದ್ಧರ್ಮತ್ವಮ್' ; ಬೃ. ಭಾ. ೪-೪-೬ 'ಅವಿದ್ಯಾನಿವೃತ್ತನಿವೃತ್ತಿಕೃತೋ ವಿಶೇಷ ಆತ್ಮನಃ ಸ್ಯಾತ್ ॥' ಈ ಭಾಷ್ಯಗಳನ್ನು ಹೋಲಿಸಿರಿ.

ಮುಂತಾದ ದುಃಖವನ್ನು ಹೊಂದುವರು. ಆತ್ಮನು ಮಾತ್ರ ಎಲ್ಲಾ ಜನರ ಆತ್ಮನಾಗಿದ್ದರೂ (ಅದಕ್ಕೆ) ವಿರುದ್ಧವಾದ ಆರೋಪದ ನಿಮಿತ್ತದಿಂದಾಗುವ ಜನರ ದುಃಖದಿಂದ ಲೇಪವನ್ನು ಹೊಂದದೆ ಇರುವನು. ಏಕೆಂದರೆ ಅವನು ಹೊರಗೆ ಇರುತ್ತಾನೆ, ಎಂದರೆ ಹಗ್ಗವೇ ಮುಂತಾದವುಗಳಂತೆಯೇ (-ತನ್ನ ಸ್ವಭಾವಕ್ಕೆ) ವಿರುದ್ಧವಾದ ಬುದ್ಧಿಯ ಅಧ್ಯಾಸಕ್ಕೆ ಅವನು ಹೊರಚ್ಚಾಗಿಯೇ[1] ಇರುತ್ತಾನೆ.

**ಏಕೋ ವಶೀ ಸರ್ವಭೂತಾನ್ತರಾತ್ಮಾ**
**ಏಕಂ ರೂಪಂ ಬಹುಧಾ ಯಃ ಕರೋತಿ ।**
**ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾ-**
**ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ॥೧೨॥**

೧೨. ವಶಿಯಾಗಿಯೂ ಸರ್ವಭೂತಾಂತರಾತ್ಮನಾಗಿಯೂ ಇರುವ ಯಾವನೊಬ್ಬನೇ ಒಂದು ರೂಪವನ್ನು ಬಹುವಿಧವಾಗಿ ಮಾಡಿಕೊಂಡಿರುವನೋ (ತಮ್ಮ) ಆತ್ಮದಲ್ಲಿರುವ ಆತ್ಮನನ್ನು ಯಾವ ಧೀರರು (ಉಪದೇಶವಾದ) ಬಳಿಕ ಕಾಣುವರೋ ಅವರಿಗೇ ಶಾಶ್ವತವಾದ ಸುಖವು, ಉಳಿದವರಿಗಲ್ಲ.

(ಭಾಷ್ಯ)

**೧೫೨. ಕಿಂ ಚ ಸ ಹಿ ಪರಮೇಶ್ವರಃ ಸರ್ವಗತಃ ಸ್ವತನ್ತ್ರ ಏಕಃ ನ ತತ್ಸಮೋ ಅಭ್ಯಧಿಕೋ ವಾ ಅನ್ಯೋಽಸ್ತಿ । ವಶೀ ಸರ್ವಂ ಹ್ಯಸ್ಯ ಜಗದ್ವಶೇವರ್ತತೇ । ಕುತಃ ? ಸರ್ವಭೂತಾನ್ತರಾತ್ಮಾ । ಯತ ಏಕಮೇವ ಸದೇಕರಸಮ್ ಆತ್ಮಾನಂ ವಿಶುದ್ಧವಿಜ್ಞಾನಘನರೂಪಂ ನಾಮರೂಪಾದ್ಯಶುದ್ಧೋಪಾಧಿಭೇದವಶೇನ ಬಹುಧಾ ಅನೇಕಪ್ರಕಾರೇಣ ಯಃ ಕರೋತಿ ಸ್ವಾತ್ಮಸತ್ತಾಮಾತ್ರೇಣ ಅಚಿನ್ತ್ಯಶಕ್ತಿತ್ವಾತ್ । ತಮ್ ಆತ್ಮಸ್ಥಂ ಸ್ವಶರೀರಹೃದಯಾಕಾಶೇ ಬುದ್ಧೌ ಚೈತನ್ಯಾಕಾರೇಣಾಭಿವ್ಯಕ್ತಮ್ ಇತ್ಯೇತತ್। ನ ಹಿ ಶರೀರಸ್ಯ ಆಧಾರತ್ವಮಾತ್ಮನಃ । ಆಕಾಶವದಮೂರ್ತತ್ವಾತ್ । ಆದರ್ಶಸ್ಥಂ ಮುಖಮ್ ಇತಿ ಯದ್ವತ್ । ತಮೇತಂ ಈಶ್ವರಮ್ ಆತ್ಮಾನಂ ಯೇ ನಿವೃತ್ತಬಾಹ್ಯ ವೃತ್ತಯಃ ಅನುಪಶ್ಯನ್ತಿ ಆಚಾರ್ಯಾಗಮೋಪದೇಶಮನುಸಾಕ್ಷಾದನುಭವನ್ತಿ ಧೀರಾ ವಿವೇಕಿನಃ ತೇಷಾಂ ಪರಮೇಶ್ವರಭೂತಾನಾಂ ಶಾಶ್ವತಂ ನಿತ್ಯಂ ಸುಖಮ್ ಆತ್ಮಾನನ್ದಲಕ್ಷಣಂ ಭವತಿ । ನೇತರೇಷಾಂ ಬಾಹ್ಯಾಸಕ್ತಬುದ್ಧೀನಾಮ್ ಅವಿವೇಕಿನಾಂ ಸ್ವಾತ್ಮಭೂತಮಪಿ । ಅವಿದ್ಯಾವ್ಯವಧಾನಾತ್ ॥**

---

1. ಅಧ್ಯಸ್ತವಾದ ತೋರಿಕೆಯ ಸಂಬಂಧವು ಅವನಿಗಿಲ್ಲವೇ ಇಲ್ಲ.

(ಭಾಷ್ಯಾರ್ಥ)

ಮತ್ತು ಆ (ಆತ್ಮನೇ) ಪರಮೇಶ್ವರನು, ಎಲ್ಲೆಲ್ಲಿಯೂ ಹಬ್ಬಿಕೊಂಡಿರುವವನು ; (ಅವನು) ಒಬ್ಬನೇ. ಅವನಿಗೆ ಸಮನಾದ ಅಥವಾ ಹೆಚ್ಚಾದ ಬೇರೊಬ್ಬನು ಇರುವದಿಲ್ಲ.[1] ಅವನು ವಶಿಯು, ಏಕೆಂದರೆ ಜಗತ್ತೆಲ್ಲವೂ ಇವನ ವಶದಲ್ಲಿರುತ್ತದೆ. ಏಕೆ ? ಎಂದರೆ ಇವನು ಎಲ್ಲಾ ಪ್ರಾಣಿಗಳಿಗೂ ಒಳಗಿನ ಆತ್ಮನು. ಅದು ಹೇಗೆಂದರೆ ಒಂದೇ ಆಗಿರುವ ಎಂದರೆ ಸದ್ರೂಪವೊಂದೇ ಆಗಿರುವ ಅತಿಶುದ್ಧವಾದ ಅರಿವಿನ ಗಟ್ಟಿಯಾಗಿರುವ ಆತ್ಮನೊ(ಬ್ಬನನ್ನೇ) ನಾಮ, ರೂಪ - ಮುಂತಾದ ಅಶುದ್ಧವಾದ[2] ಉಪಾಧಿಗಳು ಬೇರೆಬೇರೆಯಾಗಿರುವ ಕಾರಣದಿಂದ ಬಹುವಿಧವಾಗಿ ಅನೇಕ ಪ್ರಕಾರವಾಗಿ ಯಾವನು ಅಂಚಿತ್ಯವಾದ ಶಕ್ತಿಗಳುಳ್ಳವನಾಗಿರುವದರಿಂದ[3] ತನ್ನ ಇರುವಿಕೆಯಮಾತ್ರದಿಂದಲೇ[4] ಯಾವನು ಮಾಡಿಕೊಂಡಿರುವನೋ ಅವನನ್ನು (ತಮ್ಮ) ಆತ್ಮದಲ್ಲಿರುವ ಎಂದರೆ ಶರೀರದ ಹೃದಯಾಕಾಶದಲ್ಲಿರುವ, ಬುದ್ಧಿಯಲ್ಲಿ ಚೈತನ್ಯರೂಪದಿಂದ ತೋರಿಕೊಳ್ಳುತ್ತಿರುವ ಎಂದರ್ಥ. ಏಕೆಂದರೆ ಆಕಾಶದಂತೆ ಅಮೂರ್ತನಾಗಿರುವದರಿಂದ ಆತ್ಮನಿಗೆ ಶರೀರವು (ನಿಜವಾಗಿಯೂ) ಆಧಾರವೆನ್ನುವದು ಹೊಂದುವದಿಲ್ಲ.[5] (ಆದ್ದರಿಂದ) ಕನ್ನಡಿಯಲ್ಲಿ ಮುಖವಿದೆ ಎಂಬ ಪ್ರಯೋಗದಂತೆ[6] ಇದನ್ನು ಅರಿಯಬೇಕು. ಹಾಗೆ (ಶರೀರದಲ್ಲಿರುವ) **ಈಶ್ವರನಾದ ಈ ಆತ್ಮನನ್ನು ಯಾರು ಹೊರಗಿನ ವೃತ್ತಿಗಳನ್ನು ಹಿಂತಿರುಗಿಸಿಕೊಂಡು ಯಾವ ಧೀರರು ಎಂದರೆ ವಿವೇಕಿಗಳು 'ಅನುಪಶ್ಯನ್ತಿ' ಎಂದರೆ ಆಚಾರ್ಯರ ಮತ್ತು ಶಾಸ್ತ್ರದ ಉಪದೇಶಗಳನ್ನು ಅನುಸರಿಸಿ ನೇರಾಗಿ ಅನುಭವಿಸುವರೋ**[7] ಆ ಪರಮೇಶ್ವರಸ್ವರೂಪರಿಗೇ[8] ಶಾಶ್ವತವಾದ ನಿತ್ಯವಾದ ಆತ್ಮಾನಂದರೂಪವಾದ ಸುಖವು ಆಗುವದು,

---

1. ಗೀ. ೧೧-೪೩. ಶ್ವೇ. ೬-೮. 'ಸಮನಿಲ್ಲ' ಎಂಬುದರಿಂದ ಆತ್ಮಾನೇಕತ್ವವನ್ನೂ 'ಅಧಿಕನಿಲ್ಲ' ಎಂಬುದರಿಂದ ಆತ್ಮೇಶ್ವರಭೇದವನ್ನೂ ನಿರಾಕರಿಸುತ್ತದೆ.

2. ರಾಗದ್ವೇಷಗಳಿಗೂ ಕಾರಣವಾಗಿರುವದರಿಂದ ನಾಮರೂಪಗಳು ಅಶುದ್ಧ. ಅವನ ಸ್ವರೂಪದಲ್ಲಿ ಆರೋಪಿಸಿದ ದೋಷವು ನಿಜವಾಗಿರುವದೇ ಇಲ್ಲ.

3. ಈ ಶಕ್ತಿಗಳೂ ಅವಿದ್ಯಾಕಲ್ಪಿತ. ಸೂ. ಭಾ. ೪-೩-೧೪ ನ್ನು ನೋಡಿ.

4. ಸ್ವಪ್ರಯತ್ನವೇನೂ ಇಲ್ಲದೆಯೇ ; ಏಕೆಂದರೆ ಸೃಷ್ಟಿಯು ಪರಮಾರ್ಥವಲ್ಲ.

5. ಮುಂ. ಭಾ. ೨-೨-೭ 'ಬ್ರಹ್ಮಪುರೇ' ಎಂಬುದರ ವ್ಯಾಖ್ಯಾನವನ್ನು ನೋಡಿ.

6. 'ಕನ್ನಡಿಯಲ್ಲಿ ಮುಖವಿದೆ' ಎಂದರೆ ತೋರಿಕೊಳ್ಳುತ್ತಿದೆ ಎಂದೇ ಅರ್ಥ. ಅದರಂತೆ 'ಬುದ್ಧಿಯಲ್ಲಿ ತೋರಿಕೊಳ್ಳುತ್ತಿರುವ' ಎಂದೇ ವ್ಯಾಖ್ಯಾನಮಾಡಬೇಕು.

7. ಜ್ಞಾನಿಗಳಾದವರು ತಮ್ಮ ಆತ್ಮನನ್ನು ನೇರಾಗಿ ಅನುಭವಿಸುವಂತೆ ಪ್ರಮಾಣಗಳ ವ್ಯವಧಾನವಿಲ್ಲದೆ.

8. ಜ್ಞಾನದಿಂದ ಪರಮಾತ್ಮಸ್ವರೂಪರೇ ಆದವರಿಗೆ ಪರಮಾತ್ಮನ ಸ್ವರೂಪವಾದ ನಿತ್ಯಸುಖವು ದಕ್ಕುತ್ತದೆ.

ಹೊರಗೇ ಆಸಕ್ತಿಯನ್ನಿಟ್ಟುಕೊಂಡಿರುವ ಬುದ್ಧಿಯುಳ್ಳ ಅವಿವೇಕಿಗಳಾದ ಇತರರಿಗೆ ಅವರ ಆತ್ಮವೇ[1] ಆಗಿದ್ದರೂ (ಈ ಸುಖವು) ಉಂಟಾಗಲಾರದು. ಏಕೆಂದರೆ ಅವಿದ್ಯೆಯೇ ಇದಕ್ಕೆ ಮರೆಯಾಗಿರುವದು.[2]

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾ-

ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।

ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾ-

ಸ್ತೇಷಾಂ ಶಾನ್ತಿಃ ಶಾಶ್ವತೀ ನೇತರೇಷಾಮ್ ॥ ೧೩ ॥

೧೩. ಅನಿತ್ಯವಾದವುಗಳಲ್ಲಿ ನಿತ್ಯವಾಗಿ ಚೇತನರುಗಳಿಗೆ ಚೇತನನಾಗಿ ಒಬ್ಬನೇ ಬಹು(ಜೀವ)ರಿಗೆ ಯಾವನು ಕಾಮಗಳನ್ನು ವಿಧಾನ ಮಾಡುತ್ತಿರುವನೋ (ತಮ್ಮ) ಆತ್ಮರಲ್ಲಿರುವ ಆತ್ಮನನ್ನು ಯಾವ ಧೀರರು (ಉಪದೇಶವಾದ) ಬಳಿಕ ಕಾಣುವರೋ ಅವರಿಗೇ ಶಾಶ್ವತವಾದ ಶಾಂತಿಯು, ಉಳಿದವರಿಗಲ್ಲ.

(ಭಾಷ್ಯ)

೧೩೩. ಕಿಂ ಚ ನಿತ್ಯಃ ಅವಿನಾಶೀ ಅನಿತ್ಯಾನಾಂ ವಿನಾಶಿನಾಮ್ । ಚೇತನಃ ಚೇತನಾನಾಂ ಚೇತಯಿತೃಣಾಂ ಬ್ರಹ್ಮಾದೀನಾಂ ಪ್ರಾಣಿನಾಮ್ ಅಗ್ನಿನಿಮಿತ್ತಮಿವ ದಾಹಕತ್ವಮನಗ್ನೀನಾಮ್ ಉದಕಾದೀನಾಮ್ ಆತ್ಮಚೈತನ್ಯನಿಮಿತ್ತಮೇವ ಚೇತಯಿತೃತ್ವಮನ್ಯೇಷಾಮ್ । ಕಿಂ ಚ ಸ ಸರ್ವಜ್ಞಃ ಸರ್ವೇಶ್ವರಃ ಕಾಮಿನಾಂ ಸಂಸಾರಿಣಾಂ ಕರ್ಮಾನುರೂಪಂ ಕಾಮಾನ್ ಕರ್ಮಫಲಾನಿ ಸ್ವಾನುಗ್ರಹನಿಮಿತ್ತಾಂಶ್ಚ ಕಾಮಾನ್ ಯಃ ಏಕೋ ಬಹೂನಾಮ್ ಅನೇಕೇಷಾಮ್ ಅನಾಯಾಸೇನ ವಿದಧಾತಿ ಪ್ರಯಚ್ಛತಿ ಇತ್ಯೇತತ್ । ತಮ್ ಆತ್ಮಸ್ಥಂ ಯೇ ಅನುಪಶ್ಯನ್ತಿ ಧೀರಾಃ ತೇಷಾಂ ಶಾನ್ತಿಃ ಉಪರತಿಃ ಶಾಶ್ವತೀ ನಿತ್ಯಾ ಸ್ವಾತ್ಮಭೂತೈವ ಸ್ಯಾತ್ । ನ ಇತರೇಷಾಮ್ ಅನೇವಂ ವಿಧಾನಾಮ್ ॥

(ಭಾಷ್ಯಾರ್ಥ)

ಮತ್ತು ಅನಿತ್ಯವಾದವುಗಳಲ್ಲಿ[3] ಎಂದರೆ ವಿನಾಶವಾಗುತ್ತಿರುವ (ಪ್ರಾಣಿ)ಗಳಲ್ಲಿ ನಿತ್ಯನು ಎಂದರೆ ನಾಶವಾಗದೆ ಇರುವನು. ಚೇತನರುಗಳಿಗೆ ಎಂದರೆ ಅರಿ

1. ಸ್ವರೂಪವೇ ಆಗಿದ್ದರೂ.

2. ತಪ್ಪುತಿಳಿವಳಿಕೆಯಿಂದಮಾತ್ರ ಮರೆಯಾಗಿರುವ ಆನಂದವು ಸರಿಯಾದ ತಿಳಿವಳಿಕೆಯಿಂದಲೇ ತೋರಿಕೊಳ್ಳಬೇಕಾಗಿರುವದು.

3. 'ನಿತ್ಯಾನಾಮ್' ಎಂಬ (ಪಾ॥) ಪಾಠದಲ್ಲಿ ನಿತ್ಯವಾದ ಆಕಾಶಾದಿಗಳ ನಿತ್ಯತ್ವವು ಆತ್ಮನಿಮಿತ್ತವಾಗಿರುವದು ಎಂದು ಅಭಿಪ್ರಾಯ.

ಯುವ ಬ್ರಹ್ಮನೇ ಮೊದಲಾದ ಪ್ರಾಣಿಗಳಿಗೆ ಚೇತನನಾಗಿರುವನು. ಬೆಂಕಿಯಲ್ಲದ ನೀರು ಮುಂತಾದವುಗಳಿಗೆ ಸುಡುವಿಕೆಯು ಬೆಂಕಿಯ ನಿಮಿತ್ತದಿಂದ ಆಗುವಂತೆ ಆತ್ಮನ ಚೈತನ್ಯದ ನಿಮಿತ್ತದಿಂದಲೇ ಮಿಕ್ಕವರಿಗೆ ಅರಿವು ಉಂಟಾಗುವದು. ಮತ್ತು ಆ ಸರ್ವಜ್ಞನಾದ ಸರ್ವೇಶ್ವರನು ಕಾಮಿಗಳಾದ ಸಂಸಾರಿಗಳಿಗೆ ಕರ್ಮಗಳಿಗೆ ಅನುಗುಣವಾಗಿ ಕಾಮಗಳನ್ನು ಎಂದರೆ ಕರ್ಮಕ್ಕೆ ಫಲಗಳೂ ತನ್ನ ಅನುಗ್ರಹದಿಂದ ಉಂಟಾಗುವವೂ[1] ಆಗಿರುವ ಕಾಮಗಳನ್ನು ಯಾವನೊಬ್ಬನೇ ಅನೇಕರಿಗೆ ಆಯಾಸವಿಲ್ಲದೆ[2] ವಿಧಾನಮಾಡುತ್ತಿರುವನೋ ಎಂದರೆ ಕೊಡುತ್ತಿರುವನೋ ಎಂದರ್ಥ. ತಮ್ಮ ಶರೀರದಲ್ಲಿರುವ ಆತನನ್ನು ಯಾವ ಧೀರರು (ಉಪದೇಶ)ವನ್ನನುಸರಿಸಿ ಕಂಡುಕೊಳ್ಳುವರೋ, ಅವರಿಗೇ ಶಾಶ್ವತವಾದ ನಿತ್ಯವಾದ ಶಾಂತಿಯು ಉಪರತಿಯು, ತಮ್ಮ ಸ್ವರೂಪವೇ ಆಗಿರುವ (ಉಪರತಿಯು) ಉಂಟಾಗುವದು ; ಹೀಗಲ್ಲದ ಉಳಿದವರಿಗೆ ಆಗದು.

## ಬ್ರಹ್ಮವು ಸ್ವಪ್ರಕಾಶವು

**ತದೇತದಿತಿ ಮನ್ಯನ್ತೇಽನಿರ್ದೇಶ್ಯಂ ಪರಮಂ ಸುಖಮ್ ।**

**ಕಥಂ ನು ತದ್ವಿಜಾನೀಯಾಂ ಕಿಮು ಭಾತಿ ವಿಭಾತಿ ವಾ ॥೧೪॥**

೧೪. ಅನಿರ್ದೇಶ್ಯವಾದ ಪರಮಸುಖವನ್ನು ಅದು ಇದೇ ಎಂದು ಅರಿಯುತ್ತಾರೆ. ಅದನ್ನು ಹೇಗೆ ತಿಳಿದುಕೊಳ್ಳಲಿ ? ಅದು ಬೆಳಗುವದೊ ? ಅಥವಾ ಚೆನ್ನಾಗಿ ಕಾಣುವದೊ ?

(ಭಾಷ್ಯ)

**೧೫೪. ಯತ್ ತದಾತ್ಮವಿಜ್ಞಾನಸುಖಮ್ ಅನಿರ್ದೇಶ್ಯಂ ನಿರ್ದೇಷ್ಟುಮಶಕ್ಯಂ ಪರಮಂ ಪ್ರಕೃಷ್ಟಂ ಪ್ರಾಕೃತಪುರುಷವಾಙ್ಮನಸಯೋರಗೋಚರಮಪಿ ಸತ್ ನಿವೃತ್ತೈಷಣಾ ಯೇ ಬ್ರಾಹ್ಮಣಾಃ ತೇ ತದೇತತ್ ಪ್ರತ್ಯಕ್ಷಮೇವ ಇತಿ ಮನ್ಯನ್ತೇ ಕಥಂ ನು ಕೇನ ಪ್ರಕಾರೇಣ ತತ್ ಸುಖಮ್ ಅಹಂ ವಿಜಾನೀಯಾಮ್ 'ಇದಮ್' ಇತ್ಯಾತ್ಮಬುದ್ಧಿವಿಷಯಮ್ ಆಪಾದಯೇಯಮ್ ಯಥಾ ನಿವೃತ್ತವಿಷಯೈಷಣಾ ಯತಯಃ । ಕಿಮು ತತ್ ಭಾತಿ ದೀಪ್ಯತೇ ? ಪ್ರಕಾಶಾತ್ಮಕಂ ತತ್ ಯತೋಽಸ್ಮದ್ಬುದ್ಧಿಗೋಚರತ್ವೇನ ವಿಭಾತಿ ವಿಸ್ಪಷ್ಟಂ ದೃಶ್ಯತೇ ಕಿಂ ವಾ ನೇತಿ ॥**

1. ಕರ್ಮಕ್ಕೆ ಫಲವು ಈಶ್ವರನಿಂದಲೇ ಆಗುವದು. ಸೂ. ಭಾ. ೩-೨-೩೮, ೪೧.
2. ಸರ್ವಶಕ್ತಿತ್ವವನ್ನು ಸೂಚಿಸುವ ವಿಶೇಷಣವಿದು.

(ಭಾಷ್ಯಾರ್ಥ)

ಆತ್ಮಜ್ಞಾನದಿಂದುಂಟಾಗುವ ಸುಖವಿದೆಯಲ್ಲ, ಅದು ಅನಿರ್ದೇಶ್ಯವು ಎಂದರೆ (ಇಂಥದ್ದೆಂದು) ತೋರಿಸಿ ತಿಳಿಸುವದಕ್ಕೆ ಆಗದೆ ಇರುವದು, ಪರಮವು ಎಂದರೆ ಹೆಚ್ಚಿನದು, ಸಾಮಾನ್ಯ ಜನರ ಮಾತಿಗಾಗಲಿ ಮನಸ್ಸಿಗಾಗಲಿ ಗೋಚರವಾಗುವದಿಲ್ಲ. ಆದರೂ ಇದನ್ನು ಏಷಣೆಗಳನ್ನು ತೊರೆದ ಬ್ರಾಹ್ಮಣರು ಯಾರೋ ಅವರು ''ಇದೇ ಅದು'' ಎಂದು ಪ್ರತ್ಯಕ್ಷವೇ ಆಗಿ ಎಣಿಸುತ್ತಿರುವರು. ಆ ಸುಖವನ್ನು ಹೇಗೆತಾನೆ ಎಂದರೆ ಯಾವ ಪ್ರಕಾರದಿಂದ, ನಾನು ತಿಳಿದುಕೊಳ್ಳಲಿ ? (ಯಾವ ಪ್ರಕಾರದಿಂದ) 'ಇದೇ (ಆ ಸುಖವು)' ಎಂದು ವಿಷಯಗಳ ಬಯಕೆಯನ್ನು ತೊರೆದ ಯತಿಗಳಂತೆ ನನ್ನ ಬುದ್ಧಿಗೆ ವಿಷಯವಾಗಿಮಾಡಿಕೊಳ್ಳಲಿ ? ಅದೇನು ಬೆಳಗುವದೋ ತೋರಿಕೊಳ್ಳುವದೊ, ಇಲ್ಲವೊ ? ಅದು ಪ್ರಕಾಶರೂಪವಾಗಿದ್ದರೆ ನಮ್ಮಂಥವರ[1] ಬುದ್ಧಿಗೆ ಗೋಚರವಾಗಿ ಚೆನ್ನಾಗಿ ಕಾಣುವದೊ, ಇಲ್ಲವೊ ?

**ನ ತತ್ರ ಸೂರ್ಯೋ ಭಾತಿ ನ ಚನ್ದ್ರತಾರಕಂ**
**ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ ।**
**ತಮೇವ ಭಾನ್ತಮನುಭಾತಿ ಸರ್ವಂ**
**ತಸ್ಯ ಭಾಸಾ ಸರ್ವಮಿದಂ ವಿಭಾತಿ ॥ ೧೫ ॥**

೧೫. ಅಲ್ಲಿ ಸೂರ್ಯನು ಬೆಳಗುವದಿಲ್ಲ, ಚಂದ್ರನಕ್ಷತ್ರಗಳು (ಬೆಳಗುವದಿಲ್ಲ) ; ಈ ಮಿಂಚುಗಳೂ ಬೆಳಗುವದಿಲ್ಲ ; ಈ ಅಗ್ನಿಯು (ಬೆಳಗುವ) ದೆಲ್ಲಿ ಬಂತು? ಬೆಳಗುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಬೆಳಗುತ್ತಿರುವದು. ಅವನ ಬೆಳಕಿನಿಂದಲೇ ಎಲ್ಲವೂ ತೋರುತ್ತಿರುವದು.

(ಭಾಷ್ಯ)

**೧೫೫. ಅತ್ರೋತ್ತರಮಿದಮ್ ಭಾತಿ ಚ ವಿಭಾತಿ ಚ ಇತಿ । ಕಥಮ್ ? ನ ತತ್ರ ತಸ್ಮಿನ್ ಸ್ವಾತ್ಮಭೂತೇ ಬ್ರಹ್ಮಣಿ ಸರ್ವಾವಭಾಸಕೋಽಪಿ ಸೂರ್ಯಃ ಭಾತಿ । ತದ್ಬ್ರಹ್ಮ ನ ಪ್ರಕಾಶಯತಿ ಇತ್ಯರ್ಥಃ । ತಥಾ ನ ಚನ್ದ್ರತಾರಕಮ್ । ನೇಮಾ ವಿದ್ಯುತೋ ಭಾನ್ತಿ । ಕುತಃ ಅಯಮ್ ಅಸ್ಮದ್ದೃಷ್ಟಿಗೋಚರಃ ಅಗ್ನಿಃ । ಕಿಂ ಬಹುನಾ ? ಯದಿದಮ್ ಆದಿತ್ಯಾದಿಕಂ ಭಾತಿ ತತ್ ತಮೇವ ಪರಮೇಶ್ವರಂ ಭಾನ್ತಂ ದೀಪ್ಯಮಾನಮ್ ಅನು**

1. ಆತ್ಮನು ಪ್ರಕಾಶರೂಪನಾಗಿರಬಹುದು, ಸಾಮಾನ್ಯರಾದ ನಮ್ಮಂಥವರಿಗೆ ಅವನ ಅರಿವಾದೀತೊ ? ಬೃ. ಭಾ. ೧-೪-೧೦ ''ತದಿನಮಪ್ಯೇತರ್ಹಿ'' ಎಂಬ ವಾಕ್ಯದ ವ್ಯಾಖ್ಯಾನವನ್ನು ನೋಡಿರಿ.

ಭಾತಿ ಅನುದೀಪ್ಯತೇ । ಯಥಾ ಜಲೋಲ್ಮುಕಾದಿ ಅಗ್ನಿಸಂಯೋಗಾದಗ್ನಿಂ ದಹನ್ತಮ್ ಅನು ದಹತಿ ನ ಸ್ವತಃ, ತದ್ವತ್ । ತಸ್ಯೈವ ಭಾಸಾ ದೀಪ್ತ್ಯಾ ಸರ್ವಮಿದಂ ಸೂರ್ಯಾದಿ ವಿಭಾತಿ । ಯತ ಏವಂ ತದೇವ ಬ್ರಹ್ಮ ಭಾತಿ ಚ ವಿಭಾತಿ ಚ ಕಾರ್ಯಗತೇನ ವಿವಿಧೇನ ಭಾಸಾ । (ಅತಃ) ತಸ್ಯ ಬ್ರಹ್ಮಣೋ ಭಾರೂಪತ್ವಂ ಸ್ವತೋಽವಗಮ್ಯತೇ । ನ ಹಿ ಸ್ವತೋಽ ವಿದ್ಯಮಾನಂ ಭಾಸನಮನ್ಯಸ್ಯ ಕರ್ತುಂ ಶಕ್ಯಮ್ । ಘಟಾದೀನಾಮನ್ಯಾವಭಾಸಕತ್ವಾದರ್ಶನಾತ್, ಭಾರೂಪಾಣಾಂ ಚಾದಿತ್ಯಾದೀನಾಂ ತದ್ದರ್ಶನಾತ್ ॥

(ಭಾಷ್ಯಾರ್ಥ)

ಈ (ಮೇಲಿನ ಪ್ರಶ್ನೆಗೆ) ಇದು ಉತ್ತರ : ಅದು ಬೆಳಗಿಯೂ ಬೆಳಗುತ್ತದೆ. ಕಂಡೂ ಕಾಣುತ್ತದೆ. ಹೇಗೆಂದರೆ ಅಲ್ಲಿ ತನಗೆ ಆತ್ಮನಾಗಿರುವ[1] ಆ ಬ್ರಹ್ಮದಲ್ಲಿ ಸೂರ್ಯನು, ಎಲ್ಲವನ್ನೂ ಬೆಳಗುವನಾದರೂ, ಬೆಳಗುವದಿಲ್ಲ ; ಏಕೆಂದರೆ ಆ ಬ್ರಹ್ಮವನ್ನು ತೋರಿಸಿಕೊಡುವದಿಲ್ಲ ಎಂದರ್ಥ. ಇದರಂತೆ ಚಂದ್ರನಕ್ಷತ್ರಗಳೂ ಈ ಮಿಂಚುಗಳೂ ಬೆಳಗುವದಿಲ್ಲ, ನಮ್ಮ ಕಣ್ಣಿಗೆ ಕಾಣುವ ಈ ಬೆಂಕಿಯು (ಅದನ್ನು ಬೆಳಗುವ)ದೆಲ್ಲಿ ಬಂತು ? ಹೆಚ್ಚು ಹೇಳಿದ್ದರಿಂದೇನು ? ಬೆಳಗುವ ಈ ಸೂರ್ಯನೇ ಮುಂತಾದ ಸರ್ವಜಗತ್ತೂ ಆ ಪರಮೇಶ್ವರನು ಬೆಳಗುತ್ತಿರುವದನ್ನು ಹೊಳೆಯುತ್ತಿರುವದನ್ನು ಅನುಸರಿಸಿ ಬೆಳಗುತ್ತಿರುವದು, ಅನುಸರಿಸಿಯೇ ಹೊಳೆಯುತ್ತಿರುವದು. ಹೇಗೆ ನೀರು, ಕೊಳ್ಳಿ - ಮುಂತಾದದ್ದು ಬೆಂಕಿಯ ಸಂಬಂಧದಿಂದ ಬೆಂಕಿಯು ಸುಡುವದನ್ನನುಸರಿಸಿ ಸುಡುವದೇ ಹೊರತು ತಾನೇ (ಸುಡುವ)ದಿಲ್ಲವೋ ಅದರಂತೆಯೇ (ಇದು). ಆ (ಬ್ರಹ್ಮದ) ಬೆಳಕಿನಿಂದಲೇ ಹೊಳಪಿನಿಂದಲೇ ಈ ಸೂರ್ಯನೇ ಮುಂತಾದದ್ದೆಲ್ಲವೂ ಬೆಳಗುತ್ತಿರುವದು. ಹೀಗೆ ಅದೇ ಬ್ರಹ್ಮವೇ (ತಾನೂ)ಬೆಳಗುತ್ತಲೂ ಕಾರ್ಯಗಳಲ್ಲಿರುವ ಬಗೆಬಗೆಯ ಬೆಳಕಿನಿಂದಲೂ ಬೆಳಗುತ್ತಲೂ[2] ಇರುತ್ತದೆಯಾದ್ದರಿಂದ ಆ ಬ್ರಹ್ಮವು ಸ್ವತಃ ಬೆಳಕಿನ ರೂಪವಾಗಿರುವದೆಂದು ನಿಶ್ಚಯವಾಗುತ್ತದೆ. ತನ್ನಲ್ಲಿಲ್ಲದ ಬೆಳಕನ್ನು ಮತ್ತೊಂದಕ್ಕೆ ಉಂಟುಮಾಡುವದು ಆಗಲೇ ಆರದು ; ಏಕೆಂದರೆ ಗಡಿಗೆಯೇ ಮುಂತಾದವುಗಳು ಮತ್ತೊಂದನ್ನು ಬೆಳಗುವದು ಕಂಡುಬರುವದಿಲ್ಲ, ಮತ್ತು ಬೆಳಕಿನ ರೂಪದಲ್ಲಿರುವ ಸೂರ್ಯನೇ ಮುಂತಾದವುಗಳು ಹಾಗೆ (ಬೆಳಗುವದು) ಕಂಡುಬಂದಿರುತ್ತದೆ.

1. ಎಲ್ಲಕ್ಕೂ ಆತ್ಮನಾಗಿರುವಂತೆ ಬ್ರಹ್ಮವು ಸೂರ್ಯನಿಗೂ ಆತ್ಮನಾಗಿದೆ.

2. ಕಾರ್ಯವಾದ ಸೂರ್ಯನೇ ಮುಂತಾದವುಗಳ ಬೆಳಕೂ ಅದರದೇ ; ಸ್ವಾಭಾವಿಕ ರೂಪದಿಂದಲೂ ವಿಶೇಷರೂಪದಿಂದಲೂ ಬೆಳಗುತ್ತಿರುವದು ಎಂದರ್ಥ. ಈ ಮಂತ್ರದ ಭಾಷ್ಯವನ್ನು ಮುಂ. ಭಾ. ೨-೨-೧೦ಕ್ಕೆ ಹೋಲಿಸಿ ನೋಡಿರಿ.

# ಎರಡನೆಯ ಅಧ್ಯಾಯ-ಮೂರನೆಯ ವಲ್ಲಿ

(ಭಾಷ್ಯ)

೧೫೬. ತೂಲಾವಧಾರಣೇನೈವ ಮೂಲಾವಧಾರಣಂ ವೃಕ್ಷಸ್ಯ ಕ್ರಿಯತೇ ಲೋಕೇ ಯಥಾ, ಏವಂ ಸಂಸಾರಕಾರ್ಯವೃಕ್ಷಾವಧಾರಣೇನ ತನ್ಮೂಲಸ್ಯ ಬ್ರಹ್ಮಣಃ ಸ್ವರೂಪಾವದಿಧಾರಯಿಷಯಾ ಇಯಂ ಷಷ್ಠೀ ವಲ್ಲೀ ಆರಭ್ಯತೇ ॥

(ಭಾಷ್ಯಾರ್ಥ)

ಬುಡದ (ಸ್ವರೂಪವನ್ನು) ನಿಶ್ಚಯಿಸುವದರಿಂದಲೇ ಲೋಕದಲ್ಲಿ ಹೇಗೆ ಮರದ ಬೇರಿನ (ಸ್ವರೂಪವನ್ನು) ಗೊತ್ತುಪಡಿಸುತ್ತಾರೋ ಅದರಂತೆ ಸಂಸಾರವೆಂಬ ಕಾರ್ಯರೂಪವಾದ ಮರದ (ಸ್ವರೂಪವನ್ನು) ನಿಶ್ಚಯಿಸುವದರಿಂದ ಅದರ ಮೂಲವಾದ ಬ್ರಹ್ಮ ಸ್ವರೂಪವನ್ನು ಗೊತ್ತುಪಡಿಸುವದಕ್ಕಾಗಿ ಈ ಆರನೆಯ ವಲ್ಲಿಯು ಆರಂಭವಾಗಿರುತ್ತದೆ :-

## ಜಗತ್ಕಾರಣವೇ ಬ್ರಹ್ಮ

ಊರ್ಧ್ವಮೂಲೋಽವಾಕ್ ಶಾಖ ಏಷೋಽಶ್ವತ್ಥಃ ಸನಾತನಃ ।
ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ।
ತಸ್ಮಿಲ್ಲೋಕಾಃ ಶ್ರಿತಾಃ ಸರ್ವೇ
ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥೧॥

೧. ಮೇಲುಗಡೆ ಬೇರೂ ಕೆಳಗಡೆ ಕೊಂಬೆಗಳೂ ಇರುವ ಈ ಅಶ್ವತ್ಥವು ಬಹುಕಾಲದ್ದು. ಅದೇ ಶುಕ್ರವು, ಅದು ಬ್ರಹ್ಮವು, ಅದೇ ಅಮೃತವೆನಿಸುವದು. ಅದರಲ್ಲಿ ಸರ್ವಲೋಕಗಳೂ ಆಶ್ರಯಿಸಿಕೊಂಡಿರುವವು, ಮತ್ತು ಅದನ್ನು ಯಾರೂ ಮೀರಲಾರರು. ಇದೇ ಅದು.

(ಭಾಷ್ಯ)

೧೫೭. ಊರ್ಧ್ವಮೂಲಃ ಊರ್ಧ್ವಂ ಮೂಲಂ ಯತ್ತದ್ವಿಷ್ಣೋಃ ಪರಮಂ ಪದಮ್ ಅಸ್ಯ ಇತಿ ಸೋಽಯಮ್ ಅವ್ಯಕ್ತಾದಿಸ್ಥಾವರಾನ್ತಃ ಸಂಸಾರವೃಕ್ಷಃ ಊರ್ಧ್ವಮೂಲಃ । ವೃಕ್ಷಶ್ಚ ವ್ರಶ್ಚನಾತ್ ವಿನಶ್ವರತ್ವಾತ್ । ಅವಿಚ್ಛಿನ್ನಜನ್ಮಜರಾಮರಣಶೋಕಾದ್ಯನೇಕಾನರ್ಥಾತ್ಮಕಃ, ಪ್ರತಿಕ್ಷಣಮನ್ಯಥಾಸ್ವಭಾವೋ ಮಾಯಾಮರೀಚ್ಯುದಕಗನ್ಧರ್ವನಗರಾದಿವದ್ ದೃಷ್ಟನಷ್ಟಸ್ವರೂಪತ್ವಾತ್, ಅವಸಾನೇ ಚ ವೃಕ್ಷವದಭಾವಾತ್ಮಕಃ, ಕದಲೀಸ್ತಮ್ಭವನ್ನಿಸ್ಸಾರಃ, ಅನೇಕಶತಪಾಷಣ್ಡಬುದ್ಧಿವಿಕಲ್ಪಾಸ್ಪದಃ

ತತ್ತ್ವವಿಜಿಜ್ಞಾಸುಭಿರನಿರ್ಧಾರಿತೇದಂತತ್ತ್ವಃ, ವೇದಾನ್ತನಿರ್ಧಾರಿತ ಪರಬ್ರಹ್ಮ ಮೂಲಸಾರಃ, ಅವಿದ್ಯಾಕಾಮಕರ್ಮಾವ್ಯಕ್ತಬೀಜಪ್ರಭವಃ, ಅಪರಬ್ರಹ್ಮವಿಜ್ಞಾನ ಕ್ರಿಯಾಶಕ್ತಿದ್ವಯಾತ್ಮಕಹಿರಣ್ಯಗರ್ಭಾಙ್ಕುರಃ, ಸರ್ವಪ್ರಾಣಿಲಿಙ್ಗಭೇದಸ್ಕನ್ಧಃ, ತತ್ತತ್ತೃಷ್ಣಾ ಜಲಾವಸೇಕೋದ್ಭೂತದರ್ಪಃ, ಬುದ್ಧೀನ್ದ್ರಿಯವಿಷಯಪ್ರವಾಲಾಙ್ಕುರಃ, ಶ್ರುತಿ ಸ್ಮೃತಿನ್ಯಾಯವಿದ್ಯೋಪದೇಶಪಲಾಶಃ, ಯಜ್ಞದಾನತಪ ಆದ್ಯನೇಕಕ್ರಿಯಾಸುಪುಷ್ಪಃ ಸುಖದುಃಖವೇದನಾನೇಕರಸಪ್ರಾಣ್ಯುಪಜೀವ್ಯಾನನ್ತಫಲಃ ತತ್ತೃಷ್ಣಾಸಲಿಲಾವ ಸೇಕಪ್ರರೂಢಜಡೀಕೃತದೃಢಬದ್ಧಮೂಲಃ, ಸತ್ಯನಾಮಾದಿಸಪ್ತಲೋಕ ಬ್ರಹ್ಮಾದಿ ಭೂತಪಕ್ಷಿಕೃತನೀಡಃ, ಪ್ರಾಣಿಸುಖದುಃಖೋದ್ಭೂತಹರ್ಷಶೋಕ ಜಾತನೃತ್ಯಗೀತ ವಾದಿತ್ರಕ್ಷ್ವೇಲಿತಾಸ್ಫೋಟಿತಹಸಿತಾಕೃಷ್ಟರುದಿತಹಾಹಾಮುಞ್ಚಮುಞ್ಚೇ ತ್ಯಾದ್ಯನೇಕಶಬ್ದಕೃತತುಮುಲೀಭೂತಮಹಾರವಃ, ವೇದಾನ್ತವಿಹಿತಬ್ರಹ್ಮಾತ್ಮ ದರ್ಶನಾಸಙ್ಗಶಸ್ತ್ರಕೃತೋಚ್ಛೇದಃ ಏಷಃ ಸಂಸಾರವೃಕ್ಷಃ ಅಶ್ವತ್ಥಃ ಅಶ್ವತ್ಥವತ್ ಕಾಮಕರ್ಮವಾತೇರಿತನಿತ್ಯಪ್ರಚಲಿತಸ್ವಭಾವಃ । ಸ್ವರ್ಗನರಕತಿರ್ಯಕ್ಪ್ರೇತಾದಿಭಿಃ ಶಾಖಾಭಿಃ ಅವಾಕ್ಶಾಖಃ ಅವಾಞ್ಚಃ ಶಾಖ್ಯಾಯಸ್ಯ ಸಃ । ಸನಾತನಃ ಅನಾದಿತ್ವಾತ್ ಚಿರಂ ಪ್ರವೃತ್ತಃ ॥

(ಭಾಷ್ಯಾರ್ಥ

ಮೇಲುಗಡೆ ಬೇರುಳ್ಳದ್ದು ; ಮೇಲೆನಿಸಿದ ಆ ವಿಷ್ಣುವಿನ ಪರಮಪದವೆಂಬುದಿದೆಯಲ್ಲ, ಅದೇ ಇದಕ್ಕೆ ಬೇರಾಗಿರುವದರಿಂದ ಈ ಅವ್ಯಕ್ತಾದಿಯಾಗಿ ಸ್ಥಾವರದ ವರೆಗಿರುವಸಂಸಾರವೃಕ್ಷವು ಮೇಲುಗಡೆ ಬೇರುಳ್ಳದ್ದೆನಿಸಿರುವದು. ಇದು ಕಡಿದು ಹಾಕಲ್ಪಡತಕ್ಕದ್ದಾದ್ದರಿಂದ ನಾಶವಾಗುವದಾದ್ದರಿಂದ ವೃಕ್ಷವು. ಎಡೆಬಿಡದೆ ಆಗುತ್ತಿರುವ ಹುಟ್ಟು, ಮುಪ್ಪು, ಸಾವು, ಶೋಕ - ಮುಂತಾದ ಅನೇಕ ಅನರ್ಥಗಳ ರೂಪವಾಗಿರುವದಾಗಿಯೂ ಮಾಯೆ, ಬಿಸಿಲುಕುದುರೆಯ ನೀರು, ಗಂಧರ್ವನಗರ-ಮುಂತಾದವುಗಳಂತೆ ತೋರಿಹಾರುವ ಸ್ವರೂಪದ್ದಾಗಿರುವದರಿಂದ ಪ್ರತಿಕ್ಷಣವು ಬೇರೆಬೇರೆಯ ಸ್ವಭಾವವನ್ನು ಪಡೆಯುತ್ತಿರುವದಾಗಿಯೂ, ಕೊನೆಗೆ ವೃಕ್ಷದಂತೆ ಇಲ್ಲವೆನಿಸುವದಾಗಿಯೂ ; ಬಾಳೆಯಕಂಬದಂತೆ ಸಾರವಿಲ್ಲದ್ದಾಗಿಯೂ ಎಷ್ಟೋ ನೂರುಗಟ್ಟಲೆಯ ಪಾಷಂಡಮತಗಳವರ[1] ಬುದ್ಧಿಯ ವಿಧವಿಧವಾದ ಕಲ್ಪನೆಗೆ ಅವಕಾಶವನ್ನು ಕೊಡುತ್ತಿರುವದಾಗಿಯೂ, ತತ್ತ್ವವನ್ನು ತಿಳಿಯಬೇಕೆಂದೆಳಸುವವರಿಗೆ ಇದೇ ತತ್ತ್ವವೆಂದು ನಿರ್ಣಯಿಸುವದಕ್ಕೆ ಆಗದಿರುವದಾಗಿಯೂ[2], ವೇದಾಂತಗಳಲ್ಲಿ

1. ತಪ್ಪುದಾರಿಯ ವೇದವಿರುದ್ಧವಾದ ನಾಸ್ತಿಕಮತದವರ.

2. ಈ ಜಗತ್ತಿನ ತತ್ತ್ವವನ್ನು ಜನರು ಸ್ವಬುದ್ಧಿಯಿಂದ ವಿಚಾರಮಾಡಿದಷ್ಟೂ ಇತರ ಒಗಟುಗಳು ಬಿಚ್ಚುವದಕ್ಕೆ ಆಗದಷ್ಟು ಬಿಗಿಯಾಗುವವು.

ಪರಬ್ರಹ್ಮವೇ ಇದಕ್ಕೆ ಮೂಲವೆಂದು ನಿಶ್ಚಯಿಸಿರುವ ಸಾರವುಳ್ಳದ್ದಾಗಿಯೂ[1], ಅವಿದ್ಯಾಕಾಮಕರ್ಮಗಳ ಅವ್ಯಕ್ತಬೀಜದಿಂದ[2] ಹುಟ್ಟಿದ್ದಾಗಿಯೂ, ವಿಜ್ಞಾನಶಕ್ತಿ ಕ್ರಿಯಾಶಕ್ತಿಗಳೆಂಬ ಎರಡು ಶಕ್ತಿಗಳುಳ್ಳ ಅಪರಬ್ರಹ್ಮವಾದ **ಹಿರಣ್ಯಗರ್ಭ**ನೆಂಬ ಮೊಳಕೆಯುಳ್ಳದ್ದಾಗಿಯೂ, ಎಲ್ಲಾ ಪ್ರಾಣಿಗಳ ಬೇರೆಬೇರೆಯ **ಲಿಂಗಶರೀರ**ಗಳೆಂಬ ಹೊಡೆಯುಳ್ಳದ್ದಾಗಿಯೂ ಅವುಗಳ ಆಸೆಯೆಂಬ ನೀರುಹುಯ್ದು ಉಬ್ಬಿ ಹುಲುಸಾಗಿರುವದಾಗಿಯೂ, ಬುದ್ಧಿಯ ವಿಷಯಗಳೆಂಬ ಮತ್ತು ಇಂದ್ರಿಯಗಳ ವಿಷಯಗಳೆಂಬ ಚಿಗುರುಗಳುಳ್ಳದ್ದಾಗಿಯೂ, ಶ್ರುತಿಸ್ಮೃತಿನ್ಯಾಯಗಳಿಂದ ಮಾಡಿದ ವಿದ್ಯೋಪದೇಶವೆಂಬ ಎಲೆಗಳುಳ್ಳದ್ದಾಗಿಯೂ, ಯಜ್ಞ, ದಾನ, ತಪಸ್ಸು - ಮುಂತಾದ ಕರ್ಮಗಳೆಂಬ ಸೊಗಸಾದ ಬಹಳ ಹೂಗಳುಳ್ಳದ್ದಾಗಿಯೂ, ಸುಖದುಃಖಗಳ ಅನುಭವವೆಂಬ ಅನೇಕ ರಸಗಳುಳ್ಳವಾಗಿಯೂ, ಪ್ರಾಣಿಗಳು ಆಶ್ರಯಿಸಿಕೊಂಡು ಜೀವಿಸುವದಕ್ಕೆ ತಕ್ಕವಾಗಿಯೂ ಇರುವ ಲೆಕ್ಕವಿಲ್ಲದಷ್ಟು ಫಲಗಳುಳ್ಳದ್ದಾಗಿಯೂ, ಆಯಾ ಫಲಗಳ ಆಸೆಯೆಂಬ ನೀರನ್ನು ಹುಯ್ಯುವದರಿಂದ ಊರಿಕೊಂಡು ಬಲವಾಗಿಬಿಟ್ಟಿರುವ ಗಟ್ಟಿಯಾದ ಕಿರುಬೇರುಗಳುಳ್ಳದ್ದಾಗಿಯೂ, **ಸತ್ಯಲೋಕವೇ** ಮುಂತಾದ ಹೆಸರಿನ **ಏಳು** ಲೋಕಗಳಲ್ಲಿ ಬ್ರಹ್ಮನೇ ಮುಂತಾದ ಹಕ್ಕಿಗಳು ಮಾಡಿಕೊಂಡಿರುವ ಗೂಡುಗಳುಳ್ಳದ್ದಾಗಿಯೂ, ಪ್ರಾಣಿಗಳ ಸುಖದುಃಖಗಳಿಂದ ಉಂಟಾಗುವ ಹರ್ಷದಿಂದಲೂ ಶೋಕದಿಂದಲೂ ಉಂಟಾದ ಕುಣಿತ, ಹಾಡು, ವಾದ್ಯಗಳು, ಹಾರಿ ಮೇಲೆ ಬೀಳುವದು, (ತೋಳುಗಳಿಂದ) ಪಟ್ಟುಹಿಡಿಯುವದು, ನಗುವದು, ಹಿಡಿದೆಳೆಯುವದು, ಅಳುವದು, 'ಹಾಹಾ ! ಬಿಡುಬಿಡು !' ಎನ್ನುವದು - ಇವೇ ಮುಂತಾದ ಅನೇಕವಿಧವಾದ ಶಬ್ದಗಳಿಂದ ಗದ್ದಲವಾಗಿರುವ ಮಹಾಧ್ವನಿಯುಳ್ಳದ್ದಾಗಿಯೂ, ವೇದಾಂತಗಳಲ್ಲಿ ಹೇಳಿರುವ **ಬ್ರಹ್ಮಾತ್ಮದರ್ಶನವೆಂಬ ಅಸಂಗಶಸ್ತ್ರದಿಂದ**[3] ಕಡಿಯತಕ್ಕದ್ದಾಗಿಯೂ ಇರುವ ಈ ಸಂಸಾರವೃಕ್ಷವು ಅಶ್ವತ್ಥವು ಎಂದರೆ ಅಶ್ವತ್ಥದಂತೆ ಕಾಮಕರ್ಮಗಳೆಂಬ ಗಾಳಿಗಳಿಂದ ಯಾವಾಗಲೂ ಅಲುಗಾಡುವ ಸ್ವಭಾವವುಳ್ಳದ್ದು. ಸ್ವರ್ಗ, ನರಕ, ತಿರ್ಯಗ್ಜನ್ಮ, ಪ್ರೇತಜನ್ಮ- ಮುಂತಾದ ಕೊಂಬೆಗಳಿಂದ ಕೂಡಿ ಕೆಳಗೆ ಕೊಂಬೆಗಳಿರುವಂಥದ್ದು. (ಇದು) ಬಹುಕಾಲದ್ದು ಎಂದರೆ ಅನಾದಿಯಾಗಿರುವದರಿಂದ[4] ಬಹುಕಾಲದಿಂದಲೂ ನಡೆದುಕೊಂಡುಬಂದಿರುವದು.

1. ವೇದಾಂತದ ಕ್ರಮದಲ್ಲಿ ವಿಚಾರಮಾಡಿದರೆ ಯಾವ ಆಯಾಸವೂ ಇಲ್ಲದೆ ಇದರ ತತ್ತ್ವವಾದ ಬ್ರಹ್ಮವನ್ನು ಗೊತ್ತುಪಡಿಸಿಕೊಳ್ಳಬಹುದು. 2. ಅವಿದ್ಯಾಕಾಮಕರ್ಮಗಳು ವ್ಯಾಕೃತರೂಪದಲ್ಲಿಯೂ ಅವ್ಯಾಕೃತರೂಪದಲ್ಲಿಯೂ ಸ್ಥಿತಿಕಾಲದಲ್ಲಿಯೂ ಪ್ರಲಯಕಾಲದಲ್ಲಿಯೂ ತೋರಿಕೊಳ್ಳುತ್ತಿರುವವು. ಹೀಗೆ ತೋರುವದೂ ಅವಿದ್ಯೆಯಿಂದಲೇ.
3. ಗೀ. ೧೫-೩. 4. ಸೂ. ಭಾ. ೨-೩-೩೬. ಸಂಸಾರವು ಅನಾದಿಯಾದರೂ ಅಸತ್ಯವಾಗಿರುವದರಿಂದ ನಾಶವಾಗುತ್ತದೆ ಎಂದು ಭಾವ.

(ಭಾಷ್ಯ)

೧೫೮. ಯದಸ್ಯ ಸಂಸಾರವೃಕ್ಷಸ್ಯ ಮೂಲಂ ತದೇವ ಶುಕ್ರಂ ಶುಭ್ರಂ ಶುದ್ಧಂ **ಜ್ಯೋತಿಷ್ಮತ್ ಚೈತನ್ಯಾತ್ಮಜ್ಯೋತಿಃಸ್ವಭಾವಮ್ । ತದೇವ ಬ್ರಹ್ಮ[1] ಸರ್ವಮಹತ್ತ್ವಾತ್ । ತದೇವ ಅಮೃತಮ್ ಅವಿನಾಶಸ್ವಭಾವಮ್ ಉಚ್ಯತೇ ಕಥ್ಯತೇ । ಸತ್ಯತ್ವಾತ್ । ವಾಚಾರಮ್ಭಣಂ ವಿಕಾರೋ ನಾಮಧೇಯಮ್ ಅನೃತಮನ್ಯತ್, ಅತೋ ಮರ್ತ್ಯಮ್ । ತಸ್ಮಿನ್ ಪರಮಾರ್ಥಸತ್ಯೇ ಬ್ರಹ್ಮಣಿ ಲೋಕಾಃ ಗನ್ಧರ್ವನಗರಮರೀಚ್ಯುದಕಮಾಯಾಸಮಾಃ ಪರಮಾರ್ಥದರ್ಶನಾಭಾವಾಂವಗಮನಾಃ ಶ್ರಿತಾಃ ಆಶ್ರಿತಾಃ ಸರ್ವೇ ಸಮಸ್ತಾಃ ಉತ್ಪತ್ತಿಸ್ಥಿತಿಲಯೇಷು । ತದು ತದ್ ಬ್ರಹ್ಮ ನಾತ್ಯೇತಿ ನಾತಿವರ್ತತೇ ಮೃದಾದಿಕಮಿವ ಘಟಾದಿಕಾರ್ಯಂ ಕಶ್ಚನ ಕಶ್ಚಿದಪಿ ವಿಕಾರಃ । ಏತದ್ವೈ ತತ್ ॥**

(ಭಾಷ್ಯಾರ್ಥ)

ಈ ಸಂಸಾರವೃಕ್ಷದ ಬೇರುಂಟಷ್ಟೆ, ಅದೇ ಶುಕ್ರವು, ಶುಭ್ರವಾಗಿ ಶುದ್ಧವಾಗಿ ಇರುವಂಥದ್ದು ; ಬೆಳಕುಳ್ಳದ್ದು, ಚೈತನ್ಯವೆಂಬ ಆತ್ಮಜ್ಯೋತಿಯ ಸ್ವರೂಪವುಳ್ಳದ್ದು. ಅದೇ ಬ್ರಹ್ಮವು ; ಏಕೆಂದರೆ ಅದು ಎಲ್ಲಕ್ಕಿಂತಲೂ ದೊಡ್ಡದಾಗಿರುತ್ತದೆ[1]. ಅದೇ ಅಮೃತವು, ನಾಶವಿಲ್ಲದ ಸ್ವಭಾವವುಳ್ಳದ್ದು ಎನಿಸಿರುತ್ತದೆ ಎಂದು ಹೇಳಲ್ಪಡುತ್ತದೆ. ಏಕೆಂದರೆ ಅದು (ನಿಜವಾಗಿಯೂ) ಸತ್ಯವಾಗಿರುತ್ತದೆ. ಅದಕ್ಕಿಂತ ಬೇರೆಯಾದ ಕಾರ್ಯವು ಬರಿಯ ಮಾತಿನಿಂದಾಗಿರುವ ಹೆಸರು[2], ಸಟೆಯಾದದ್ದು, ನಾಶವುಳ್ಳದ್ದು[3], ಗಂಧರ್ವನಗರ, ಬಿಸಿಲುಕುದುರೆಯ ನೀರು, ಮಾಯೆ - ಇವುಗಳಂತೆ ಇರುವ[4], ಪರಮಾರ್ಥವನ್ನು ಕಂಡುಕೊಳ್ಳದೆ ಇರುವದರಿಂದ ತೋರುತ್ತಿರುವ[5] ಸರ್ವಲೋಕಗಳೂ ಎಲ್ಲಾ ಲೋಕಗಳೂ ಆ **ಪರಮಾರ್ಥಸತ್ಯವಾಗಿರುವ** ಬ್ರಹ್ಮವನ್ನು ಉತ್ಪತ್ತಿ, ಸ್ಥಿತಿ, ಲಯ - (ಎಂಬ ಮೂರು) ಕಾಲಗಳಲ್ಲಿಯೂ ಆಶ್ರಯಿಸಿಕೊಂಡಿರುವವು ಮತ್ತು ಅದನ್ನು ಎಂದರೆ ಆ ಬ್ರಹ್ಮವನ್ನು - ಗಡಿಗೆಯೇ ಮುಂತಾದ ಕಾರ್ಯವು ಮಣ್ಣು ಮುಂತಾದ (ಕಾರಣ)ವನ್ನು ಹೇಗೆ ಮೀರಿರಲಾರದೋ ಹಾಗೆ - ಯಾವದು ಎಂದರೆ ಯಾವದೊಂದು ಕಾರ್ಯವೂ ಮೀರಲಾರದು. ಇದೇ ಅದು.

1. ಬ್ರಹ್ಮವೆಂಬ ಮಾತು ಎಲ್ಲಕ್ಕೂ ದೊಡ್ಡದು ಎಂಬರ್ಥವುಳ್ಳದ್ದು.

2. ಛಾಂ. ೬-೧-೪ ; ೬-೪-೧ ; ೬-೮-೭ರಲ್ಲಿ ಕಾರ್ಯವು ಅನೃತವು, ಕಾರಣಕ್ಕಿಂತ ಬೇರೆಯಲ್ಲ ಎಂದು ಹೇಳಿದೆ. 3. ಯಾವದು ಪರಿಚ್ಛಿನ್ನವಾದದ್ದೋ ಅದು ಮರ್ತ್ಯವು, ನಾಶವಾಗತಕ್ಕದ್ದು ಎಂದು ಛಾಂ. ೭-೨೪-೮ರಲ್ಲಿ ಹೇಳಿರುವದರ ಸೂಚನೆ.

4. ಮರಗಳು ಭೂಮಿಯನ್ನಾಶ್ರಯಿಸಿರುವಂತೆ ಸಂಸಾರವೃಕ್ಷವು ನಿಜವಾಗಿ ಬ್ರಹ್ಮವನ್ನು ಆಧಾರಾಧೇಯಭಾವದಿಂದ ಆಶ್ರಯಿಸಿಲ್ಲವೆಂಬುದನ್ನು ತೋರಿಸುವದಕ್ಕೆ ಗಂಧರ್ವನಗರಾದಿಗಳ ಹೋಲಿಕೆಯನ್ನೂ ಕೊಟ್ಟಿದೆ. 5. ಆರೋಪಿತವಾದದ್ದು ಅಧಿಷ್ಠಾನವನ್ನು ಕಂಡುಕೊಳ್ಳುವವರೆಗೆ ತೋರುತ್ತಿರುವದು.

## ಜಗತ್ತಿನ ವ್ಯವಸ್ಥೆಗೆ ಕಾರಣವಾಗಿರುವದು ಬ್ರಹ್ಮ

(ಭಾಷ್ಯ)

೧೫೯. ಯದ್ವಿಜ್ಞಾನಾದಮೃತಾ ಭವನ್ತಿ ಇತ್ಯುಚ್ಯತೇ ಜಗತೋ ಮೂಲಮ್, ತದೇವ ನಾಸ್ತಿ ಬ್ರಹ್ಮ । ಅಸತ ಏವೇದಂ ನಿಸ್ಸೃತಮಿತಿ । ತನ್ನ-

(ಭಾಷ್ಯಾರ್ಥ)

ಯಾವದನ್ನು ಅರಿತುಕೊಳ್ಳುವದರಿಂದ ಅಮೃತರಾಗುವರು ಎಂದು ಹೇಳುತ್ತೀರೋ ಆ ಜಗತ್ತಿನ ಮೂಲವಾದ ಬ್ರಹ್ಮವೆಂಬುದೇ ಇಲ್ಲ. ಏಕೆಂದರೆ ಈ (ಜಗತ್ತು) ಅಸತ್ತಿನಿಂದಲೇ ಹುಟ್ಟಿರುತ್ತದೆ - ಎಂದು (ಯಾರಾದರೂ ಶಂಕಿಸಬಹುದು). ಆದರೆ ಇದು ಸರಿಯಲ್ಲ :-

**ಯದಿದಂ ಕಿಂ ಚ ಜಗತ್ಸರ್ವಂ ಪ್ರಾಣ ಏಜತಿ ನಿಸ್ಸೃತಮ್ ।**
**ಮಹದ್ಭಯಂ ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವನ್ತಿ ॥೨॥**

೨. ಈ ಜಗತ್ತೆಲ್ಲವೂ ಪ್ರಾಣನಿದ್ದರೇ ಹೊರಕ್ಕೆ ಬಂದು ನಡುಗುತ್ತಿರುವದು. ಎತ್ತಿದ ವಜ್ರವಾಗಿರುವ (ಇವನು) ದೊಡ್ಡ ಭಯವು. ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು.

(ಭಾಷ್ಯ)

೧೬೦. ಯದಿದಂ ಕಿಂ ಚ ಯತ್ಕಿಂಚೇದಂ ಜಗತ್ ಸರ್ವಂ ಪ್ರಾಣೇ ಪರಸ್ಮಿನ್ ಬ್ರಹ್ಮಣಿ ಸತಿ ಏಜತಿ ಕಮ್ಪತೇ ತತ ಏವ ನಿಸ್ಸೃತಂ ನಿರ್ಗತಂ ಸತ್ ಪ್ರಚಲತಿ ನಿಯಮೇನ ಚೇಷ್ಟತೇ । ಯದೇವಂ ಜಗದುತ್ಪತ್ತ್ಯಾದಿಕಾರಣಂ ಬ್ರಹ್ಮ ತತ್ ಮಹದ್ಭಯಮ್ । ಮಹಚ್ಚ ತದ್ ಭಯಂ ಚ ಬಿಭೇತಿ ಅಸ್ಮಾತ್ ಇತಿ ಮಹದ್ಭಯಮ್ । ವಜ್ರಮುದ್ಯತಮ್ ಉದ್ಯತಮಿವ ವಜ್ರಮ್। ಯಥಾ ವಜ್ರೋದ್ಯತಕರಂ ಸ್ವಾಮಿನಮ್ ಅಭಿಮುಖೀಭೂತಂ ದೃಷ್ಟ್ವಾ ಭೃತ್ಯಾ ನಿಯಮೇನ ತಚ್ಛಾಸನೇ ವರ್ತನ್ತೇ । ತಥೇದಂ ಚನ್ದ್ರಾದಿತ್ಯಗ್ರಹ ನಕ್ಷತ್ರತಾರಕಾದಿಲಕ್ಷಣಂ ಜಗತ್ ಸೇಶ್ವರಂ ನಿಯಮೇನ ಕ್ಷಣಮಪ್ಯವಿಶ್ರಾನ್ತಂ ವರ್ತತೇ ಇತ್ಯುಕ್ತಂ ಭವತಿ । ಯೇ ಏತತ್ ವಿದುಃ ಸ್ವಾತ್ಮಪ್ರವೃತ್ತಿಸಾಕ್ಷಿಭೂತಮೇಕಂ ಬ್ರಹ್ಮ ಅಮೃತಾಃ ಅಮರಣಧರ್ಮಾಣಃ ತೇ ಭವನ್ತಿ ॥

(ಭಾಷ್ಯಾರ್ಥ)

ಈ ಜಗತ್ತೆಲ್ಲವೂ ಪ್ರಾಣನು ಎಂದರೆ ಪರಬ್ರಹ್ಮವು[1] ಇದ್ದರೇ ನಡುಗುತ್ತಿರುವದು ; ಆದರಿಂದಲೇ ಹೊರಕ್ಕೆ ಬಂದು ಓಡಾಡುತ್ತಿರುವದು ; ನಿಯಮದಿಂದ ಕೆಲಸ

1. ಸೂ. ಭಾ. ೧-೧-೨೩ನ್ನು ನೋಡಿರಿ.

ಮಾಡುತ್ತಿರುವದು, ಯಾವದು ಹೀಗೆ ಜಗತ್ತಿನ ಉತ್ಪತ್ತಿಯೇ ಮುಂತಾದದ್ದಕ್ಕೆ ಕಾರಣವಾಗಿರುವದೋ ಆ ಬ್ರಹ್ಮವು ದೊಡ್ಡಭಯವು ; ದೊಡ್ಡದೂ ಭಯವೂ ಆಗಿರುವದು; ಯಾವದಕ್ಕೆ ಹೆದರುತ್ತಾರೋ ಅದು ಭಯವು ; (ಹೀಗೆ) ದೊಡ್ಡಭಯವಾಗಿರುವದು. ಎತ್ತಿದ ವಜ್ರವು, ಎಂದರೆ ಎತ್ತಿದ ವಜ್ರಾಯುಧದಂತೆ ಇರುವದು. ಹೇಗೆ ವಜ್ರಾಯುಧವನ್ನು ಎತ್ತಿಹಿಡಿದುಕೊಂಡಿರುವ ರಾಜನು ಎದುರಿಗೆ ಇರುವದನ್ನು ಕಂಡು ಭೃತ್ಯರು ನಿಯಮದಿಂದ ಆತನ ಅಪ್ಪಣೆಯಂತೆ ನಡೆದುಕೊಳ್ಳುತ್ತಿರುವರೋ ಹಾಗೆಯೇ ಈ ಚಂದ್ರ, ಸೂರ್ಯ, ಗ್ರಹಗಳು, ನಕ್ಷತ್ರಗಳು, ತಾರಕೆಗಳು - ಮುಂತಾದ ರೂಪದಲ್ಲಿರುವ ಜಗತ್ತು ಈಶ್ವರನಿರುವದರಿಂದಲೇ ನಿಯಮದಿಂದ ಕ್ಷಣವೂ ಬಿಡುವಿಲ್ಲದೆ ಕೆಲಸವನ್ನು ಮಾಡುತ್ತಿರುವದು ಎಂದು ಹೇಳಿದಂತೆ ಆಯಿತು. ಯಾರು ತಮ್ಮ ಪ್ರವೃತ್ತಿಗಳಿಗೂ ಸಾಕ್ಷಿಯಾದ, ಒಂದೇ ಆದ, ಈ ಬ್ರಹ್ಮವನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು, ಸಾವೆಂಬ ಧರ್ಮವಿಲ್ಲದವರಾಗುವರು.

(ಭಾಷ್ಯ)

೧೬೧. ಕಥಂ ತದ್ಭಯಾಜ್ಜಗದ್ವರ್ತತೇ ಇತಿ ? ಆಹ-

(ಭಾಷ್ಯಾರ್ಥ)

ಆತನ ಹೆದರಿಕೆಯಿಂದಲೇ ಜಗತ್ತು (ಕೆಲಸ) ಮಾಡುತ್ತಿರುವದೆಂಬುದು ಹೇಗೆ? ಎಂದರೆ ಹೇಳುತ್ತಾನೆ :-

ಭಯಾದಸ್ಯಾಗ್ನಿಸ್ತಪತಿ ಭಯಾತ್ ತಪತಿ ಸೂರ್ಯಃ ।
ಭಯಾದಿನ್ದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಞ್ಚಮಃ ॥ ೩ ॥

೩. ಈತನ ಭಯದಿಂದ ಅಗ್ನಿಯು ಸುಡುತ್ತಾನೆ ; (ಈತನ) ಭಯದಿಂದ ಸೂರ್ಯನು ಕಾಯುತ್ತಾನೆ. ಭಯದಿಂದಲೇ ಇಂದ್ರನೂ ವಾಯುವೂ (ಕೆಲಸ ಮಾಡುತ್ತಾರೆ). ಐದನೆಯವನಾದ ಮೃತ್ಯು ಓಡುತ್ತಾನೆ.

(ಭಾಷ್ಯ)

೧೬೨. ಭಯಾತ್ ಭೀತ್ಯಾ ಅಸ್ಯ ಪರಮೇಶ್ವರಸ್ಯ ಅಗ್ನಿಃ ತಪತಿ । ಭಯಾತ್ ತಪತಿ ಸೂರ್ಯಃ । ಭಯಾದಿನ್ದ್ರಶ್ಚ ವಾಯುಶ್ಚ । ಮೃತ್ಯುರ್ಧಾವತಿ ಪಞ್ಚಮಃ । ನ ಹಿ ಈಶ್ವರಾಣಾಂ ಲೋಕಪಾಲಾನಾಂ ಸಮರ್ಥಾನಾಂ ಸತಾಂ ನಿಯನ್ತಾ ಚೇದ್ ವಜ್ರೋದ್ಯತಕರವನ್ನ ಸ್ಯಾತ್, ಸ್ವಾಮಿಭಯಭೀತಾನಾಮಿವ ಭೃತ್ಯಾನಾಂ ನಿಯತಾ ಪ್ರವೃತ್ತಿರುಪಪದ್ಯತೇ ॥

(ಭಾಷ್ಯಾರ್ಥ)

ಈ ಪರಮೇಶ್ವರನ ಭಯದಿಂದ, ಹೆದರಿಕೆಯಿಂದ, ಅಗ್ನಿಯು ಸುಡುತ್ತಾನೆ ; (ಈತನ) ಭಯದಿಂದ ಸೂರ್ಯನು ಕಾಯುತ್ತಾನೆ, (ಈತನ) ಭಯದಿಂದ ಇಂದ್ರನೂ ವಾಯುವೂ (ಕೆಲಸಮಾಡುತ್ತಾರೆ), ಐದನೆಯವನಾದ ಮೃತ್ಯುವೂ (ಈತನ) ಭಯದಿಂದಲೇ ಓಡುತ್ತಾನೆ. ತಾವು ಸ್ವತಂತ್ರರಾಗಿ ಸಮರ್ಥರಾಗಿರುವ ಲೋಕಪಾಲಕರಾಗಿರುವವರನ್ನು ವಜ್ರಾಯುಧವನ್ನು ಎತ್ತಿ ಹಿಡಿದವನಂತೆ ಕಟ್ಟು ಮಾಡುವವನೊಬ್ಬನು ಇಲ್ಲದೆ ಇದ್ದರೆ ಒಡೆಯನ ಹೆದರಿಕೆಯಿಂದ ಅಂಜಿದ ಭೃತ್ಯರಂತೆ ನಿಯತವಾಗಿ ಕೆಲಸದಲ್ಲಿ ತೊಡಗಿರುವದೆಂಬುದು ಹೊಂದಲೇ ಆರದು.

ಬ್ರಹ್ಮವನ್ನು ಈ ಲೋಕದಲ್ಲಿಯೇ ಅರಿತುಕೊಳ್ಳಬೇಕು

ಇಹ ಚೇದಶಕದ್ ಬೋದ್ಧುಂ ಪ್ರಾಕ್ ಶರೀರಸ್ಯ ವಿಸ್ರಸಃ
ತತಃ ಸರ್ಗೇಷು ಲೋಕೇಷು ಶರೀರತ್ವಾಯ ಕಲ್ಪತೇ ॥ ೪ ॥

೪. ಶರೀರವು ಸಡಿಲವಾಗುವದಕ್ಕೆ ಮುಂಚೆ ಇಲ್ಲಿಯೇ ತಿಳಿದುಕೊಳ್ಳಲು ಶಕ್ತನಾದರೆ (ಸರಿ, ಹಾಗಿಲ್ಲದಿದ್ದರೆ) ಅದರಿಂದ ಸರ್ಗಲೋಕಗಳಲ್ಲಿ ಶರೀರಕ್ಕೆ ತಕ್ಕವನಾಗುವನು.

(ಭಾಷ್ಯ)

೧೬೩. ತಚ್ಚ ಇಹ ಜೀವನ್ನೇವ ಚೇತ್ ಯದ್ಯಶಕತ್ ಶಕ್ನೋತಿ, ಶಕ್ತಃ ಸನ್ ಜಾನಾತಿ ಇತ್ಯೇತತ್ । ಭಯಕಾರಣಂ ಬ್ರಹ್ಮ ಬೋದ್ಧುಮ್ ಅವಗನ್ತುಮ್ ಪ್ರಾಕ್ ಪೂರ್ವಂ ಶರೀರಸ್ಯ ವಿಸ್ರಸಃ, ಅವಸ್ರಂಸನಾತ್ ಪತನಾತ್ । ಸಂಸಾರಬನ್ಧನಾತ್ ವಿಮುಚ್ಯತೇ । ನ ಚೇದಶಕತ್ ಬೋದ್ಧುಮ್ ತತಃ ಅನವಬೋಧಾತ್ ಸರ್ಗೇಷು ಸೃಜ್ಯನ್ತೇ ಯೇಷು ಸ್ರಷ್ಟವ್ಯಾಃ ಪ್ರಾಣಿನಃ ಇತಿ[1] ಸರ್ಗಾಃ ಪೃಥಿವ್ಯಾದಯೋ ಲೋಕಾಃ । ತೇಷು ಸರ್ಗೇಷು ಲೋಕೇಷು ಶರೀರತ್ವಾಯ ಶರೀರಭಾವಾಯ ಕಲ್ಪತೇ ಸಮರ್ಥೋ ಭವತಿ । ಶರೀರಂ ಗೃಹ್ಣಾತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಆ ಭಯಕಾರಣವಾದ ಬ್ರಹ್ಮವನ್ನು ಇಲ್ಲಿ ಎಂದರೆ ಬದುಕಿರುವಾಗಲೇ ತಿಳಿಯುವದಕ್ಕೆ (ಅಶಕತ್ = ಶಕ್ನೋತಿ) ಶಕ್ತನಾಗಿರುತ್ತಾನಾದರೆ, ಶಕ್ತನಾಗಿದ್ದು ತಿಳಿದುಕೊಳ್ಳುತ್ತಾನಾದರೆ ಎಂದರ್ಥ. (ಬ್ರಹ್ಮವನ್ನು) ತಿಳಿದುಕೊಳ್ಳಲು ಅರಿತುಕೊಳ್ಳಲು (ಶಕ್ತನಾದರೆ), ಶರೀರವು ಸಡಿಲವಾಗುವದಕ್ಕೆ ಎಂದರೆ ಕಳಚುವದಕ್ಕೆ ಬಿದ್ದು

1. 'ಇತಿ' ಇಲ್ಲದ ಪಾಠದಲ್ಲಿ 'ಏಷು' ಎಂದಿದ್ದರೂ ಸರಳವಾಗಿ ಅನ್ವಯವಾಗುವದಿಲ್ಲ.

ಹೋಗುವದಕ್ಕೆ ಮುಂಚೆ - ಮೊದಲು (ಅರಿತುಕೊಂಡರೆ), ಸಂಸಾರಬಂಧದಿಂದ ಬಿಡುಗಡೆಹೊಂದುತ್ತಾನೆ. ತಿಳಿದುಕೊಳ್ಳುವದಕ್ಕೆ ಶಕ್ತನಾಗಿಲ್ಲವಾದರೆ, ಅದರಿಂದ ಎಂದರೆ ಅಜ್ಞಾನದಿಂದ, ಸರ್ಗಲೋಕಗಳಲ್ಲಿ - ಸೃಷ್ಟಿಯಾಗುವ ಪ್ರಾಣಿಗಳು ಎಲ್ಲಿ ಸೃಷ್ಟಿಯಾಗುವವೋ ಆ ಪೃಥಿವಿ ಮುಂತಾದ ಲೋಕಗಳು ಸರ್ಗಲೋಕಗಳು. ಆ ಸರ್ಗಲೋಕಗಳಲ್ಲಿ - ಶರೀರಕ್ಕೆಂದರೆ ಶರೀರವನ್ನು ಪಡೆಯುವದಕ್ಕೆ ತಕ್ಕವನಾಗುವನು, ಯೋಗ್ಯನಾಗುವನು, ದೇಹವನ್ನು ಧರಿಸುತ್ತಾನೆ ಎಂದರ್ಥ.

(ಭಾಷ್ಯ)

೧೬೪. ತಸ್ಮಾತ್ ಶರೀರವಿಸ್ರಂಸನಾತ್ ಪ್ರಾಕ್ ಆತ್ಮಾವಬೋಧಾಯ ಯತ್ನ ಆಸ್ಥೇಯಃ। ಯಸ್ಮಾತ್ ಇಹೈವ ಆತ್ಮನೋ ದರ್ಶನಮ್ ಆದರ್ಶಸ್ಥಸ್ಯೇವ ಮುಖಸ್ಯ ಸ್ಪಷ್ಟಮುಪಪದ್ಯತೇ ನ ಲೋಕಾನ್ತರೇಷು ಬ್ರಹ್ಮಲೋಕಾದನ್ಯತ್ರ ಸ ಚ ದುಷ್ಪ್ರಾಪಃ। ಕಥಮಿತಿ ? ಉಚ್ಯತೇ -

(ಭಾಷ್ಯಾರ್ಥ)

ಆದ್ದರಿಂದ ಶರೀರವು ಸಡಿಲಿಸುವ ಮುಂಚೆಯೇ ಆತ್ಮನನ್ನು ಅರಿತುಕೊಳ್ಳುವದಕ್ಕೆ ಯತ್ನವನ್ನು ಮಾಡಬೇಕು. ಏಕೆಂದರೆ ಇಲ್ಲಿ ಮಾತ್ರ, ಕನ್ನಡಿಯಲ್ಲಿ ಮುಖವನ್ನು ಕಾಣುವಂತೆ ಆತ್ಮನನ್ನು ಸ್ಪಷ್ಟವಾಗಿ ಕಾಣಬಹುದೇ ಹೊರತು ಮಿಕ್ಕ ಲೋಕಗಳಲ್ಲಿ - ಬ್ರಹ್ಮಲೋಕವೊಂದನ್ನು ಬಿಟ್ಟರೆ - (ಎಲ್ಲಿಯೂ ಕಾಣುವದಾಗುವ)ಹಾಗಿಲ್ಲ. ಆ (ಬ್ರಹ್ಮಲೋಕವೆಂಬುದನ್ನು) ಪಡೆಯುವದು ಕಷ್ಟವಾಗಿರುತ್ತದೆ. ಅದು ಹೇಗೆಂದರೆ ಹೇಳುತ್ತಾನೆ :-

ಯಥಾದರ್ಶೇ ತಥಾತ್ಮನಿ
ಯಥಾ ಸ್ವಪ್ನೇ ತಥಾ ಪಿತೃಲೋಕೇ।
ಯಥಾಪ್ಸು ಪರೀವ ದದೃಶೇ
ತಥಾ ಗನ್ಧರ್ವಲೋಕೇ ಛಾಯಾತಪಯೋರಿವ ಬ್ರಹ್ಮಲೋಕೇ ॥೫॥

೫. ಕನ್ನಡಿಯಲ್ಲಿ ಹೇಗೋ ಹಾಗೆ ಆತ್ಮದಲ್ಲಿ, ಸ್ವಪ್ನದಲ್ಲಿ ಹೇಗೋ ಹಾಗೆ ಪಿತೃಲೋಕದಲ್ಲಿ, ನೀರಿನಲ್ಲಿ ಹೇಗೆ ಹಾಗೆ ಕಾಣುವರೋ ಹಾಗೆ ಗಂಧರ್ವಲೋಕದಲ್ಲಿ, ನೆರಳುಬಿಸಿಲುಗಳಂತೆ ಬ್ರಹ್ಮಲೋಕದಲ್ಲಿ.

(ಭಾಷ್ಯ)

೧೬೫. ಯಥಾ ಆದರ್ಶೇ ಪ್ರತಿಬಿಮ್ಬಭೂತಮ್ ಆತ್ಮಾನಂ ಪಶ್ಯತಿ ಲೋಕಃ ಅತ್ಯನ್ತವಿವಿಕ್ತಮ್, ತಥಾ ಇಹ ಆತ್ಮನಿ ಸ್ವಬುದ್ಧೌ ಆದರ್ಶವನ್ನಿರ್ಮಲೀಭೂತಾಯಾಂ

**ವಿವಿಕ್ತಮಾತ್ಮನೋ ದರ್ಶನಂ ಭವತಿ ಇತ್ಯರ್ಥಃ । ಯಥಾ ಸ್ವಪ್ನೇ ಅವಿವಿಕ್ತಂ ಜಾಗ್ರದ್ವಾಸನೋದ್ಭೂತಮ್ ತಥಾ ಪಿತೃಲೋಕೇ ಅವಿವಿಕ್ತಮೇವ ದರ್ಶನಮಾತ್ಮನಃ । ಕರ್ಮಫಲೋಪಭೋಗಾಸಕ್ತತ್ವಾತ್ । ಯಥಾ ಚ ಅಪ್ಸು ಅವಿಭಕ್ತಾವಯವಮ್ ಆತ್ಮರೂಪಂ ಪರೀವ ದದೃಶೇ ಪರಿದೃಶ್ಯತ ಇವ ತಥಾ ಗನ್ಧರ್ವಲೋಕೇ ಅವಿವಿಕ್ತಮೇವ ದರ್ಶನಮಾತ್ಮನಃ । ಏವಂ ಲೋಕಾನ್ತರೇಷ್ವಪಿ ಇತಿ ಶಾಸ್ತ್ರಪ್ರಾಮಾಣ್ಯಾದವಗಮ್ಯತೇ । ಛಾಯಾತಪಯೋರಿವ ಅತ್ಯನ್ತವಿವಿಕ್ತಂ ಬ್ರಹ್ಮಲೋಕೇ ಏವೈಕಸ್ಮಿನ್ । ಸ ಚ ದುಷ್ಪ್ರಾಪಃ, ಅತ್ಯನ್ತವಿಶಿಷ್ಟಕರ್ಮಜ್ಞಾನಸಾಧ್ಯತ್ವಾತ್ । ತಸ್ಮಾತ್ ಆತ್ಮದರ್ಶನಾಯ ಇಹೈವ ಯತ್ನಃ ಕರ್ತವ್ಯಃ ಇತ್ಯಭಿಪ್ರಾಯಃ ॥**

(ಭಾಷ್ಯಾರ್ಥ)

ಕನ್ನಡಿಯಲ್ಲಿ ಪ್ರತಿಬಿಂಬವಾಗಿರುವ ತಮ್ಮನ್ನು ಹೇಗೆ ಅತ್ಯಂತ ವಿಂಗಡವಾಗಿ ಜನರು ಕಾಣುವರೋ ಹಾಗೆ ಇಲ್ಲಿ ಆತ್ಮದಲ್ಲಿ ಎಂದರೆ ಕನ್ನಡಿಯಂತೆ ನಿರ್ಮಲವಾಗಿರುವ ತಮ್ಮ ಬುದ್ಧಿಯಲ್ಲಿ ವಿಂಗಡವಾಗಿ ಆತ್ಮನ ದರ್ಶನವು ಆಗುತ್ತದೆ ಎಂದು ಅರ್ಥ. ಕನಸಿನಲ್ಲಿ[1] ಜಾಗ್ರದ್ವಾಸನೆಯಿಂದುಂಟಾಗಿರುವ (ದರ್ಶನವು) ಹೇಗೆ (ಸ್ಫುಟವಾಗಿರುವದಿಲ್ಲ)ವೋ ಹಾಗೆ **ಪಿತೃಲೋಕ**ದಲ್ಲಿ ಆತ್ಮನದರ್ಶನವು ವಿಂಗಡವಾಗಿ ಆಗದೆ ಇರುವದು. ಏಕೆಂದರೆ (ಅಲ್ಲಿ) ಕರ್ಮಫಲವನ್ನು ಅನುಭವಿಸುವದರಲ್ಲಿ ಆಸಕ್ತರಾಗಿರುವರು. ಮತ್ತು ಹೇಗೆ ನೀರಿನಲ್ಲಿ ಅವಯವಗಳು ಚೆನ್ನಾಗಿ ಬೇರ್ಪಡದೆ ತನ್ನ ರೂಪವು ಕಾಣುವದೋ (ಪರೀವ ದದೃಶೇ = ಪರಿದೃಶ್ಯತೇ ಇವ) ಹಾಗೆ **ಗಂಧರ್ವ** ಲೋಕದಲ್ಲಿ ಆತ್ಮದರ್ಶನವು ವಿಂಗಡವಾಗಿ ಕಾಣದೆ ಇರುವದು. ಇದರಂತೆಯೇ ಲೋಕಾಂತರಗಳಲ್ಲಿಯೂ (ಆತ್ಮನನ್ನು ಸ್ಫುಟವಾಗಿ ಕಾಣುವದಾಗುವದಿಲ್ಲ) ಎಂದು ಶಾಸ್ತ್ರಪ್ರಾಮಾಣ್ಯದಿಂದ[2] ನಿಶ್ಚಯಿಸಬೇಕು. ಬ್ರಹ್ಮಲೋಕವೊಂದರಲ್ಲಿ ಮಾತ್ರ ನೆರಳು ಬಿಸಿಲುಗಳಂತೆ ಅತ್ಯಂತವಾಗಿ ವಿಂಗಡವಾಗಿ (ಕಾಣಬಹುದು). ಆದರೆ ಆ ಲೋಕವನ್ನು ಹೊಂದುವದೆಂಬುದು ಕಷ್ಟ. ಏಕೆಂದರೆ (ಅದು) ಅತ್ಯಂತವಾಗಿ ಅಸಾಧಾರಣವಾದ ಕರ್ಮ ಮತ್ತು ಜ್ಞಾನ[3] - ಇವುಗಳ (ಅನುಷ್ಠಾನದಿಂದ) ಪಡೆಯತಕ್ಕದ್ದಾಗಿರು

1. ವಾಸನಾಕಲ್ಪಿತವಾದ ಭೋಗಗಳಲ್ಲಿ ಆಸಕ್ತನಾಗಿರುವದರಿಂದ ಕನಸಿನಲ್ಲಿ ಆತ್ಮನ ಕಡೆಗೆ ಮನಸ್ಸು ತಿರುಗುವದಿಲ್ಲ. 2. ಆತ್ಮನ ದರ್ಶನವನ್ನು ಇಲ್ಲಿಯೇ ಮಾಡಿಕೊಳ್ಳಬೇಕು ಎಂದು ಹೇಳಿ ಮಿಕ್ಕ ಲೋಕಗಳಲ್ಲಿ ದರ್ಶನವು ದುರ್ಲಭವೆಂಬುದನ್ನು ತಿಳಿಸುವದಕ್ಕೆ ಪಿತೃಲೋಕಗಂಧರ್ವಲೋಕ ಗಳನ್ನು ಉದಾಹರಿಸಿದೆ. ಇದು ಉಪಲಕ್ಷಣವೆಂದೂ ಬೇರೆ ಯಾವ ಲೋಕಗಳಲ್ಲಿಯೂ ಆತ್ಮದರ್ಶನವು ಸ್ಪಷ್ಟವಾಗಿ ಆಗುವದಿಲ್ಲವೆಂದೂ ಅವುಗಳೆಲ್ಲಾ ಭೋಗಭೂಮಿಗಳೆಂದೂ ಶಾಸ್ತ್ರದ ತಾತ್ಪರ್ಯವನ್ನು ಕಲ್ಪಿಸಬೇಕು.

3. ಅಶ್ವಮೇಧದಂಥ ಉತ್ಕೃಷ್ಟಕರ್ಮ, ಸಗುಣಬ್ರಹ್ಮೋಪಾಸನೆಯಂಥ ಉತ್ಕೃಷ್ಟ ಜ್ಞಾನ- ಇವುಗಳಿಂದ ಮಾತ್ರ ದೊರೆಯತಕ್ಕದ್ದು.

ತ್ತದೆ.[1] ಆದ್ದರಿಂದ ಆತ್ಮದರ್ಶನಕ್ಕಾಗಿ ಇಲ್ಲಿಯೇ ಯತ್ನವನ್ನು ಮಾಡಬೇಕು ಎಂದಭಿಪ್ರಾಯ.

## ಇಂದ್ರಿಯಾದಿಗಳಿಂದ ಆತ್ಮನನ್ನು ವಿಂಗಡಿಸಿ ಅರಿತುಕೊಳ್ಳಬೇಕು

(ಭಾಷ್ಯ)

೧೬೬. ಕಥಮಸೌ ಬೋದ್ಧವ್ಯಃ, ಕಿಂ ವಾ ತದವಬೋಧೇ ಪ್ರಯೋಜನಮಿತಿ ? ಉಚ್ಯತೇ -

(ಭಾಷ್ಯಾರ್ಥ)

ಇವನನ್ನು ತಿಳಿದುಕೊಳ್ಳುವದು ಹೇಗೆ ? ಇವನನ್ನು ತಿಳಿದುಕೊಂಡರೆ (ಆಗುವ) ಪ್ರಯೋಜನವಾದರೂ ಏನು ?- ಎಂದರೆ ಹೇಳುತ್ತಾನೆ :

ಇನ್ದ್ರಿಯಾಣಾಂ ಪೃಥಗ್ಭಾವಮುದಯಾಸ್ತಮಯೌ ಚ ಯತ್ ।
ಪೃಥಗುತ್ಪದ್ಯಮಾನಾನಾಂ ಮತ್ವಾ ಧೀರೋ ನ ಶೋಚತಿ ॥ ೬ ॥

೬. ಬೇರೆಬೇರೆ ಹುಟ್ಟುವ ಇಂದ್ರಿಯಗಳ, ಬೇರೆಯ ಸ್ವಭಾವವನ್ನೂ ಉದಯಾಸ್ತಮಯಗಳನ್ನೂ ಯಾವದರಿಂದ (ವಿಂಗಡಿಸಿ) ತಿಳಿದ ಧೀರನು ಶೋಕಿಸುವದಿಲ್ಲ.

(ಭಾಷ್ಯ)

೧೬೭. ಇನ್ದ್ರಿಯಾಣಾಂ ಶ್ರೋತ್ರಾದೀನಾಂ ಸ್ವಸ್ವವಿಷಯಗ್ರಹಣ ಪ್ರಯೋಜನೇನ ಸ್ವಕಾರಣೇಭ್ಯ ಆಕಾಶಾದಿಭ್ಯಃ ಪೃಥಗುತ್ಪದ್ಯಮಾನಾನಾಮ್ ಅತ್ಯನ್ತವಿಶುದ್ಧಾತ್ ಕೇವಲಾತ್ ಚಿನ್ಮಾತ್ರಸ್ವರೂಪಾತ್ ಪೃಥಗ್ಭಾವಂ ಸ್ವಭಾವವಿಲಕ್ಷಣಾತ್ಮಕತಾಮ್, ತಥಾ ತೇಷಾಮೇವೇನ್ದ್ರಿಯಾಣಾಮ್ ಉದಯಾಸ್ತಮಯೌ ಚ ಉತ್ಪತ್ತಿಪ್ರಲಯೌ ಜಾಗ್ರತ್ಸ್ವಾಪಾವಸ್ಥಾಪೇಕ್ಷಯಾ ನಾತ್ಮನ ಇತಿ ಮತ್ವಾ ಜ್ಞಾತ್ವಾ ವಿವೇಕತೋ ಧೀರಃ ಧೀಮಾನ್ ನ ಶೋಚತಿ । ಆತ್ಮನೋ ನಿತ್ಯೈಕಸ್ವಭಾವಸ್ಯಾವ್ಯಭಿಚಾರಾತ್ ಶೋಕಕಾರಣತ್ವಾನುಪಪತ್ತೇಃ । ತಥಾ ಚ ಶ್ರುತ್ಯನ್ತರಮ್ 'ತರತಿ ಶೋಕಮಾತ್ಮವಿತ್' (ಛಾಂ. ೭-೧-೩) ಇತಿ ॥

(ಭಾಷ್ಯಾರ್ಥ)

ಬೇರೆಬೇರೆ ಹುಟ್ಟುವ ಇಂದ್ರಿಯಗಳು ಎಂದರೆ ತಮ್ಮತಮ್ಮ ವಿಷಯವನ್ನು ಅರಿಯುವ ಪ್ರಯೋಜನಕ್ಕಾಗಿ ಆಕಾಶವೇ ಮುಂತಾದ ತಮ್ಮ ಕಾರಣಗಳಿಂದ ಹುಟ್ಟುವ ಕಿವಿಯೇ ಮುಂತಾದವು. ಇವುಗಳ ಬೇರೆಯ ಸ್ವಭಾವವನ್ನೂ ಎಂದರೆ, ಅತ್ಯಂತವಿಶುದ್ಧವಾಗಿಯೂ ತಾನೊಂದೇ ಇರುವದಾಗಿಯೂ ಬರಿಯ ಜ್ಞಾನದ

1. ಅಂಥ ಉತ್ಕೃಷ್ಟಸಾಧನವು ಎಲ್ಲರಿಗೂ ದಕ್ಕತಕ್ಕದ್ದಲ್ಲ.

ಸ್ವರೂಪಕ್ಕಿಂತ[1] (ಇವು) ಬೇರೆಯ ಸ್ವಭಾವವುಳ್ಳವುಗಳಾಗಿರುವದೆಂಬುದನ್ನೂ ಉದಯಾಸ್ತಮಯಗಳನ್ನೂ ಎಂದರೆ ಎಚ್ಚರನಿದ್ರೆಗಳೆಂಬ ಅವಸ್ಥೆಗಳ ವಶದಿಂದ ಆಗುವ ಹುಟ್ಟುಹೊಂದುಗಳ (ಆ ಇಂದ್ರಿಯಗಳಿಗೇ ಹೊರತು) ಆತ್ಮನಿಗೆ (ಆಗುವ) ದಿಲ್ಲ ಎಂದು ತಿಳಿದರೆ ವಿಂಗಡಿಸಿ ತಿಳಿದುಕೊಂಡರೆ[2] (ಅಂಥ) ಧೀರನು, ಬುದ್ಧಿವಂತನು ಶೋಕಿಸುವದಿಲ್ಲ, ಏಕೆಂದರೆ ಯಾವಾಗಲೂ ಒಂದೇ ಸ್ವಭಾವದವನಾದ ಆತ್ಮನು ಹೆಚ್ಚುಕಡಿಮೆಯಾಗದೆ ಇರುವದರಿಂದ ಶೋಕಕ್ಕೆ ಕಾರಣವಿರುವದಿಲ್ಲ. ಆದ್ದರಿಂದಲೇ ''ಆತ್ಮನನ್ನು ತಿಳಿದವನು ಶೋಕಿಸುವದಿಲ್ಲ'' (ಛಾಂ. ೭-೧-೩) ಎಂದು ಬೇರೊಂದು ಶ್ರುತಿಯಲ್ಲಿ ಹೇಳಿರುತ್ತದೆ.

(ಭಾಷ್ಯ)

೧೭೮. ಯಸ್ಮಾದಾತ್ಮನ ಇನ್ದ್ರಿಯಾಣಾಂ ಪೃಥಗ್ಭಾವ ಉಕ್ತಃ, ನಾಸೌ ಬಹಿರಧಿಗನ್ತವ್ಯಃ ಯಸ್ಮಾತ್ ಪ್ರತ್ಯಗಾತ್ಮಾ ಸ ಸರ್ವಸ್ಯ । ತತ್ಕಥಮಿತಿ ? ಉಚ್ಯತೇ -

(ಭಾಷ್ಯಾರ್ಥ)

ಯಾವ ಆತ್ಮನಿಗಿಂತ ಇಂದ್ರಿಯಗಳು ಬೇರೆಯ ಸ್ವಭಾವದವೆಂದು ಹೇಳಿದೆಯೋ ಅವನನ್ನು (ನಮ್ಮ) ಹೊರಗೆ (ಇರುವವನೆಂದು) ಅರಿಯತಕ್ಕದ್ದಲ್ಲ, ಏಕೆಂದರೆ ಅವನು ಎಲ್ಲಕ್ಕೂ ಒಳಗಿನ ಆತ್ಮನು. ಅದು ಹೇಗೆ ? ಎಂದರೆ ಹೇಳುತ್ತಾನೆ:-

ಇನ್ದ್ರಿಯೇಭ್ಯಃ ಪರಂ ಮನೋ ಮನಸಃ ಸತ್ತ್ವಮುತ್ತಮಮ್ ।
ಸತ್ತ್ವಾದಧಿ ಮಹಾನಾತ್ಮಾ ಮಹತೋಽವ್ಯಕ್ತಮುತ್ತಮಮ್ ॥ ೭ ॥

೭. ಇಂದ್ರಿಯಗಳಿಗಿಂತ ಮನಸ್ಸು ಹೆಚ್ಚಿನದು ; ಮನಸ್ಸಿಗಿಂತ ಸತ್ತ್ವವು ಉತ್ತಮ ಸತ್ತ್ವಕ್ಕಿಂತ ಮಹಾನ್ ಎಂಬ ಆತ್ಮನು ಹೆಚ್ಚು ; ಮಹತ್ತಿಗಿಂತ ಅವ್ಯಕ್ತವು ಉತ್ತಮವು.

(ಭಾಷ್ಯ)

೧೭೯. 'ಇನ್ದ್ರಿಯೇಭ್ಯಃ ಪರಂ ಮನಃ' ಇತ್ಯಾದಿ । ಅರ್ಥಾನಾಮ್ ಇಹ ಇನ್ದ್ರಿಯಸಮಾನಜಾತೀಯತ್ವಾತ್ ಇನ್ದ್ರಿಯಗ್ರಹಣೇನೈವ ಗ್ರಹಣಮ್ । ಪೂರ್ವವದನ್ಯತ್ । ಸತ್ತ್ವಶಬ್ದಾದ್ ಬುದ್ಧಿರಿಹೋಚ್ಯತೇ ॥

1. ''ಯತ್'' ಎಂಬ ಮಾತು ಭಾಷ್ಯದಲ್ಲಿ ಬಿಟ್ಟಿದೆ. ಯತ್-ಯಸ್ಮಾತ್ (ಯಾವ ಆತ್ಮನಿಗಿಂತ) ಎಂಬುದಕ್ಕೆ ''ಅತ್ಯಂತವಿಶುದ್ಧಾತ್'' ಮುಂತಾದವು ವಿಶೇಷಣಗಳು.

2. (೧) ಇಂದ್ರಿಯಗಳು ಅಶುದ್ಧ, ಅನೇಕ. ಜಡ ; ಆತ್ಮನು ಶುದ್ಧ, ಅದ್ವಿತೀಯ ಚಿನ್ಮಾತ್ರನು ; (೨) ಇಂದ್ರಿಯಗಳ ಅರಿವು ಎಚ್ಚರದಲ್ಲಿ ಹುಟ್ಟಿ, ನಿದ್ರೆಯಲ್ಲಿ ಮರೆಯಾಗುವದು ; ಆತ್ಮನ ಅರಿವು ನಿತ್ಯ, ಸ್ವತಂತ್ರ - ಎಂದು ಇಂದ್ರಿಯಗಳನ್ನೂ ಆತ್ಮನನ್ನೂ ವಿಂಗಡಿಸಿ ತಿಳಿದುಕೊಂಡರೆ ಎಂದರ್ಥ. ಇಂದ್ರಿಯ ಎಂಬ ಮಾತು ಅನಾತ್ಮಕ್ಕೆ ಉಪಲಕ್ಷಣವು.

(ಭಾಷ್ಯಾರ್ಥ)

'ಇನ್ದ್ರಿಯೇಭ್ಯಃ ಪರಂ ಮನಃ' ಎಂದು ಮೊದಲಾಗಿರುವ (ವಾಕ್ಯವು ಈ ಪ್ರಶ್ನೆಗೆ ಉತ್ತರವು)[1]. (ಅರ್ಥಗಳು) ಇಂದ್ರಿಯಗಳ ಜಾತಿಯವೇ ಆಗಿರುವದರಿಂದ ಅವನ್ನೂ ಇಂದ್ರಿಯ ಎಂಬ ಮಾತಿನಿಂದಲೇ ಇಲ್ಲಿ ಗ್ರಹಿಸಬೇಕು. ಮಿಕ್ಕದ್ದನ್ನು ಹಿಂದೆ (೧-೩-೧೧ರಲ್ಲಿ) ಹೇಳಿದಂತೆ (ತಿಳಿಯಬೇಕು). ಸತ್ತ್ವವೆಂಬ ಮಾತಿನಿಂದ ಇಲ್ಲಿ ಬುದ್ಧಿಯನ್ನು[2] ಹೇಳಿದೆ.

**ಅವ್ಯಕ್ತಾತ್ತು ಪರಃ ಪುರುಷೋ ವ್ಯಾಪಕೋಽಲಿಙ್ಗ ಏವ ಚ ।**
**ಯಂ ಜ್ಞಾತ್ವಾ ಮುಚ್ಯತೇ ಜನ್ತುರಮೃತತ್ವಂ ಚ ಗಚ್ಛತಿ ॥ ೮ ॥**

೮. ಆದರೆ ಅವ್ಯಕ್ತಕ್ಕಿಂತ ವ್ಯಾಪಕನಾಗಿಯೂ ಅಲಿಂಗನಾಗಿಯೂ ಇರುವ ಪುರುಷನೇ ಹೆಚ್ಚು. ಈ (ಪುರುಷನನ್ನು) ಅರಿತುಕೊಂಡರೆ ಪ್ರಾಣಿಯು ಮುಕ್ತನಾಗುವನು, ಅಮೃತತ್ವವನ್ನೂ ಹೊಂದುವನು.

(ಭಾಷ್ಯ)

೧೭೦. **ಅವ್ಯಕ್ತಾತ್ತು ಪರಃ ಪುರುಷಃ ವ್ಯಾಪಕಃ ವ್ಯಾಪಕಸ್ಯಾಪ್ಯಾಕಾಶಾದೇಃ ಸರ್ವಸ್ಯ ಕಾರಣತ್ವಾತ್ । ಅಲಿಙ್ಗಃ ಲಿಙ್ಗ್ಯತೇ ಗಮ್ಯತೇ ಯೇನ ತಲ್ಲಿಙ್ಗಂ ಬುದ್ಧ್ಯಾದಿ; ತದವಿದ್ಯಮಾನಮ್ ಅಸ್ಯ ಸೋಽಯಮ್ ಅಲಿಙ್ಗ ಏವ ಚ । ಸರ್ವಸಂಸಾರಧರ್ಮವರ್ಜಿತ ಇತ್ಯೇತತ್ । ಯಂ ಜ್ಞಾತ್ವಾ ಆಚಾರ್ಯತಃ ಶಾಸ್ತ್ರತಶ್ಚ ಮುಚ್ಯತೇ ಜನ್ತುಃ ಅವಿದ್ಯಾದಿಹೃದಯಗ್ರನ್ಥಿಭಿರ್ಜೀವನ್ನೇವ । ಪತಿತೇಽಪಿ ಶರೀರೇ ಅಮೃತತ್ವಂ ಚ ಗಚ್ಛತಿ । ಸೋಽಲಿಙ್ಗಃ ಪರೋಽವ್ಯಕ್ತಾತ್ ಪುರುಷಃ ಇತಿ ಪೂರ್ವೇಣೈವ ಸಮ್ಬನ್ಧಃ ॥**

(ಭಾಷ್ಯಾರ್ಥ)

ಆದರೆ ಅವ್ಯಕ್ತಕ್ಕಿಂತ ಪುರುಷನು ಹೆಚ್ಚು. (ಇವನು) ವ್ಯಾಪಕನು, ಏಕೆಂದರೆ ವ್ಯಾಪಕವಾದ ಆಕಾಶವೇ ಮುಂತಾದದ್ದೆಲ್ಲಕ್ಕೂ ಕಾರಣನಾಗಿರುತ್ತಾನೆ. (ಇವನು) ಅಲಿಂಗನು, ಯಾವ ಗುರುತಿನಿಂದ ಅರಿಯುತ್ತಾರೋ ಅದು ಲಿಂಗವು, ಅಂಥ ಬುದ್ಧಿಯೇ ಮುಂತಾದ ಲಿಂಗವು ಇವನಿಗೆ ಇರುವದಿಲ್ಲವಾದ್ದರಿಂದ[3] ಇವನು

---

1. ಆತ್ಮನು ಬಲುಸೂಕ್ಷ್ಮನಾದ್ದರಿಂದ ಸೂಕ್ಷ್ಮದರ್ಶಿಗಳಿಗೆ ಮಾತ್ರ ಅವನ ಜ್ಞಾನವಾಗುವದು ಎಂದು ಹಿಂದೆ ತಿಳಿಸಿತ್ತು ; ಆತ್ಮನನ್ನು ನಮ್ಮ ಒಳಗೇ ಅರಿತುಕೊಳ್ಳಬೇಕು, ನಮಗಿಂತ ಬೇರೆಯಾಗಿ ಹೊರಗೆ ಅರಿತುಕೊಳ್ಳತಕ್ಕದ್ದಲ್ಲ ಎಂಬುದನ್ನು ತಿಳಿಸುವದಕ್ಕೆ ಮುಂದಿನ ಎರಡು ಮಂತ್ರಗಳು ಬಂದಿವೆ. 2. ಬರಿಯ ಅಂತಃಕರಣವನ್ನಲ್ಲ.

3. ಅಂತಃಕರಣದಿಂದಲೂ ಇಂದ್ರಿಯಗಳಿಂದಲೂ ಆತ್ಮನು ಅರಿಯುತ್ತಾನೆಂದು ಆ ಅರಿವಿನ ಗುರುತಿನಿಂದ ಅವನನ್ನು ಊಹಿಸಬಹುದೆಂದು ನಾವು ತಿಳಿಯುತ್ತೇವೆ. ವ್ಯವಹಾರದೃಷ್ಟಿಯಿಂದ ಇದು ಸರಿಯಾದರೂ ನಿಜವಾಗಿ ಆತ್ಮನಿಗೆ ಯಾವ ಗುರುತೂ ಇಲ್ಲ.

ಅಲಿಂಗನೇ ಎಂದರೆ - ಯಾವ ಸಂಸಾರಧರ್ಮವೂ ಇಲ್ಲದವನು ಎಂದು ಅಭಿಪ್ರಾಯ. ಯಾವ ಆತ್ಮನನ್ನು ಆಚಾರ್ಯರಿಂದಲೂ ಶಾಸ್ತ್ರದಿಂದಲೂ ಅರಿತುಕೊಂಡರೆ[1] ಜೀವನು ಬದುಕಿರುವಾಗಲೇ ಅವಿದ್ಯೆಯೇ ಮುಂತಾದ ಹೃದಯದ ಗ್ರಂಥಿಗಳಿಂದ[2] ಮುಕ್ತನಾಗುವನೋ, ಶರೀರವು ಬಿದ್ದುಹೋದಮೇಲೆಯೂ[3] ಅಮೃತತ್ವವನ್ನು ಹೊಂದುವನೋ 'ಆ ಅಲಿಂಗನಾದ ಪುರುಷನು ಅವ್ಯಕ್ತಕ್ಕಿಂತಲೂ ಹೆಚ್ಚು' ಎಂದು ಹಿಂದಕ್ಕೆ ಸಂಬಂಧಮಾಡಿಕೊಳ್ಳಬೇಕು.

(ಭಾಷ್ಯ)

೧೭೧. ಕಥಂ ತರ್ಹಿ ತಸ್ಯ ಅಲಿಙ್ಗಸ್ಯ ದರ್ಶನಮ್ ಉಪಪದ್ಯತ ಇತಿ ? ಉಚ್ಯತೇ-

(ಭಾಷ್ಯಾರ್ಥ)

ಹಾಗಾದರೆ ಯಾವ ಗುರುತೂ ಇಲ್ಲದ ಈ (ಆತ್ಮನನ್ನು) ಕಾಣುವದೆನ್ನುವದು ಹೇಗೆ ? ಎಂದರೆ ಹೇಳುತ್ತಾನೆ :-

ನ ಸನ್ದೃಶೇ ತಿಷ್ಠತಿ ರೂಪಮಸ್ಯ
    ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ ।
ಹೃದಾ ಮನೀಷಾ ಮನಸಾಭಿಕ್ಲೃಪ್ತೋ
    ಯ ಏತದ್ವಿದುರಮೃತಾಸ್ತೇ ಭವನ್ತಿ    ॥ ೯ ॥

೯. ಈತನ ರೂಪವು ದರ್ಶನದಲ್ಲಿರುವದಿಲ್ಲ. ಯಾವನೂ ಈತನನ್ನು ಕಣ್ಣಿನಿಂದ ನೋಡಲಾರನು. ಮನಸ್ಸನ್ನಾಳುವ ಹೃದಯದಿಂದ ಮನಸ್ಸಿನಿಂದ ಗೊತ್ತುಪಡಿಸಲ್ಪಟ್ಟರೆ (ತೋರಿಕೊಳ್ಳುತ್ತಾನೆ). ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು.

(ಭಾಷ್ಯ)

೧೭೨. ನ ಸನ್ದೃಶೇ ಸನ್ದರ್ಶನವಿಷಯೇ ನ ತಿಷ್ಠತಿ ಪ್ರತ್ಯಗಾತ್ಮನಃ ಅಸ್ಯ ರೂಪಮ್ । ಅತಃ ನ ಚಕ್ಷುಷಾ ಸರ್ವೇನ್ದ್ರಿಯೇಣ । ಚಕ್ಷುರ್ಗ್ರಹಣಸ್ಯೋಪ

---

1. ಆಚಾರ್ಯರ ಮತ್ತು ಶಾಸ್ತ್ರದ ಉಪದೇಶದಿಂದ ಮನಸ್ಸಿಗೆ ಸಂಸ್ಕಾರವಾಗಿ ಆತ್ಮಜ್ಞಾನವಾಗುವದೆಂದು ಭಾಷ್ಯಕಾರರ ಮತವು. ಈ ಉಪನಿಷತ್ತಿನ ೨-೧-೧೧, ೨-೨-೧೨ನ್ನು ನೋಡಿ. 2. ಹೃದಯಕ್ಕೆ ಗಂಟುಹಾಕಿದಂತೆ ಇರುವ ಅವಿದ್ಯೆಯೂ ಕಾಮವೇ ಮುಂತಾದವೂ ಜ್ಞಾನದಿಂದ ಸಂಪೂರ್ಣವಾಗಿ ಬಿಟ್ಟುಹೋಗುವವು. ಮುಂ. ಭಾ. ೨-೨-೮ ನೋಡಿ. 3. ಶರೀರವು ಬಿದ್ದಮೇಲೆ ಮತ್ತೆ ಅಜ್ಞರಂತೆ ಜನ್ಮವನ್ನು ಹೊಂದುವದಿಲ್ಲ ಎಂದು ಮಾತ್ರ ಅರ್ಥ. ಬದುಕಿರುವಾಗ ಪಡೆಯದೆ ಇದ್ದ ಅಮೃತತ್ವವನ್ನು ಹೊಂದುವನೆಂದಲ್ಲ, ಬೃ. ಭಾ. ೪-೪-೬, ಈ ಉಪನಿಷತ್ತಿನ ೨-೨-೧ರ ಭಾಷ್ಯ - ಇವನು ನೋಡಿ.

ಲಕ್ಷಣಾರ್ಥತ್ವಾತ್ । ಪಶ್ಯತಿ ನೋಪಲಭತೇ ಕಶ್ಚನ ಕಶ್ಚಿದಪಿ ಏನಂ ಪ್ರಕೃತವ್ ಆತ್ಮಾನವ್ । ಕಥಂ ತರ್ಹಿ ತಂ ಪಶ್ಯೇತ್ ಇತಿ ? ಉಚ್ಯತೇ । ಹೃದಾ ಹೃತ್ಸ್ಥಯಾ ಬುದ್ಧ್ಯಾ । ಮನೀಷಾ ಮನಸಃ ಸಙ್ಕಲ್ಪಾದಿರೂಪಸ್ಯ ಈಷ್ಟೇ ನಿಯನ್ತೃತ್ವೇನ ಇತಿ ಮನೀಟ್, ತಯಾ ಹೃದಾ ಮನೀಷಾ ಅವಿಕಲ್ಪಯಿತ್ರ್ಯಾ । ಮನಸಾ ಮನನರೂಪೇಣ ಸಮ್ಯಗ್ದರ್ಶನೇನ ಅಭಿಕ್ಲೃಪ್ತಃ ಅಭಿಸಮರ್ಥಿತಃ ಅಭಿಪ್ರಕಾಶಿತಃ ಇತ್ಯೇತತ್ । ಆತ್ಮಾ ಜ್ಞಾತುಂ ಶಕ್ಯತೇ ಇತಿ ವಾಕ್ಯಶೇಷಃ । ತವ್ ಆತ್ಮಾನಂ ಬ್ರಹ್ಮ ಏತತ್ ಯೇ ವಿದುಃ ಅಮೃತಾಃ ತೇ ಭವನ್ತಿ ॥

(ಭಾಷ್ಯಾರ್ಥ)

ಈ ಒಳಗಿನ ಆತ್ಮನ ರೂಪವು ದರ್ಶನದಲ್ಲಿ ಎಂದರೆ ದರ್ಶನಕ್ಕೆ ವಿಷಯವಾಗಿ ಇರುವದಿಲ್ಲ. ಆದ್ದರಿಂದ ಕಣ್ಣಿನಿಂದ - ಕಣ್ಣು ಎಂದು ಹೇಳಿರುವದು ಉಪಲಕ್ಷಣಕ್ಕೆ ; ಆದ್ದರಿಂದ (ಕಣ್ಣಿನಿಂದ ಎಂದರೆ) - ಯಾವ ಇಂದ್ರಿಯದಿಂದಲೂ ಯಾವನೂ ಯಾವನೊಬ್ಬನೂ ಈ ಪ್ರಕೃತನಾದ ಆತ್ಮನನ್ನು ನೋಡಲಾರನು, ಎಂದರೆ ತಿಳಿಯಲಾರನು. ಹಾಗಾದರೆ ಆತನನ್ನು ಹೇಗೆ ತಿಳಿಯಬೇಕು ?- ಎಂದರೆ ಹೇಳುತ್ತಾನೆ : ಹೃದಯದಿಂದ ಎಂದರೆ ಹೃದಯದಲ್ಲಿರುವ ಬುದ್ಧಿಯಿಂದ (ಮೂಲದಲ್ಲಿ) ಮನೀಷಾ (ಎಂದಿದೆಯಷ್ಟೆ), ಸಂಕಲ್ಪವೇ ಮುಂತಾದ[1] ರೂಪದ ಮನಸ್ಸನ್ನು ಬಿಗಿಯಲ್ಲಿಟ್ಟು ಆಳುವದರಿಂದ (ಬುದ್ಧಿಗೆ) 'ಮನೀಟ್' ಎಂದು ಹೆಸರು. ಹೀಗೆ ಮನಸ್ಸನ್ನಾಳುತ್ತಾ[2] ಯಾವ ವಿಕಲ್ಪವನ್ನೂ ಮಾಡದಿರುವ ಹೃದಯದಿಂದ, ಮನಸ್ಸಿನಿಂದ ಮನನರೂಪವಾದ ಸರಿಯಾದ ಜ್ಞಾನದಿಂದ ಗೊತ್ತುಪಡಿಸಲ್ಪಟ್ಟರೆ, ಎಂದರೆ ಎಲ್ಲಾ ವಿಧದಿಂದಲೂ ನಿರ್ಣಯಿಸಲ್ಪಟ್ಟರೆ, ಚೆನ್ನಾಗಿ ಬೆಳಗಲ್ಪಟ್ಟರೆ ಎಂದರ್ಥ. '(ಆಗ) ಆತ್ಮನನ್ನು ಅರಿಯುವದಕ್ಕಾಗುವದು' ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು. ಆ ಆತ್ಮನನ್ನು ಈ ಬ್ರಹ್ಮವೆಂದು ಯಾರು ಅರಿಯುವರೋ ಅವರು ಅಮೃತರಾಗುವರು.

1. ಸಂಕಲ್ಪವೆಂದರೆ ಪ್ರವೃತ್ತಿಗೆ ಬೇಕಾದ ಮೊದಲನೆಯ ಕಲ್ಪನೆ. ಮುಂತಾದದ್ದು ಎಂದರೆ ವಿಕಲ್ಪವು, ಇಂಥಿಂಥದ್ದೆಂದು ತಿಳಿಯುವದು.

2. ಹೊರಗಿನ ಇಂದ್ರಿಯಗಳನ್ನು ತಡೆದುಕೊಂಡಿರುವಾಗಲೂ ಮನಸ್ಸು ವಿಷಯಗಳನ್ನು ಕಲ್ಪಿಸಿಕೊಳ್ಳುತ್ತಿರುವದು. ಆಗ ಮುಮುಕ್ಷುವಿನ ಬುದ್ಧಿಯು ಅದನ್ನು ತಡೆದು 'ಎಲೈ ಮನಸ್ಸೆ, ಏತಕ್ಕೆ ಪಿಶಾಚಿಯಂತೆ ಓಡಾಡುತ್ತಿರುವೆ ? ನಿನ್ನ ಪ್ರಯೋಜನಕ್ಕಂತೂ ಅಲ್ಲ, ಏಕೆಂದರೆ ಜಡವಾಗಿರುವ ನಿನಗೆ ಯಾವ ಪ್ರಯೋಜನವೂ ಸಿಗುವಂತಿಲ್ಲ. ವಿಷಯಗಳು ನಾಶವಾಗುತ್ತಿರುವದರಿಂದ ಅವುಗಳಿಂದ ಪ್ರಯೋಜನವಾದೀತೆಂಬುದು ಹೊಂದುವ ಹಾಗೂ ಇಲ್ಲ. ಚೇತನಕ್ಕಾಗಿ ಓಡಾಡುತ್ತೇನೆಂಬುದೂ ಸರಿಯಲ್ಲ ; ಏಕೆಂದರೆ ಚೇತನವು ಅಸಂಗವಾಗಿ ಪರಮಾನಂದಸ್ವಭಾವವಾಗಿಯೇ ಇರುವನು' ಎಂದು ಅದನ್ನು ಬಿಗಿಹಿಡಿಯುತ್ತದೆ. ಆದ್ದರಿಂದ ಹೀಗೆ ಮನಸ್ಸನ್ನು ಆಳುವ ಬುದ್ಧಿಗೆ ಮನೀಟ್ ಎಂದು ಹೆಸರು. (ಗೋ ॥).

## ಜ್ಞಾನಕ್ಕೆ ಸಾಧನವಾದ ಯೋಗ

(ಭಾಷ್ಯ)

೧೭೩. ಸಾ ಹೃನ್ಮನೀಟ್ ಕಥಂ ಪ್ರಾಪ್ಯತ ಇತಿ ? ತದರ್ಥೋಽ ಯೋಗ ಉಚ್ಯತೇ-

(ಭಾಷ್ಯಾರ್ಥ)

ಆ ಮನೀಟ್ (ಎಂಬ ಮನಸ್ಸನ್ನಾಳುವ) ಬುದ್ಧಿಯು ದೊರಕುವದು ಹೇಗೆ ? ಎಂದರೆ ಅದಕ್ಕಾಗಿ ಯೋಗವನ್ನು[1] ಹೇಳುತ್ತಾನೆ :-

ಯದಾ ಪಞ್ಚಾವತಿಷ್ಠನ್ತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನ ವಿಚೇಷ್ಟತಿ ತಾಮಾಹುಃ ಪರಮಾಂ ಗತಿಮ್ . ॥೧೦॥

೧೦. ಯಾವಾಗ ಐದು ಜ್ಞಾನಗಳೂ ಮನಸ್ಸಿನೊಡನೆ ನಿಲುಗಡೆಗೆ ಬರುವವೋ ಬುದ್ಧಿಯು ಅಲುಗಾಡುವದಿಲ್ಲವೋ ಅದನ್ನು ಪರಮಗತಿ ಎಂದು ಹೇಳುತಾರೆ.

(ಭಾಷ್ಯ)

೧೭೪. ಯದಾ ಯಸ್ಮಿನ್ ಕಾಲೇ ಸ್ವವಿಷಯೇಭ್ಯೋ ನಿವರ್ತಿತಾನಿ ಆತ್ಮನ್ಯೇವ ಪಞ್ಚ ಜ್ಞಾನಾನಿ- ಜ್ಞಾನಾರ್ಥತ್ವಾತ್ ಶ್ರೋತ್ರಾದೀನೀನ್ದ್ರಿಯಾಣಿ ಜ್ಞಾನಾನ್ಯುಚ್ಯನ್ತೇ । ಅವತಿಷ್ಠನ್ತೇ ಸಹ ಮನಸಾ ಯದನುಗತಾನಿ ತೇನ ಸಙ್ಕಲ್ಪಾದಿವ್ಯಾವೃತ್ತೇನ ಅನ್ತಃಕರಣೇನ । ಬುದ್ಧಿಶ್ಚ ಅಧ್ಯವಸಾಯಲಕ್ಷಣಾ ನ ವಿಚೇಷ್ಟತಿ ಸ್ವವ್ಯಾಪಾರೇಷು ನ ವಿಚೇಷ್ಟತೇ ನ ವ್ಯಾಪ್ರಿಯತೇ ತಾಮ್ ಆಹುಃ ಪರಮಾಂ ಗತಿಮ್ ॥

(ಭಾಷ್ಯಾರ್ಥ)

ಯಾವಾಗ ಎಂದರೆ ಯಾವ ಕಾಲದಲ್ಲಿ ತಮ್ಮತಮ್ಮ ವಿಷಯಗಳಿಂದ ಹಿಂತಿರುಗಿಸಿದ ಐದು ಜ್ಞಾನಗಳು - ಶ್ರೋತ್ರವೇ ಮುಂತಾದ ಇಂದ್ರಿಯಗಳು ಜ್ಞಾನಕ್ಕೋಸ್ಕರ ಉಪಯೋಗವಾಗುವದರಿಂದ (ಅವನ್ನು) 'ಜ್ಞಾನಗಳು' ಎಂದು ಕರೆದಿದೆ. (ಅವು) - ಮನಸ್ಸಿನೊಡನೆ ಎಂದರೆ ಯಾವ ಅಂತಃಕರಣದೊಡನೆ ಸೇರಿಕೊಂಡೇ ನಿಂತಿರುವವೋ ಆ ಸಂಕಲ್ಪಾದಿಗಳನ್ನು ಬಿಟ್ಟ ಅಂತಃಕರಣದೊಡನೆ ಆತ್ಮನಲ್ಲಿಯೇ ನಿಲುಗಡೆಗೆ ಬರುವವೋ, ಮತ್ತು ನಿಶ್ಚಯರೂಪವಾದ ಬುದ್ಧಿಯು ಅಲುಗಾಡುವದಿಲ್ಲವೋ (ನ ವಿಚೇಷ್ಟತಿ = ನ ವಿಚೇಷ್ಟತೇ) ತನ್ನ ವ್ಯಾಪಾರಗಳಲ್ಲಿ ತೊಡಗದೆ ಇರುವದೋ,[2] ಅದನ್ನೇ ಉತ್ತಮಗತಿ ಎನ್ನುವರು.

1. ಓಂದೆ ೧-೩-೧೩ರಲ್ಲಿ ಹೇಳಿದ ಅಧ್ಯಾತ್ಮಯೋಗವೇ ಇದು.
2. ಗೌ. ಕಾ. ೩-೪೦ ರಿಂದ ೪೬ರ ವರೆಗಿನ ಕಾರಿಕೆಗಳನ್ನು ನೋಡಿರಿ.

ತಾಂ ಯೋಗಮಿತಿ ಮನ್ಯನ್ತೇ ಸ್ಥಿರಾಮಿನ್ದ್ರಿಯಧಾರಣಾಮ್ ।
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥ ೧೧ ॥

೧೧. ಸ್ಥಿರವಾದ ಇಂದ್ರಿಯಧಾರಣೆ ಎಂಬ ಇದನ್ನೇ ಯೋಗವೆಂದು ತಿಳಿಯುವರು. ಆಗ ಅಪ್ರಮತ್ತನಾಗಿರುತ್ತಾನೆ, ಏಕೆಂದರೆ ಯೋಗವು ಪ್ರಭವಾಪ್ಯಯಗಳು.

(ಭಾಷ್ಯ)

೧೭೫. ತಾಮ್ ಈದೃಶೀಮ್ ಅವಸ್ಥಾಂ ಯೋಗಮ್ ಇತಿ ಮನ್ಯನ್ತೇ ವಿಯೋಗಮೇವ ಸನ್ತಮ್ । ಸರ್ವಾನರ್ಥಸಂಯೋಗವಿಯೋಗಲಕ್ಷಣಾ ಹಿ ಇಯಮ್ ಅವಸ್ಥಾ ಯೋಗಿನಃ । ಏತಸ್ಯಾಂ ಹಿ ಅವಸ್ಥಾಯಾಮ್ ಅವಿದ್ಯಾಧ್ಯಾರೋಪಣವರ್ಜಿತಸ್ವರೂಪಪ್ರತಿಷ್ಠ ಆತ್ಮಾ । ಸ್ಥಿರಾಮ್ ಇನ್ದ್ರಿಯಧಾರಣಾಮ್ । ಸ್ಥಿರಾಮ್ ಅಚಲಾಮ್ ಇನ್ದ್ರಿಯಧಾರಣಾಮ್ । ಬಾಹ್ಯಾನ್ತಃಕರಣಾನಾಂ ಧಾರಣಾಮ್ ಇತ್ಯರ್ಥಃ । ಅಪ್ರಮತ್ತಃ ಪ್ರಮಾದವರ್ಜಿತಃ ಸಮಾಧಾನಂ ಪ್ರತಿ ನಿತ್ಯಂ ಯತ್ನವಾನ್ ತದಾ ತಸ್ಮಿನ್ ಕಾಲೇ ಯದೈವ ಪ್ರವೃತ್ತಯೋಗೋ ಭವತಿ ಇತಿ ಸಾಮರ್ಥ್ಯಾತ್ ಅವಗಮ್ಯತೇ । ನ ಹಿ ಬುದ್ಧ್ಯಾದಿಚೇಷ್ಟಾಭಾವೇ ಪ್ರಮಾದಸಮ್ಭವೋಽಸ್ತಿ । ತಸ್ಮಾತ್ ಪ್ರಾಗೇವ ಬುದ್ಧ್ಯಾದಿಚೇಷ್ಟೋಪರಮಾತ್ ಅಪ್ರಮಾದೋ ವಿಧೀಯತೇ ॥

(ಭಾಷ್ಯಾರ್ಥ)

ಇಂಥ ಈ ಅವಸ್ಥೆಯನ್ನು ಅದು ವಿಯೋಗವೇ ಆಗಿದ್ದರೂ - ಯೋಗವೆಂದು ತಿಳಿಯುತ್ತಾರೆ. ಯೋಗಿಯ ಈ ಅವಸ್ಥೆಯು ಎಲ್ಲಾ ಬಗೆಯ ಅನರ್ಥದ ಸಂಬಂಧವೂ ಇಲ್ಲವಾಗುವಂಥದ್ದೇ[1] ; ಏಕೆಂದರೆ ಈ ಅವಸ್ಥೆಯಲ್ಲಿ ಅವಿದ್ಯೆಯ ಆರೋಪಣೆಯಿಂದ ಬಿಡಲ್ಪಟ್ಟ ತನ್ನ ರೂಪದಲ್ಲಿಯೇ ಆತ್ಮನು ಇದ್ದುಕೊಂಡಿರುತ್ತಾನೆ.[2] ಸ್ಥಿರವಾದ ಇಂದ್ರಿಯಧಾರಣೆಯನ್ನು ಎಂದರೆ, ಸ್ಥಿರವಾದ ಅಲುಗಾಡದ ಇಂದ್ರಿಯಧಾರಣೆಯನ್ನು, ಹೊರಗಿನ ಮತ್ತು ಒಳಗಿನ ಕರಣಗಳನ್ನು ಬಿಗಿಹಿಡಿದುಕೊಂಡಿರುವದನ್ನು (ಯೋಗವೆನ್ನುತ್ತಾರೆ) ಎಂದರ್ಥ. ಆಗ ಎಂದರೆ ಆ ಕಾಲದಲ್ಲಿ, ಯಾವಾಗ, ಯೋಗದಲ್ಲಿ ಪ್ರವೃತ್ತನಾಗುತ್ತಾನೋ ಆಗ ಎಂದು ಶ್ರುತಿಸಾಮರ್ಥ್ಯದಿಂದ

1. ಗೀ. ೬-೨೩. ದುಃಖಿಗಳ ಸಂಬಂಧವು ಇಲ್ಲವಾಗುವದೇ ವಿಯೋಗವನ್ನೇ ಯೋಗವೆಂದು ಕರೆಯುವರು. ವಿಯೋಗವನ್ನು ಯೋಗವೆಂದು ಕರೆಯುವದು ಅಮಂಗಳವಾದ ವಾರವನ್ನು ಮಂಗಳವಾರವೆಂದು ಕರೆಯುವಂತೆ ವಿಪರೀತಲಕ್ಷಣೆಯಿಂದ.

2. ಮಾಂ. ಕಾ. ೩-೩೭ರಲ್ಲಿ ಹೇಳಿರುವ ಅವಸ್ಥೆಯಿದು, ಗೀ. ೬-೨೫ ನೋಡಿರಿ.

ಗೊತ್ತುಮಾಡಬೇಕಾಗಿದೆ. ಏಕೆಂದರೆ ಬುದ್ಧಿಯೇ ಮುಂತಾದವು ಅಲುಗಾಡದೆ ಇರುವಲ್ಲಿ ಎಚ್ಚರಿಕೆ ತಪ್ಪುವ ಸಂಭವವೇ ಇರುವದಿಲ್ಲ.[1] ಆದ್ದರಿಂದ ಅಪ್ರಮತ್ತನಾಗಿ ಎಂದರೆ ಪ್ರಮಾದವಿಲ್ಲದವನಾಗಿ ಸಮಾಧಾನದಿಂದಿರುವ ವಿಷಯದಲ್ಲಿ ಯಾವಾಗಲೂ ಯತ್ನವುಳ್ಳವನಾಗಿರುತ್ತಾನೆ - ಎಂದರೆ **ಬುದ್ಧಿಯೇ ಮುಂತಾದವುಗಳ ವ್ಯಾಪಾರವು ನಿಲ್ಲುವ ಮುಂಚೆಯೇ ಎಚ್ಚರತಪ್ಪದೆ ಇರಬೇಕು ಎಂದು ವಿಧಿಸಿರುತ್ತದೆ.**

(ಭಾಷ್ಯ)

**೧೭೬. ಅಥವಾ ಯದೈವ ಇನ್ದ್ರಿಯಾಣಾಂ ಸ್ಥಿರಾ ಧಾರಣಾ ತದಾನೀಮೇವ ನಿರಙ್ಕುಶಮ್ ಅಪ್ರಮತ್ತತ್ವಮ್ ಇತ್ಯತೋಽಭಿಧೀಯತೇ 'ಅಪ್ರಮತ್ತಸ್ತದಾ ಭವತಿ' ಇತಿ । ಕುತಃ ? ಯೋಗೋ ಹಿ ಪ್ರಭವಾಪ್ಯಯೌ ಉಪಜನಾಪಾಯಧರ್ಮಕಃ ಇತ್ಯರ್ಥಃ । ಅತಃ ಅಪಾಯಪರಿಹಾರಾಯ ಅಪ್ರಮಾದಃ ಕರ್ತವ್ಯಃ ಇತ್ಯಭಿಪ್ರಾಯಃ ॥**

(ಭಾಷ್ಯಾರ್ಥ)

ಅಥವಾ ಯಾವಾಗ ಇಂದ್ರಿಯಗಳನ್ನು ಸ್ಥಿರವಾಗಿ ಧರಿಸಿರುತ್ತಾನೋ ಆಗಲೇ ಯಾವ ಅಡ್ಡಿಯೂ ಇರುವದಿಲ್ಲ ; ಆದ್ದರಿಂದ ಈಗ 'ಅಪ್ರಮತ್ತನಾಗಿರುತ್ತಾನೆ' ಎಂದು ಹೇಳಿರುತ್ತದೆ[2] (ಎಂದಾದರೂ ಈ ವಾಕ್ಯಕ್ಕೆ ಅರ್ಥವನ್ನು ಮಾಡಬಹುದು). ಅದೇಕೆ ?[3] ಎಂದರೆ ಯೋಗವು ಪ್ರಭವಾಪ್ಯಯಗಳು ಎಂದರೆ ಹುಟ್ಟುವದು, ನಾಶವಾಗುವದು ಎಂಬ ಸ್ವಭಾವವುಳ್ಳದ್ದು ಎಂದರ್ಥ. ಆದ್ದರಿಂದ (ಅದು) ನಾಶವಾಗುವದನ್ನು ತಪ್ಪಿಸಿಕೊಳ್ಳುವದಕ್ಕಾಗಿ ಎಚ್ಚರಿಕೆಯನ್ನು ಕೈಕೊಳ್ಳಬೇಕು ಎಂದು ಅಭಿಪ್ರಾಯ.

## ಬ್ರಹ್ಮಜ್ಞಾನವೂ ಅದರ ಫಲವೂ

(ಭಾಷ್ಯ)

**೧೭೭. ಬುದ್ಧ್ಯಾದಿಚೇಷ್ಟಾವಿಷಯಂ ಚೇತ್ ಬ್ರಹ್ಮ ಇದಂ ತತ್ ಇತಿ ವಿಶೇಷತೋ ಗೃಹ್ಯೇತ । ಬುದ್ಧ್ಯಾದ್ಯುಪರಮೇ ಚ ಗ್ರಹಣಕಾರಣಾಭಾವಾತ್ ಅನುಪಲಭ್ಯಮಾನಂ ನಾಸ್ತ್ಯೇವ ಬ್ರಹ್ಮ । ಯದ್ಧಿ ಕರಣಗೋಚರಂ ತದಸ್ತಿ ಇತಿ ಪ್ರಸಿದ್ಧಂ**

1. ಸಮಾಧಿಯು ಬಂದಾಗ ಮಾಡಬೇಕಾದದ್ದೇನೂ ಇರುವದಿಲ್ಲವಾದ್ದರಿಂದ ಆಗ ಪ್ರಮಾದವಾಗಲಿ ಅಪ್ರಮಾದವಾಗಲಿ ಇರಲಾರದು. ಆದ್ದರಿಂದ ಸಮಾಧಿಯುಂಟಾಗುವ ಪೂರ್ವದಲ್ಲಿ ಎಚ್ಚರಿಕೆಯಿಂದಿರಬೇಕು ಎಂದು ಭಾವ.

2. ಯೋಗದ ಫಲವಾದ ಸಮಾಧಿಯಿರುವಾಗ ಮಾತ್ರ ಅಪ್ರಮತ್ತನಾಗಿರುತ್ತಾನೆ. ಮಿಕ್ಕ ವೇಳೆಗಳಲ್ಲಿ ಎಚ್ಚರಿಕೆಯಿಲ್ಲದೆ ಬಹಿರ್ಮುಖವಾಗುವ ಸಂಭವವೂ ಇದೆ ಎಂದು ಭಾವ.

3. ಯೋಗದ ಫಲವಾದ ಸಮಾಧಿಯು ಬರುವದಕ್ಕೂ ಅದು ದೀರ್ಘಕಾಲವಿದ್ದು ಬ್ರಹ್ಮಜ್ಞಾನಕ್ಕೆ ಸಹಾಯವಾಗುವದಕ್ಕೂ ಎಚ್ಚರಿಕೆಯಿರಬೇಕಾದದ್ದೇಕೆ ?

ಲೋಕೇ ವಿಪರೀತಂ ಚ ಅಸತ್ ಇತಿ । ಅತಶ್ಚ ಅನರ್ಥಕೋ ಯೋಗಃ, ಅನುಪಲಭ್ಯ ಮಾನತ್ವಾದ್ವಾ ನಾಸ್ತೀತ್ಯುಪಲಬ್ಧವ್ಯಂ ಬ್ರಹ್ಮ ಇತ್ಯೇವಂ ಪ್ರಾಪ್ತೇ ಇದಮುಚ್ಯತೇ -

(ಭಾಷ್ಯಾರ್ಥ)

(ಆಕ್ಷೇಪ) :- ಬ್ರಹ್ಮವು ಬುದ್ಧಿಯೇ ಮುಂತಾದವುಗಳ ವ್ಯಾಪಾರಕ್ಕೆ ವಿಷಯ ವಾಗಿದ್ದರೆ ಅದು ಇಂಥದ್ದು ಎಂದು ವಿಶೇಷರೂಪದಿಂದ ಗ್ರಹಿಸಬಹುದಾಗಿತ್ತು. ಬುದ್ಧಿಯೇ ಮುಂತಾದವು ಕೆಲಸಮಾಡದೆ ಇರುವಾಗ (ಅದನ್ನು) ತಿಳಿಯುವದಕ್ಕೆ ಕರಣವೇ[1] ಇಲ್ಲದ್ದರಿಂದ ಅದಕ್ಕೆ ಕಾಣದೆ ಇರುವ (ಬ್ರಹ್ಮವು) ಇಲ್ಲವೇ ಇಲ್ಲ. ಏಕೆಂದರೆ ಯಾವದು ಕರಣಗಳಿಗೆ ಗೋಚರವಾಗಿರುವದೋ ಅದು ಇದೆಯೆಂದೂ ಹಾಗಿಲ್ಲದಿರುವದು ಇಲ್ಲವೆಂದೂ[2] ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ. ಆದ್ದ ರಿಂದಲೇ ಯೋಗವು ವ್ಯರ್ಥವು.[3] ಅಥವಾ ಬ್ರಹ್ಮವು ಕಾಣದೆ ಇರುವದರಿಂದ ಅದು ಇಲ್ಲವೆಂದೇ ತಿಳಿಯಬೇಕು.[4]

ಹೀಗೆಂದು ಒದಗಿದ (ಆಕ್ಷೇಪಕ್ಕೆ) ಈ (ಪರಿಹಾರವನ್ನು) ಹೇಳಿರುತ್ತದೆ :

ನೈವ ವಾಚಾ ನ ಮನಸಾ ಪ್ರಾಪ್ತುಂ ಶಕ್ಯೋ ನ ಚಕ್ಷುಷಾ ।
ಅಸ್ತೀತಿ ಬ್ರುವತೋಽನ್ಯತ್ರ ಕಥಂ ತದುಪಲಭ್ಯತೇ ॥೧೨॥

೧೨. ಮಾತಿನಿಂದಲಾಗಲಿ ಮನಸ್ಸಿನಿಂದಲಾಗಲಿ ಕಣ್ಣಿನಿಂದಲಾಗಲಿ ಹೊಂದುವದಕ್ಕೆ ಆಗುವವನಲ್ಲ. 'ಇದಾನೆ' ಎಂದು ಹೇಳುವವನನ್ನು ಬಿಟ್ಟು ಬೇರೆ ಯಾಗಿ ಅದು ಹೇಗೆ ಕಂಡುಬಂದೀತು ?

(ಭಾಷ್ಯ)

೧೭೮. ಸತ್ಯಮ್ । ನೈವ ವಾಚಾ ನ ಮನಸಾ ನ ಚಕ್ಷುಷಾ ನಾನ್ಯೈರಪಿ ಇನ್ದ್ರಿಯೈಃ ಪ್ರಾಪ್ತುಂ ಶಕ್ಯತೇ ಇತ್ಯರ್ಥಃ । ತಥಾಪಿ ಸರ್ವವಿಶೇಷರಹಿತೋಽಪಿ

---

1. ಕರಣವಿಲ್ಲದಾಗ ಏತರಿಂದ ನೋಡಬೇಕು ? ಎಂದು ಭಾವ.

2. ಪ್ರಮಾಣಗೋಚರವಾದದ್ದೇ ಸತ್ಯವೆಂಬ ಅಭಿಪ್ರಾಯದಿಂದ ಹೊರಟಿರುವ ಶಂಕೆಯಿದು. ಕೇ. ಭಾ. ೧-೩, ೩-೧ ; ತೈ. ಭಾ. ೨-೬. 3. ಯೋಗವೆಂದರೆ ಬುದ್ಧ್ಯಾದಿ ಗಳು ಯಾವವೂ ಕೆಲಸಮಾಡದಂತೆ ಮಾಡುವ ಸಾಧನವು ; ಬುದ್ಧ್ಯಾದಿಗಳು ಕೆಲಸಮಾಡದಿರು ವಾಗ ತಿಳಿಯುವದಾದರೂ ಏನಿರುತ್ತದೆ ?- ಎಂದು ಭಾವ.

4. ದೃಶ್ಯವಾದದ್ದು ಇದೆ ; ಆದರೆ ಬ್ರಹ್ಮವು ದೃಶ್ಯವಲ್ಲವಲ್ಲ !- ಎಂದು ಆಕ್ಷೇಪ. ಚಾರ್ವಾಕರೂ ಶೂನ್ಯವಾದಿಗಳೂ ಮಾಡುವ ಆಕ್ಷೇಪವಿದು. ವಿಜ್ಞಾನವಾದಿಗಳು ಹೇಳುವ ವಿಜ್ಞಾನವು ತನಗೆ ತಾನೇ ವಿಷಯವಾಗಿರುವದರಿಂದ ಅವರೂ ಈ ಆಕ್ಷೇಪವನ್ನು ಮಾಡ ಬಹುದು. ಆತ್ಮನು ಜ್ಞಾನಕ್ಕೆ ವಿಷಯನೆಂಬ ಆಸ್ತಿಕದರ್ಶನದವರೂ ಈ ಆಕ್ಷೇಪದಲ್ಲಿ ಸೇರುವರು.

ಜಗತೋ ಮೂಲಮ್ ಇತ್ಯವಗತತ್ವಾತ್, ಅಸ್ಯೈವ ಕಾರ್ಯಪ್ರವಿಲಾಪನಸ್ಯ ಅಸ್ತಿತ್ವನಿಷ್ಠತ್ವಾತ್, ತಥಾ ಹಿ ಇದಂ ಕಾರ್ಯಂ ಸೂಕ್ಷ್ಮತಾರತಮ್ಯಪಾರಮ್ಪರ್ಯೇಣ ಅನುಗಮ್ಯಮಾನಂ ಸದ್ಬುದ್ಧಿನಿಷ್ಠಾಮೇವ ಅವಗಮಯತಿ । ಯದಾಪಿ ವಿಷಯಪ್ರವಿಲಾಪನೇನ ಪ್ರವಿಲಾಪ್ಯಮಾನಾ ಬುದ್ಧಿಃ ತದಾಪಿ ಸಾ ಸತ್ಪ್ರತ್ಯಯಗರ್ಭೈವ ವಿಲೀಯತೇ । ಬುದ್ಧಿರ್ಹಿ ನಃ ಪ್ರಮಾಣಂ ಸದಸತೋರ್ಯಾಥಾತ್ಮ್ಯಾವಗಮೇ । ಮೂಲಂ ಚೇಜ್ಜಗತೋ ನ ಸ್ಯಾತ್, ಅಸದನ್ವಿತಮೇವೇದಂ ಕಾರ್ಯಮ್ 'ಅಸತ್' ಇತ್ಯೇವ ಗೃಹ್ಯೇತ । ನ ತ್ವೇತದಸ್ತಿ । 'ಸತ್' 'ಸತ್' ಇತ್ಯೇವ ತು ಗೃಹ್ಯತೇ । ಯಥಾ ಮೃದಾದಿಕಾರ್ಯಂ ಘಟಾದಿ ಮೃದಾದ್ಯನ್ವಿತಮ್ । ತಸ್ಮಾತ್ ಜಗತೋ ಮೂಲಮ್ ಆತ್ಮಾ "ಅಸ್ತಿ" ಇತ್ಯೇವೋಪಲಬ್ಧವ್ಯಃ । ಕಸ್ಮಾತ್ ? 'ಅಸ್ತಿ' ಇತಿ ಬ್ರುವತಃ ಅಸ್ತಿತ್ವವಾದಿನಃ ಆಗಮಾರ್ಥಾನುಸಾರಿಣಃ ಶ್ರದ್ದಧಾನಾತ್ ಅನ್ಯತ್ರ ನಾಸ್ತಿಕವಾದಿನಿ 'ನಾಸ್ತಿ ಜಗತೋ ಮೂಲಮ್ ಆತ್ಮಾ, ನಿರನ್ವಯಮೇವೇದಂ ಕಾರ್ಯಮ್ ಅಭಾವಾನ್ತಂ ಪ್ರವಿಲೀಯತೇ' ಇತಿ ಮನ್ಯಮಾನೇ ವಿಪರೀತದರ್ಶಿನಿ ಕಥಂ ತದ್ಬ್ರಹ್ಮ ತತ್ತ್ವತ ಉಪಲಭ್ಯತೇ ? ನ ಕಥಂಚನೋಪಲಭ್ಯತೇ ಇತ್ಯರ್ಥಃ ॥

(ಭಾಷ್ಯಾರ್ಥ)

ನಿಜ, ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಚಕ್ಷುಸ್ಸಿನಿಂದಾಗಲಿ ಮಿಕ್ಕ ಇಂದ್ರಿಯಗಳಿಂದಾಗಲಿ[1] (ಇದನ್ನು) ಪಡೆಯುವದಕ್ಕೆ ಆಗುವದಿಲ್ಲ ಎಂದರ್ಥ[2], ಹೀಗೆ ಯಾವ ವಿಶೇಷವೂ ಇಲ್ಲದಿದ್ದರೂ ಜಗತ್ತಿಗೆ ಕಾರಣವೆಂದು ಗೊತ್ತಾಗಿರುವದರಿಂದ ಇದ್ದೇ ಇರುವದು. ಏಕೆಂದರೆ ಕಾರ್ಯವು ನಷ್ಟವಾಯಿತೆಂದು (ಕಲ್ಪಿಸುವಾಗ) ಇದೆ ಎಂಬ ಧರ್ಮದಲ್ಲಿಯೇ ಕೊನೆಗಾಣುವದು. ಹೇಗೆಂದರೆ ; ಈ ಕಾರ್ಯವು ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವ ಪರಂಪರೆಯಿಂದ[3] ಅನುಗತವಾಗಿ[4] ಸದ್ಬುದ್ಧಿಯಲ್ಲಿಯೇ ನಿಲುಗಡೆಯಾಗಿದೆ ಎಂದು ನಿಶ್ಚಯವನ್ನುಂಟುಮಾಡುತ್ತಿರುವದು.[5] (ಇನ್ನು) ವಿಷಯವನ್ನು ಲಯಗೊಳಿಸಿ ಬುದ್ಧಿಯು ತಾನೂ ಲಯವಾದಾಗಲೂ ಆ

1. ವಾಕ್ಕು, ಮನಸ್ಸು - ಎಂದು ಹೇಳಿರುವದು ಎಲ್ಲಾ ಇಂದ್ರಿಯಗಳಿಗೂ ಉಪಲಕ್ಷಣವು.

2. 'ಇತ್ಯರ್ಥ' ಎಂಬ ಮಾತು ಭಾಷ್ಯದಲ್ಲಿಲ್ಲದಿದ್ದರೂ ಸಾಗುತ್ತದೆ.

3. ಕಾರ್ಯವಾದ ಜಗತ್ತು, ಭೂತಗಳು, ತನ್ಮಾತ್ರೆಗಳು - ಮುಂತಾದ ಸೂಕ್ಷ್ಮಪರಂಪರೆಯಿಂದಲೂ ಕೂಡಿಕೊಂಡಿರುತ್ತದೆ.

4. ಸೂಕ್ಷ್ಮವಾದದ್ದು ಸ್ಥೂಲವಾದದ್ದನ್ನು ಹಿಂಬಾಲಿಸಿಕೊಂಡೇ ಇರುತ್ತದೆ.

5. ಯಾವ ಸೂಕ್ಷ್ಮವಾದ ಕಾರಣವನ್ನು ನೋಡಿದರೂ ಅದು 'ಇದೆ' ಎಂದೇ ತೋರುತ್ತಿರುವದರಿಂದ ಕೊನೆಗೆ ಇದು ಇರವಿನಲ್ಲಿಯೇ ನಿಲುಗಡೆಯಾಗಬೇಕೆಂದು ನಿಶ್ಚಯಿಸಬಹುದಾಗಿದೆ.

ಬುದ್ಧಿಯು ಇದೆ ಎಂಬ ಅರಿವನ್ನೊಳಗೊಂಡೇ ಲಯವಾಗುತ್ತದೆ.[1] **ಸತ್ತು, ಅಸತ್ತು ಎಂಬಿವೆರಡರ ನಿಜವನ್ನು ನಿಶ್ಚಯಿಸುವದಕ್ಕೆ ಬುದ್ಧಿಯೇ ಅಲ್ಲವೆ, ನಮಗೆ ಪ್ರಮಾಣವಾಗಿರುವದು ?** ಜಗತ್ತಿಗೆ ಕಾರಣವೇ ಇಲ್ಲದಿದ್ದರೆ ಈ ಕಾರ್ಯವು ಅಸತ್ತಿನಿಂದಲೇ ಅನುಗತವಾಗಿ 'ಇಲ್ಲ' ಎಂದೇ ತಿಳಿಯಬೇಕಾಗಿತ್ತು[2]. ಆದರೆ ಹಾಗಿರುವದಿಲ್ಲ 'ಇದೆ', 'ಇದೆ' ಎಂದೇ ತಿಳಿಯಬರುತ್ತದೆ.[3] ಮಣ್ಣು ಮುಂತಾದವುಗಳ ಕಾರ್ಯವಾದ ಗಡಿಗೆಯೇ ಮುಂತಾದದ್ದು ಮಣ್ಣಿನಿಂದಲೇ ಕೂಡಿಕೊಂಡು ಇರುವಂತೆ (ಇದು ಸತ್ತಿನ ಕಾರ್ಯವಾದ್ದರಿಂದ 'ಇದೆ' ಎಂದೇ ತೋರುತ್ತಿದೆ). ಆದ್ದರಿಂದ ಜಗತ್ತಿಗೆ ಮೂಲವಾದ ಆತ್ಮನು ಇದಾನೆಂದೇ ತಿಳಿಯಬೇಕು. ಏಕೆ ? ಎಂದರೆ ಇದಾನೆ ಎಂದು ಹೇಳುವದನ್ನು ಎಂದರೆ **ಆಗಮದ**[4] ಅರ್ಥವನ್ನು ಅನುಸರಿಸುವ ಶ್ರದ್ಧೆಯುಳ್ಳ ಆಸ್ತಿಕನನ್ನು ಬಿಟ್ಟು ಬೇರೆಯಾಗಿ ಎಂದರೆ ನಾಸ್ತಿಕವಾದಿಯಲ್ಲಿ ''ಜಗತ್ತಿಗೆ ಮೂಲನಾದ ಆತ್ಮನಿಲ್ಲ, ಈ ಕಾರ್ಯವು[5] ಯಾವದರಿಂದಲೂ ಅನುಗತವಾಗಿರುವದಿಲ್ಲ, ಅದು ಅಭಾವವನ್ನೇ ಕೊನೆಗೆ ಉಳಿಸಿ ಲಯವಾಗುತ್ತದೆ'' ಎಂದು ಭಾವಿಸಿರುವ ವಿರುದ್ಧದರ್ಶಿಯಾದವನಲ್ಲಿ ಆ ಬ್ರಹ್ಮವು ಹೇಗೆ ಇದ್ದದ್ದು ಇದ್ದಂತೆ ಕಂಡುಬಂದೀತು ? ಹೇಗೂ ಕಂಡುಬರುವದಿಲ್ಲ ಎಂದರ್ಥ.[6]

**ಅಸ್ತೀತ್ಯೇವೋಪಲಬ್ಧವ್ಯಸ್ತತ್ತ್ವಭಾವೇನ ಚೋಭಯೋಃ**
**ಅಸ್ತೀತ್ಯೇವೋಪಲಬ್ಧಸ್ಯ ತತ್ತ್ವಭಾವಃ ಪ್ರಸೀದತಿ ॥೧೩॥**

1. ಬುದ್ಧಿಗೆ ವಿಷಯವಾದದ್ದೆಲ್ಲವೂ ಅಸತ್ತೇ, ಕನಸಿನ ವಸ್ತುಗಳು ಇದಕ್ಕೆ ಉದಾಹರಣೆ ಎಂದು ವಿಷಯವನ್ನು ಅಲ್ಲಗಳೆಯುವಾಗ ಬುದ್ಧಿಯೂ ಅಸತ್ತಾಗುವದಲ್ಲ !- ಎಂದು ಶಂಕಿಸಬಾರದು ; ಏಕೆಂದರೆ ಅಸತ್ತು ಇದು ಎಂಬ ಬುದ್ಧಿಯಾದರೂ ಕೊನೆಗೆ ಇರಬೇಕಾಗುವದು. ಬೃ. ಭಾ. ೧-೨-೧.

2. ಛಾಂ. ಭಾ. ೬-೨-೨, ಸೂ. ಭಾ. ೨-೨-೨೬.

3. ಸತ್ತಿನಿಂದ ಬಂದಿರುವ ಜಗತ್ತಿನಲ್ಲಿ 'ಸತ್' ಎಂಬ ಬುದ್ಧಿಯು ಕಾಣುವದು ಯುಕ್ತವಾಗಿದೆ ಎಂದು ಭಾವ.

4. ಶಾಸ್ತ್ರದ, ವೇದದ. ವೇದದಲ್ಲಿ ಜಗತ್ತಿಗೆ ಜನ್ಮಕಾರಣನಾದ ಆತ್ಮನು ಇದಾನೆಂದು ಹೇಳಿದೆ ಎಂದು ನಂಬುವ ಆಸ್ತಿಕನು ಮುಂದೆ ಆತ್ಮನ ತತ್ತ್ವವನ್ನು ಕಾಣುವನು ಎಂದು ಭಾವ. ಮಾಂ. ಕಾ. ಭಾ. ೪-೪೨.

5. 'ಇದೆ' ಎಂಬ ಅರಿವಿನಿಂದೊಡಗೂಡಿ ನಾಶವಾಗುತ್ತದೆ ಎಂಬ ನಾಸ್ತಿಕವಾದವು ಸಾನ್ವಯನಾಶವನ್ನು ಹೇಳುವದು. ವಸ್ತುವು ನಾಶವಾದರೆ ಅಭಾವವೇ ಉಳಿಯುವದು ಎಂಬ ಬೌದ್ಧರ ವಾದವು ನಿರನ್ವಯನಾಶವನ್ನು ಹೇಳುವದು.

6. ಅಸದ್ವಾದಿಗೆ ಬ್ರಹ್ಮದ ಅರಿವು ಆಗುವ ಸಂಭವವೇ ಇಲ್ಲ.

೧೩. 'ಇದಾನೆ' ಎಂದೇ ತಿಳಿಯಬೇಕು, ತತ್ತ್ವಭಾವದಿಂದಲೂ (ತಿಳಿಯಬೇಕು). ಇವೆರಡರಲ್ಲಿ ಇದಾನೆ ಎಂದೇ ತಿಳಿಯಲ್ಪಟ್ಟವನ ತತ್ತ್ವಭಾವವು ಪ್ರಸನ್ನವಾಗುವದು.

(ಭಾಷ್ಯ)

೧೭೯. ತಸ್ಮಾತ್ ಅಪೋಹ್ಯ ಅಸದ್ವಾದಿಪಕ್ಷಮಾಸುರಮ್ 'ಅಸ್ತಿ' ಇತ್ಯೇವ ಆತ್ಮಾ ಉಪಲಬ್ಧವ್ಯಃ, ಸತ್ಕಾರ್ಯಬುದ್ಧ್ಯಾದ್ಯುಪಾಧಿಃ । ಯದಾ ತು ತದ್ರಹಿತೋಽವಿಕ್ರಿಯ ಆತ್ಮಾ, ಕಾರ್ಯಂ ಚ ಕಾರಣವ್ಯತಿರೇಕೇಣ ನಾಸ್ತಿ 'ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' (ಛಾಂ. ೬-೧-೪) ಇತಿ ಶ್ರುತೇಃ, ತದಾ ಅಸ್ಯ ನಿರುಪಾಧಿಕಸ್ಯ, ಅಲಿಙ್ಗಸ್ಯ, ಸದಸದಾದಿಪ್ರತ್ಯಯವಿಷಯತ್ವವರ್ಜಿತಸ್ಯ ಆತ್ಮನಃ ತತ್ತ್ವಭಾವಃ ಭವತಿ । ತೇನ ಚ ರೂಪೇಣ ಆತ್ಮಾ ಉಪಲಬ್ಧವ್ಯಃ ಇತ್ಯನುವರ್ತತೇ ॥

(ಭಾಷ್ಯಾರ್ಥ)

ಆದ್ದರಿಂದ ಅಸದ್ವಾದಿಗಳ ಆಸುರಪಕ್ಷವನ್ನು[1] ಬಿಟ್ಟು ಸತ್ಕಾರ್ಯವಾದ[2] ಬುದ್ಧಿಯೇ ಮುಂತಾದ ಉಪಾಧಿಗಳಿಂದೊಡಗೂಡಿದ ಆತ್ಮನು ಇದಾನೆಂದೇ ತಿಳಿಯಬೇಕು. ಆದರೆ ಯಾವಾಗ ಈ ಉಪಾಧಿಗಳಿಲ್ಲದೆ ಇರುವದರಿಂದ ಆತ್ಮನು ಅವಿಕ್ರಿಯನೆಂದೂ (ಗಡಿಗೆ ಮುಂತಾದ) 'ವಿಕಾರವೆಂಬುದು ಮಾತುಗಳಿಂದ ಉಂಟಾದ ಬರಿಯ ಹೆಸರು, ಮಣ್ಣೆಂಬುದೇ ಸತ್ಯವು' (ಛಾಂ. ೬-೧-೪) ಎಂಬ ಪ್ರಮಾಣದಿಂದ ಕಾರ್ಯವು ಕಾರಣಕ್ಕಿಂತ ಬೇರೆಯಾಗಿಲ್ಲವೆಂದೂ ಆಗುವದೋ ಆಗ ಯಾವ ಉಪಾಧಿಗಳೂ ಇಲ್ಲದ, ಅಲಿಂಗನಾದ,[3] 'ಇದೆ', 'ಇಲ್ಲ'- ಮುಂತಾದ ಯಾವ ಪ್ರತ್ಯಯಕ್ಕೂ ವಿಷಯನಾಗದೆ ಇರುವ ಈ ಆತ್ಮನ ತತ್ತ್ವಭಾವವು ಇರುವದು.[4] ಆ ರೂಪದಿಂದಲೂ ಆತ್ಮನನ್ನು 'ತಿಳಿಯಬೇಕು' ಎಂದು ಸೇರಿಸಿಕೊಳ್ಳಬೇಕು.

(ಭಾಷ್ಯ)

೧೮೦. ತತ್ರಾಪಿ ಉಭಯೋಃ ಸೋಪಾಧಿಕನಿರುಪಾಧಿಕಯೋಃ ಅಸ್ತಿತ್ವತತ್ತ್ವಭಾವಯೋಃ । ನಿರ್ಧಾರಣಾರ್ಥಾ ಷಷ್ಠೀ । ಪೂರ್ವಮ್ 'ಅಸ್ತಿ' ಇತ್ಯೇವೋಪ

1. ಗೀ. ೧೬-೫. 2. ಬುದ್ಧಿಯೇ ಮುಂತಾದವುಗಳಲ್ಲಿ 'ಇದೆ'-ಎಂದು ತೋರುವದು ಆತ್ಮನ ಅಸ್ತಿಭಾವ.

3. ಯಾವದಾದರೊಂದು ಗುರುತಿನಿಂದಲೂ ಅರಿಯುವದಕ್ಕೆ ಬಾರದ.

4. ಯಾವ ಉಪಾಧಿಗಳೂ ಇಲ್ಲದಿರುವ ತನ್ನ ರೂಪದಿಂದ ಸುಷುಪ್ತಿ, ಸಮಾಧಿ ಮುಂತಾದ ಅವಸ್ಥೆಗಳಲ್ಲಿ ಆತ್ಮನು ತೋರುತ್ತಿರುವನು. ಅದೇ ಅವನ ತತ್ತ್ವಭಾವವೆಂದು ತಿಳಿಯಬೇಕು.

ಲಬ್ಧಸ್ಯ ಆತ್ಮನಃ । ಸತ್ಕಾರ್ಯೋಪಾಧಿಕೃತಾಸ್ತಿತ್ವಪ್ರತ್ಯಯೇನೋಪಲಬ್ಧಸ್ಯ ಇತ್ಯರ್ಥಃ । ಪಶ್ಚಾತ್ ಪ್ರತ್ಯಸ್ತಮಿತಸರ್ವೋಪಾಧಿರೂಪಃ ಆತ್ಮನಃ ತತ್ತ್ವಭಾವಃ ವಿದಿತಾವಿದಿತಾಭ್ಯಾಮನ್ಯಃ, ಅದ್ವಯಸ್ವಭಾವಃ, 'ನೇತಿ ನೇತಿ' (ಬೃ.೨-೩-೬), 'ಅಸ್ಥೂಲಮನಣ್ವಹ್ರಸ್ವಮ್' (ಬೃ.೩-೮-೮), ಅದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇ' (ತೈ. ೨-೭)- ಇತ್ಯಾದಿಶ್ರುತಿನಿರ್ದಿಷ್ಟಃ ಪ್ರಸೀದತಿ ಅಭಿಮುಖೀಭವತಿ ಆತ್ಮಪ್ರಕಾಶನಾಯ, ಪೂರ್ವಮ್ 'ಅಸ್ತಿ' ಇತ್ಯುಪಲಬ್ಧವತಃ ಇತ್ಯೇತತ್ ॥

(ಭಾಷ್ಯಾರ್ಥ)

ಅದರಲ್ಲಿಯೂ ಉಪಾಧಿಗಳಿಂದ ಕೂಡಿದ ಅಸ್ತಿಭಾವ, ಉಪಾಧಿಗಳಿಲ್ಲದ ತತ್ತ್ವಭಾವ ಈ ಎರಡರಲ್ಲಿ - ಉಭಯೋಃ ಎಂಬ ಷಷ್ಠಿಯು (ಎರಡರೊಳಗೆ ಇಂಥದ್ದೆಂದು) ಗೊತ್ತುಮಾಡುವದಕ್ಕಾಗಿ ಬಂದಿರುತ್ತದೆ. ಮೊದಲು 'ಇದಾನೆ' ಎಂದು ತಿಳಿಯಲ್ಪಟ್ಟವನ, ಸತ್ಕಾರ್ಯವಾದ ಉಪಾಧಿಗಳಿಂದಾಗಿರುವ ಇರುವನೆಂಬ ಪ್ರತ್ಯಯದಿಂದ ತಿಳಿಯಲ್ಪಟ್ಟ ಆತ್ಮನ[1] ಎಂದರ್ಥ. ಆಮೇಲೆ ಯಾವ ಉಪಾಧಿಗಳೂ ಇಲ್ಲವಾದ ಆತ್ಮನ ತತ್ತ್ವಭಾವವು, ತಿಳಿಯತಕ್ಕದ್ದು, ತಿಳಿಯುವದಕ್ಕೆ ಬಾರದೆ ಇರುವದು - ಇವುಗಳಿಗಿಂತ ಬೇರೆಯಾದ,[2] ಅದ್ವಯಸ್ವಭಾವವಾದ 'ಇದಲ್ಲ, ಇದಲ್ಲ' (ಬೃ.೨-೩-೬), 'ಸ್ಥೂಲವಲ್ಲ, ಅಣುವಲ್ಲ, ಹ್ರಸ್ವವಲ್ಲ' (ಬೃ.೩-೮-೮), 'ಅದೃಶ್ಯವಾದ, ಅನಾತ್ಮವಾದ, ಅನಿರುಕ್ತವಾದ, ಅನಿಲಯವಾದ' (ತೈ.೨-೭)- ಮುಂತಾದ ಶ್ರುತಿಗಳಿಂದ ತಿಳಿಸಿರುವದಾದ (ಆತ್ಮನ ತತ್ತ್ವಭಾವವು) ಪ್ರಸನ್ನವಾಗುವದು, ತಾನೇ ತೋರಿಕೊಳ್ಳುವದಕ್ಕೆ ಅಭಿಮುಖವಾಗುವದು. ಮೊದಲು ಇದಾನೆ ಎಂದು ತಿಳಿದುಕೊಂಡವನಿಗೆ (ಈ ಭಾವವು ಪ್ರಸನ್ನವಾಗುವದು) ಎಂದರ್ಥ.

ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ ।
ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ ॥೧೪॥

೧೪. ಯಾವಾಗ ಈತನ ಹೃದಯದಲ್ಲಿ ಆಶ್ರಯಿಸಿಕೊಂಡಿದ್ದ ಕಾಮಗಳು ಬಿಡುಗಡೆಯಾಗುವವೋ ಆಗ ಮರ್ತ್ಯನಾಗಿದ್ದವನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ.

1. ಸತ್ತೆಂದರೆ ಬ್ರಹ್ಮವು, ಅದರಿಂದುಂಟಾಗುವ ಬುದ್ಧಿಯೇ ಮುಂತಾದ ಉಪಾಧಿಗಳಿಂದ ಕೂಡಿದ ರೂಪವು 'ಇದಾನೆ' ಎಂದೇ ತಿಳಿದುಬರುತ್ತದೆ.

2. ಕೇ. ೧-೪. ಸೋಪಾಧಿಕವಾದ ಅಸ್ತಿಭಾವವು ಅರಿವಿಗೆ ವಿಷಯ, ನಿರುಪಾಧಿಕವಾದ ತತ್ತ್ವಭಾವವು ಅನುಭವೈಕಗಮ್ಯ.

(ಭಾಷ್ಯ)

೧೮೧. ಏವಂ ಪರಮಾರ್ಥಾತ್ಮದರ್ಶಿನೋ ಯದಾ ಯಸ್ಮಿನ್ ಕಾಲೇ ಸರ್ವೇ ಕಾಮಾಃ ಕಾಮಯಿತವ್ಯಸ್ಯ ಅನ್ಯಸ್ಯ ಅಭಾವಾತ್ ಪ್ರಮುಚ್ಯನ್ತೇ ವಿಶೀರ್ಯನ್ತೇ ಯೇ ಅಸ್ಯ ಪ್ರಾಕ್ ಪ್ರತಿಬೋಧಾತ್ ವಿದುಷೋ ಹೃದಿ ಬುದ್ಧೌ ಶ್ರಿತಾಃ ಆಶ್ರಿತಾಃ । ಬುದ್ಧಿರ್ಹಿ ಕಾಮಾನಾಮ್ ಆಶ್ರಯಃ ನಾತ್ಮಾ । 'ಕಾಮಃ ಸಙ್ಕಲ್ಪಃ' (ಬೃ.೧-೫-೩) ಇತ್ಯಾದಿಶ್ರುತ್ಯನ್ತ ರಾಚ್ಚ । ಅಥ ತದಾ ಮರ್ತ್ಯಃ ಪ್ರಾಕ್ ಪ್ರಬೋಧಾದಾಸೀತ್ ಸಃ ಪ್ರಬೋಧೋತ್ತರ ಕಾಲಮ್ ಅವಿದ್ಯಾಕಾಮಕರ್ಮಲಕ್ಷಣಸ್ಯ ಮೃತ್ಯೋರ್ವಿನಾಶಾತ್ ಅಮೃತೋ ಭವತಿ । ಗಮನಪ್ರಯೋಜಕಸ್ಯ ಮೃತ್ಯೋರ್ವಿನಾಶಾದ್ಗಮನಾನುಪಪತ್ತೇಃ । ಇಹೈವ ಪ್ರದೀಪನಿರ್ವಾಣವತ್ ಸರ್ವಬನ್ಧನೋಪಶಮನಾತ್ ಬ್ರಹ್ಮ ಸಮಶ್ನುತೇ । ಬ್ರಹ್ಮೈವ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಹೀಗೆ ಪರಮಾರ್ಥವಾದ ಆತ್ಮನನ್ನು[1] ಕಂಡುಕೊಂಡ ಈ ಜ್ಞಾನಿಗೆ ಜ್ಞಾನವಾಗುವದಕ್ಕೆ ಮೊದಲು ಹೃದಯವನ್ನು ಎಂದರೆ ಬುದ್ಧಿಯನ್ನು ಆಶ್ರಯಿಸಿ ಕೊಂಡಿದ್ದ ಕಾಮಗಳೆಲ್ಲ - ಬುದ್ಧಿಯೇ ಕಾಮಗಳಿಗೆ ಆಶ್ರಯವಲ್ಲದೆ ಆತ್ಮನಲ್ಲ ;[2] 'ಕಾಮ, ಸಂಕಲ್ಪ (ಮುಂತಾದದ್ದೆಲ್ಲ ಬುದ್ಧಿಯೇ)' (ಬೃ. ೧-೫-೩) ಎಂಬ ಬೇರೆಯ ಶ್ರುತಿಯೂ ಇದಕ್ಕೆ ಪ್ರಮಾಣವು. (ಈ ಕಾಮಗಳು) - ಯಾವಾಗ ಬಯಸತಕ್ಕ ಮತ್ತೊಂದು ಪದಾರ್ಥವೇ ಇಲ್ಲದ್ದರಿಂದ[3] ಬಿಡುಗಡೆಯಾಗುವವೋ ಎಂದರೆ ನಾಶವಾಗಿಬಿಡುವವೋ ಆಗ ಜ್ಞಾನಕ್ಕಿಂತ ಮೊದಲು ಮರ್ತ್ಯನಾಗಿದ್ದನಲ್ಲ, ಅವನು ಜ್ಞಾನವುಂಟಾದ ಬಳಿಕ ಅವಿದ್ಯೆ, ಕಾಮ, ಕರ್ಮ- ಎಂಬ ಮೃತ್ಯುವು ನಾಶವಾದದ್ದ ರಿಂದ ಅಮೃತನಾಗುವನು. (ದೇಹವನ್ನು ಬಿಟ್ಟು) ಹೊರಟುಹೋಗುವದಕ್ಕೆ ಕಾರಣ ವಾದ ಮೃತ್ಯುವೇ ನಾಶವಾಗಿರುವದರಿಂದ (ದೇಹವನ್ನು) ಬಿಟ್ಟುಹೋಗುವ ದೆಂಬುದು ಇವನಿಗೆ ಹೊಂದುವದಿಲ್ಲ.[4] ಇಲ್ಲಿಯೇ ದೀಪವು ಆರಿಹೋದಂತೆ[5] ಎಲ್ಲಾ

---

1. ತತ್ತ್ವಭಾವವನ್ನು, ಆತ್ಮನ ನಿರುಪಾಧಿಕರೂಪವನ್ನು. 2. ಬೃ. ೪-೩-೨೨, ೪-೪-೭ರ ಭಾಷ್ಯವನ್ನು ನೋಡಿರಿ. ಕಾಮವು ಆತ್ಮನ ಧರ್ಮವೆಂಬ ವೈಶೇಷಿಕರ ಮತ್ತು ಕೆಲವರು ವೇದಾಂತಿಗಳ ವಾದವನ್ನು ಇಲ್ಲಿ ತಿರಸ್ಕರಿಸಿದೆ. 3. ಅವಿದ್ಯೆಯಿಂದ ಕಾಮಗಳು ತೋರುವವು ; ಅವು ಜ್ಞಾನದಿಂದ ಅವಿದ್ಯೆಯು ನಾಶವಾದಾಗ ಇರುವದಿಲ್ಲ. ಬೃ. ಭಾ. ೪-೩-೨೧. 4. ಬ್ರಹ್ಮವನ್ನು ಪಡೆಯುವದಕ್ಕೆ ಹೋಗಬೇಕಾದದ್ದಿಲ್ಲ, ಸೂ. ಭಾ. ೪-೩-೧೪, ಅಕಾಮಿಯಾದ ಜ್ಞಾನಿಗೆ ಗತಿಯಾಗಲಿ ಉತ್ಕ್ರಾಂತಿಯಾಗಲಿ ಇಲ್ಲ ಬೃ. ಭಾ. ೪-೪-೬, ಸೂ. ಭಾ. ೪-೨-೧೨, ೧೩, ೧೪. 5. ವ್ಯಕ್ತವಾಗಿದ್ದ ದೀಪವು ಅವ್ಯಕ್ತವಾದ ತೇಜಸ್ಸಿನಲ್ಲಿ ಸೇರಿ ಹೋಗುವಂತೆ ಮುಂ. ಭಾ.೩-೨-೬, ಬೃ. ೩-೩ರ ಸಂಬಂಧಭಾಷ್ಯ.

ಬಂಧಗಳೂ ನಾಶವಾಗಿಬಿಡುವದರಿಂದ, ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ, ಎಂದರೆ ಬ್ರಹ್ಮವೇ ಆಗುತ್ತಾನೆ ಎಂದರ್ಥ.

ಯದಾ ಸರ್ವೇ ಪ್ರಭಿದ್ಯನ್ತೇ ಹೃದಯಸ್ಯೇಹ ಗ್ರನ್ಥಯಃ ।
ಅಥ ಮರ್ತ್ಯೋಽಮೃತೋ ಭವತ್ಯೇತಾವದ್ಧ್ಯನುಶಾಸನಮ್ ॥ ೧೫ ॥

೧೫. ಯಾವಾಗ ಹೃದಯದ ಗ್ರಂಥಿಗಳೆಲ್ಲ ಇಲ್ಲಿಯೇ ಭಿನ್ನವಾಗುವವೋ ಆಗ ಮರ್ತ್ಯನು ಅಮೃತನಾಗುವನು. ಇಷ್ಟೇ ಅನುಶಾಸನವು.

(ಭಾಷ್ಯ)

೧೮೨. ಕದಾ ಪುನಃ ಕಾಮಾನಾಂ ಮೂಲತೋ ವಿನಾಶ ಇತಿ ? ಉಚ್ಯತೇ- ಯದಾ ಸರ್ವೇ ಪ್ರಭಿದ್ಯನ್ತೇ ಭೇದಮ್ ಉಪಯಾನ್ತಿ ವಿನಶ್ಯನ್ತಿ ಹೃದಯಸ್ಯ ಬುದ್ಧೇಃ ಇಹ ಜೀವತ ಏವ ಗ್ರನ್ಥಯೋ ಗ್ರನ್ಥಿವದ್ ದೃಢಬನ್ಧನರೂಪಾ ಅವಿದ್ಯಾಪ್ರತ್ಯಯಾಃ ಇತ್ಯರ್ಥಃ । 'ಅಹಮಿದಂ ಶರೀರಮ್', 'ಮಮೇದಂ ಧನಮ್', 'ಸುಖೀ ದುಃಖೀ ಚಾಹಮ್' ಇತ್ಯೇವಮಾದಿಲಕ್ಷಣಾಃ ತದ್ವಿಪರೀತಾತ್ ಬ್ರಹ್ಮಾತ್ಮಪ್ರತ್ಯಯೋಪಜನನಾತ್ 'ಬ್ರಹ್ಮೈವಾಹಮಸ್ಮಿ ಅಸಂಸಾರೀ' ಇತಿ ವಿನಷ್ಟೇಷು ಅವಿದ್ಯಾಗ್ರನ್ಥಿಷು ತನ್ನಿಮಿತ್ತಾಃ ಕಾಮಾ ಮೂಲತೋ ವಿನಶ್ಯನ್ತಿ । ಅಥ ಮರ್ತ್ಯೋ ಅಮೃತೋ ಭವತಿ । ಏತಾವದ್ ಹಿ ಏತಾವದೇವ ಏತಾವನ್ಮಾತ್ರಂ ನಾಧಿಕಮಸ್ತೀತ್ಯಾಶಙ್ಕಾ ಕರ್ತವ್ಯಾ । ಅನುಶಾಸನಮ್ ಅನುಶಿಷ್ಟಿಃ ಉಪದೇಶಃ ಸರ್ವವೇದಾನ್ತಾನಾಮ್ ಇತಿ ವಾಕ್ಯಶೇಷಃ ॥

(ಭಾಷ್ಯಾರ್ಥ)

ಹಾಗಾದರೆ ಕಾಮಗಳು ಬೇರುಸಹಿತ ಯಾವಾಗ ನಾಶವಾಗುವವು ? ಎಂದರೆ ಹೇಳುತ್ತಾನೆ : ಯಾವಾಗ ಹೃದಯದ ಎಂದರೆ ಬುದ್ಧಿಯ ಗ್ರಂಥಿಗಳೆಲ್ಲ, ಗಂಟುಗಳಂತೆ ಗಟ್ಟಿಯಾಗಿ ಕಟ್ಟುಬಿದ್ದಿರುವ ಅವಿದ್ಯೆಯ ಪ್ರತ್ಯಯಗಳೆಲ್ಲ ಎಂದರ್ಥ. 'ನಾನು ಈ ಶರೀರವು', 'ನನ್ನದೀ ಧನವು', 'ನಾನು ಸುಖಿಯು, ದುಃಖಿಯು'- ಎಂದು ಮುಂತಾಗಿರುವ (ಅರಿವುಗಳೆಲ್ಲ) ಇದಕ್ಕೆ ವಿರುದ್ಧವಾಗಿರುವ 'ಅಸಂಸಾರಿಯಾದ ಬ್ರಹ್ಮವೇ ನಾನು' ಎಂಬ ಬ್ರಹ್ಮಾತ್ಮಪ್ರತ್ಯಯವು ಹುಟ್ಟಿ ಅವಿದ್ಯಾಗ್ರಂಥಿಗಳು ಯಾವಾಗ ಭಿನ್ನವಾಗುವವೋ ಎಂದರೆ ಭೇದವನ್ನು ಹೊಂದುವವೋ ನಾಶವಾಗುವವೋ, ಆಗ ಆ (ಗ್ರಂಥಿ)ಗಳಿಂದ ಆಗಿದ್ದ ಕಾಮಗಳು ಬೇರುಸಹಿತವಾಗಿ[1] ನಾಶವಾಗುತ್ತವೆ. ಆಗ ಮರ್ತ್ಯನು ಅಮೃತನಾಗುವನು. ಇಷ್ಟೇ ಅನುಶಾಸನವು. ಇಷ್ಟೇ ಇಷ್ಟುಮಟ್ಟಿಗೇ

1. ಅವಿದ್ಯೆಯೇ, ಆತ್ಮಾನಾತ್ಮಾಧ್ಯಾಸವೇ ಕಾಮಗಳಿಗೆ ಬೇರು. ಮುಂ. ಭಾ. ೨-೨-೮. ಈ ಅವಿದ್ಯೆಯು ಮರೆಯಾದರೆ ಸಾಲದು, ಜ್ಞಾನದಿಂದ ಬಾಧಿತವಾಗಬೇಕು.

ಹೊರತು ಇನ್ನೂ ಹೆಚ್ಚಾಗಿ (ತಿಳಿಯತಕ್ಕದ್ದು) ಇದೆ ಎಂದು ಶಂಕಿಸಬಾರದು. ಅನುಶಾಸನವೆಂದರೆ ತಿಳಿಸಿಕೊಡುವದು, ಉಪದೇಶವು. ''ಎಲ್ಲಾ ವೇದಾಂತಗಳೂ'' (ತಿಳಿಸಿಕೊಡುವದು ಇಷ್ಟೇ)[1] ಎಂದು ಈ ವಾಕ್ಯಕ್ಕೆ ಸೇರಿಸಿಕೊಳ್ಳಬೇಕು.

(ಭಾಷ್ಯ)

೧೮೩. ನಿರಸ್ತಾಶೇಷವಿಶೇಷವ್ಯಾಪಿಬ್ರಹ್ಮಾತ್ಮಪ್ರತಿಪತ್ತ್ಯಾ ಪ್ರಭಿನ್ನಸಮಸ್ತಾವಿದ್ಯಾಗ್ರನ್ಥೇಃ ಜೀವತ ಏವ ಬ್ರಹ್ಮಭೂತಸ್ಯ ವಿದುಷೋ ನ ಗತಿರ್ವಿದ್ಯತೇ ಇತ್ಯುಕ್ತಮ್ 'ಅತ್ರ ಬ್ರಹ್ಮ ಸಮಶ್ನುತೇ' (೨-೩-೧೪) ಇತ್ಯುಕ್ತತ್ವಾತ್, 'ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ' (ಬೃ.೪-೪-೬) ಇತಿ ಶ್ರುತ್ಯನ್ತರಾಚ್ಚ ।ಯೇ ಪುನರ್ಮನ್ದಬ್ರಹ್ಮವಿದೋ ವಿದ್ಯಾನ್ತರಶೀಲಿನಶ್ಚ ಬ್ರಹ್ಮಲೋಕಭಾಜೋ ಯೇ ಚ ತದ್ವಿಪರೀತಾಃ ಸಂಸಾರಭಾಜಃ, ತೇಷಾಮೇಷ ಗತಿವಿಶೇಷ ಉಚ್ಯತೇ ಪ್ರಕೃತೋತ್ಕೃಷ್ಟಬ್ರಹ್ಮವಿದ್ಯಾಫಲಸ್ತುತಯೇ । ಕಿಂ ಚಾನ್ಯತ್ ಅಗ್ನಿವಿದ್ಯಾ ಪೃಷ್ಟಾ ಪ್ರತ್ಯುಕ್ತಾ ಚ । ತಸ್ಯಾಶ್ಚ ಫಲಪ್ರಾಪ್ತಿಪ್ರಕಾರೋ ವಕ್ತವ್ಯಃ ಇತಿ ಮನ್ತ್ರಾರಮ್ಭಃ ॥

(ಭಾಷ್ಯಾರ್ಥ)

ಯಾವ ವಿಶೇಷಗಳೂ ಇಲ್ಲದೆ ವ್ಯಾಪಿಯಾಗಿರುವ ಬ್ರಹ್ಮಾತ್ಮನ ಜ್ಞಾನದಿಂದ ಅವಿದ್ಯೆಯೇ ಮುಂತಾದ ಎಲ್ಲಾ ಗ್ರಂಥಿಗಳನ್ನೂ ಬಿಚ್ಚಿಕೊಂಡು ಬದುಕಿರುವಾಗಲೇ ಬ್ರಹ್ಮವಾಗಿರುವ ಜ್ಞಾನಿಗೆ (ಶರೀರವನ್ನು ಬಿಟ್ಟು) ಹೋಗುವದೆಂಬುದು ಇಲ್ಲ - ಎಂದು ಮೇಲೆ ಹೇಳಿರುತ್ತದೆ. ಏಕೆಂದರೆ 'ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ' (೨-೩-೧೪) ಎಂದು (ಈ ಮೊದಲೇ) ಹೇಳಿರುತ್ತದೆ. 'ಅವನ ಪ್ರಾಣಗಳು (ಶರೀರವನ್ನು ಬಿಟ್ಟು) ಹೋಗುವದಿಲ್ಲ, ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಲಯವಾಗುವನು' (ಬೃ.೪-೪-೬) ಎಂಬ ಬೇರೊಂದು ಶ್ರುತಿಯ ಪ್ರಮಾಣವಿರುವದರಿಂದಲೂ (ಇದೇ ನಿರ್ಣಯವಾಗಿರುತ್ತದೆ).

ಆದರೆ ಯಾರು ಕಡಿಮೆಯ ಬ್ರಹ್ಮವನ್ನು[2] ತಿಳಿದವರಾಗಿರುವರೋ ಬೇರೆ ಬಗೆಯ ವಿದ್ಯೆಯನ್ನು[3] ಅನುಷ್ಠಾನಮಾಡುತ್ತಿದ್ದು ಬ್ರಹ್ಮಲೋಕವನ್ನು ಪಡೆಯುವವ

1. ಅವಿದ್ಯಾಕಾಮಗಳು ಹೋದರೆ ಜೀವನು ತನ್ನ ನಿತ್ಯವಾದ ಬ್ರಹ್ಮಸ್ವಭಾವವನ್ನು ಕಂಡುಕೊಳ್ಳುವನು ಎಂಬುದೇ ಎಲ್ಲಾ ಉಪನಿಷತ್ತುಗಳ ಉಪದೇಶವು. ಪ್ರ. ೬-೭. ಬ್ರಹ್ಮಜ್ಞಾನವಾದಮೇಲೆ ಮಾಡತಕ್ಕದ್ದಾಗಲಿ ತಿಳಿಯತಕ್ಕದ್ದಾಗಲಿ ಇರುವದಿಲ್ಲ. ಗೀ. ೧೫-೨೦.

2. ಉಪಾಸನೆಮಾಡಬೇಕಾಗಿರುವ ಬ್ರಹ್ಮವು ಅಪರಬ್ರಹ್ಮ, ಕಡಿಮೆಯ ಬ್ರಹ್ಮ ಪ್ರ. ಭಾ. ೫; ಸೂ. ಭಾ. ೪-೩-೧೪.

3. ಪಂಚಾಗ್ನಿವಿದ್ಯೆಯೇ ಮುಂತಾದವುಗಳನ್ನು ಅಭ್ಯಾಸಮಾಡಿದವರಿಗೂ ಬ್ರಹ್ಮಲೋಕಪ್ರಾಪ್ತಿಯುಂಟೆಂದು ಶಾಸ್ತ್ರದಲ್ಲಿ ಹೇಳಿದೆ. ಛಾಂ. ೫-೧೦-೨, ಸೂ. ಭಾ. ೪-೩-೧೫

ರಾಗಿರುತ್ತಾರೋ ಮತ್ತು ಯಾರು ಅವರಿಗೆ ವಿರುದ್ಧವಾಗಿ ಸಂಸಾರವನ್ನು ಹೊಂದುವವರಾಗಿರುವರೋ[1] ಅವರಿಗೆ (ಆಗುವ) ಗತಿ ಎಂಥದ್ದೆಂಬುದು (ಇಲ್ಲಿ) ಪ್ರಕೃತವಾಗಿರುವ ಪರಬ್ರಹ್ಮವಿದ್ಯೆಯ ಫಲವನ್ನು ಹೊಗಳುವದಕ್ಕಾಗಿ (ಮುಂದಿನ ಮಂತ್ರದಲ್ಲಿ) ಹೇಳಲಾಗುತ್ತದೆ. ಇದೂ ಅಲ್ಲದೆ ಹಿಂದೆ ಅಗ್ನಿವಿದ್ಯೆಯನ್ನು ಹೇಳಿದ್ದಾಗಿದೆ, ಅದಕ್ಕೆ ಉತ್ತರವನ್ನು ಹೇಳಿದ್ದೂ ಆಗಿದೆಯಷ್ಟೆ. ಅದರ ಫಲವನ್ನು ಹೊಂದುವ ಪ್ರಕಾರವನ್ನೂ[2] ಹೇಳಬೇಕಾಗಿದೆ. ಆದ್ದರಿಂದಲೂ (ಈ ಮುಂದಿನ) ಮಂತ್ರವು ಆರಂಭವಾಗಿರುತ್ತದೆ.

**ಶತಂ ಚೈಕಾ ಚ ಹೃದಯಸ್ಯ ನಾಡ್ಯ-**
**ಸ್ತಾಸಾಂ ಮೂರ್ಧಾನಮಭಿನಿಸ್ಸೃತೈಕಾ ।**
**[illegible] ೦ೀತಿ**
**ವಿಷ್ವಙ್ಙನ್ಯಾ ಉತ್ಕ್ರಮಣೇ ಭವನ್ತಿ ॥೧೬॥**

೧೬. ಹೃದಯಕ್ಕೆ ನೂರು ಮತ್ತೊಂದು ನಾಡಿಗಳಿವೆ, ಅವುಗಳಲ್ಲಿ ಒಂದು ನೆತ್ತಿಯ (ಆ) ಕಡೆಗೆ ಹೊರಟಿರುವದು. ಅದರಿಂದ ಮೇಲಕ್ಕೆ ಹೋಗುವವನು ಅಮೃತತ್ವವನ್ನು ಹೊಂದುತ್ತಾನೆ. ಎಲ್ಲಾ ಕಡೆಗೂ ಹೋಗಿರುವ ಉಳಿದವು ಉತ್ಕ್ರಮಣಕ್ಕೆ ಆಗುವವು.

(ಭಾಷ್ಯ)

**೧೮೪. ತತ್ರ ಶತಂ ಚ ಶತಸಙ್ಖ್ಯಾಕಾಃ ಏಕಾ ಚ ಸುಷುಮ್ನಾ ನಾಮ ಪುರುಷಸ್ಯ ಹೃದಯಾದ್ವಿನಿಸ್ಸೃತಾಃ ನಾಡ್ಯಃ ಸಿರಾಃ । ತಾಸಾಂ ಮಧ್ಯೇ ಮೂರ್ಧಾನಂ ಭಿತ್ವಾ ಅಭಿನಿಸ್ಸೃತಾ ನಿರ್ಗತಾ ಏಕಾ ಸುಷುಮ್ನಾ ನಾಮ । ತಯಾ ಅನ್ತಕಾಲೇ ಹೃದಯೇ ಆತ್ಮಾನಂ ವಶೀಕೃತ್ಯ ಯೋಜಯೇತ್ । ತಯಾ ನಾಡ್ಯಾ ಊರ್ಧ್ವಮ್ ಉಪರಿ ಆಯನ್ ಗಚ್ಛನ್ ಆದಿತ್ಯದ್ವಾರೇಣ ಅಮೃತತ್ವಮ್ ಅಮರಣಧರ್ಮತ್ವಮ್ ಆಪೇಕ್ಷಿಕಮ್ । 'ಆಭೂತಸಂಪ್ಲವಂ ಸ್ಥಾನಮಮೃತತ್ವಂ ಹಿ ಭಾಷ್ಯತೇ' (ವಿ. ಪು. ೨-೮-೯೭) ಇತಿ ಸ್ಮೃತೇಃ । ಬ್ರಹ್ಮಣಾ ವಾ ಸಹ ಕಾಲಾನ್ತರೇಣ ಮುಖ್ಯಮ್ ಅಮೃತತ್ವಮ್ ಏತಿ ಭುಕ್ತ್ವಾ ಭೋಗಾನನುಪಮಾನ್ ಬ್ರಹ್ಮಲೋಕಗತಾನ್ । ವಿಷ್ವಙ್ ನಾನಾವಿಧಗತಯಃ ಅನ್ಯಾ ನಾಡ್ಯಃ ಉತ್ಕ್ರಮಣೇ ಉತ್ಕ್ರಮಣನಿಮಿತ್ತಂ ಭವನ್ತಿ ಸಂಸಾರಪ್ರತಿಪತ್ತ್ಯರ್ಥಾ ಏವ ಭವನ್ತಿ ಇತ್ಯರ್ಥಃ ॥**

1. ಬರಿಯ ಪುಣ್ಯಕರ್ಮವನ್ನು ಮಾಡಿದವರು ಕರ್ಮಫಲವನ್ನು ಅನುಭವಿಸಿ ಸಂಸಾರಕ್ಕೆ ಹಿಂತೆರಳುವರು ; ಪಾಪಕರ್ಮವನು ಮಾಡಿದವರು ಅಧೋಗತಿಗೆ ಹೋಗುವರು.

(ಭಾಷ್ಯಾರ್ಥ)

ಅಲ್ಲಿ ನೂರು, ಎಣಿಸಿದರೆ ನೂರಾಗುವಷ್ಟು[1] ಮತ್ತು ಮೇಲೆ ಒಂದು ಎಂದರೆ 'ಸುಷುಮ್ನೆ' ಎಂಬ ಹೆಸರಿನದು. ಮನುಷ್ಯನ ಹೃದಯದಿಂದ ಹೊರಟಿರುವ ನಾಡಿಗಳು ಎಂದರೆ ನರಗಳು. ಅವುಗಳಲ್ಲಿ ನೆತ್ತಿಯನ್ನು ಒಡೆದುಕೊಂಡು ಹೊರಟಿರುವದು ಆಚೆಗೆ ಬಂದಿರುವದು ಒಂದು 'ಸುಷುಮ್ನೆ'[2] ಎಂಬುದು. ಅದರ ಮೂಲಕ ಅವಸಾನಕಾಲದಲ್ಲಿ ಹೃದಯದಲ್ಲಿ ಮನಸ್ಸನ್ನು ಅಳವಡಿಸಿಕೊಂಡು ಇಟ್ಟುಕೊಳ್ಳಬೇಕು. ಆ ನಾಡಿಯ ಮೂಲಕ ಮೇಲಕ್ಕೆ ಮೇಲುಗಡೆಗೆ ಹೋಗುವವನು ತೆರಳುವವನು ಆದಿತ್ಯನ ಮೂಲಕವಾಗಿ[3] ಅಮೃತತ್ವವನ್ನು ಹೊಂದುತ್ತಾನೆ, ಆಪೇಕ್ಷಿಕವಾದ ಅಮರಣಧರ್ಮತ್ವವನ್ನು (ಹೊಂದುತ್ತಾನೆ ಎಂದರ್ಥ). ಏಕೆಂದರೆ 'ಆಭೂತಸಂಪ್ಲವಂ ಸ್ಥಾನಮಮೃತತ್ವಂ ಹಿ ಭಾಷ್ಯತೇ' (ಭೂತಗಳೆಲ್ಲ ಪ್ರಲಯವಾಗುವವರೆಗೆ ಇರುವ ಸ್ಥಾನವನ್ನು ಅಮೃತತ್ವವೆಂದೇ ಕರೆಯುತ್ತಾರೆ) (ವಿ. ಪು. ೨-೮-೯೭) ಎಂದು ಸ್ಮೃತಿ[4] ಇದೆ. ಅಥವಾ ಎಣೆಯಿಲ್ಲದ ಭೋಗಗಳನ್ನು ಬ್ರಹ್ಮಲೋಕದಲ್ಲಿ ಅನುಭವಿಸಿ ಬಳಿಕ ಬ್ರಹ್ಮನೊಡನೆ[5] ಮತ್ತೊಂದು ಕಾಲದಲ್ಲಿ[6] ಮುಖ್ಯವಾದ ಅಮೃತತ್ವವನ್ನೇ[7] ಪಡೆಯುತ್ತಾನೆ (ಎಂದೂ ಅರ್ಥವನ್ನು ಮಾಡಬಹುದು). ಎಲ್ಲಾ ಕಡೆಯಲ್ಲಿಯೂ ಸಿಕ್ಕಸಿಕ್ಕ ಹಾಗೆ ಹೋಗಿರುವ ಉಳಿದ ನಾಡಿಗಳು ಉತ್ಕ್ರಮಣಕ್ಕೆ ಕಾರಣವಾಗಿ ಆಗುವವು; ಸಂಸಾರವನ್ನು ಪಡೆಯುವದಕ್ಕೇ ಕಾರಣವಾಗುವವು ಎಂದರ್ಥ.

1. ಅನೇಕ ಸಂಖ್ಯೆಯು. ಛಾಂ. ಭಾ. ೮-೬-೬.

2. ಯೋಗಶಾಸ್ತ್ರದಲ್ಲಿ ಈ ನಾಡಿಯು ಪ್ರಸಿದ್ಧ. ಪ್ರ. ಭಾ. ೩-೭, ತೈ. ಭಾ. ೧-೬, ಛಾಂ. ಭಾ. ೮-೬-೧, ಗೀ. ಭಾ. ೮-೧೦.

3. ಛಾಂ. ೮-೬ನೆಯ ಖಂಡ, ತೈ. ೧-೬, ಈ. ೧೬, ಬೃ. ೫-೧೫-೧.

4. ಇತರ ಗತಿಗಳಿಗೆ ಹೋಲಿಸಿದರೆ ಬಹುಕಾಲವಿರುವದರಿಂದ ಇದನ್ನು ಅಮೃತತ್ವವೆಂದು ಕರೆಯುವರು ಎಂದು ವಚನದ ಅಭಿಪ್ರಾಯ. ಈ ವಚನವು ಪುರಾಣದ್ದೆಂದು ಛಾಂ. ಭಾ. ೫-೧೦-೨ರಲ್ಲಿ ಸ್ಪಷ್ಟವಾಗಿ ಹೇಳಿದೆ. 'ಹಿ ಭಾಷ್ಯತೇ' ಎಂಬುದರ ಬದಲು 'ವಿಭಾವ್ಯತೇ' ಎಂದು ಪಾಠಾಂತರವೂ ಕಾಣಬರುತ್ತದೆ.

5. ಬ್ರಹ್ಮಲೋಕದ ಭೋಗಗಳ ವರ್ಣನೆಯನ್ನು ಛಾಂ. ೮-೫-೩, ೪ರಲ್ಲಿ ನೋಡಿರಿ. ಈ ಗತಿಯು ಅನಿತ್ಯವಾದರೂ ಜ್ಞಾನದಿಂದ ಕ್ರಮಮುಕ್ತಿಯೂ ಆಗುವದೆಂಬ ಬಗ್ಗೆ ಸೂ. ಭಾ. ೪-೩-೧೦, ೧೧ನ್ನು ನೋಡಿರಿ.

6. ಬ್ರಹ್ಮಲೋಕವು ಪ್ರಲಯವಾದ ಬಳಿಕ.

7. ಆತ್ಮಸ್ವರೂಪವೇ ಆಗಿರುವ ನಿರಪೇಕ್ಷವಾದ ಅಮೃತತ್ವವನ್ನೇ, ಮುಕ್ತಿಯನ್ನೇ.

# ಉಪಸಂಹಾರ

(ಭಾಷ್ಯ)

೧೮೫. ಇದಾನೀಂ ಸರ್ವವಲ್ಲ್ಯರ್ಥೋಪಸಂಹಾರಾರ್ಥಮಾಹ-

(ಭಾಷ್ಯಾರ್ಥ)

ಈಗ (ಈ) ಎಲ್ಲಾ ವಲ್ಲಿಗಳ ಅರ್ಥವನ್ನೂ ಉಪಸಂಹಾರಮಾಡಬೇಕೆಂದು ಹೇಳುತ್ತಾನೆ :-

ಅಙ್ಗುಷ್ಠಮಾತ್ರಃ ಪುರುಷೋಽನ್ತರಾತ್ಮಾ
ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ।
ತಂ ಸ್ವಾಚ್ಛರೀರಾತ್ ಪ್ರವೃಹೇ-
ನ್ಮುಞ್ಜಾದಿವೇಷೀಕಾಂ ಧೈರ್ಯೇಣ ।
ತಂ ವಿದ್ಯಾಚ್ಛುಕ್ರಮಮೃತಂ
ತಂ ವಿದ್ಯಾಚ್ಛುಕ್ರಮಮೃತಮಿತಿ ॥೧೭॥

೧೭. ಅಂತರಾತ್ಮನಾದ ಪುರುಷನು ಅಂಗುಷ್ಠಮಾತ್ರನಾಗಿ ಜನಗಳ ಹೃದಯದಲ್ಲಿ ಯಾವಾಗಲೂ ಇದ್ದುಕೊಂಡಿರುತ್ತಾನೆ. ನೊಸೆಯ ಹುಲ್ಲಿನಿಂದ ದಂಟನ್ನು (ತೆಗೆಯುವಂತೆ) ಧೈರ್ಯದಿಂದ ಆತನನ್ನು ತನ್ನ ಶರೀರದಿಂದ ಓರಿದು ಕೊಳ್ಳಬೇಕು. ಅವನನ್ನು ಶುಕ್ರನೆಂದೂ ಅಮೃತನೆಂದೂ ತಿಳಿದುಕೊಳ್ಳಬೇಕು. ಅವನನ್ನು ಶುಕ್ರನೆಂದೂ ಅಮೃತನೆಂದೂ ತಿಳಿದುಕೊಳ್ಳಬೇಕು. ಹೀಗೆ (ಉಪನಿಷತ್ತು ಮುಗಿಯಿತು).

(ಭಾಷ್ಯ)

೧೮೬. ಅಙ್ಗುಷ್ಠಮಾತ್ರಃ ಪುರುಷಃ ಅನ್ತರಾತ್ಮಾ ಸದಾ ಜನಾನಾಂ ಸಮ್ಬನ್ಧಿನಿ ಹೃದಯೇ ಸಂನಿವಿಷ್ಟಃ ಯಥಾವ್ಯಾಖ್ಯಾತಃ । ತಂ ಸ್ವಾತ್ ಆತ್ಮೀಯಾತ್ ಶರೀರಾತ್ ಪ್ರವೃಹೇತ್ ಉದ್ಯಚ್ಛೇತ್ ನಿಷ್ಕರ್ಷೇತ್ ಪೃಥಕ್ಕುರ್ಯಾತ್ ಇತ್ಯರ್ಥಃ । ಕಿಮಿವೇತಿ ? ಉಚ್ಯತೇ। ಮುಞ್ಜಾದಿವ ಇಷೀಕಾಮ್ ಅನ್ತಃಸ್ಥಾಂ ಧೈರ್ಯೇಣ ಅಪ್ರಮಾದೇನ । ತಂ ಶರೀರಾನ್ನಿಷ್ಕೃಷ್ಟಂ ಚಿನ್ಮಾತ್ರಂ ವಿದ್ಯಾತ್ ವಿಜಾನೀಯಾತ್ ಶುಕ್ರಂ ಶುದ್ಧಮ್ ಅಮೃತಂ ಯಥೋಕ್ತಂ ಬ್ರಹ್ಮ ಇತಿ । ದ್ವಿರ್ವಚನಮ್ ಉಪನಿಷತ್ಪರಿಸಮಾಪ್ತ್ಯರ್ಥಮ್, ಇತಿಶಬ್ದಶ್ಚ ॥

(ಭಾಷ್ಯಾರ್ಥ)

ಅಂತರಾತ್ಮನಾದ ಪುರುಷನು ಜನಗಳಿಗೆ ಸೇರಿರುವ ಹೃದಯದಲ್ಲಿ ಅಂಗುಷ್ಠ ಮಾತ್ರನಾಗಿ ಯಾವಾಗಲೂ ಇದ್ದುಕೊಂಡಿರುತ್ತಾನೆ. ಇದನ್ನು ಹಿಂದೆ[1] ವ್ಯಾಖ್ಯಾನ

1. ೨-೧-೧೨ರಲ್ಲಿ

ಮಾಡಿರುವಂತೆ (ತಿಳಿದುಕೊಳ್ಳಬೇಕು). ಆತನನ್ನು ತನ್ನ ಶರೀರದಿಂದ[1] ಹಿರಿದುಕೊಳ್ಳಬೇಕು, ಎತ್ತಿಕೊಳ್ಳಬೇಕು, ಎಳೆದುಕೊಳ್ಳಬೇಕು, ಬೇರ್ಪಡಿಸಿಕೊಳ್ಳಬೇಕು ಎಂದರ್ಥ. ಏತರ ಹಾಗೆ ? ಎಂದರೆ ಹೇಳುತ್ತಾನೆ : ನೊಸೆಯ ಹುಲ್ಲಿನಿಂದ[2] ಒಳಗಿರುವ ದಂಟನ್ನು (ಹಿರಿದುಕೊಳ್ಳುವಂತೆ) ಧೈರ್ಯದಿಂದ ಎಂದರೆ ಎಚ್ಚರಿಕೆಯಿಂದ (ಬಿಡಿಸಿಕೊಳ್ಳಬೇಕು), ಹಾಗೆ ಶರೀರದಿಂದ ಎಳೆದುಕೊಂಡ ಚಿನ್ಮಾತ್ರಸ್ವರೂಪವನ್ನು ಶುಕ್ರನೆಂದೂ ಎಂದರೆ ಶುಭ್ರನೆಂದೂ ಅಮೃತವೆಂದೂ ಹಿಂದೆ ಹೇಳಿರುವ ಬ್ರಹ್ಮವೇ ಎಂದೂ ತಿಳಿಯಬೇಕು, ಅರಿತುಕೊಳ್ಳಬೇಕು. (ಅವನನ್ನು ಶುಕ್ರನೆಂದೂ, ಅಮೃತನೆಂದೂ ತಿಳಿಯಬೇಕು ಎಂಬ ವಾಕ್ಯವನ್ನು) ಎರಡುಸಲ ಹೇಳಿರುವದೂ ಕೊನೆಯಲ್ಲಿ ಹೀಗೆ ('ಇತಿ') ಎಂಬ ಶಬ್ದವನ್ನು (ಉಪಯೋಗಿಸಿರುವದೂ) ಉಪನಿಷತ್ತು ಮುಗಿಯಿತೆಂದು (ಸೂಚಿಸುವದಕ್ಕೆ).

(ಭಾಷ್ಯ)

೧೮೭. ವಿದ್ಯಾಸ್ತುತ್ಯರ್ಥೋಽಯಮಾಖ್ಯಾಯಿಕಾರ್ಥೋಪಸಂಹಾರಃ ಅಧುನಾ ಉಚ್ಯತೇ -

(ಭಾಷ್ಯಾರ್ಥ)

ವಿದ್ಯೆಯನ್ನು ಹೊಗಳುವದಕ್ಕಾಗಿ[3] ಕಥೆಯಲ್ಲಿ ಹೇಳಿದ ವಿಷಯವನ್ನು ಈಗ ಉಪಸಂಹಾರಮಾಡಿ ಹೇಳಲಾಗುತ್ತದೆ :-

ಮೃತ್ಯುಪ್ರೋಕ್ತಾಂ ನಚಿಕೇತೋಽಥ ಲಬ್ಧ್ವಾ
ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಮ್ ।
ಬ್ರಹ್ಮಪ್ರಾಪ್ತೋ ವಿರಜೋಽಭೂದ್ವಿಮೃತ್ಯು-
ರನ್ಯೋಽಪ್ಯೇವಂ ಯೋ ವಿದಧ್ಯಾತ್ಮಮೇವ ॥೧೮॥

೧೮. ಮೃತ್ಯುವು ಹೇಳಿದ ಈ ವಿದ್ಯೆಯನ್ನೂ ಯೋಗದ ವಿಧಾನವೆಲ್ಲವನ್ನೂ ನಚಿಕೇತನು ಪಡೆದುಕೊಂಡು ಬ್ರಹ್ಮವನ್ನು ಹೊಂದಿದನು, ವಿರಜನಾದನು, ವಿಮೃತ್ಯುವಾದನು. ಇನ್ನೊಬ್ಬನು ಯಾವನು ಅಧ್ಯಾತ್ಮವನ್ನೇ ಹೀಗೆ ತಿಳಿದುಕೊಳ್ಳುವನೋ (ಅವನೂ ಆಗುವನು).

1. ಸ್ಥೂಲಶರೀರ ಮತ್ತು ಸೂಕ್ಷ್ಮಶರೀರ - ಎರಡರಿಂದಲೂ.

2. ಇದನ್ನು ನೊದೆಯ ಹುಲ್ಲು ಎಂದೂ ಕರೆಯುತ್ತಾರೆ.

3. ತತ್ತ್ವದರ್ಶಿಯಾದ ಗುರುವು ಉಪದೇಶಿಸಿದರೆ ಶಿಷ್ಯನು ಯೋಗ್ಯನಾಗಿಯೂ ಇದ್ದರೆ ಫಲವು ಆಗಿಯೇ ಆಗುತ್ತದೆ. ವೈದ್ಯಾದಿಗಳಂತೆ ವಿದ್ಯೆಯ ಫಲವು ಸಂದಿಗ್ಧವಲ್ಲ ಎಂದು ತಿಳಿಸುವದಕ್ಕಾಗಿ ವಿದ್ಯೆಯನ್ನು ಹೊಗಳಿದೆ.

(ಭಾಷ್ಯ)

೧೮೮. ಮೃತ್ಯುಪ್ರೋಕ್ತಾಮ್ ಯಥೋಕ್ತಾಮ್ ಏತಾಂ ಬ್ರಹ್ಮವಿದ್ಯಾಂ ಯೋಗವಿಧಿಂ ಚ ಕೃತ್ಸ್ನಂ ಸಮಸ್ತಂ ಸೋಪಕರಣಂ ಸಫಲಮ್ ಇತ್ಯೇತತ್ । ನಚಿಕೇತಃ ಅಥ ವರಪ್ರದಾನಾತ್ ಮೃತ್ಯೋಃ ಲಬ್ಧ್ವಾ ಪ್ರಾಪ್ಯ ಇತ್ಯರ್ಥಃ । ಕಿಮ್ ? ಬ್ರಹ್ಮ ಪ್ರಾಪ್ತೋಽಭೂತ್ ಮುಕ್ತೋಽಭವತ್ ಇತ್ಯರ್ಥಃ । ಕಥಮ್ ? ವಿದ್ಯಾಪ್ರಾಪ್ತ್ಯಾ ವಿರಜಃ ವಿಗತರಜಾಃ ವಿಗತಧರ್ಮಾಧರ್ಮಃ । ವಿಮೃತ್ಯುಃ ವಿಗತಕಾಮಾವಿದ್ಯಶ್ಚ ಸನ್ ಪೂರ್ವಂ ಇತ್ಯರ್ಥಃ । ನ ಕೇವಲಂ ನಚಿಕೇತಾ ಏವ । ಅನ್ಯೋಽಪಿ ಯ ಏವಂ ನಚಿಕೇತವತ್ ಆತ್ಮವಿತ್ ಅಧ್ಯಾತ್ಮಮೇವ ನಿರುಪಚರಿತಂ ಪ್ರತ್ಯಕ್ಸ್ವರೂಪಂ ಪ್ರಾಪ್ಯ ತತ್ತ್ವಮೇವ ಇತ್ಯಭಿಪ್ರಾಯಃ । ನಾನ್ಯದ್ರೂಪಮಪ್ರತ್ಯಗ್ರೂಪಮ್ । ತದೇವಮ್ ಅಧ್ಯಾತ್ಮಮ್ ಏವಮ್ ಉಕ್ತೇನ ಪ್ರಕಾರೇಣ ವೇದ ವಿಜಾನಾತಿ ಇತಿ ಏವಂವಿತ್ । ಸೋಽಪಿ ವಿರಜಾಃ ಸನ್ ಬ್ರಹ್ಮ ಪ್ರಾಪ್ಯ ವಿಮೃತ್ಯುರ್ಭವತಿ ಇತಿ ವಾಕ್ಯಶೇಷಃ ॥

(ಭಾಷ್ಯಾರ್ಥ)

ಮೃತ್ಯುವು ಹೇಳಿರುವ ಹಿಂದೆ ವರ್ಣಿಸಿರುವ ಈ ಬ್ರಹ್ಮವಿದ್ಯೆಯನ್ನೂ ಮತ್ತು ಯೋಗವಿಧಾನವೆಲ್ಲವನ್ನೂ ಸಮಸ್ತವನ್ನೂ ಎಂದರೆ ಉಪಕರಣಗಳೊಡನೆ, ಫಲದೊಡನೆ[1] ಎಂದರ್ಥ. ನಚಿಕೇತನು[2] ಇನ್ನುಎಂದರೆ ಮೃತ್ಯುವಿನ ವರಪ್ರದಾನ ದಿಂದ ಪಡೆದುಕೊಂಡು ದೊರಕಿಸಿಕೊಂಡು ಎಂದರ್ಥ. (ಪಡೆದುಕೊಂಡು) ಏನಾದನು ? ಎಂದರೆ, ಬ್ರಹ್ಮವನ್ನು ಪಡೆದವನಾದನು, ಮುಕ್ತನಾದನು ಎಂದರ್ಥ. ಹೇಗೆ (ಮುಕ್ತನಾದನು ?)- ಎಂದರೆ ವಿದ್ಯೆಯನ್ನು ಪಡೆದುಕೊಂಡದ್ದರಿಂದ ವಿರಜನೂ ಎಂದರೆ ಧೂಳಿಲ್ಲದವನೂ ಧರ್ಮಾಧರ್ಮಗಳ (ಸೋಂಕು) ಇಲ್ಲದವನೂ ಮೃತ್ಯುವಿಲ್ಲದವನೂ ಎಂದರೆ ಕಾಮ, ಅವಿದ್ಯೆ - ಇವುಗಳಿಲ್ಲದವನೂ ಮೊದಲು[3] ಆಗಿ (ಮುಕ್ತನಾದನು) ಎಂದರ್ಥ.

ನಚಿಕೇತನೊಬ್ಬನೇ ಅಲ್ಲ, ಇನ್ನೂ ಯಾವನು ಹೀಗೆ ಎಂದರೆ ನಚಿಕೇತನಂತೆ ಆತ್ಮನನ್ನರಿಯುವನೋ ಅಧ್ಯಾತ್ಮವನ್ನೇ ಎಂದರೆ ಗೌಣವಲ್ಲದ ಒಳಗಿನ (ಆತ್ಮ) ಸ್ವರೂಪವನ್ನೇ ಪಡೆದುಕೊಳ್ಳಬೇಕಾಗಿರುವ (ಆತ್ಮ)ತತ್ತ್ವವನ್ನೇ[4] ಒಳಗಿನದಲ್ಲದ

1. ಕರ್ಮ, ಯೋಗ- ಎಂಬಿವು ಉಪಕರಣಗಳು, ಶೋಕನಿವೃತ್ತಿಯು ಫಲ.

2. ಮೂಲದಲ್ಲಿ 'ನಾಚಿಕೇತಃ' ಎಂಬ ಮಾತಿರುತ್ತದೆ ನಚಿಕೇತನೆಂದೇ ಅದಕ್ಕೆ ಅರ್ಥ.

3. ಮೊದಲು ಅವಿದ್ಯಾಕಾಮಗಳು ಹೋಗಿ ಆಮೇಲೆ ಕರ್ಮಮಯವಾದ ಸಂಸಾರದಿಂದ ಮುಕ್ತನಾದನು ಎಂದರ್ಥ.

4. ಯಾವ ಆತ್ಮನನ್ನು ಪಡೆಯಬೇಕಾಗಿದೆಯೋ ಆ ಆತ್ಮನೇ ತಾನೆಂದು ತಿಳಿಯಬೇಕೆಂದು ಭಾವ. ೧-೨-೨೩ರ ಭಾಷ್ಯವನ್ನು ನೋಡಿರಿ.

ಮತ್ತೊಂದು ರೂಪವನ್ನಲ್ಲ ಎಂದಭಿಪ್ರಾಯ. ಇಂತೀ ಪರಿಯಲ್ಲಿ ಅಧ್ಯಾತ್ಮವನ್ನೇ ಹೀಗೆ ಎಂದರೆ ಹಿಂದೆ ಹೇಳಿರುವ ಪ್ರಕಾರದಿಂದ ತಿಳಿಯುವವನು 'ಏವಂವಿತ್'[1] ಎನಿಸುವನು. ಅವನೂ ವಿರಜನಾಗಿ ಬ್ರಹ್ಮವನ್ನು ಪಡೆದುಕೊಂಡು ವಿಮೃತ್ಯುವಾಗುವನು - ಎಂದು ವಾಕ್ಯಕ್ಕೆ ಸೇರಿಸಿಕೊಳ್ಳಬೇಕು.

(ಭಾಷ್ಯ)

೧೮೯. ಅಥ ಶಿಷ್ಯಾಚಾರ್ಯಯೋಃ ಪ್ರಮಾದಕೃತಾನ್ಯಾಯೇನ ವಿದ್ಯಾಗ್ರಹಣಪ್ರತಿಪಾದನನಿಮಿತ್ತದೋಷಪ್ರಶಮನಾರ್ಥಾ ಇಯಂ ಶಾನ್ತಿರುಚ್ಯತೇ-

(ಭಾಷ್ಯಾರ್ಥ)

ಈಗ ಶಿಷ್ಯನೂ ಆಚಾರ್ಯನೂ ಪ್ರಮಾದದಿಂದ ಅನ್ಯಾಯವಾಗಿ[2] ವಿದ್ಯೆಯನ್ನು ಸ್ವೀಕರಿಸುವದು, ಹೇಳಿಕೊಡುವದು, ಎಂಬೀ ಕಾರಣದಿಂದ ಆಗಬಹುದಾದ ದೋಷವನ್ನು ಶಾಂತಿಗೊಳಿಸುವದಕ್ಕಾಗಿ ಈ ಶಾಂತಿಯನ್ನು[3] ಹೇಳಲಾಗುತ್ತದೆ :-

ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ
ಕರವಾವಹೈ । ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ ।
ಓಂ ಶಾನ್ತಿಃ ಶಾನ್ತಿಃ ಶಾನ್ತಿಃ ॥ ೧೯ ॥

೧೯. ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ ! (ನಾವಿಬ್ಬರೂ) ಜೊತೆಯಲ್ಲಿ ವೀರ್ಯವನ್ನುಂಟುಮಾಡುವಂತಾಗಲಿ ! ನಾವು ಅಧ್ಯಯನಮಾಡಿದ್ದು ತೇಜಸ್ವಿಯಾಗಲಿ ! (ಒಬ್ಬರನ್ನೊಬ್ಬರು) ದ್ವೇಷಮಾಡದೆ ಇರುವಂತಾಗಲಿ ! ಓಂ ಶಾಂತಿ, ಶಾಂತಿ, ಶಾಂತಿ !

(ಭಾಷ್ಯ)

೧೯೦. ಸಹ ನೌ ಆವಾಮ್ ಅವತು ಪಾಲಯತು ವಿದ್ಯಾಸ್ವರೂಪಪ್ರಕಾಶನೇನ। ಕಃ ? ಸ ಏವ ಪರಮೇಶ್ವರಃ ಉಪನಿಷತ್ಪ್ರಕಾಶಿತಃ । ಕಿಂ ಚ ಸಹ ನೌ

---

1. 'ಏವಂ-ವಿತ್' ಎಂಬ ಮಾತುಗಳು ಬೇರೆಬೇರೆಯಿವೆ. ಇವೆರಡಕ್ಕೂ ಸಂಬಂಧವನ್ನು ಮಾಡಿಕೊಂಡು ಅರ್ಥಮಾಡಬೇಕು ಎಂದು ಅಭಿಪ್ರಾಯ.

2. ಶಾಸ್ತ್ರದಲ್ಲಿ ವಿಧಿಸಿರುವ ಕ್ರಮವನ್ನು ಮೀರಿ ಪಾಠಪ್ರವಚನಗಳನ್ನು ಮಾಡಿರಬಹುದಾದ್ದರಿಂದ ಆದ ದೋಷವನ್ನು ಎಂದರ್ಥ. ಈ ವಿದ್ಯೆಯನ್ನು ಗುರುಶಿಷ್ಯಭಾವದಿಂದಲೇ ಹೇಳಬೇಕು, ಕಲಿಯಬೇಕು - ಎಂದಭಿಪ್ರಾಯ.

3. ಕೆಲವು ಪುಸ್ತಕಗಳಲ್ಲಿ ಈ ಶಾಂತಿಯು 'ಇತಿ ದ್ವಿತೀಯಾಧ್ಯಾಯಃ' ಎಂಬ ಮಾತುಗಳಾದ ಮೇಲೆ ಬರುತ್ತದೆ. ಕೆಲವು ಪುಸ್ತಕಗಳಲ್ಲಿ 'ಸಹ ನಾವಿತಿ ಶಾನ್ತಿಃ ಎಂದಿಷ್ಟೇ ಇದೆ. ಈ ಶಾಂತಿಯೂ ಭಾಷ್ಯವೂ ಮೂಲದಲ್ಲಿ ಹೇಗಿದ್ದವೆಂಬುದನ್ನು ನಿಶ್ಚಯಿಸುವದಕ್ಕೆ ಇನ್ನೂ ಕೆಲವು ಹಸ್ತಪ್ರತಿಗಳನ್ನು ಹೋಲಿಸುವದು ಅವಶ್ಯವಾಗಿದೆ. ತೈ. ಭಾ. ೨-೧ ನೋಡಿರಿ.

ಭುನಕ್ತು ತತ್ಫಲಪ್ರಕಾಶನೇನ ನೌ ಪಾಲಯತು । ಸಹೈವ ಆವಾಂ ವಿದ್ಯಾಕೃತಂ ವೀರ್ಯಂ ಸಾಮರ್ಥ್ಯಂ ಕರವಾವಹೈ ನಿಷ್ಪಾದಯಾವಹೈ । ಕಿಂ ಚ ತೇಜಸ್ವಿನೌ ತೇಜಸ್ವಿನೋಃ ಆವಯೋಃ ಯದಧೀತಂ ತತ್ ಸ್ವಧೀತಮಸ್ತು । ಅಥವಾ ತೇಜಸ್ವಿ ನೌ ಆವಾಭ್ಯಾಂ ಯತ್ ಅಧೀತಂ ತತ್ ಅತೀವ ತೇಜಸ್ವಿ ವೀರ್ಯವತ್ ಅಸ್ತು ಇತ್ಯರ್ಥಃ । ಮಾ ವಿದ್ವಿಷಾವಹೈ ಶಿಷ್ಯಾಚಾರ್ಯೌ ಅನ್ಯೋನ್ಯಂ ಪ್ರಮಾದಕೃತಾನ್ಯಾಯಾಧ್ಯಯನಾಧ್ಯಾಪನದೋಷನಿಮಿತ್ತಂ ದ್ವೇಷಂ ಮಾ ಕರವಾವಹೈ ಇತ್ಯರ್ಥಃ । ಶಾನ್ತಿಃ ಶಾನ್ತಿಃ ಶಾನ್ತಿಃ ಇತಿ ತ್ರಿರ್ವಚನಂ ಸರ್ವದೋಷೋಪಶಮನಾರ್ಥಮ್ ॥

(ಭಾಷ್ಯಾರ್ಥ)

ನಮ್ಮಿಬ್ಬರನ್ನೂ ಜೊತೆಯಲ್ಲಿಯೇ ವಿದ್ಯಾಸ್ವರೂಪವನ್ನು ತೋರಿಸಿಕೊಟ್ಟು ಕಾಪಾಡಲಿ ಪಾಲಿಸಲಿ ! ಯಾರು ? ಎಂದರೆ ಉಪನಿಷತ್ತಿನಲ್ಲಿ ತಿಳಿಸಿರುವ ಆ ಪರಮೇಶ್ವರನೇ. ಮತ್ತು ಆ (ವಿದ್ಯೆಯ) ಫಲವನ್ನು ತೋರಿಸಿಕೊಟ್ಟು ನಮ್ಮಿಬ್ಬರನ್ನೂ ಜೊತೆಯಲ್ಲಿಯೇ ಪೋಷಿಸಲಿ ಪಾಲಿಸಲಿ ![1] ವಿದ್ಯೆಯಿಂದಾದ ವೀರ್ಯವನ್ನು ಎಂದರೆ ಸಾಮರ್ಥ್ಯವನ್ನು ನಾವಿಬ್ಬರೂ ಜೊತೆಯಲ್ಲಿಯೇ ಉಂಟುಮಾಡುವವರಾಗೋಣ, ಏರ್ಪಡಿಸುವವರಾಗೋಣ ! ಮತ್ತು (ತೇಜಸ್ವಿನೌ - ತೇಜಸ್ವಿನೋಃ) ತೇಜಸ್ವಿಗಳಾದ ನಮ್ಮಿಬ್ಬರ ಅಧ್ಯಯನವಿದೆಯಲ್ಲ, ಅದು ಸರಿಯಾದ ಅಧ್ಯಯನವಾಗಲಿ ! ಅಥವಾ [2] (ನೌ-ಆವಾಭ್ಯಾಮ್) ನಮ್ಮಿಬ್ಬರಿಂದ ಅಧ್ಯಯನವಾದದ್ದು ಯಾವದಿದೆಯೋ ಅದು ಬಹಳವಾಗಿ ತೇಜಸ್ವಿಯಾಗಲಿ ಎಂದರೆ ವೀರ್ಯವುಳ್ಳದ್ದಾಗಲಿ ! ಎಂದರ್ಥ (ಎಂದಾದರೂ ವ್ಯಾಖ್ಯಾನಮಾಡಬಹುದು.) ಶಿಷ್ಯಾಚಾರ್ಯರಾದ (ನಾ)ವಿಬ್ಬರೂ ಒಬ್ಬರನ್ನೊಬ್ಬರು ದ್ವೇಷಮಾಡದೆ ಇರುವಂತಾಗಲಿ ! ಎಂದರೆ ಪ್ರಮಾದದಿಂದ ಅನ್ಯಾಯವಾಗಿ ಅಧ್ಯಯನಮಾಡಿದ ಅಧ್ಯಯನಮಾಡಿಸಿದ ದೋಷದ ಕಾರಣದಿಂದ (ಒಬ್ಬರನ್ನೊಬ್ಬರು) ದ್ವೇಷವನ್ನು ಮಾಡದೆ ಇರುವಂತಾಗಲಿ ! ಎಂದರ್ಥ. 'ಶಾಂತಿಃ ಶಾಂತಿಃ ಶಾಂತಿಃ' ಎಂದು ಮೂರು ಸಲ ಹೇಳಿರುವದು ಎಲ್ಲಾ ದೋಷಗಳೂ[3] ಪರಿಹಾರವಾಗುವದಕ್ಕೆ.[4]

ಓಂ ತತ್ ಸತ್

1. ಈಶ್ವರನ ಅನುಗ್ರಹದಿಂದಲೇ ವಿದ್ಯೆಯೂ ಅದರ ಫಲವೂ ದೊರಕುವವು ; ಆದ್ದರಿಂದ ಈಶ್ವರಭಕ್ತಿಯು ಅವಶ್ಯವಾದ ಸಾಧನವು ಎಂದು ಭಾವ.

2. 'ತೇಜಸ್ವಿ ನೌ ಅಧೀತಮ್ ಅಸ್ತು' - ಎಂದು ಈ ವ್ಯಾಖ್ಯಾನದಲ್ಲಿ ಪದಚ್ಛೇದ.

3. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂಬ ಮೂರು ದೋಷಗಳೂ.

4. 'ಇತ್ಯೋಮಿತಿ' ಎಂಬ ಆ ॥ ಪಾಠದಲ್ಲಿ ಓಂ ಎಂಬುದು ಮಂಗಲವನ್ನೂ ಇತಿ ಎಂಬುದು ಭಾಷ್ಯದ ಪರಿಸಮಾಪ್ತಿಯನ್ನೂ ಸೂಚಿಸುತ್ತದೆ.

# ಉಪನಿಷತ್ತಿನ ಸಾರ

## ಒಂದನೆಯ ಅಧ್ಯಾಯ - ಒಂದನೆಯ ವಲ್ಲಿ

೧-೯. ವಾಜಶ್ರವಸನೆಂಬಾತನು ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡಬೇಕಾದ ವಿಶ್ವಜಿತ್ತು ಎಂಬ ಯಾಗವನ್ನು ಮಾಡಿ ಯೋಗ್ಯವಲ್ಲದ ಬರಡುಹಸುಗಳನ್ನು ದಕ್ಷಿಣೆಗೆಂದು ಒಯ್ಯುತ್ತಿರಲು ಅವನ ಮಗನಾದ ನಚಿಕೇತನೆಂಬ ಹುಡುಗನು 'ಅಯ್ಯೋ ! ಇಂಥ ದಾನವನ್ನು ಕೊಟ್ಟರೆ ನಮ್ಮ ತಂದೆಗೆ ದುರ್ಗತಿಯುಂಟಾಗುವದಲ್ಲ !' ಎಂದು ಯೋಚಿಸಿ 'ಅಪ್ಪ', ನನ್ನನ್ನು ಯಾರಿಗೆ ದಕ್ಷಿಣೆಯಾಗಿ ಕೊಡುತ್ತೀಯೆ ?' ಎಂದು ತಂದೆಯನ್ನು ಕೇಳಿದನು. 'ನನ್ನನ್ನು ಯಾರಿಗೆ ಕೊಡುತ್ತೀಯೆ ?' ಎಂದು ಮತ್ತೆಮತ್ತೆ ಮಗನು ತನ್ನನ್ನು ನಿರ್ಬಂಧಿಸುವದನ್ನು ಕಂಡು ಸಿಟ್ಟುಗೊಂಡ ತಂದೆಯು 'ನಿನ್ನನ್ನು ಯಮನಿಗೆ ಕೊಟ್ಟಿದ್ದೇನೆ' ಎಂದನು. ತಂದೆಯು ಯಜ್ಞಭೂಮಿಯಲ್ಲಿ ಆಡಿದ ಮಾತು ಸುಳ್ಳಾಗಬಾರದೆಂದು ತಿಳಿದ ನಚಿಕೇತನು 'ಅಯ್ಯೋ ! ಏನೋ ಹೇಳಿಬಿಟ್ಟೆನಲ್ಲ !' ಎಂದು ಪೇಚಾಡುತ್ತಿದ್ದ ಅವನನ್ನು ಕುರಿತು 'ನಿನ್ನ ವಚನದಂತೆ ನಡೆದುಕೊ ; ಇದರಿಂದ ನಿನಗೆ ಒಳ್ಳೆಯದಾಗಬಹುದು. ಮಗನ ಮೋಹದಿಂದ ಆಡಿದ ಮಾತನ್ನು ಸುಳ್ಳುಮಾಡದಿರು' ಎಂದು ಒಪ್ಪಿಸಿ ತಂದೆಯ ಅನುಜ್ಞೆಯನ್ನು ಹೊಂದಿ ಯಮಲೋಕಕ್ಕೆ ಹೋದನು. ಯಮನು ಆ ವೇಳೆಗೆ ಮನೆಯಲ್ಲಿಲ್ಲದೆ ಬೇರೆ ಎಲ್ಲಿಗೋ ಹೋಗಿದ್ದನು ; ನಚಿಕೇತನು ಬಂದು ಮೂರು ದಿನಗಳಾದಮೇಲೆ ತಿರುಗಿಬಂದನು. ತನ್ನ ಮನೆಯ ಮುಂದೆ ಮೂರುದಿನಗಳಿಂದಲೂ ಉಪವಾಸವಾಗಿದ್ದ ವಟುವಿಗೆ ಅತಿಥಿಸತ್ಕಾರವಿಲ್ಲದೆ ತಾನು ಅನಾದರಮಾಡಿದ ದೋಷದ ಪರಿಹಾರಕ್ಕೆಂದು ಯಮನು 'ಮೂರು ವರಗಳನ್ನು ಬೇಡಿಕೊ, ಕೊಡುತ್ತೇನೆ' ಎಂದು ಹೇಳಿದನು.

೧೦-೧೯. ಆಗ ನಚಿಕೇತನು 'ನಾನು ಹಿಂತಿರುಗಿ ಹೋದರೆ ನನ್ನ ತಂದೆಯು ನನ್ನ ವಿಷಯದಲ್ಲಿ ಪ್ರಸನ್ನನಾಗಿರಬೇಕು. ಇದು ಮೊದಲನೆಯ ವರವು. ವಿರಾಟ್ಪುರುಷನನ್ನು ಪಡೆಯುವದಕ್ಕೆ ಸಾಧನವಾದ ಅಗ್ನಿವಿದ್ಯೆಯನ್ನು ನನಗೆ ತಿಳಿಸು. ಇದು ಎರಡನೆಯ ವರವು' ಎಂದು ಕೇಳಿಕೊಂಡನು. ಯಮನು ಈ ಎರಡು ವರಗಳನ್ನೂ ಕೊಟ್ಟು 'ಕರ್ಮೋಪಾಸನೆಗಳ ಫಲವಾದ ವಿರಾಟ್ಪ್ರಾಪ್ತಿಯನ್ನು ಕೊಡುವ ಈ ಅಗ್ನಿವಿದ್ಯೆಯಲ್ಲಿ ಉಪಯೋಗಿಸುವ ಅಗ್ನಿಗೆ ನಚಿಕೇತನೆಂಬ ನಿನ್ನ ಹೆಸರೇ ಬರಲಿ !' ಎಂದು ಹೆಚ್ಚಿಗೆಯ ವರವನ್ನು ತಾನಾಗಿಯೇ ಕೊಟ್ಟನು. ಯಾವನು ಈ ನಾಚಿಕೇತಾಗ್ನಿಯನ್ನು ಉಪಾಸನೆಮಾಡುವನೋ ಅವನು ಬದುಕಿರುವಾಗಲೇ ಅಧರ್ಮ, ಅಜ್ಞಾನ- ಮುಂತಾದವುಗಳಿಂದ ಬಿಡುಗಡೆಯನ್ನು ಹೊಂದಿ ಸತ್ತಮೇಲೆ ವಿರಾಡಾತ್ಮನಾಗಿ ದುಃಖವರ್ಜಿತನಾಗುವನು. ಈ ಉಪಾಸನಾಕ್ರಮವನ್ನು ಹೇಳಿಕೊಟ್ಟದ್ದೇ ಯಮನು ಕೊಟ್ಟ ಎರಡನೆಯ ವರವು.

೨೦-೨೯. ಆಮೇಲೆ 'ದೇಹಾಂತರವನ್ನು ಹೊಂದುವ, ಶರೀರೇಂದ್ರಿಯಾದಿಗಳಿಗಿಂತ ತೀರ ಬೇರೆಯಾಗಿರುವ ಆತ್ಮನೊಬ್ಬನು ಇದ್ದಾನೆಂದು ಕೆಲವರೂ ಇಲ್ಲವೆಂದು ಕೆಲವರೂ ಹೇಳುತ್ತಿರುವರು. ಪ್ರತ್ಯಕ್ಷಾನುಮಾನಗಳಿಗೆ ನಿಲುಕದ ಈ ಆತ್ಮತತ್ತ್ವವನ್ನು ನನಗೆ ಹೇಳಿಕೊಡು' ಎಂದು ನಚಿಕೇತನು ಮೂರನೆಯ ವರವನ್ನು ಬೇಡಿಕೊಂಡನು. ನಚಿಕೇತನು ಜ್ಞಾನಕ್ಕೆ ತಕ್ಕವನೋ

ಅಲ್ಲವೋ ಎಂದು ಪರೀಕ್ಷಿಸುವದಕ್ಕಾಗಿ ಯಮನು 'ನಚಿಕೇತನೆ, ಇದನ್ನು ತಿಳಿಯುವದು ದೇವತೆಗಳಿಗೂ ಕಷ್ಟವಾಗಿರುವದು. ಇದಲ್ಲದೆ ಈ ಜ್ಞಾನದಿಂದ ನಿನಗೇನಾಗಬೇಕು ? ಆಯುಸ್ಸು, ಪ್ರಜಾಸಂತತಿ, ಪಶುವಿತ್ತಕ್ಷೇತ್ರಾದಿಗಳು - ಸಾಮ್ರಾಜ್ಯ - ಇಂಥ ವರಗಳನ್ನು ಬೇಡಿಕೊ. ನಿನಗೆ ಬೇಕಾದ ಅನುಕೂಲಗಳನ್ನೆಲ್ಲ ಕಲ್ಪಿಸಿಕೊಡುತ್ತೇನೆ' ಎಂದನು. ಆದರೆ ನಚಿಕೇತನು ಇಂದ್ರಿಯ ಗಳನ್ನು ಸವೆಯಿಸುವ ಆ ಭೋಗಗಳು ಯಾವವನ್ನೂ ಒಲ್ಲದೆ ತನಗೆ ಆತ್ಮತತ್ತ್ವವನ್ನೇ ತಿಳಿಸಿಕೊಡ ಬೇಕೆಂದು ಪಟ್ಟುಹಿಡಿದು ಕುಳಿತುಕೊಂಡನು.

## ಒಂದನೆಯ ಅಧ್ಯಾಯ - ಎರಡನೆಯ ವಲ್ಲಿ

೧-೬. ನಚಿಕೇತನ ಉತ್ತಮವಾದ ಯೋಗ್ಯತೆಯನ್ನು ಕಂಡ ಯಮನು ಇವನಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದನು. ಅವನು ಮೊದಲು ನಚಿಕೇತನ ವೈರಾಗ್ಯವನ್ನು ಮೆಚ್ಚಿ ಹೊಗಳಿದ್ದು ಹೇಗೆಂದರೆ - 'ನಚಿಕೇತನೆ, ಪ್ರಿಯವಾದದ್ದು, ಹಿತವಾದದ್ದು - ಎಂದು ಎರಡು ಬಗೆಯ ಸಾಧನಗಳು ಮನುಷ್ಯನಿಗೆ ದೊರೆಯಬಹುದಾಗಿದೆ. ಅವುಗಳಲ್ಲಿ ಹಿತವನ್ನು ಆರಿಸಿ ಕೊಂಡರೆ ಉತ್ತಮಫಲವಾಗುವದು ; ಪ್ರಿಯವಾದದ್ದನ್ನು ಆರಿಸಿಕೊಂಡವರಿಗೆ ಪರಮ ಪುರುಷಾರ್ಥವು ದೂರವಾಗುತ್ತದೆ. ಆದ್ದರಿಂದ ವಿವೇಕಿಯಾದವನು ಹಿತವನ್ನೇ ಆರಿಸಿ ಕೊಳ್ಳಬೇಕು. ನೀನು ಮಿಕ್ಕ ಯಾವ ಭೋಗಗಳನ್ನೂ ಒಲ್ಲದೆ ಆತ್ಮತತ್ತ್ವವನ್ನೇ ಕೇಳಿಕೊಂಡದ್ದು ನೀನು ವಿವೇಕಿಯೆಂಬುದನ್ನು ತೋರಿಸುತ್ತದೆ.'

೭-೧೩. 'ಈ ಆತ್ಮತತ್ತ್ವವು ಎಷ್ಟೋ ಜನರಿಗೆ ಕಿವಿಗೇ ಬೀಳುವದಿಲ್ಲ ; ಕೆಲವರಿಗೆ ಕಿವಿಗೆ ಬಿದ್ದರೂ ಅದು ತಿಳಿಯುವದೇ ಇಲ್ಲ. ಇದನ್ನು ತಿಳಿಸಿಕೊಡುವ ಗುರುವೂ ತಿಳಿಯುವ ಶಿಷ್ಯನೂ ಅದ್ಭುತಪ್ರಜ್ಞರಾಗಿರಬೇಕು. ಸಂಪ್ರದಾಯವನ್ನು ಬಲ್ಲ ಆಚಾರ್ಯನು ಹೇಳಿದ ಮಾತಿನಿಂದ ಆತ್ಮತತ್ತ್ವವು ತಿಳಿದೀತೇ ಹೊರತು ಬರಿಯ ತರ್ಕಕ್ಕೆ ಎಂದಿಗೂ ಗೋಚರವಾಗದು. ಈ ಸೂಕ್ಷ್ಮತತ್ತ್ವವನ್ನು ತಿಳಿಯುವದಕ್ಕೆಂದು ನೀನು ಬ್ರಹ್ಮಪದವಿಯನ್ನು ಕೂಡ ಕಡೆಗಣಿಸಿದೆಯಲ್ಲ ! ಇದು ನಿನ್ನ ಉತ್ತಮಯೋಗ್ಯತೆಯನ್ನು ತೋರಿಸುತ್ತದೆ. ಪ್ರಾಣಿಗಳ ಹೃದಯದಲ್ಲಿಯೇ ಇದ್ದರೂ ಈ ತತ್ತ್ವವು ಅಧ್ಯಾತ್ಮಯೋಗವನ್ನು ಬಲ್ಲವರಿಗೆ ಮಾತ್ರ ಗೊತ್ತಾಗುವದು. ಶ್ರವಣಮನನಗಳಿಂದ ಇದನ್ನು ವಿವೇಚನೆಮಾಡಿ ತಿಳಿದುಕೊಂಡವರಿಗೆ ಪರಮಾನಂದವೇ ಪ್ರಾಪ್ತಿಯಾಗುತ್ತದೆ. ಇದನ್ನು ನೀನು ಬಯಸಿದ್ದು ನಿನಗೆ ಬ್ರಹ್ಮಪ್ರಾಪ್ತಿಯಾಗುವದೆಂಬುದಕ್ಕೆ ಸೂಚನೆಯಾಗಿದೆ.'

೧೪-೧೭. ಹೀಗೆಂದು ತನ್ನಲ್ಲಿ ಪ್ರಸನ್ನನಾಗಿ ನುಡಿದ ಯಮನನ್ನು ನಚಿಕೇತನು 'ಹಾಗಾದರೆ ನಾನು ಕೇಳಿರುವಂತೆ ಧರ್ಮಾಧರ್ಮಗಳನ್ನೂ ಕ್ರಿಯಾಕಾರಕಫಲಗಳನ್ನೂ ಕಾಲ ತ್ರಯವನ್ನೂ ಮೀರಿರುವ ಈ ಆತ್ಮತತ್ತ್ವವನ್ನು ಹೇಳು' ಎಂದು ಮತ್ತೆ ಬೇಡಿಕೊಂಡನು. ಆಗ ಯಮನು ಹೇಳುತ್ತಾನೆ. 'ನಚಿಕೇತನೆ, ವೇದಪ್ರತಿಪಾದ್ಯವಾಗಿ ಬ್ರಹ್ಮಚರ್ಯಾದಿಸಾಧನಗಳಿಂದ ಪಡೆಯಬೇಕಾಗಿರುವ ಈ ಆತ್ಮನಿಗೆ ಓಂಕಾರವು ವಾಚಕವೂ ಪ್ರತೀಕವೂ ಆಗಿರುವದು. ಓಂಕಾರವು ಪರಾಪರಬ್ರಹ್ಮಗಳೆರಡಕ್ಕೂ ಪ್ರತೀಕವಾಗಿರುವದರಿಂದ ಇದನ್ನು ಬ್ರಹ್ಮವೆಂದು ಉಪಾಸನೆ ಮಾಡಿದರೆ ಆ ಎರಡನ್ನೂ ಪಡೆಯಬಹುದು.

೧೮-೨೨. 'ಈ ಓಂಕಾರದ ಮೂಲಕವಾಗಿ ತಿಳಿಯುವ ಬ್ರಹ್ಮದ ಸಾಕ್ಷಾತ್ಸ್ವರೂಪವನ್ನು ಹೇಳುವೆನು ಕೇಳು. ಇದಕ್ಕೆ ಹುಟ್ಟುವದು, ಬೆಳೆಯುವದು- ಮುಂತಾದ ವಿಕಾರ ಗಳಿಲ್ಲವೆಂದು

ಬಲ್ಲವರು ಕಂಡುಕೊಂಡಿದ್ದಾರೆ. ಶರೀರದಲ್ಲಿಯೇ ಇರುತ್ತಿದ್ದರೂ ಶರೀರದ ವಿಕಾರಗಳು ಯಾವವೂ ಇದಕ್ಕಿಲ್ಲವಾಗಿ ಇದು ಧರ್ಮಾಧರ್ಮಾದಿಗಳನ್ನು ಮೀರಿರುವದು. ಎಲ್ಲಾ ನಾಮರೂಪಗಳೂ ಇದಕ್ಕೆ ಉಪಾಧಿಯಾಗಿರುತ್ತವೆ ; ಇದು ಅಣುವಿಗಿಂತ ಅಣು, ಮಹತ್ತಿಗಿಂತ ಮಹತ್ತು. ವಿಜ್ಞಾನಸ್ವರೂಪದಲ್ಲಿರುವ ಇದಕ್ಕೆ ಯಾವ ವಿಕಾರವೂ ನಿಜವಾಗಿರುವದಿಲ್ಲ. ವಿಶೇಷಜ್ಞಾನದ ಅಂತಃಕರಣದಲ್ಲಿದ್ದುಕೊಂಡು ನಾನಾಚಲನೆಗಳನ್ನು ಪಡೆಯುವಂತೆ ತೋರಿಕೊಳ್ಳುತ್ತಿರುವದು. ನಿಶ್ಚಯವಾಗಿ ಇದಕ್ಕೆ ಶರೀರವೇ ಇಲ್ಲದ್ದರಿಂದ ಸರ್ವವ್ಯಾಪಿಯೂ ಕೂಟಸ್ಥಜ್ಞಾನರೂಪವೂ ಆಗಿರುತ್ತದೆ. ಇದೇ ನಾನೆಂದು ಅರಿತುಕೊಂಡವನಿಗೆ ಶೋಕವು ಇಲ್ಲವಾಗುತ್ತದೆ.

೨೩-೨೫. 'ನಿಷ್ಕಾಮನಾಗಿ ಆತ್ಮನನ್ನೇ ಬಯಸುವದೇ ಆತ್ಮಜ್ಞಾನಕ್ಕೆ ಮುಖ್ಯ ಸಾಧನವು. ಕೆಟ್ಟ ನಡತೆಯನ್ನು ಬಿಟ್ಟು ಮನಸ್ಸಮಾಧಾನವನ್ನು ಹೊಂದಿ ಗುರುವಿನ ಮೂಲಕ ತಿಳಿದುಕೊಳ್ಳುವವನಿಗೆ ಬ್ರಹ್ಮದ ಯಾಥಾತ್ಮ್ಯವು ತಿಳಿಯುವದು. ಯಾವ ಧರ್ಮಕ್ಕೂ ನಿಲುಕದೆ ನಿತ್ಯವಾಗಿರುವ ಈ ಬ್ರಹ್ಮತತ್ತ್ವವು ಇಂಥ ಅಧಿಕಾರಿಯೊಬ್ಬನಿಗೇ ತಿಳಿಯುವದು.

## ಒಂದನೆಯ ಅಧ್ಯಾಯ - ಮೂರನೆಯ ವಲ್ಲಿ

೧-೨. 'ಈ ಶರೀರದಲ್ಲಿ ಇಬ್ಬರು ಆತ್ಮರಿರುವರು. ಇವರಲ್ಲಿ ಒಬ್ಬನು ನಾವುಗಳು ಕಲ್ಪಿಸಿಕೊಂಡಿರುವ ಸಂಸಾರಿಯು ; ಇನ್ನೊಬ್ಬನು ಪರಮಾರ್ಥವಾಗಿರುವ ಅಸಂಸಾರಿಯು. ಜ್ಞಾನಿಗಳೂ ಪಂಚಾಗ್ನಿವಿದ್ಯೆ, ನಾಚಿಕೇತಾಗ್ನಿವಿದ್ಯೆ- ಇವುಗಳನ್ನು ಬಲ್ಲವರೂ ಅಸಂಸಾರಿಯಾದ ಬ್ರಹ್ಮವನ್ನು ಹೊಂದುವರು.

೩-೯. 'ಶರೀರವೆಂಬುದೊಂದು ರಥವು. ಆತ್ಮನೇ ರಥಿ, ಬುದ್ಧಿಯು ಸಾರಥಿ ; ಮನಸ್ಸು ಕಡಿವಾಣವು, ಇಂದ್ರಿಯಗಳು ಕುದುರೆಗಳು, ಶಬ್ದಾದಿವಿಷಯಳು ಆ ಕುದುರೆಗಳು ನಡೆಯುವ ರಸ್ತೆಗಳು. ಶರೀರೇಂದ್ರಿಯಮನಸ್ಸುಗಳಿಂದೊಡಗೂಡಿರುವ ಜೀವನು ಈ ರಥದಲ್ಲಿ ಪ್ರಯಾಣಮಾಡುತ್ತಾ ಸಂಸಾರವನ್ನೂ ಮೋಕ್ಷವನ್ನೂ ಪಡೆಯುತ್ತಿರುವನು. ಬುದ್ಧಿಯೆಂಬ ಸಾರಥಿಯು ಅವಿವೇಕಿಯಾಗಿದ್ದರೆ ಕುದುರೆಗಳನ್ನು ಮನಬಂದ ದಾರಿಯಲ್ಲಿ ಕೈಬಿಡುತ್ತಾನೆ ; ರಥಿಕನಾದ ಜೀವನು ಆಗ ಸಂಸಾರದಲ್ಲಿ ತೊಳಲಬೇಕಾಗುವದು. ಆದರೆ ಆ ಸಾರಥಿಯು ವಿವೇಕಿಯಾಗಿದ್ದರೆ ಕುದುರೆಗಳನ್ನು ಹತೋಟಿಯಲ್ಲಿಟ್ಟುಕೊಂಡು ಮತ್ತೆ ಸಂಸಾರಕ್ಕೆ ಹಿಂತಿರುಗುವ ಸಂಭವವಿಲ್ಲದ ವಿಷ್ಣು ಪದವಿಯನ್ನೇ ಮುಟ್ಟಿಸುತ್ತಾನೆ.'

೧೦-೧೧. 'ಈ ಪರಮಾತ್ಮಸ್ಥಾನವನ್ನು ವಿವೇಕದಿಂದ ಸೇರುವ ಬಗೆ ಹೇಗೆಂದರೆ ಇಂದ್ರಿಯ, ವಿಷಯ, ಮನಸ್ಸು, ಬುದ್ಧಿ, ಮಹತ್ತು, ಅವ್ಯಾಕೃತ- ಇವು ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವವು. ಇವುಗಳೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿರುವದರಿಂದ ಇವೆಲ್ಲವನ್ನೂ ತುಂಬಿಕೊಂಡಿರುವ ಆತ್ಮನೇ ಕೊನೆಯ ತತ್ತ್ವವು. ಈ ಆತ್ಮತತ್ತ್ವವನ್ನು ಮೇಲೆ ಹೇಳಿದಂತೆ ಸ್ಥೂಲಸೂಕ್ಷ್ಮತಾರತಮ್ಯದಿಂದ ಅರಿತುಕೊಂಡರೆ ಇನ್ನೇನೂ ಅರಿಯಬೇಕಾದದ್ದಿರುವದಿಲ್ಲವಾದ ಕಾರಣ ಅದೇ ಕೊನೆಯ ಗತಿಯಾಗಿರುತ್ತದೆ.'

೧೨-೧೫. 'ಈ ಆತ್ಮನು ಎಲ್ಲರಲ್ಲಿಯೂ ಇರುತ್ತಿದ್ದರೂ ಸ್ಥೂಲಬುದ್ಧಿಗಳಿಗೆ ಗೊತ್ತಾಗುವದಿಲ್ಲ. ಸೂಕ್ಷ್ಮವಾಗಿ ನೋಡುವವರಿಗೆ ಮಾತ್ರ ಕಾಣುತ್ತಾನೆ. ಇಂದ್ರಿಯಗಳನ್ನು ಮನಸ್ಸಿನಲ್ಲಿ ಲಯಗೊಳಿಸಿ, ಆ ಮನಸ್ಸನ್ನು ಬುದ್ಧಿಯಲ್ಲಿ ಲಯಿಸಿಕೊಂಡು, ಆ ಬುದ್ಧಿಯನ್ನು ಹಿರಣ್ಯಗರ್ಭನ ಬುದ್ಧಿಯಲ್ಲಿಟ್ಟು ಅತ್ಯಂತವಾಗಿ ನಿರ್ಮಲಗೊಳಿಸಿಕೊಂಡು ಕೊನೆಗೆ ಬುದ್ಧಿಯಲ್ಲಿ ಆಗುವ ಎಲ್ಲಾ ಅರಿವುಗಳಿಗೂ ಸಾಕ್ಷಿಯಾದ ಕೂಟಸ್ಥನಾದ ಆತ್ಮನಲ್ಲಿ ಆ ಬುದ್ಧಿಯನ್ನೂ ಲಯಮಾಡಿಕೊಳ್ಳಬೇಕು. ಇದನ್ನು ಅರಿಯುವ ದಾರಿಯು ಕ್ಷೌರಕತ್ತಿಯ ಅಲುಗಿನಮೇಲೆ ನಡೆಯುವಷ್ಟು ಎಚ್ಚರಿಕೆಯಿಂದ ಹೋಗತಕ್ಕದ್ದಾದ್ದರಿಂದ ವಿವೇಕದಿಂದಲೂ ಸದ್ಗುರುವಿನ ಉಪದೇಶದಿಂದಲೂ ಇದನ್ನು ಅರಿತುಕೊಳ್ಳಬೇಕು. ಈ ಆತ್ಮನು ಬಲುಸೂಕ್ಷ್ಮನಾಗಿರುವನು ; ಈ ಆತ್ಮತತ್ತ್ವಕ್ಕೆ ಶಬ್ದವಿಲ್ಲ, ಸ್ಪರ್ಶವಿಲ್ಲ, ರೂಪವಿಲ್ಲ, ರಸವಿಲ್ಲ, ಗಂಧವಿಲ್ಲ, ಆದಿಯಿಲ್ಲ, ಅಂತ್ಯವಿಲ್ಲ; ಇದು ಎಲ್ಲಕ್ಕೂ ವ್ಯಾಪಕವಾಗಿ ಅಲುಗಾಡದೆ, ಸವೆಯದೆ, ಒಂದೇ ರೂಪದಲ್ಲಿರುವದು.'

೧೬-೧೭. ನಚಿಕೇತನಿಗೆ ಯಮನು ಹೇಳಿರುವ ಈ ಉಪಾಖ್ಯಾನವನ್ನು ಯೋಗ್ಯರಿಂದ ಕೇಳಿ ಯೋಗ್ಯರಿಗೆ ಉಪದೇಶಮಾಡಿದವನಿಗೆ ಉತ್ತಮಗತಿಯಾಗುತ್ತದೆ. ಬ್ರಹ್ಮಸಭೆಯಲ್ಲಾಗಲಿ, ಶ್ರಾದ್ಧಕಾಲದಲ್ಲಿ ಭೋಜನಮಾಡುತ್ತಿರುವ ಬ್ರಾಹ್ಮಣರೆದುರಿಗೇ ಆಗಲಿ ಇದನ್ನು ಶ್ರವಣ ಮಾಡಿಸಿದರೆ ಅನಂತಫಲವುಂಟು.

## ಎರಡನೆಯ ಅಧ್ಯಾಯ - ಒಂದನೆಯ ವಲ್ಲಿ

೧-೨. 'ಇಂದ್ರಿಯಗಳಿಗೆ, ಸ್ವಭಾವದಿಂದ ಹೊರನೋಟವೇ ಇರುತ್ತದೆ. ಆದ್ದರಿಂದ ಇಂದ್ರಿಯಗಳಿಗೆ ವಶನಾದವನು ವಿಷಯಗಳನ್ನು ಕಂಡಾನೇ ಹೊರತು ಒಳಗಿನ ಆತ್ಮನನ್ನು ನೋಡಲಾರನು. ಇಂದ್ರಿಯಗಳಿಂದಾಗುವ ವಿಷಯಸುಖವು 'ಅನಿತ್ಯವೆಂಬುದನ್ನು ತಿಳಿದು ಕೊಂಡವನು ಆ ಇಂದ್ರಿಯಗಳನ್ನು ಬಿಗಿಹಿಡಿದು ಒಳಗಿನ ಆತ್ಮನನ್ನೇ ನೋಡುವನು.'

೩-೧೦. 'ಇಂದ್ರಿಯಗಳಿಂದ ವಿಷಯಗಳನ್ನು ತಿಳಿಯುವಾಗ ನಮಗೆ ಉಂಟಾಗುವಂತೆ ತೋರುವ ಅರಿವೇ ನಮ್ಮ ಆತ್ಮನು. ಕರ್ಮಫಲವನ್ನು ಅನುಭವಿಸುವಂತಿರುವ ನಮ್ಮ ಆತ್ಮನೂ ಕರ್ಮೋಪಾಸನೆಗಳಿಗೆ ಗುರಿಯಾಗಿರುವ ಸಮಸ್ತಜಗತ್ತಿನ ಸೃಷ್ಟಿಕರ್ತನಾದ ಈಶ್ವರನೂ ಬೇರೆಯಲ್ಲ. ಯಾವ ಸಂಸಾರವೂ ಇಲ್ಲದ ಒಬ್ಬ ಆತ್ಮನೇ ಈ ಎರಡು ಬಗೆಯಲ್ಲಿಯೂ ತೋರಿಕೊಳ್ಳುತ್ತಿರುವನು.'

೧೧-೧೫. 'ನಮ್ಮ ಆತ್ಮನು ಹೃದಯವೇ ಮುಂತಾದ ಅಳತೆಗೆ ಕಟ್ಟುಬಿದ್ದಿರುವಂತೆ ಅವಿದ್ಯೆಯ ದೃಷ್ಟಿಯಿಂದ ಕಾಣುತ್ತಿದ್ದರೂ ಸರಿಯಾಗಿ ನೋಡಿದರೆ ಇವನೇ ಅನಂತವಾದ ಬ್ರಹ್ಮವಾಗಿರುವನು. ಇವನಲ್ಲಿ ಭೇದವನ್ನು ಕಂಡಾತನಿಗೆ ಸಂಸಾರವೂ ಅಭೇದವನ್ನುಕಂಡಾತನಿಗೆ ಬ್ರಹ್ಮಸಾಯುಜ್ಯವೂ ದೊರೆಯುವವು.'

## ಎರಡನೆಯ ಅಧ್ಯಾಯ - ಎರಡನೆಯ ವಲ್ಲಿ

೧-೨. 'ಈ ನಮ್ಮ ಶರೀರದಲ್ಲಿರುವ ಆತ್ಮನೇ ಬ್ರಹ್ಮವಾದ್ದರಿಂದ ಇವನ ಸ್ವರೂಪವನ್ನು ಅರಿತರೆ ಸಂಸಾರದ ಕಟ್ಟು ಕಳಚಿಕೊಳ್ಳುವದು. ಮುಂದಕ್ಕೆಂದಿಗೂ ಸಂಸಾರದಲ್ಲಿ ಕಾಲಿಡದೆ ಇರುವನು. ಎಲ್ಲಾ ಶರೀರಗಳಲ್ಲಿ ಈ ಒಬ್ಬ ಆತ್ಮನೇ ಇರುವನೆಂದು ತಿಳಿಯಬೇಕು.'

೩-೭. 'ಇಂದ್ರಿಯಗಳ ಕಾರ್ಯವೂ ಪ್ರಾಣವೃತ್ತಿಗಳೂ ಈ ಆತ್ಮನಿಗಾಗಿಯೇ ನಡೆಯುತ್ತಿರುವವು. ಈ ಆತ್ಮನೇ ಕಾರ್ಯಕರಣಗಳಿಗೆಲ್ಲ ಬಲವನ್ನು ಕೊಟ್ಟಿರುವವನು ; ಇವನಿಂದಲೇ ಪ್ರೇರಿತವಾಗಿ ಅವು ಒಂದರೊಡನೊಂದು ಸೇರಿಕೊಂಡು ಕೆಲಸಮಾಡುತ್ತಿರುವವು. ಹೀಗೆ ನಾನಾವಿಧದಿಂದ ಸಿದ್ಧವಾಗಿರುವ ಆತ್ಮನನ್ನು ಬ್ರಹ್ಮವೆಂದು ಅರಿಯಬೇಕು ; ಇಲ್ಲದಿದ್ದರೆ ಸ್ಥಾವರಜಂಗಮರೂಪವಾದ ನಾನಾಶರೀರಗಳನ್ನು ಪಡೆಯುತ್ತಿರುವದೇ ಗತಿಯಾಗುವದು.

೮-೧೦. ಇಂದ್ರಿಯಾದಿಗಳು ತಮ್ಮ ಕೆಲಸವನ್ನು ಮಾಡದೆ ಇರುವ ಕನಸಿನಲ್ಲಿಯೂ ಈ ಆತ್ಮನು ಬೇರೆ ಬೇರೆ ವಸ್ತುಗಳನ್ನು ಬೇಕಾದಂತೆ ನಿರ್ಮಿಸಿಕೊಂಡು ಇರುವನು. ಇವನೇ ಬ್ರಹ್ಮವು. ಸಮಸ್ತಲೋಕಗಳೂ ಇವನನ್ನೇ ಆಶ್ರಯಿಸಿಕೊಂಡಿರುವವು ; ಇವನನ್ನು ಮೀರಿ ಯಾವದೂ ಇರಲಾರದು. ಬೆಂಕಿಯು ತಾನು ಸುಡುವ ಕಟ್ಟಿಗೆಯೇ ಮುಂತಾದವುಗಳನ್ನು ಹೊಕ್ಕು ಆಯಾ ಆಕಾರಗಳನ್ನು ಹೊಂದುವಂತೆಯೂ, ವಾಯುವು ಕೊಳಲು ಮುಂತಾದವುಗಳನ್ನು ಹೊಕ್ಕು ಬೇರೆಬೇರೆ ಸ್ವಭಾವವನ್ನು ಹೊಂದುವಂತೆಯೂ ಕಂಡರೂ ಅವೆರಡೂ ತಮ್ಮತಮ್ಮ ರೂಪದಿಂದ ಶುದ್ಧವಾಗಿ ಬೇರೆ ಇದ್ದುಕೊಂಡೇ ಇರುವಂತೆ ಆತ್ಮನು ಎಲ್ಲಾ ಶರೀರಗಳಲ್ಲಿಯೂ ಬೇರೆಬೇರೆಯಾಗಿ ಭೋಕ್ತೃವಾಗಿ ಕಾಣುತ್ತಿದ್ದರೂ ನಿಜವಾಗಿ ತಾನು ಈ ಶರೀರಗಳಿಗಿಂತ ಬೇರೆಯಾಗಿಯೇ ತನ್ನ ಶುದ್ಧವಾದ ರೂಪದಲ್ಲಿ ಇರುತ್ತಿರುವನು. ಸೂರ್ಯನು ಎಲ್ಲಾ ಪದಾರ್ಥಗಳನ್ನೂ ಬೆಳಗುತ್ತಿದ್ದರೂ ಆಯಾ ವಸ್ತುಗಳನ್ನು ನೋಡಿದ ಪುಣ್ಯಾಪುಣ್ಯಗಳಿಗೆ ಹೊರಚ್ಚಾಗಿರುವಂತೆಯೇ ಈ ಆತ್ಮನು ಎಲ್ಲರ ಅಂತರಾತ್ಮನಾಗಿರುತ್ತಿದ್ದರೂ ಅವಿದ್ಯೆಯಿಂದ ಜೀವರು ಕಲ್ಪಿಸಿಕೊಳ್ಳುತ್ತಿರುವ ಸಂಸಾರದೋಷಗಳಿಗೆ ಹೊರಚ್ಚಾಗಿಯೇ ಇರುವನು.

೧೨-೧೩. 'ಹೀಗೆ ಎಲ್ಲಾ ಶರೀರಗಳಲ್ಲಿಯೂ ಒಬ್ಬನೇ ಆತ್ಮನು ಕಾರ್ಯಕರಣ ಸಂಘಾತಗಳಿಗೆಲ್ಲ ಚೇತನವಾಗಿ ಅವುಗಳನ್ನು ಆಯಾ ಕರ್ಮಗಳಲ್ಲಿ ಪ್ರೇರಿಸುತ್ತಾ ಫಲದಾತ ನಾಗಿರುತ್ತಿದ್ದರೂ ತಾನು ಯಾವ ವಿಕಾರವೂ ಇಲ್ಲದೆ ತನ್ನ ನಿತ್ಯಶುದ್ಧಸ್ವರೂಪದಲ್ಲಿಯೇ ಇರುವ ನೆಂದು ಯಾರು ಗುರುವಿನ ಉಪದೇಶವನ್ನು ಹೊಂದಿ ಅರಿತುಕೊಳ್ಳುವರೋ ಅವರಿಗೆ ಮಾತ್ರ ಶಾಶ್ವತಸುಖವಾದ ಮೋಕ್ಷವು ದಕ್ಕುವದು.'

೧೪-೧೫. 'ಈ ಆತ್ಮವಸ್ತುವು ನಮ್ಮಂಥ ಅಜ್ಞರಿಗೂ ತೋರೀತೆ ?' ಎಂದು ಸಂದೇಹ ಪಡಲು ಕಾರಣವಿಲ್ಲ ; ಏಕೆಂದರೆ ಅದು ಸ್ವಪ್ರಕಾಶವಾದ ನಮ್ಮ ಸ್ವರೂಪವೇ ಆಗಿರುತ್ತದೆ.

## ಎರಡನೆಯ ಅಧ್ಯಾಯ - ಮೂರನೆಯ ವಲ್ಲಿ

೧-೩. 'ಅನಾದಿಯಾಗಿ ಅನಂತವಾಗಿರುವಂತೆ ತೋರುತ್ತಿರುವ ಈ ಸಂಸಾರವೆಂಬ ವೃಕ್ಷಕ್ಕೆ ಬೇರಿನಂತೆ ಆಧಾರವಾಗಿರುವದೇ ಬ್ರಹ್ಮವು. ಅದರ ಕಟ್ಟಲೆಯಿಂದಲೋ ಎಂಬಂತೆ ಸೂರ್ಯ, ಚಂದ್ರ, ಅಗ್ನಿ, ವಾಯು-ಮೊದಲಾದವರು ವ್ಯವಸ್ಥೆಯಿಂದ ಕೆಲಸಮಾಡುತ್ತಿರುವರು.'

೪-೫. 'ಸರಿಯಾಗಿ ವಿಚಾರಮಾಡಿದರೆ ಈ ಲೋಕದಲ್ಲಿಯೇ ನಮ್ಮ ಅಂತಃಕರಣದಲ್ಲಿಯೇ ಆತ್ಮನ ನಿಜವು ಸ್ಫುಟವಾಗಿ ತೋರುವದು ; ಲೋಕಾಂತರದಲ್ಲಿ ಇಷ್ಟು ಸ್ಪಷ್ಟವಾಗಿ ತೋರಲಾರದು. ಬ್ರಹ್ಮಲೋಕದಲ್ಲಿ ಚೆನ್ನಾಗಿ ವಿಂಗಡವಾಗಿ ತಿಳಿಯಬರುವದೆಂದು ಶಾಸ್ತ್ರದಲ್ಲಿ ಹೇಳಿದೆ, ನಿಜ ; ಆದರೆ ಆ ಲೋಕವನ್ನು ಪಡೆಯುವದಕ್ಕೆ ಉತ್ಕೃಷ್ಟವಾದ

ಕರ್ಮೋಪಾಸನೆಗಳು ಬೇಕಾಗುವದರಿಂದ ಅದು ಸಿಕ್ಕುವದು ಬಲುಕಷ್ಟ. ಆದ್ದರಿಂದಲೇ ಈ ಲೋಕದಲ್ಲಿಯೇ ಆತ್ಮತತ್ತ್ವವನ್ನು ತಿಳಿದು ಕೊಳ್ಳಬೇಕು.'

೬-೧೧. 'ಇಂದ್ರಿಯಾದಿಗಳಲ್ಲಿ ಜ್ಞಾನವು ಉಂಟಾಗಲಿ ಹೋಗಲಿ, ಆತ್ಮನು ತನ್ನ ಸ್ವರೂಪದಿಂದಲೇ ಇರುವನೆಂತಲೂ ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ ಮುಂತಾದವುಗಳನ್ನೆಲ್ಲ ಮೀರಿ ಯಾವ ಸಂಸಾರಧರ್ಮವೂ ಇಲ್ಲದವನಾಗಿರುವನೆಂತಲೂ ಅರಿತುಕೊಂಡಾತನು ಮೋಕ್ಷವನ್ನು ಹೊಂದುವನು. ಈ ಆತ್ಮನನ್ನು ಇಂದ್ರಿಯಗಳಿಂದ ನೋಡುವದಕ್ಕೆ ಆಗುವದಿಲ್ಲ. ಮನಸ್ಸಿನಲ್ಲಿಯೇ ವಿಚಾರಮಾಡಿ ಅರಿತುಕೊಳ್ಳಬೇಕು. ಇಂದ್ರಿಯಾದಿಗಳ ವ್ಯಾಪಾರವಿಲ್ಲದಂತೆ ಅವುಗಳನ್ನು ನಿಲ್ಲಿಸಿಕೊಳ್ಳುವ ಅವಸ್ಥೆಗೆ ಯೋಗವೆಂದು ಹೆಸರು ; ಆ ಅವಸ್ಥೆಯಲ್ಲಿ ಆತ್ಮನು ತನ್ನ ಸ್ವರೂಪದಲ್ಲಿಯೇ ಇರುವನು. ಆದ್ದರಿಂದ ಅಂಥ ಯೋಗವನ್ನು ಅಭ್ಯಾಸಮಾಡುವದು ಆತ್ಮಜ್ಞಾನಕ್ಕೆ ಸಾಧಕವಾಗಿರುವದು.'

೧೨-೧೬. 'ಆತ್ಮನು ಇಂದ್ರಿಯಗಳಿಗಾಗಲಿ ಮನಸ್ಸಿಗಾಗಲಿ ಗೋಚರನಾಗುವವನಲ್ಲವಾದರೂ ಸಮಸ್ತ ಜಗತ್ತಿಗೂ ಆಧಾರನಾಗಿರುವದರಿಂದ ಅವನು ಇದಾನೆಂಬುದೇ ಸರಿಯಾದ ತಿಳಿವಳಿಕೆ. ಅವನು ಇರುವದರಿಂದಲೇ ಈ ಜಗತ್ತೆಲ್ಲ 'ಇದೆ' ಎಂಬ ಅರಿವಿಗೆ ಗೋಚರವಾಗುತ್ತದೆ. ಆದರೆ 'ಇದೆ' ಎಂಬುದೂ ಒಂದು ಉಪಾಧಿಯಿಂದ ತಿಳಿದ ಸ್ವರೂಪವು ; ಆದ್ದರಿಂದ ಯಾವ ಉಪಾಧಿಯೂ ಇಲ್ಲದಿರುವ ಆತ್ಮನನ್ನು ಇರುವನೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕಿಲ್ಲ. ಇರುವಿಕೆಯೇ ಮುಂತಾದ ಯಾವ ವಿಶೇಷವೂ ಆತ್ಮನಲ್ಲಿಲ್ಲವೆಂಬುದೇ ಸರಿಯಾದ ತಿಳಿವು. ನಮ್ಮ ಬುದ್ಧಿಯಲ್ಲಿ ಗಂಟುಹಾಕಿಕೊಂಡಿರುವ ತಪ್ಪುತಿಳಿವುಗಳೆಲ್ಲ ಹೋದರೆ ಆ ತಪ್ಪು ತಿಳಿವಿನಿಂದ ಆಗಿರುವ ಕಾಮಗಳೆಲ್ಲ ತೊಲಗುವವು ; ಕಾಮಗಳೆಲ್ಲ ಹೋದರೆ ಕಾಮದಿಂದಾಗಿರುವ ಜನನಮರಣಸಂಸಾರವೂ ಹೋಗಿ ನಾಶವಿಲ್ಲದ ಬ್ರಹ್ಮಸ್ವರೂಪವೇ ಪ್ರಾಪ್ತವಾಗುವದು. ಈ ಸ್ವರೂಪವನ್ನು ಇಲ್ಲಿಯೇ ಕಂಡುಕೊಳ್ಳಬಹುದು ; ಆದರೆ ಬ್ರಹ್ಮೋಪಾಸನೆಯನ್ನು ಮಾಡುವವರು ಉಪಾಸನೆಯ ಬಲದಿಂದ ಸುಷುಮ್ನಾನಾಡಿಯ ಮಾರ್ಗವಾಗಿ ಬ್ರಹ್ಮಲೋಕಕ್ಕೆ ಹೋಗಿ ಬಹುಕಾಲವಿರುವ ಆಪೇಕ್ಷಿಕವಾದ ಅಮೃತತ್ವವನ್ನು ಪಡೆಯುವರು ; ಅಲ್ಲಿಯೂ ಜ್ಞಾನವುಂಟಾದರೆ ಮಾತ್ರ ಮುಖ್ಯವಾದ ಅಮೃತತ್ವವೂ ದೊರಕುತ್ತದೆ. ಆದ್ದರಿಂದ ಇಲ್ಲಿಯೇ ಜ್ಞಾನದಿಂದ ಮುಕ್ತರಾಗಲು ಯತ್ನಿಸಬೇಕು.'

೧೭-೧೮. ಒಟ್ಟು ಸಾರಾಂಶವೇನೆಂದರೆ, ಜನರ ಹೃದಯದಲ್ಲಿರುವ ಆತ್ಮನ ಸ್ವರೂಪವು ಈಗ ಸಂಸಾರಿಯಾದ ಸಣ್ಣ ಆತ್ಮನೆಂದು ತೋರುತ್ತಿದ್ದರೂ ಚೆನ್ನಾಗಿ ಅನಾತ್ಮಗಳಿಂದ ಬಿಡಿಸಿ ತಿಳಿದುಕೊಂಡರೆ ಅದೇ ಆತ್ಮನೇ ನಿಜವಾಗಿ ನಿತ್ಯಶುದ್ಧವಾದ ಯಾವ ಸಂಸಾರಧರ್ಮವೂ ಇಲ್ಲದಿರುವ ಬ್ರಹ್ಮವೆಂದು ಗೊತ್ತಾಗುತ್ತದೆ. ಮೃತ್ಯುವು ಉಪದೇಶಿಸಿದ ಈ ಬ್ರಹ್ಮವಿದ್ಯೆಯನ್ನೂ ಯೋಗಮಾರ್ಗವನ್ನೂ ಅರಿತುಕೊಂಡು ನಚಿಕೇತನು ಬ್ರಹ್ಮವನ್ನು ಪಡೆದು ಪರಿಶುದ್ಧವಾದ ಸಂಸಾರವರ್ಜಿತವಾದ ಬ್ರಹ್ಮವಾದನು. ಇದರಂತೆ ಯಾರು ಯಾರು ಈ ವಿದ್ಯೆಯನ್ನು ತಿಳಿದುಕೊಳ್ಳುವರೋ ಅವರೆಲ್ಲ ಅಂಥ ಬ್ರಹ್ಮಸ್ವರೂಪವನ್ನೇ ಪಡೆದುಕೊಂಡು ಮುಕ್ತರಾಗುವರು.

# ಮನ್ತ್ರಗಳ ಅನುಕ್ರಮಣಿಕೆ


| ಮನ್ತ್ರಗಳ ಪ್ರತೀಕ | | ಅ. | ವ. | ಮಂ. | ಪುಟ |
|---|---|---|---|---|---|
| ಅಗ್ನಿರ್ಯಥೈಕೋ | - | ೨ | ೨ | ೯ | ೧೪೯ |
| ಅಙ್ಗುಷ್ಠಮಾತ್ರಃ ಪುರುಷೋ | - | ೨ | ೧ | ೧೨ | ೧೩೨ |
| ,, ,, | - | ೨ | ೧ | ೧೩ | ೧೩೩ |
| ,, ,, | - | ೨ | ೩ | ೧೭ | ೧೮೬ |
| ಅಜೀರ್ಯತಾಮಮೃತಾನಾಮ್ | - | ೧ | ೧ | ೨೮ | ೪೩ |
| ಅಣೋರಣೀಯಾನ್ ಮಹತೋ | - | ೧ | ೨ | ೨೦ | ೭೫ |
| ಅನುಪಶ್ಯ ಯಥಾ ಪೂರ್ವೇ | - | ೧ | ೧ | ೬ | ೧೪ |
| ಅನ್ಯಚ್ಛ್ರೇಯೋಽನ್ಯದುತೈವ | - | ೧ | ೨ | ೧ | ೪೬ |
| ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್ | - | ೧ | ೨ | ೧೪ | ೬೬ |
| ಅರಣ್ಯೋರ್ನಿಹಿತೋ | - | ೨ | ೧ | ೮ | ೧೨೬ |
| ಅವಿದ್ಯಾಯಾಮನ್ತರೇ | - | ೧ | ೨ | ೫ | ೫೨ |
| ಅವ್ಯಕ್ತಾತ್ತು ಪರಃ | - | ೨ | ೩ | ೮ | ೧೭೦ |
| ಅಶಬ್ದಮಸ್ಪರ್ಶಮ್ | - | ೧ | ೩ | ೧೫ | ೧೦೯ |
| ಅಶರೀರಗ್ಂ ಶರೀರೇಷು | - | ೧ | ೨ | ೨೨ | ೭೯ |
| ಅಸ್ತೀತ್ಯೇವೋಪಲಬ್ಧವ್ಯಃ | - | ೨ | ೩ | ೧೩ | ೧೭೮ |
| ಅಸ್ಯ ವಿಸ್ರಂಸಮಾನಸ್ಯ | - | ೨ | ೨ | ೪ | ೧೪೩ |
| ಆತ್ಮಾನಗ್ಂ ರಥಿನಂ ವಿದ್ಧಿ | - | ೧ | ೩ | ೩ | ೯೦ |
| ಆಶಾಪ್ರತೀಕ್ಷೇ ಸಙ್ಗತಗ್ಂ | - | ೧ | ೧ | ೮ | ೧೬ |
| ಆಸೀನೋ ದೂರಂ ವ್ರಜತಿ | - | ೧ | ೨ | ೨೧ | ೭೭ |
| ಇನ್ದ್ರಿಯಾಣಾಂ ಪೃಥಗ್ಭಾವಮ್ | - | ೨ | ೩ | ೬ | ೧೬೮ |
| ಇನ್ದ್ರಿಯಾಣಿ ಹಯಾನಾಹುಃ | - | ೧ | ೩ | ೪ | ೯೧ |
| ಇನ್ದ್ರಿಯೇಭ್ಯಃ ಪರಂ ಮನೋ | - | ೨ | ೩ | ೭ | ೧೬೯ |
| ಇನ್ದ್ರಿಯೇಭ್ಯಃ ಪರಾ ಹ್ಯರ್ಥಾಃ | - | ೧ | ೩ | ೧೦ | ೯೭ |
| ಇಹ ಚೇದಶಕದ್ಬೋದ್ಧುಮ್ | - | ೨ | ೩ | ೪ | ೧೬೫ |
| ಉತ್ತಿಷ್ಠತ ಜಾಗ್ರತ | - | ೧ | ೩ | ೧೪ | ೧೦೭ |
| ಉಶನ್ ಹ ವೈ ವಾಜಶ್ರವಸಃ | - | ೧ | ೧ | ೧ | ೮ |
| ಊರ್ಧ್ವಮೂಲೋಽವಾಕ್ಶಾಖಃ | - | ೨ | ೩ | ೧ | ೧೫೯ |
| ಊರ್ಧ್ವಂ ಪ್ರಾಣಮುನ್ನಯತಿ | - | ೨ | ೨ | ೩ | ೧೪೨ |
| ಋತಂ ಪಿಬನ್ತೌ ಸುಕೃತಸ್ಯ | - | ೧ | ೩ | ೧ | ೮೬ |

| ಮಂತ್ರಗಳ ಪ್ರತೀಕ | ಅ. | ವ. | ಮಂ. | ಪುಟ |
|---|---|---|---|---|
| ಏಕೋ ವಶೀ ಸರ್ವಭೂತಾನ್ತರಾತ್ಮಾ | ೨ | ೨ | ೧೨ | ೧೫೩ |
| ಏತಚ್ಛ್ರುತ್ವಾ ಸಮ್ಪರಿಗೃಹ್ಯ | ೧ | ೨ | ೧೩ | ೬೫ |
| ಏತತ್ತುಲ್ಯಂ ಯದಿ ಮನ್ಯಸೇ | ೧ | ೧ | ೨೪ | ೩೮ |
| ಏತದಾಲಮ್ಬನಂ ಶ್ರೇಷ್ಠಮ್ | ೧ | ೨ | ೧೭ | ೭೦ |
| ಏತದ್ಧ್ಯೇವಾಕ್ಷರಂ ಬ್ರಹ್ಮ | ೧ | ೨ | ೧೬ | ೬೯ |
| ಏಷ ತೇಽಗ್ನಿರ್ನಚಿಕೇತಃ | ೧ | ೧ | ೧೯ | ೩೧ |
| ಏಷ ಸರ್ವೇಷು ಭೂತೇಷು | ೧ | ೩ | ೧೨ | ೧೦೨ |
| ಕಾಮಸ್ಯಾಪ್ತಿಂ ಜಗತಃ | ೧ | ೨ | ೧೧ | ೬೨ |
| ಜಾನಾಮ್ಯಹಗ್ಂ ಶೇವಧಿಃ | ೧ | ೨ | ೧೦ | ೬೧ |
| ತಗ್ಂ ಹ ಕುಮಾರಗ್ಂ ಸನ್ತಮ್ | ೧ | ೧ | ೨ | ೯ |
| ತದೇತದಿತಿ ಮನ್ಯನ್ತೇ | ೨ | ೨ | ೧೪ | ೧೫೬ |
| ತಂ ದುರ್ದರ್ಶಂ ಗೂಢಮ್ | ೧ | ೨ | ೧೨ | ೬೩ |
| ತಮಬ್ರವೀತ್ ಪ್ರೀಯಮಾಣೋ | ೧ | ೧ | ೧೬ | ೨೬ |
| ತಾಂ ಯೋಗಮಿತಿ ಮನ್ಯನ್ತೇ | ೨ | ೩ | ೧೧ | ೧೭೪ |
| ತಿಸ್ರೋ ರಾತ್ರೀಯದವಾತ್ಸೀಃ | ೧ | ೧ | ೯ | ೧೮ |
| ತ್ರಿಣಾಚಿಕೇತಸ್ತ್ರಯಮ್ | ೧ | ೧ | ೧೮ | ೩೦ |
| ತ್ರಿಣಾಚಿಕೇತಸ್ತ್ರಿಭಿರೇತ್ಯ | ೧ | ೧ | ೧೭ | ೨೭ |
| ದೂರಮೇತೇ ವಿಪರೀತೇ | ೧ | ೨ | ೪ | ೫೧ |
| ದೇವೈರತ್ರಾಪಿ ವಿಚಿಕಿತ್ಸಿತಮ್ | ೧ | ೧ | ೨೧ | ೩೫ |
| | ೧ | ೧ | ೨೨ | ೩೬ |
| ನ ಜಾಯತೇ ಮ್ರಿಯತೇ ವಾ | ೧ | ೨ | ೧೮ | ೭೧ |
| ನ ತತ್ರ ಸೂರ್ಯೋ ಭಾತಿ | ೨ | ೨ | ೧೫ | ೧೫೭ |
| ನ ನರೇಣಾವರೇಣ | ೧ | ೨ | ೮ | ೫೬ |
| ನ ಪ್ರಾಣೇನ ನಾಪಾನೇನ | ೨ | ೨ | ೪ | ೧೪೪ |
| ನ ವಿತ್ತೇನ ತರ್ಪಣೀಯೋ | ೧ | ೧ | ೨೭ | ೪೨ |
| ನ ಸಂದೃಶೇ ತಿಷ್ಠತಿ | ೨ | ೩ | ೯ | ೧೭೧ |
| ನ ಸಾಮ್ಪರಾಯಃ ಪ್ರತಿಭಾತಿ | ೧ | ೨ | ೬ | ೫೩ |
| ನಾಚಿಕೇತಮುಪಾಖ್ಯಾನಮ್ | ೧ | ೩ | ೧೬ | ೧೧೨ |
| ನಾಯಮಾತ್ಮಾ ಪ್ರವಚನೇನ | ೧ | ೨ | ೨೩ | ೮೧ |
| ನಾವಿರತೋ ದುಶ್ಚರಿತಾತ್ | ೧ | ೨ | ೨೪ | ೮೩ |
| ನಿತ್ಯೋಽನಿತ್ಯಾನಾಮ್ | ೨ | ೨ | ೧೩ | ೧೫೫ |

| ಮಂತ್ರಗಳ ಪ್ರತೀಕ | ಅ. | ವ. | ಮುಂ. | ಪುಟ |
|---|---|---|---|---|
| ನೈವ ವಾಚಾ ನ ಮನಸಾ | ೨ | ೩ | ೧೨ | ೧೭೬ |
| ನೈಷಾ ತರ್ಕೇಣ ಮತಿರಾಪನೇಯಾ | ೧ | ೨ | ೯ | ೫೯ |
| ಪರಾಚಃ ಕಾಮಾನನುಯನ್ತಿ | ೨ | ೧ | ೨ | ೧೧೭ |
| ಪರಾಞ್ಚಿ ಖಾನಿ ವ್ಯತೃಣತ್ | ೨ | ೧ | ೧ | ೧೧೪ |
| ಪೀತೋದಕಾ ಜಗ್ಧತೃಣಾಃ | ೧ | ೧ | ೩ | ೧೦ |
| ಪುರಮೇಕಾದಶದ್ವಾರಮ್ | ೨ | ೨ | ೧ | ೧೩೭ |
| ಪ್ರ ತೇ ಬ್ರವೀಮಿ ತದು | ೧ | ೧ | ೧೪ | ೨೩ |
| ಬಹೂನಾಮೇಮಿ ಪ್ರಥಮೋ | ೧ | ೧ | ೫ | ೧೨ |
| ಭಯಾದಸ್ಯಾಗ್ನಿಸ್ತಪತಿ | ೨ | ೩ | ೩ | ೧೬೪ |
| ಮನಸೈವೇದಮಾಪ್ತವ್ಯಮ್ | ೨ | ೧ | ೧೧ | ೧೩೦ |
| ಮಹತಃ ಪರಮವ್ಯಕ್ತಮ್ | ೧ | ೩ | ೧೧ | ೯೯ |
| ಮೃತ್ಯುಪ್ರೋಕ್ತಾಂ ನಚಿಕೇತೋಽಥ | ೨ | ೩ | ೧೮ | ೧೮೭ |
| ಯ ಇಮಂ ಪರಮಮ್ | ೧ | ೩ | ೧೭ | ೧೧೩ |
| ಯ ಇಮಂ ಮಧ್ವದಮ್ | ೨ | ೧ | ೫ | ೧೨೩ |
| ಯ ಏಷ ಸುಪ್ತೇಷು ಜಾಗರ್ತಿ | ೨ | ೨ | ೮ | ೧೪೭ |
| ಯಚ್ಛೇದ್ವಾಙ್ಮನಸೀ ಪ್ರಾಜ್ಞಃ | ೧ | ೩ | ೧೩ | ೧೦೪ |
| ಯತಶ್ಚೋದೇತಿ ಸೂರ್ಯೋ | ೨ | ೧ | ೯ | ೧೨೭ |
| ಯಥಾದರ್ಶೇ ತಥಾ | ೨ | ೩ | ೫ | ೧೬೬ |
| ಯಥಾ ಪುರಸ್ತಾದ್ಭವಿತಾ | ೧ | ೧ | ೧೧ | ೨೦ |
| ಯಥೋದಕಂ ದುರ್ಗೇ ವೃಷ್ಟಮ್ | ೨ | ೧ | ೧೪ | ೧೩೪ |
| ಯಥೋದಕಂ ಶುದ್ಧೇ ಶುದ್ಧಮ್ | ೨ | ೧ | ೧೫ | ೧೩೫ |
| ಯದಾ ಪಞ್ಚಾವತಿಷ್ಠನ್ತೇ | ೨ | ೩ | ೧೦ | ೧೭೩ |
| ಯದಾ ಸರ್ವೇ ಪ್ರಭಿದ್ಯನ್ತೇ | ೨ | ೩ | ೧೫ | ೧೮೨ |
| ಯದಾ ಸರ್ವೇ ಪ್ರಮುಚ್ಯನ್ತೇ | ೨ | ೩ | ೧೪ | ೧೮೦ |
| ಯದಿದಂ ಕಿಂ ಚ ಜಗತ್ಸರ್ವಮ್ | ೨ | ೩ | ೨ | ೧೬೩ |
| ಯದೇವೇಹ ತದಮುತ್ರ | ೨ | ೧ | ೧೦ | ೧೨೯ |
| ಯಸ್ತು ವಿಜ್ಞಾನವಾನ್ ಭವತಿ | ೧ | ೩ | ೬ | ೯೪ |
| | ೧ | ೩ | ೮ | ೯೫ |
| ಯಸ್ತ್ವವಿಜ್ಞಾನವಾನ್ | ೧ | ೩ | ೫ | ೯೩ |
| | ೧ | ೩ | ೭ | ೯೫ |

| ಮಂತ್ರಗಳ ಪ್ರತೀಕ | | ಅ. | ವ. | ಮಂ. | ಪುಟ |
|---|---|---|---|---|---|
| ಯಸ್ಮಿನ್ನಿದಂ ವಿಚಿಕಿತ್ಸನ್ತಿ | - | ೧ | ೧ | ೨೯ | ೪೫ |
| ಯಸ್ಯ ಬ್ರಹ್ಮ ಚ ಕ್ಷತ್ರಂ ಚ | - | ೧ | ೨ | ೨೫ | ೮೪ |
| ಯಃ ಪೂರ್ವಂ ತಪಸೋ | - | ೨ | ೧ | ೬ | ೧೨೪ |
| ಯಃ ಸೇತುರೀಜಾನಾನಾಮ್ | - | ೧ | ೩ | ೨ | ೮೯ |
| ಯಾ ಪ್ರಾಣೇನ ಸಮ್ಭವತಿ | - | ೨ | ೧ | ೭ | ೧೨೫ |
| ಯೇನ ರೂಪಗ್ಂ ರಸಂ ಗನ್ಧಮ್ | - | ೨ | ೧ | ೩ | ೧೧೯ |
| ಯೇಯಂ ಪ್ರೇತೇ ವಿಚಿಕಿತ್ಸಾ | - | ೧ | ೧ | ೨೦ | ೩೩ |
| ಯೇ ಯೇ ಕಾಮಾ ದುರ್ಲಭಾಃ | - | ೧ | ೧ | ೨೫ | ೩೯ |
| ಯೋನಿಮನ್ಯೇ ಪ್ರಪದ್ಯನ್ತೇ | - | ೨ | ೨ | ೭ | ೧೪೬ |
| ಲೋಕಾದಿಮಗ್ನಿಮ್ | - | ೧ | ೧ | ೧೫ | ೨೫ |
| ವಾಯುರ್ಯಥೈಕೋ ಭುವನಮ್ | - | ೨ | ೨ | ೧೦ | ೧೫೦ |
| ವಿಜ್ಞಾನಸಾರಥಿರ್ಯಸ್ತು | - | ೧ | ೩ | ೯ | ೯೬ |
| ವೈಶ್ವಾನರಃ ಪ್ರವಿಶತ್ಯತಿಥಿಃ | - | ೧ | ೧ | ೭ | ೧೫ |
| ಶತಂ ಚೈಕಾ ಚ ಹೃದಯಸ್ಯ | - | ೨ | ೩ | ೧೬ | ೧೮೪ |
| ಶತಾಯುಷಃ ಪುತ್ರಪೌತ್ರಾನ್ | - | ೧ | ೧ | ೨೩ | ೩೭ |
| ಶಾನ್ತಸಙ್ಕಲ್ಪಃ ಸುಮನಾಃ | - | ೧ | ೧ | ೧೦ | ೧೯ |
| ಶ್ರವಣಾಯಾಪಿ ಬಹುಭಿಃ | - | ೧ | ೨ | ೭ | ೫೫ |
| ಶ್ರೇಯಶ್ಚ ಪ್ರೇಯಶ್ಚ | - | ೧ | ೨ | ೨ | ೪೮ |
| ಶ್ವೋಭಾವಾ ಮರ್ತ್ಯಸ್ಯ | - | ೧ | ೧ | ೨೬ | ೪೧ |
| ಸ ತ್ವಮಗ್ನಿಗ್ಂ ಸ್ವರ್ಗ್ಯಮ್ | - | ೧ | ೧ | ೧೩ | ೨೨ |
| ಸ ತ್ವಂ ಪ್ರಿಯಾನ್ | - | ೧ | ೨ | ೩ | ೫೦ |
| ಸರ್ವೇ ವೇದಾ ಯತ್ಪದಮ್ | - | ೧ | ೨ | ೧೫ | ೬೮ |
| ಸಹ ನಾವವತು | - | ೨ | ೩ | ೧೯ | ೧೮೯ |
| ಸ ಹೋವಾಚ ಪಿತರಮ್ | - | ೧ | ೧ | ೪ | ೧೧ |
| ಸೂರ್ಯೋ ಯಥಾ ಸರ್ವಲೋಕಸ್ಯ | - | ೨ | ೨ | ೧೧ | ೧೫೧ |
| ಸ್ವಪ್ನಾನ್ತಂ ಜಾಗರಿತಾನ್ತಂ ಚ | - | ೨ | ೧ | ೪ | ೧೨೨ |
| ಸ್ವರ್ಗೇ ಲೋಕೇ ನ ಭಯಮ್ | - | ೧ | ೧ | ೧೨ | ೨೧ |
| ಹಗ್ಂಸಃ ಶುಚಿಷದ್ | - | ೨ | ೨ | ೨ | ೧೩೯ |
| ಹನ್ತ ತ ಇದಂ ಪ್ರವಕ್ಷ್ಯಾಮಿ | - | ೨ | ೨ | ೬ | ೧೪೫ |
| ಹನ್ತಾ ಚೇನ್ಮನ್ಯತೇ | - | ೧ | ೨ | ೧೯ | ೭೩ |


--------

# ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದಲ್ಲಿ ಯಾವ ಭಾಗದಲ್ಲಿ ಶಬ್ದವು ಬಂದಿದೆ ಎಂಬುದನ್ನು ಸೂಚಿಸುವವು.


೧. **ಅಗ್ನಿಃ-**
ವಿರಾಟ್ಪುರುಷ, ನಾಚಿಕೇತಾಗ್ನಿಯೂ ವಿರಾಟ್ಪುರುಷನೂ ಒಂದೇ, ೪, ೨೪, ೨೫, ೨೬, ೨೭, ೩೧, ೩೨, ೬೨.

೨. **ಅಗ್ನಿವಿದ್ಯಾ-**
ನಾಚಿಕೇತಾಗ್ನಿಯ ಚಯನ ಮತ್ತು ವಿರಾಟ್ಪುರುಷನ ಉಪಾಸನೆ, ೪, ೨೪.

೩. **ಅಚಿನ್ತ್ಯಶಕ್ತಿಃ -**
ಇಂಥದ್ದೆಂದು ಯೋಚಿಸುವದಕ್ಕೂ ಸಾಧ್ಯವಾಗದ ಶಕ್ತಿಯುಳ್ಳ, ೧೫೨.

೪. **ಅಜ್ಞಾನನಿದ್ರಾ-**
ತತ್ತ್ವವನ್ನು ತಿಳಿಯದೆ ಇರುವದೆಂಬ ನಿದ್ರೆ, ೧೦೫.

೫. **ಅಣುಃ -**
ಇಂದ್ರಿಯಗಳಿಗೆ ನಿಲುಕದ, ಸೂಕ್ಷ್ಮನಾದ, ೩೫, ೫೯, ೬೫, ೭೫.

೬. **ಅಧಿಕಾರೀ-**
ವಿದ್ಯೆಗೆ ತಕ್ಕವನು, ೬.

೭. **ಅಧಿದೈವಮ್ -**
ದೇವತೆಗಳ ವಿಷಯದಲ್ಲಿ, ೧೨೩.

೮. **ಅಧಿಯಜ್ಞಮ್ -**
ಯಜ್ಞದ ವಿಷಯದಲ್ಲಿ, ೧೨೨.

೯. **ಅಧ್ಯಾತ್ಮಮ್ -**
ಶರೀರದೊಳಗಿನ ವಿಷಯದಲ್ಲಿ, ೧೨೨ ೧೨೩, ತನ್ನ ಸ್ವರೂಪವನ್ನೇ, ೧೮೮.

೧೦. **ಅಧ್ಯಾತ್ಮಯೋಗಃ -**
ಮನಸ್ಸನ್ನು ವಿಷಯಗಳಿಂದ ಹಿಂದಕ್ಕೆಳೆದುಕೊಂಡು ಆತ್ಮನಲ್ಲಿಡುವದು, ೬೪.

೧೧. **ಅಧ್ಯಾರೋಪಣಮ್ -**
ಹುಟ್ಟುಗಟ್ಟುವದು, ಕಲ್ಪಿಸುವದು, ೩೨.

೧೨. **ಅಧ್ಯಾಸಃ -**
ಹುಟ್ಟುಗಟ್ಟುವದು, ಕಲ್ಪಿಸುವದು, ೧೫೧

೧೩. **ಅನಾದ್ಯವಿದ್ಯಾ-**
ಎಂದುಂಟಾಯಿತೆಂದು ತಿಳಿಯುವದಕ್ಕೆ ಆಗದಿರುವ ತಪ್ಪುತಿಳಿವಳಿಕೆ, ಆತ್ಮಾನಾತ್ಮರ ಅಧ್ಯಾಸ, ೧೦೫

೧೪. **ಅಪರಬ್ರಹ್ಮ-**
ಕಡಿಮೆಯ ಬ್ರಹ್ಮ, ಧ್ಯಾನಕ್ಕೆ ಇಟ್ಟುಕೊಳ್ಳುವ ಸಗುಣಬ್ರಹ್ಮ, ೮೬, ೧೫೭.

೧೫. **ಅಭ್ಯುದಯಃ -**
ಸಾಧನದಿಂದ ಪಡೆಯುವ ಸುಖ, ೪೮

೧೬. **ಅಃ**
ಮರಣವಿಲ್ಲದಿರುವದು, ದೇವತ್ವ ೨೪, ೧೮೪ ಪ್ರತ್ಯಗಾತ್ಮಸ್ವರೂಪದಿಂದ ನಿಲ್ಲುವ ಮುಕ್ತಿ, ೪೮, ೧೮೪.

೧೭. **ಅಮೃತಾಃ -**
ದೇವತೆಗಳು, ೪೫, ಬ್ರಹ್ಮ, ೧೬೦, ೧೭೨.

೧೮. **ಅವಿದ್ಯಾ-**
ಅಜ್ಞಾನ, ತಪ್ಪುತಿಳಿವಳಿಕೆ, ಆತ್ಮಾನಾತ್ಮರನ್ನು ಪರಸ್ಪರವಾಗಿ ಕಲ್ಪಿಸುವದು, ೪೮, ೫೩, ೫೪, ೮೪, ೮೭, ೧೧೨, ೧೨೫, ೧೨೬, ೧೪೩, ೧೪೫, ೧೫೧.

೧೯. **ಅವಿದ್ಯಾಕೃತಕಾಮಕರ್ಮಬನ್ಧನಮ್-**
ಅವಿದ್ಯೆಯಿಂದ ಆಗಿರುವ ಕಾಮಕರ್ಮಗಳೆಂಬ ಬಂಧ, ೧೩೪, ೧೮೧.

೨೦. **ಅವಿದ್ಯಾದಿಃ-**
ಅವಿದ್ಯೆ, ಕಾಮ, ಕರ್ಮ ಇವು ೨, ೫.

೨೧. **ಅವಿದ್ಯಾಗ್ರಂಥಯಃ -**
ಅವಿದ್ಯೆಯಿಂದ ಗಂಟುಹಾಕಿಕೊಂಡಿರುವ ಕಲ್ಪನೆಗಳು, ೧೮೨, ೧೮೩.

೨೨. **ಅವಿದ್ಯಾದಿಹೃದಯಗ್ರಂಥಯಃ -** ಅವಿದ್ಯೆಯಿಂದ ಗಂಟುಹಾಕಿಕೊಂಡಿರುವಂತೆ ಇರುವ, ಅವಿದ್ಯೆ, ಕಾಮ ಮುಂತಾದವುಗಳು, ೧೭೦.

೨೩. **ಅವಿದ್ಯಾಧ್ಯಾರೋಪಣಮ್ -** ತಪ್ಪುತಿಳಿವಳಿಕೆಯನ್ನು ಆತ್ಮನಲ್ಲಿ ಹುಟ್ಟುಗಟ್ಟುವದು, ೧೭೫.

೨೪. [illegible] ಅವಿದ್ಯೆಯಿಂದಾದ ಹುಸಿತೋರಿಕೆ ಯಿಂದ ಮರೆಯಾಗಿರುವ, ೧೦೧.

೨೫. **ಅವ್ಯಕ್ತಬೀಜಮ್ -** ಜಗತ್ತಿಗೆ ಕಾರಣವಾಗಿರುವ ನಾಮರೂಪಗಳ ಸೂಕ್ಷ್ಮಾವಸ್ಥೆ, ೧೫೭.

೨೬. **ಅವ್ಯಕ್ತಮ್ -** ಇಂದ್ರಿಯಗಳಿಗೆ ಗೋಚರವಾಗದ ಸೂಕ್ಷ್ಮವಾದ ಜಗತ್ತಿನ ಕಾರಣರೂಪ, ಅವ್ಯಾಕೃತ, ೯೯.

೨೭. **ಅವ್ಯಕ್ತಾದಿಸ್ಥಾವರಾನ್ತಃ -** ಅವ್ಯಕ್ತದಿಂದ ಹಿಡಿದು ಮರಗಿಡಗಳವರೆಗೆ ಹಬ್ಬಿರುವ ಸಂಸಾರ, ೧೫೭.

೨೮. **ಅವ್ಯಾಕೃತಮ್ -** ಬಿಡಿಬಿಡಿಯಾಗಿಲ್ಲದ ನಾಮರೂಪಗಳ ತತ್ತ್ವ, ೯೯.

೨೯. **ಅಸಂಸ್ಕೃತಬುದ್ಧಿಃ -** ಆಚಾರ್ಯರ ಮತ್ತು ಶಾಸ್ತ್ರದ ಉಪ ದೇಶ, ಶಮಾದಿಗಳು-ಇವುಗಳಿಂದ ಸಂಸ್ಕಾರವನ್ನು ಹೊಂದದ ಅಂತಃಕರಣ, ೧೦೨.

೩೦. **ಅಸಂಹತಃ -** ಮತ್ತೆ ಯಾವದೊಂದರೊಡನೆಯೂ ಸೇರಿಕೊಳ್ಳದೆ ಸ್ವತಂತ್ರನಾಗಿರುವ ವನು, ೧೩೪.

೩೧. **ಆಕಾಶಃ -** ಪಂಚಭೂತಗಳಲ್ಲಿ ಮೊದಲು ಸೃಷ್ಟಿಯಾಗಿರುವ ಭೂತ, ೭೨, ೭೩, ೭೯, ೧೦೬, ೧೨೫, ೧೫೨, ೧೬೭; ಅವ್ಯಾಕೃತ, ೯೯.

೩೨. **ಆಗಮಃ -** ಗುರುಪರಂಪರೆಯಿಂದ ಬಂದಿರುವ ತತ್ತ್ವೋಪದೇಶ, ೫೮; ೬೦; ವೇದ, ೧೭೮

೩೩. **ಆಚಾರ್ಯಾಗಮಸಂಸ್ಕೃತಮ್-** ಗುರುಗಳ ಉಪದೇಶದಿಂದಲೂ ಶಾಸ್ತ್ರದಿಂದಲೂ ಸಂಸ್ಕಾರವನ್ನು ಹೊಂದಿರುವ ಅಂತಃಕರಣ, ೧೨೬.

೩೪. **ಆತ್ಮದರ್ಶನಮ್ -** ಆತ್ಮನನ್ನು ಅರಿತುಕೊಳ್ಳುವದು, ೧೧೨, ೧೬೫.

ಆತ್ಮನ ನಿಜದ ಅರಿವು, ೩೨, ೧೦೫.

೩೬. **ಆತ್ಮಭಾವಃ -** ತಾನೆಂಬ ಭಾವನೆ, ೨೮ ; ತಾನೆಂಬ

೩೭. **ಆತ್ಮಾ -** ತಾನು, ಜೀವನ ನಿಜವಾದ ಸ್ವರೂಪವಾಗಿರುವ ಪರಮಾತ್ಮ, ೩೨ ; ೩೩, ೩೬, ೩೭, ೫೭, ೫೯, ೬೦, ೬೨, ೬೪, ೬೫, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೦, ೮೧, ೮೨, ೮೩, ೮೪, ೮೬, ೮೮, ೮೯, ೧೦೩, ೧೦೭, ೧೧೫, ೧೧೭, ೧೧೮, ೧೨೬, ೧೩೨, ೧೩೪, ೧೩೫, ೧೩೯, ೧೪೦, ೧೪೧, ೧೪೨, ೧೪೭, ೧೫೧, ೧೫೨, ೧೫೩, ೧೫೪, ೧೬೫, ೧೬೭, ೧೬೮, ೧೭೨, ೧೭೮, ೧೭೯, ೧೮೦, ೧೮೧

೩೮.

ಆತ್ಮನು ಒಬ್ಬನೇ ಎಂಬುದು, ೧೩೭.

೩೯. **ಆತ್ಮೈಕತ್ವವಿಜ್ಞಾನಮ್ -** ಆತ್ಮನು ಒಬ್ಬನೇ ಎಂಬ ಅರಿವು, ೫೮, ೧೪೬.

೪೦. **ಆತ್ಯನ್ತಿಕನಿಶ್ಶ್ರೇಯಸಮ್ -** ಪುನರಾವೃತ್ತಿಯಿಲ್ಲದ ಮುಕ್ತಿ, ೩೨.

೪೧. **ಆಪೇಕ್ಷಿಕಂ ನಿತ್ಯಮ್ -** ಒಂದಕ್ಕೆ ಹೋಲಿಸಿದರೆ ನಿತ್ಯವಾದ, ೬೨.

೪೨. **ಆಲಮ್ಬನಮ್** - ಯಾವದನ್ನು ಬ್ರಹ್ಮವೆಂದು ಧ್ಯಾನಿಸ ಬೇಕೋ ಅಂಥ ಓಂಕಾರವೇ ಮುಂತಾದದ್ದು, ೭೦.

೪೩. **ಆಸುರಃ ಪಕ್ಷಃ** - ಆತ್ಮನು ಇಲ್ಲವೆಂಬ, ದೇಹಾಭಿಮಾನಿಗಳಾದವರಿಗೆ ಮೆಚ್ಚಾದ ಪಕ್ಷ, ೧೭೯.

೪೪. **ಉತ್ಕೃಷ್ಟಬ್ರಹ್ಮವಿದ್ಯಾ**- ಹೆಚ್ಚಿನ ಬ್ರಹ್ಮದ; ಪರಬ್ರಹ್ಮದ ವಿದ್ಯೆ, ೧೮೩

೪೫. **ಉಪನಿಷತ್** - ಬ್ರಹ್ಮಜ್ಞಾನ, ೨, ೩ ; ಅಗ್ನಿವಿದ್ಯೆ, ವಿರಾಡುಪಾಸನೆ, ೪ ; ಪರಾಪರಬ್ರಹ್ಮಜ್ಞಾನವನ್ನು ತಿಳಿಸುವ ಗ್ರಂಥ, ೫.

೪೬. **ಉಪಾಧಿಃ** - ಆತ್ಮನಲ್ಲಿಲ್ಲದ ಧರ್ಮವನ್ನು ಇರುವಂತೆ ತೋರಿಸುವದಕ್ಕೆ ಕಾರಣವಾಗಿರುವ ದೇಹಾದಿಗಳು, ೭೭, ೮೭, ೮೯, ೧೨೫, ೧೨೮, ೧೩೧, ೧೫೨, ೧೮೦.

೪೭. **ಏಕತ್ವಮ್** - ಆತ್ಮನು ಒಬ್ಬನೇ ಆಗಿರುವದು, ೧೩೨.

೪೮. **ಏಃ** ಆತ್ಮನು ಒಬ್ಬನೇ ಎಂಬುದನ್ನು ತಿಳಿದುಕೊಳ್ಳುವದು, ೧೨೬.

೪೯. **ಏಕದೇಶವಿಜ್ಞಾನಮ್** - ಒಂದಂಶವಾದ ಅರಿವು, ಬಿಡಿಯರಿವು, ೭೭

**ಏಕರಸಮ್** - ಒಂದೇ ಜಾತಿಯ, ಮತ್ತೊಂದರ ಬೆರಕೆಯಿಲ್ಲದ ಆತ್ಮ, ೧೨೬, ೧೫೨.

೫೧. **ಏಕಾಗ್ರತಾ** - ಮನಸ್ಸನ್ನು ಒಕ್ಕಡೆಗೆ ನಿಲ್ಲುವಂತೆ ತಿದ್ದಿದ ವೃತ್ತಿ, ೧೦೨.

**ಏಷಣಾ**- ಮಕ್ಕಳು, ಕರ್ಮ, ಲೋಕ - ಇವುಗಳ ಬಯಕೆ, ೧೧೩, ೧೩೪, ೧೫೪.

೫೩. **ಓಂಶಬ್ದವಾಚ್ಯಮ್** - ಓಂ ಎಂಬ ಶಬ್ದದಿಂದ ಹೇಳಲ್ಪಡುವ ಬ್ರಹ್ಮ, ೬೮.

೫೪. **ಕಾರ್ಯಕರಣಾನಿ** - ದೇಹೇಂದ್ರಿಯಗಳು, ೧೨೦, ೧೨೫, ೧೩೯.

೫೫. **ಕಾರ್ಯಪ್ರವಿಲಾಪನಮ್** - ಕಾರ್ಯಗಳನ್ನೆಲ್ಲ ತಮ್ಮ ತಮ್ಮ ಕಾರಣಕ್ಕಿಂತ ಬೇರೆಯಲ್ಲವೆಂದು ಚಿಂತಿಸುವದು, ೧೭೮.

೫೬. **ಕುತಾರ್ಕಿಕಭೇದದೃಷ್ಟಿಃ** - ವೈದಿಕೋಪದೇಶಕ್ಕೆ ವಿರುದ್ಧವಾದ ಕೆಟ್ಟ ತರ್ಕದಿಂದ ಭೇದವನ್ನು ಕಾಣುವ ದೃಷ್ಟಿ, ೧೩೨.

೫೭. **ಕುದೃಷ್ಟಿಃ** - ಇರುವದನ್ನು ಇಲ್ಲವೆನ್ನುವ ವೇದವಿರುದ್ಧವಾದ ತಪ್ಪುತಿಳಿವಳಿಕೆ, ೧೩೨.

೫೮. **ಕೂಟಸ್ಥಮ್** - ಯಾವ ವಿಕಾರವೂ ಇಲ್ಲದ ಆತ್ಮತತ್ತ್ವ, ೧೨೯.

೫೯. **ಕ್ರಿಯಾಕಾರಕಫಲಾನಿ**- ಕ್ರಿಯೆ, ಅದನ್ನುಂಟುಮಾಡುವದಕ್ಕೆ ಬೇಕಾದ ಸಾಮಗ್ರಿಗಳು, ಅದರ ಫಲ - ಈ ರೂಪವಾದ ಸಂಸಾರ, ೩೨, ೧೦೪, ೧೫೧.

೬೦. **ಕ್ಷಣಭಙ್ಗವಾದಃ** - ಒಂದೊಂದು ಕ್ಷಣಕ್ಕೂ ಜ್ಞಾನವು ನಾಶವಾಗಿ ಹುಟ್ಟುವದೆಂಬ ಬೌದ್ಧವಾದ, ೧೨೯.

೬೧. **ಖಾನಿ**- ಆಕಾಶದಿಂದ ಆಗಿರುವ ಶ್ರೋತ್ರವೇ ಮುಂತಾದ ಇಂದ್ರಿಯಗಳು, ೧೧೧.

೬೨. **ಗನ್ಧರ್ವನಗರಮ್** - ಆಕಾಶದಲ್ಲಿ ಕಲ್ಪಿತವಾಗಿ ತೋರಿಹಾರುವ ನೋಟ, ೧೫೭.

೬೩. **ಗುಹಾ** - ಹೃದಯ, ಬುದ್ಧಿ, ೨೫, ೬೪, ೮೫, ೧೨೦.

೬೪. **ಗ್ರನ್ಥಯಃ**- ಗಂಟುಹಾಕಿಕೊಂಡಂತೆ ಬಲವಾಗಿರುವ ಅವಿದ್ಯಾಪ್ರತ್ಯಯಗಳು, ೧೮೨.

೬೫. **ಚಿನ್ಮಾತ್ರಘನಃ -**
ಬರಿಯರಿವಿನ ಗಟ್ಟಿ, ೯೯.

೬೬. [illegible]
ಬರಿಯರಿವಿನರೂಪದ ಆತ್ಮತತ್ತ್ವ, ೧೬೭.

೬೭. **ಜ್ಞಾನಕರ್ಮಸಮುಚ್ಚಯಃ -**
ಉಪಾಸನೆಯನ್ನೂ ಕರ್ಮವನ್ನೂ ಕೂಡಿಸಿ ಅನುಷ್ಠಾನಮಾಡುವದು, ೨೮.

೬೮. **ತರ್ಕಃ -**
ತನ್ನ ಬುದ್ಧಿಯಿಂದಲೇ ಊಹಿಸುವದು, ೫೯, ೬೦.

೬೯. **ತ್ರಿಣಾಚಿಕೇತಾಃ -**
ನಾಚಿಕೇತಾಗ್ನಿಯನ್ನು ಮೂರುಸಲ ಚಯನ ಮಾಡಿದವರು, ಅಥವಾ ಅದನ್ನು ಅರಿತು ಅಧ್ಯಯನಮಾಡಿ ಅನುಷ್ಠಾನಮಾಡಿರುವವರು, ೨೮, ೮೫

೭೦. **ದರ್ಶನಶ್ರವಣಮನನ ವಿಜ್ಞಾನಾದಿಲಿಙ್ಗಃ -**
ನೋಡುವದು, ಕೇಳುವದು, ಯೋಚಿಸುವದು, ಅರಿಯುವದು ಎಂಬ ವೃತ್ತಿಗಳಿಂದ ಊಹಿಸಿ ತಿಳಿದುಕೊಳ್ಳಬೇಕಾಗಿರುವ ಆತ್ಮ, ೭೫.

೭೧. **ದೃಷ್ಟಾದೃಷ್ಟವಿಷಯಾಃ -**
ಈ ಲೋಕದ ಮತ್ತು ಪರಲೋಕದ ವಿಷಯಗಳು, ೭೫ ; ಇವನ್ನು 'ದೃಷ್ಟಾನು ಶ್ರವಿಕ ವಿಷಯಾಃ' ಎಂದೂ ಕರೆಯುವ ದುಂಟು, ೨.

೭೨. **ದೇವಃ -**
ದೇವತೆ, ೪೦, ೧೧೩ ೧೨೦. ವಿರಾಟ್ಪುರುಷ, ೨೮ ; ಪರಮಾತ್ಮ, ೬೪, ೭೭.

೭೩. **ದೇಹಾದಿಸಙ್ಘಾತಃ -**
ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು ಇವುಗಳು ಒಟ್ಟುಗೂಡಿ ಕೆಲಸ ಮಾಡುವ ಗುಂಪು, ೧೧೧, ೧೧೫.

೭೪. **ಧರ್ಮಃ-**
ಆತ್ಮ, ೩೫, ೩೭, ೧೩೦.

೭೫. **ನಾಮರೂಪಕರ್ಮತ್ರಯಮ್**
ನಾಮ, ರೂಪ, ಕರ್ಮ - ಎಂಬ ಮೂರು ರೂಪದಲ್ಲಿ ತೋರಿಕೊಳ್ಳುವ ಜಗತ್ತು, ೧೦೪.

೭೬. **ನಿತ್ಯವಿಜ್ಞಪ್ತಿಸ್ವರೂಪಮ್ -**
ಯಾವಾಗಲೂ ಇರುವ ಅರಿವಿನ ಸ್ವರೂಪವಾದ ಬ್ರಹ್ಮ, ೧೦೭.

೭೭. **ನಿತ್ಯವಿಜ್ಞಾನಘನಸ್ವಭಾವಮ್**
ನಿತ್ಯವಾದ ಅರಿವಿನ ಗಟ್ಟಿಯ ಸ್ವರೂಪವಾದ ಬ್ರಹ್ಮ, ೧೨೫.

೭೮. **ನಿರನ್ವಯಂ ಪ್ರವಿಲೀಯತೇ -**
ಕಾರಣಸಹಿತವಾಗಿ ನಾಶವಾಗುತ್ತದೆ ಎಂಬ ನಾಸ್ತಿಕರ ಮತ, ೧೭೮.

೭೯. **ನಿರುಪಾಧಿಕಮ್** - ಉಪಾಧಿಯಿಲ್ಲದ ಬರಿಯ ಆತ್ಮ ೧೭೯, ೧೮೦.

೮೦. **ನಿಃಶ್ರೇಯಸಮ್ -**
ಎಲ್ಲಕ್ಕೂ ಹೆಚ್ಚಿನ ಹಿತ, ಮುಕ್ತಿ, ೩೨, ೩೭, ೪೮.

೮೧. **ನಿವೃತ್ತಿಃ-**
ಕರ್ಮಗಳನ್ನು ಬಿಡುವದು, ಜ್ಞಾನ ಮಾರ್ಗ, ೯೦.

೮೨. **ಪಞ್ಚಾಗ್ನಯಃ -**
ಛಾಂದೋಗ್ಯದಲ್ಲಿ ಪಂಚಾಗ್ನಿ ವಿದ್ಯೆಯನ್ನು ಬಲ್ಲವರು,

೮೩. **ಪರಂ ಬ್ರಹ್ಮ** - ಛಾಂದೋಗ್ಯದಲ್ಲಿ ತಿಳಿದುಕೊಳ್ಳ ಬೇಕೆಂದು ಹೇಳಿರುವ ಬ್ರಹ್ಮ, ೩, ೮೫, ೮೬, ೧೫೭, ೧೬೦.

೮೪. **ಪರಃ ಪುರುಷಾರ್ಥಃ**- ಪುರುಷನು ಬಯಸುವ ಮಹಾಫಲಗಳಲ್ಲಿ ಮುಖ್ಯವಾದ ಮೋಕ್ಷ, ೩೩, ೪೫.

೮೫. **ಪರಮಾತ್ಮಾ -**
ಆತ್ಮನೆಂದು ನಾವು ತಿಳಿದುಕೊಂಡಿರುವವುಗಳೆಲ್ಲಕ್ಕೂ ಆತ್ಮನು, ೯೬.

೮೬. **ಪರಮಾರ್ಥಸತ್ಯಮ್-**
ನಿಜವಾಗಿಯೂ ಸತ್ಯವಾಗಿರುವದು, ಬ್ರಹ್ಮ, ೧೫೮.

**೮೭. ಪರಾರ್ಥಃ-**
ಮತ್ತೊಬ್ಬನ ಪ್ರಯೋಜನಕ್ಕಾಗಿರುವ ಅಧೀನದ ವಸ್ತು, ೧೪೧.

**೮೮. ಪಾಷಣ್ಡಃ -**
ಅಥವಾ 'ಪಾಖಣ್ಡಃ' ಅವೈದಿಕಮತದವನು, ೧೫೭.

**೮೯. ಪುರುಷಃ-**
ಮನುಷ್ಯ, ೧೮, ೪೮; ಎಲ್ಲವನ್ನೂ ತುಂಬಿಕೊಂಡಿರುವ ಪರಮಾತ್ಮ, ೯೯, ೧೦೧, ೧೨೮, ೧೨೯.

**೯೦. ಪುರುಷಾರ್ಥಃ-**
ಮನುಷ್ಯನು ಬಯಸುವದು, ೪೫, ೪೮.

**೯೧. ಪ್ರತೀಕಮ್ -**
ಉಪಾಸನೆಗೆಂದು ಇಟ್ಟುಕೊಳ್ಳುವ ಗುರುತಿನ ವಸ್ತು ; ಉದಾಹರಣೆಗೆ ಓಂಕಾರವು ಬ್ರಹ್ಮಕ್ಕೆ ಪ್ರತೀಕವು, ೬೯.

**೯೨. ಪ್ರತ್ಯಗಾತ್ಮಾ-** ಒಳಗಿನ ತಿರುಳಾಗಿರುವದು, ಆತ್ಮ, ೭೯, ೯೭, ೯೮, ೧೦೦, ೧೧೧, ೧೧೯.

**೯೩. ಪ್ರತ್ಯವಾಯಃ-** ಕರ್ಮವನ್ನು ಬಿಟ್ಟಿದ್ದರಿಂದ ಆಗುವ ದೋಷ, ೧೭.

**೯೪. ಪ್ರಥಮಜಃ-**
ಅವ್ಯಕ್ತದಿಂದ ಮೊದಲು ಹುಟ್ಟುವ ಹಿರಣ್ಯಗರ್ಭ, ೧೦೩, ೧೨೦.

**೯೫. ಪ್ರಥಮಶರೀರೀ-**
ಹಿರಣ್ಯಗರ್ಭನಿಂದ ಮೊದಲು ಶರೀರಿಯಾಗಿ ಹುಟ್ಟುವ ವಿರಾಟ್ಪುರುಷ, ೨೬.

**೯೬. ಪ್ರಯೋಜನಮ್** - ನಮಗೆ ಆಗಬೇಕಾದ ಫಲ, ಗ್ರಂಥದ ನಾಲ್ಕು ಅನುಬಂಧಗಳಲ್ಲಿ ಒಂದು, ೪೬, ೪೮.

**೯೭. ಪ್ರವೃತ್ತಿಃ -**
ಕರ್ಮಗಳಲ್ಲಿ ತೊಡಗುವದು, ಕರ್ಮಮಾರ್ಗ, ೯೦.

**೯೮. ಪ್ರಾಕೃತಃ-**
ಪ್ರಕೃತಿಯಿಂದಾಗಿರುವ ದೇಹಾದಿ ಗಳಲ್ಲಿ ಅಭಿಮಾನವಿರುವವ, ೩೫, ೫೮, ೮೩, ೧೫೪.

**೯೯. ಪ್ರಾಣಃ-**
ಪ್ರಾಣವೇ ಮುಂತಾದ ವೃತ್ತಿಯುಳ್ಳ ವಾಯು, ೧೪೧, ೧೪೫ ; ಪರಮಾತ್ಮ, ೧೨೩, ೧೬೦.

**೧೦೦. ಬುದ್ಧಿಃ-**
ನಿಶ್ಚಯಾತ್ಮಕವಾದ ಅಂತಃಕರಣವೃತ್ತಿ ; ಈ ಮಾತನ್ನು ಅಂತಃಕರಣವೆಂಬರ್ಥದಲ್ಲಿಯೂ ಉಪಯೋಗಿಸುವದುಂಟು. ೮೮, ೮೯, ೯೨, ೯೬; ಮಹತ್ತತ್ತ್ವ, ೧೦೩, ೧೦೩, ೧೦೫, ೧೭೪, ೧೭೭.

**೧೦೧. ಬೋಧಾಬೋಧಾತ್ಮಕಂ ತತ್ತ್ವಮ್-**
ಜ್ಞಾನರೂಪವಾಗಿಯೂ ಜಡರೂಪವಾಗಿಯೂ ಇರುವ ಮಹತ್ತತ್ತ್ವ, ೯೮.

**೧೦೨. ಬ್ರಹ್ಮ -**
ಬ್ರಾಹ್ಮಣ, ೮೩, ೧೧೯ ; ಎಲ್ಲಕ್ಕೂ ಹೆಚ್ಚಿನ ತತ್ತ್ವ, ಪರಮಾತ್ಮತತ್ತ್ವ, ೩, ೬೫, ೮೫, ೮೬, ೧೦೭, ೧೨೨, ೧೨೩, ೧೨೪, ೧೩೦, ೧೪೨, ೧೪೫, ೧೫೮, ೧೭೨, ೧೭೭.

**೧೦೩. ಬ್ರಹ್ಮಚರ್ಯಮ್ -**
ಗುರುವಿನ ಬಳಿಯಲ್ಲಿದ್ದು ಶಾಸ್ತ್ರಾಭ್ಯಾಸ, ಬ್ರಹ್ಮವಿಚಾರವೇ ಮುಂತಾದದ್ದನ್ನು ಮಾಡುವದು, ಮೈಥುನವನ್ನು ಬಿಟ್ಟಿರುವದು, ೬೮.

**೧೦೪. ಬ್ರಹ್ಮಜಜ್ಞ-**
ಹಿರಣ್ಯಗರ್ಭನಿಂದ ಹುಟ್ಟಿದ ಸರ್ವಜ್ಞನಾದ ವಿರಾಟ್ಪುರುಷ, ೨೮.

**೧೦೫. ಬ್ರಹ್ಮವಿದ್ಯಾ-** ಬ್ರಹ್ಮವನ್ನು ಅರಿತುಕೊಳ್ಳುವದು, ೩, ೧೮೮.

**೧೦೬. ಬ್ರಹ್ಮಲೋಕಃ-**
ಬ್ರಹ್ಮ, ೭೦, ೧೦೮ ; ಬ್ರಹ್ಮನ ಲೋಕ ೭೭, ೧೬೪, ೧೬೫.

೧೦೭. ಬ್ರ
ಬ್ರಹ್ಮವಿದ್ಯೆಯನ್ನು ತಿಳಿದುಕೊಂಡು ಮತ್ತೊಬ್ಬರಿಗೂ ತಿಳಿಸುವ ಗುರು, ೧.

೧೦೮. ಬ್ರಹ್ಮಾ -
ಬ್ರಹ್ಮನು, ಹಿರಣ್ಯಗರ್ಭ, ೨೮, ೪೩, ೧೮೪.

ಬ್ರಹ್ಮಾತ್ಮದರ್ಶನಮ್ - ಬ್ರಹ್ಮವು ... ತಿಳಿವಳಿಕೆ. ೧೫೭.

- ಬ್ರಹ್ಮವು ನಮ್ಮ ಆತ್ಮನಂಬ ತಳಿವಳಿಕ. ೧೮೨.

ಬ್ರಹ್ಮಾತ್ಮೈಕತ್ವವಿಜ್ಞಾನಮ್ -
ಬ್ರಹ್ಮವೂ ನಮ್ಮ ಆತ್ಮನೂ ಒಬ್ಬನೇ ಎಂಬ ತಿಳಿವಳಿಕೆ, ೩೨, ೧೮೨.

೧೧೨. ಬ್ರಹ್ಮಾದಯಃ-
ಬ್ರಹ್ಮನೇ ಮೊದಲಾದ ಜೀವರು, ೧೫೩

೧೧೩. ಬ್ರ... ನಿ-
'ಬ್ರಹ್ಮಾದಿಸ್ಥಾವರಾನ್ತಾನಿ' ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನವು, ೭೫, ೧೧೧, ೧೨೪.

೧೧೪. ಭಗವಾನ್ - ಸೂಕ್ಷ್ಮವಿಚಾರಗಳನ್ನು ಬಲ್ಲ ಪೂಜ್ಯನು, ೧, ೬೬.

೧೧೫. ಭೂತಸೂಕ್ಷ್ಮಮ್ -
ಭೂತಗಳ ಸೂಕ್ಷ್ಮರೂಪ, ೯೮.

೧೧೬. ಭೋಕ್ತಾ -
ಶರೀರ, ಇಂದ್ರಿಯಗಳು, ಮನಸ್ಸು - ಇವುಗಳಿಂದ ವಿಷಯಗಳನ್ನು ಅನುಭವಿಸುವ ಆತ್ಮ, ೮೯.

೧೧೭. ಮನಃ-
ಸಂಕಲ್ಪವಿಕಲ್ಪಗಳನ್ನು ಮಾಡುವ ಅಂತಃಕರಣ ವೃತ್ತಿ - ಅಂತಃಕರಣವೆಂಬ ಅರ್ಥದಲ್ಲಿಯೂ ಈ ಶಬ್ದದ ಪ್ರಯೋಗವಾಗುತ್ತದೆ, ೮೮, ೮೯, ೯೦, ೧೨೬.

೧೧೮. ಮನ್ದಬ್ರಹ್ಮವಿದಃ
ಬ್ರಹ್ಮವನ್ನು ಚೆನ್ನಾಗಿ ಅರಿಯದವರು ಅಪರಬ್ರಹ್ಮವನ್ನು ಉಪಾಸನೆಮಾಡುವವರು, ೧೮೩.

೧೧೯. ಮಹಾನ್ ಆತ್ಮಾ -
ಅವ್ಯಕ್ತದಿಂದಾಗಿರುವ ಚಿದ್ರೂಪಜಡ ರೂಪಗಳ ಒಟ್ಟು ; ಹಿರಣ್ಯಗರ್ಭನ ಬುದ್ಧಿ. ೯೮, ೧೦೩, ೧೬೯.

೧೨೦. ಮಾಯಾ-
ಕಣ್ಣುಕಟ್ಟಿನಿಂದ ತೋರುವ ವಸ್ತು, ೧೫೭, ೧೫೮ ; ಪರಮೇಶ್ವರನ ಮಾಯಾ ಶಕ್ತಿ, ೧೦೧ ಅವಿದ್ಯಾರೂಪದಿಂದ ತೋರಿಕೊಳ್ಳುವ ಮಾಯೆ, ೧೦೧.

೧೨೧. ಮಿಥ್ಯಾಜ್ಞಾನವಿಜೃಮ್ಭಿತಮ್-
ತಪ್ಪುತಿಳಿವಳಿಕೆಯಿಂದ ತೋರುವ ಭೇದ, ೧೦೪.

೧೨೨. ಮೃತ್ಯುಃ -
ಯಮ. ೨೪, ೨೫, ೨೬, ೪೨, ೪೬, ೧೮೮; ಅವಿದ್ಯಾಕಾಮಕರ್ಮಗಳು, ೧೦೭, ೧೧೩, ೧೮೧ ; ಮರಣ : ೧೨೫, ೧೩೬.

೧೨೩. ಮೃತ್ಯುಪಾಶಃ-
ಅಧರ್ಮ, ಅಜ್ಞಾನ, ರಾಗ, ದ್ವೇಷ - ಮುಂತಾದವು, ೩೦ ; ಜನನಮರಣಗಳು. ೧೨೫.

೧೨೪. ಯೋಗಃ-
ಆತ್ಮನನ್ನು ತಿಳಿಯುವದಕ್ಕೆ ಬೇಕಾದ ಸಾಧನ, ೬೪. ಇಂದ್ರಿಯಗಳನ್ನು ಸ್ಥಿರವಾಗಿ ಹಿಡಿದಿಟ್ಟುಕೊಳ್ಳುವದು, ೧೭೫.

೧೨೫. ಯೋಗಕ್ಷೇಮೌ - ಬೇಕಾದದ್ದನ್ನು ಸಂಪಾದಿಸಿಕೊಳ್ಳುವದು, ಅದನ್ನು ಕಾಪಾಡಿಕೊಳ್ಳುವದು, ೫೦.

೧೨೬. ಲಿಙ್ಗಮ್ -
ಗುರುತು, ಆತ್ಮನನ್ನರಿತುಕೊಳ್ಳುವದಕ್ಕೆ ಬೇಕಾದದ್ದು, ೧೩೭.

೧೨೭. ವಾಸುದೇವಾಖ್ಯಃ -
ಪರಮಾತ್ಮನು, ೯೬.

೧೨೮. ವಿಜ್ಞಾನಕ್ರಿಯಾಶಕ್ತಿದ್ವಯಮ್-
ಅರಿಯುವ ಶಕ್ತಿ, ಕೆಲಸಮಾಡುವಶಕ್ತಿ ಎಂಬ ಎರಡು ಹಿರಣ್ಯಗರ್ಭನ ಶಕ್ತಿಗಳು, ೧೫೭.

೧೨೯. ವಿಜ್ಞಾನಸ್ವಭಾವಃ – ಅರಿವಿನ ಸ್ವರೂಪವೇ ಆಗಿರುವ ಆತ್ಮನು, ೧೧೫.

೧೩೦. ವಿಜ್ಞಾನೈಕರಸಮ್ – ಅರಿವೆಂಬ ಒಂದೇ ಜಾತಿಯ ಬ್ರಹ್ಮ, ೧೨೫.

ವಿಶುದ್ಧವಿಜ್ಞಾನಘನಸ್ವಭಾವಮ್- ವಿಷಯದ ಕಲಂಕವಿಲ್ಲದ ಬರಿಯ ಅರಿವೇ ಆಗಿರುವ ಬ್ರಹ್ಮ, ೧೩೧.

೧೩೧ ವಿದ್ಯಾ- ಬ್ರಹ್ಮದ ಉಪಾಸನೆ ಅಥವಾ ಅರಿವು, ೨, ೪, ೫, ೬, ೪೮, ೮೪, ೮೭.

೧೩೨. ವಿಶೇಷರಹಿತಃ- ಇಂಥದ್ದೆಂದು ಹೇಳುವದಕ್ಕೆ ಆಗುವ ವಿಕಲ್ಪವಿಲ್ಲದವ, ೧೭೮.

೧೩೩. ಗಡಿಗೆ, ಬಟ್ಟೆ, ಕಲ್ಲು ಎಂದು ಬಿಡಿಬಿಡಿಯಾಗಿ ಆಗುವ ಅರ್ಥವು, ೭೭.

೧೩೪. ವೃತ್ತಿಃ- ಗ್ರಂಥದ ವಿವರಣೆ, ೧, ಶಬ್ದದ ವ್ಯಾಪಾರ, ೫; ನಡತೆ, ೧೩.

೧೩೫. ವೈರಾಜಂ ಪದಮ್ – ವಿರಾಟ್ಪುರುಷನ ಸ್ಥಾನ, ೨೮, ೩೦.

೧೩೬. ಶಾಶ್ವತಂ ಸುಖಮ್ – ನಿತ್ಯವಾದ ಆತ್ಮಸ್ವರೂಪವೇ ಆಗಿರುವ ಸುಖ, ೧೫೨.

೧೩೭. ಸಂಸಾರಃ- ಹುಟ್ಟುಹೊಂದುಗಳನ್ನು ಪಡೆಯುವದು, ೬೩, ೮೭, ೯೩.

೧೩೮. ಸಂಸಾರಿಣಃ-ಸಂಸಾರವನ್ನು ಹೊಂದುವ ಜೀವರು, ೯೯.

೧೩೯. ಸಂಸಾರಬೀಜಮ್ – ಸಂಸಾರಕ್ಕೆ ಕಾರಣವಾದ ಅಜ್ಞಾನ, ಕಾಮ, ಕರ್ಮ, ೨, ೩೨.

೧೪೦. ಸಂಸಾರಹೇತುಃ- ಸಂಸಾರಕ್ಕೆ ಕಾರಣವಾದ ಅಜ್ಞಾನ, ಕಾಮ, ಕರ್ಮ, ೫.

೧೪೧. ಸಂಸ್ಕೃತಬುದ್ಧಿ- ಶಾಸ್ತ್ರಾಚಾರ್ಯರಿಂದ ಸಂಸ್ಕಾರವನ್ನು ಹೊಂದಿದ ಬುದ್ಧಿ, ೧೦೨.

೧೪೨. ಸಂಸ್ಕೃತಾತ್ಮಾ- ಸಂಸ್ಕಾರವನ್ನು ಹೊಂದಿದ ಬುದ್ಧಿಯುಳ್ಳವ, ೫೭.

೧೪೩. ಸಂಹತಾಃ- ಒಟ್ಟುಗೂಡಿ ಮತ್ತೊಂದಕ್ಕಾಗಿ ಕೆಲಸ ಮಾಡುವ ವಸ್ತುಗಳು, ೧೪೧.

೧೪೪. ಸಙ್ಕಲ್ಪವಿಕಲ್ಪಾದ್ಯಾರಮ್ಭಕಮ್- ಸಂಕಲ್ಪ, ವಿಕಲ್ಪ - ಮುಂತಾದವುಗಳಿಗೆ ಕಾರಣವಾದ ೯೮.

೧೪೫. ಹೀಗೆ ಮಾಡುವೆನೆಂದು ಕಲ್ಪಿಸುವದು, ಇದು ಇಂಥದ್ದೆಂದು ಕಲ್ಪಿಸುವದು, ಮುಂತಾದ ವ್ಯಾಪಾರವುಳ್ಳ ಮನಸ್ಸು, ೮೮.

೧೪೬. ಸಙ್ಕಲ್ಪಾದಿರೂಪಮ್- ಸಂಕಲ್ಪವೇ ಮುಂತಾದದ್ದನ್ನು ಮಾಡುವ ಮನಸ್ಸು, ೧೭೨.

೧೪೭. ಸಙ್ಕಲ್ಪಾದಿವ್ಯಾವೃತ್ತಮ್- ಸಂಕಲ್ಪವೇ ಮುಂತಾದ ವ್ಯಾಪಾರಗಳಿಂದ ಹಿಂತಿರುಗಿದ ಮನಸ್ಸು, ೧೭೪.

೧೪೮. ಅವಶ್ಯವಾಗಿ ಆಗುವ ಕರ್ಮಫಲ, ೮೫.

೧೪೯. ಅಂತಃಕರಣ, ೬; ಬುದ್ಧಿ ೧೬೯.

೧೫೦. ಸದೇಕರಸಮ್- ಸದ್ರೂಪವೆಂಬ ಒಂದೇ ರೂಪವುಳ್ಳ ಬ್ರಹ್ಮ, ೧೫೨.

೧೫೧. ಸಮಾಧಾನಮ್ – ಮನಸ್ಸನ್ನು ಅಲುಗಾಡಿಸದೆ ಇಟ್ಟುಕೊಳ್ಳುವ ಯೋಗ, ೧೭೫.

೧೫೨. ಸಮಾಹಿತಚಿತ್ತಃ- ಚಿತ್ತವನ್ನು ಏರುಪೇರಿಲ್ಲದಂತೆ ನಿಲ್ಲಿಸಿಕೊಂಡವನು, ೮೨.

೧೫೩. **ಸರ್ವಕಾರಣಮ್-**
ಎಲ್ಲಕ್ಕೂ ಕಾರಣವಾದ, ಮಾಯೆಯಿಂದ ಎಲ್ಲಾ ರೂಪವನ್ನೂ ತಳೆಯುವ ಬ್ರಹ್ಮ, ೧೦೭.

೧೫೪. **ಸರ್ವಕಾರಣಕಾರಣಮ್-**
ಕಾರಣಗಳೆನಿಸಿರುವ ಮಹತ್ತತ್ತ್ವವೇ ಮುಂತಾದವುಗಳಿಗೂ ಕಾರಣವಾಗಿರುವ ಅವ್ಯಾಕೃತ, ೯೯.

೧೫೫. **ಸರ್ವಬುದ್ಧಿಪ್ರತ್ಯಯಸಾಕ್ಷೀ**
ಅಂತಃಕರಣದ ಪ್ರತ್ಯಯಗಳಿಗೆಲ್ಲಸಾಕ್ಷಿ ; ಅವುಗಳು ಬೇರ್ಪಟ್ಟರೂ ಒಂದೇ ರೂಪ ದಿಂದ ಅದನ್ನು ನೋಡುತ್ತಿರುವ ಆತ್ಮ, ೧೦೩.

೧೫೬. **ಸರ್ವಭೂತಾನ್ತರಾತ್ಮಾ-**
ಎಲ್ಲಾ ಪ್ರಾಣಿಗಳಿಗೂ ಒಳಗಿರುವ ಆತ್ಮನಾದ ಪರಮಾತ್ಮನು, ೧೪೭, ೧೫೦, ೧೫೨.

೧೫೭. **ಸರ್ವವಿಶೇಷಪ್ರತ್ಯಸ್ತಮಿತ ಸ್ವರೂಪಃ-**
ಯಾವ ವಿಶೇಷವೂ ಇಲ್ಲದ ಸ್ವರೂಪದ ಆತ್ಮ, ೧೦೩.

೧೫೮. **ಸರ್ವಾನರ್ಥಬೀಜಮ್-**
ಎಲ್ಲಾ ಅನರ್ಥಗಳಿಗೂ ಕಾರಣವಾಗಿರುವ ಅಜ್ಞಾನ, ೧೦೫.

೧೫೯. **ಸಾಕ್ಷಾದನುಭವಃ, ಸಾಕ್ಷಾದ್ವಿಜ್ಞಾನಮ್-**
ಬ್ರಹ್ಮವನ್ನು ನಾನೇ ಎಂದು ನೇರಾಗಿ ತಿಳಿದುಕೊಳ್ಳುವದು, ೭೫, ೧೧೭, ೧೫೨.

೧೬೦. **ಸಾಧ್ಯಸಾಧನಲಕ್ಷಣಮ್-**
ಕರ್ಮಕ್ಕೆ ವಿಷಯವಾದ ಮನುಷ್ಯ, ಪಿತೃ, ಬ್ರಹ್ಮಲೋಕರೂಪವಾದ ಅನಿತ್ಯ ಸಂಸಾರ. ೩೨.

೧೬೧. **ಸಾಮಾನ್ಯವಿಜ್ಞಾನಮ್-**
ಸಾಮಾನ್ಯವಾಗಿ ಎಲ್ಲವನ್ನೂ ಬೆಳಗುವ ಚಿನ್ಮಾತ್ರರೂಪ, ೭೭.

೧೬೨. **ಸುಷುಮ್ನಾ-**
ಒಂದು ನಾಡಿ ; ಇದರ ಮೂಲಕ ಉಪಾಸಕರು ಹೊರಟು ಬ್ರಹ್ಮಲೋಕವನ್ನು ಸೇರುವರೆಂದು ಶಾಸ್ತ್ರಪ್ರಸಿದ್ಧಿ, ೧೮೪.

೧೬೩. **ಸೋಪಾಧಿಕ-** ಉಪಾಧಿಯಿಂದ ಕೂಡಿರುವ ಆತ್ಮ, ೧೮೦.

೧೬೪. **ಸ್ವಭಾವಃ-**
ಸ್ವರೂಪ, ೮೯, ೧೧೨, ೧೬೭.

೧೬೫. **ಸ್ವರ್ಗಲೋಕಃ-**
ವಿರಾಡುಪಾಸನೆಯಿಂದ ಪಡೆಯುವ ಉತ್ತಮಲೋಕ, ೨೩, ೨೫, ೬೨.

೧೬೬. **ಸ್ವಾತ್ಮಪ್ರವೃತ್ತಿ ಭೂತಮ್-**
ತನ್ನ ಅಂತಃಕರಣದ ವ್ಯಾಪಾರಕ್ಕೆ ಸಾಕ್ಷಿಯಾಗಿರುವ ಆತ್ಮತತ್ತ್ವ, ೧೬೦.

೧೬೭. **ಸ್ವಾಭಾವಿಕಮ್-**
ಅವಿಚಾರದೆಸೆಯಲ್ಲಿರುವ ೩೨, ೧೧೨.

೧೬೮. **ಸ್ವಾರ್ಥಃ -**
ಸ್ವತಂತ್ರನಾಗಿರುವವನು, ತನಗಾಗಿರುವವನು, ೧೪೧.

೧೬೯. **ಹಾರ್ದಾಕಾಶಃ-**
ಹೃದಯದಲ್ಲಿರುವ ಆಕಾಶ, ಚೈತನ್ಯರೂಪ ಬ್ರಹ್ಮ, ೮೫

೧೭೦. **ಹಿರಣ್ಯಗರ್ಭ :-**
ಜ್ಞಾನಕ್ರಿಯಾಶಕ್ತಿಗಳ ಸಮಷ್ಟಿಯ ಅಭಿಮಾನಿಯಾದ ಬ್ರಹ್ಮ, ೨೮, ೧೨೦, ೧೨೧, ೧೫೭.

೧೭೧. **ಹೃದಯಪುಣ್ಡರೀಕಾಕಾಶಃ, ಹೃದಯಾಕಾಶಃ -**
ಹೃದಯದಲ್ಲಿರುವ ಆಕಾಶ, ಬ್ರಹ್ಮವು ತೋರುವ ಬುದ್ಧಿ, ೧೩೮, ೧೫೨.

೧೭೨. **ಹೈರಣ್ಯಗರ್ಭಂ ತತ್ತ್ವಮ್-**
ಮಹತತ್ತ್ವವೆಂಬ ಹೆಸರಿನ ಸಮಷ್ಟಿ ಬುದ್ಧಿ ೯೮.

೧೭೩. **ಹೈರಣ್ಯಗರ್ಭಂ ಪದಮ್-**
ಹಿರಣ್ಯಗರ್ಭನ ಸ್ಥಾನ, ೬೩.

ವರ್ಣಿಸಿರುತ್ತದೆ. ಶ್ರೀಗೌಡಪಾದಾಚಾರ್ಯರು ಬರೆದಿರುವ ನಾಲ್ಕು ಪ್ರಕರಣಗಳುಳ್ಳ ಕಾರಿಕೆಗಳೂ ಶಾಂಕರಭಾಷ್ಯಸಮೇತ ಈ ಉಪನಿಷತ್ತಿಗೆ ಇರುವದು ಒಂದು ವಿಶೇಷ. ವೇದಾಂತಸಾರ ಸಂಗ್ರಹವನ್ನೂ, ಬೌದ್ಧರ ಪ್ರಕ್ರಿಯೆಗೂ ವೇದಾಂತಪ್ರಕ್ರಿಯೆಗೂ ಇರುವ ತಾರತಮ್ಯವನ್ನೂ ಇದರಲ್ಲಿ ಕಾಣಬಹುದು.

*(ನಾಲ್ಕನೆಯ ಮುದ್ರಣ : ೧೯೯೨ – ಪುಟಗಳು ಡೆಮ್ಮಿ ೩೩ + ೩೯೦)*

7. **ಐತರೇಯೋಪನಿಷತ್ತು** : ಪರಮಾತ್ಮನೇ ಈ ಇಡಿಯ ಜಗತ್ತನ್ನು ಸೃಷ್ಟಿಸಿ ಅದರೊಳಗಿನ ಬೇರೆಬೇರೆಯ ಶರೀರಗಳೊಳಗೆ ಹೊಕ್ಕಿರುವ ಪ್ರಜ್ಞಾನರೂಪನು. ಅವನೇ ಜ್ಞಾನದಿಂದ ಸಂಸಾರಿಯಾಗಿ ಕಾಣುತ್ತಿರುವನು. ಆ ಪರಮಾತ್ಮನ ನಿಜವಾದ ಸ್ವರೂಪವನ್ನು ನಿರ್ಧರಿಸಿಕೊಂಡರೆ ಸದ್ಯೋಮುಕ್ತಿಯಾಗುವದು ಎಂಬುದನ್ನು ವಿವರಿಸುವ ಉಪನಿಷತ್ತು.

*(ಮೂರನೆಯ ಮುದ್ರಣ : ೧೯೯೩ – ಪುಟಗಳು ೧೭+೧೩೦ ಡೆಮ್ಮಿ)*

8. **ತೈತ್ತಿರೀಯೋಪನಿಷತ್ತು**: ಇದರಲ್ಲಿ ಶೀಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ – ಎಂಬ ಮೂರು ಭಾಗಗಳಿವೆ. ವೇದಾಂತಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. ಮುಖ್ಯವಾಗಿ ಕರ್ಮಗಳಿಗೂ, ಜ್ಞಾನಕ್ಕೂ ಇರುವ ಸಂಬಂಧ, ಪರಬ್ರಹ್ಮಪ್ರಾಪ್ತಿಗೂ ಅಪರ ಬ್ರಹ್ಮಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವದು – ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಆವಿದ್ಯಕವೆಂಬುದು, ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ – ಎಂಬಿದೇ ಮುಂತಾದ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. *(ಮೂರನೆಯ ಮುದ್ರಣ : ೧೯೯೮ – ಪುಟಗಳು ಡೆಮ್ಮಿ ೧೮ + ೩೩೮)*

9. **ಛಾಂದೋಗ್ಯೋಪನಿಷತ್ತು** : ಈ ಉಪನಿಷತ್ತು ಸಾಮವೇದಕ್ಕೆ ಸೇರಿದ್ದು. ಇದರಲ್ಲಿ ಮೊದಲನೆಯ ಐದು ಅಧ್ಯಾಯಗಳಲ್ಲಿ ಕ್ರಮವಾಗಿ ಉಪಾಸನೆಗಳ ವಿವರವನ್ನು ವಿಸ್ತಾರವಾಗಿ ತಿಳಿಸಿ ಅನಂತರ ಆರನೆಯ ಅಧ್ಯಾಯದಿಂದ ಮುಂದೆ ಆತ್ಮಜ್ಞಾನವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿರುವ ವಿಷಯವಾಕ್ಯಗಳು ಬ್ರಹ್ಮಸೂತ್ರಭಾಷ್ಯದಲ್ಲಿ ವಿಚಾರಕ್ಕೆ ಬಹಳವಾಗಿ ತೆಗೆದುಕೊಳ್ಳಲ್ಪಟ್ಟಿವೆ. ತತ್ತ್ವಮಸಿ ಮಹಾವಾಕ್ಯದ ವಿಸ್ತಾರವಾದ ವಿವರವು ಇದರಲ್ಲಿ ಅಡಕವಾಗಿದೆ. ಶಾಂಕರವೇದಾಂತದ ಅಮೋಘವಿಚಾರಗಳ ಮನನಕ್ಕೆ ಅತ್ಯುತ್ತಮ ಗ್ರಂಥವಿದು. ಎಂಟು ಅಧ್ಯಾಯಗಳ ಪೂರ ಭಾಷ್ಯ ಗ್ರಂಥವು ಒಂದೇ ಸಂಪುಟವಾಗಿ ಪ್ರಕಟವಾಗಿದೆ.

*(ಎರಡನೆಯ ಮುದ್ರಣ : ೧೯೮೭ – ಪುಟಗಳು ಡೆಮ್ಮಿ ೭೧+೧೦೯೫)*

10. **ಬೃಹದಾರಣ್ಯಕೋಪನಿಷತ್ತು** (ಭಾಗ1, ಭಾಗ2) : ಹೆಸರಿಗೆ ತಕ್ಕಂತೆ ಉಪನಿಷತ್ತುಗಳಲ್ಲೆಲ್ಲ ದೊಡ್ಡದಾಗಿರುವ, ಶುಕ್ಲಯಜುರ್ವೇದಕ್ಕೆ ಸೇರಿರುವ ಈ ಉಪನಿಷತ್ತಿಗೆ ಆಚಾರ್ಯರು ವಿಸ್ತಾರವಾಗಿ ಭಾಷ್ಯವನ್ನು ಬರೆದಿರುತ್ತಾರೆ. ಮಧುಕಾಂಡವೆಂದು ಪ್ರಸಿದ್ಧವಾಗಿರುವ ಇದರ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಆಗಮಪ್ರಧಾನವಾಗಿ ತತ್ತ್ವವನ್ನು ತಿಳಿಸಿರುತ್ತದೆ. ಮೂರು – ನಾಲ್ಕು ಅಧ್ಯಾಯಗಳು ಮುನಿಕಾಂಡವೆಂಬ ಹೆಸರಿನಿಂದ ತರ್ಕಪ್ರಧಾನವಾಗಿದ್ದು ಆಗಮ ಉಪಪತ್ತಿಗಳಿಂದ ತತ್ತ್ವವನ್ನು ವಿವರಿಸಿರುತ್ತದೆ. ಕೊನೆಯ ಎರಡು ಅಧ್ಯಾಯಗಳು ಖಿಲಕಾಂಡವೆಂದು ಪ್ರಸಿದ್ಧವಾಗಿದ್ದು ಉಪಾಸನಾಭಾಗವನ್ನು ಒಳಗೊಂಡಿದೆ. ಆತ್ಮಸ್ವರೂಪವನ್ನು ಅವಸ್ಥಾತ್ರಯ ಪರೀಕ್ಷೆಯಿಂದ ಗೊತ್ತುಪಡಿಸುವ ವಿಚಾರಸರಣಿಯು ಇದರಲ್ಲಿ ಬಹಳ ಸುಂದರವಾಗಿದೆ. ಯಾಜ್ಞವಲ್ಕ್ಯ – ಮೈತ್ರೇಯಿ ಸಂವಾದ, ಜನಕ – ಯಾಜ್ಞವಲ್ಕ್ಯಸಂವಾದ – ಮುಂತಾದ ಕಥಾರೂಪಗಳಿಂದ ತತ್ತ್ವವನ್ನು ಹೃದಯಂಗಮವಾಗಿ ಪ್ರತಿಪಾದಿಸುವ ಉಪನಿಷತ್ತಿದು. ಆಚಾರ್ಯರು ತಮ್ಮ ಭಾಷ್ಯದಲ್ಲಿ ಅನೇಕ ವಿಷಯಗಳ ವಿಸ್ತಾರವಾದ ಚರ್ಚೆಯನ್ನು ಮಾಡಿ ಈ ಉಪನಿಷತ್ತಿನ ರಹಸ್ಯವನ್ನು ಹೊರಗೆಡವಿರುತ್ತಾರೆ. ಇಂಥ ಅಮೂಲ್ಯಗ್ರಂಥವು ವಿಷಯದಲ್ಲೂ ಆಕಾರದಲ್ಲೂ ಬ್ರಹ್ಮಸೂತ್ರಭಾಷ್ಯಕ್ಕೆ ಸರಿಸಮಾನವಾಗಿದೆ. ಎರಡು ಸಂಪುಟಗಳಲ್ಲಿ ಪೂರ್ತಿ ಉಪನಿಷತ್ತು ಭಾಷ್ಯ ಸಮೇತ ಪ್ರಕಟವಾಗಿದೆ. ಜಿಜ್ಞಾಸುಗಳು ಅವಶ್ಯವಾಗಿ ಸಂಗ್ರಹಿಸಬೇಕಾದ ಉಪನಿಷತ್ತಿದು.

*(೧ನೆಯ ಸಂಪುಟ ; ಎರಡನೆಯ ಮುದ್ರಣ : ೧೯೮೪ – ಪುಟಗಳು ಡೆಮ್ಮಿ ೩೨ +೭೩೭.*
*೨ನೆಯ ಸಂಪುಟ ; ಎರಡನೆಯ ಮುದ್ರಣ : ೧೯೮೫ – ಪುಟಗಳು ಡೆಮ್ಮಿ ೫೦+೧೦೧೦)*

# ಸಂಸ್ಥಾಪಕರ ಸ್ಮರಣೆ

ಕರ್ನಾಟಕ ರಾಜ್ಯದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದರಾಗಿರುವ ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳು ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5-1-1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ.ಸುಬ್ಬರಾವ್ ಎಂದಿತ್ತು. 1948 ರವರೆಗೆ (68ನೆಯ ವಯಸ್ಸಿನವರೆಗೆ) ಅವರು ಸುಬ್ರಾಯ ರೆಂದೇ ಪ್ರಖ್ಯಾತರಾಗಿದ್ದರು. 10-6-1948 ರಂದು ಸಂನ್ಯಾಸವನ್ನು ಸ್ವೀಕರಿಸಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಎಂಬ ಅಭಿದಾನದಿಂದ ವಿರಾಜಮಾನರಾದರು.

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು "ಪುರುಷಸರಸ್ವತಿ" ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880-1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
"ಓಂ ನಮೋ ಭಗವತೇ ಸಚ್ಚಿದಾನಂದಾಯ"

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ-573211

ವಿನ್ಯಾಸ - ಮುದ್ರಣ : ಶ್ರೀಗಣೇಶಮಾರುತಿ ಪ್ರಿಂಟರ್ಸ್, ದೂ- 6766 342